
ಸುದರ್ಶನ ದೇಸಾಯಿ



894.8143083
DES N84
ಗ್ರಂಥ ಸ್ವಾಮ್ಯ ವಿಭಾಗ

# ಅಮರದೀಪ

ಕಾದಂಬರಿ

ಸುದರ್ಶನ ದೇಸಾಯಿ

ಪ್ರಕಾಶಕರು :

ಪ್ರದೀಪ ಪ್ರಕಾಶನ

ನಂ. 50, ಕರ್ನಾಟಕ ಗಾ|| ಸೆಕ್ರಟೆರಿಯೇಟ್ ಕಾಲೋನಿ

ವಿಜಯನಗರ, ಬೆಂಗಳೂರು-560040.

AMARADEEPA a social novel by Sri Sudharshana Desai published by Pradeep Prakashana, No. 50, Karnataka Govt. Secretariat colony, Vijayanagar, Bangalore-40.

First addition : 1984

Pages : 132

Copy right : Author

Price : Rs. 8-00

Cover ; Sri Chandranatha Acharya

~~Printed at:~~
**Uma Printers**
No. 559, 9th main, M. C. Lay-out, Vijayanagar, Bangalore-40.

# ಅರ್ಪಣೆ

ಪ್ರತಿಭೆ ಇದ್ದೂ ಅವಕಾಶ ಸಿಗದೆ
ತಾವು ಹೆಣೆದ ಸುಂದರ ಕನಸುಗಳ
ಗೋರಿಯಲ್ಲಿಯೇ ಜೀವಂತ ಸಮಾಧಿಯಾದ
ದುರ್ದೈವಿ ಆಟಗಾರರಿಗೆ

—ಸುದರ್ಶನ ದೇಸಾಯಿ

# ಕೃತಜ್ಞತೆಗಳು

ಈ ಕಾದಂಬರಿ ಬರೆಯಲು ಪ್ರೇರೇಪಿಸಿ, ಕಥಾ ಹಂದರ ಹೆಣೆದು ಕೊಟ್ಟ "ನವನಿಧಿ ಚಿತ್ರ"ದ ನಿರ್ಮಾಪಕರಾದ ಶ್ರೀ ಆರ್. ಲಕ್ಷ್ಮಣ್, ಶ್ರೀ ನಾಗಣ್ಣ ಹಾಗೂ ಕು. ಪ್ರಭ ಅವರಿಗೆ

ಪ್ರದೀಪ ಪ್ರಕಾಶನದ ಮಾಲಿಕರಿಗೆ
ಕಲಾವಿದ ಶ್ರೀ ಚಂದ್ರನಾಥ ಆಚಾರ್ಯ ಅವರಿಗೆ
ಅಂದವಾಗಿ ಮುದ್ರಿಸಿದ ಅಚ್ಚುಕೂಟದವರಿಗೆ
ಹೃತ್ಪೂರ್ವಕ ಕೃತಜ್ಞತೆಗಳು.

–ಸುದರ್ಶನ ದೇಸಾಯಿ

ದೇಶಪಾಂಡೆ ಕಾಂಪೌಂಡ,
ಕಬ್ಬೂರ ರೋಡ, ಮಾಳಮಡ್ಡಿ,
(ಹಳೆ ಮೀನುಗಾರಿಕೆ ಆಫೀಸ)
ಧಾರವಾಡ–580007.

ಬೆಳಗಿನ ಜಾವದ ನಸುಕು ಹರಿಯುತ್ತಿತ್ತು. ಪೂರ್ವ ದಿಗಂತವಿನ್ನೂ ಕೆಂಪಗಾಗಿರಲಿಲ್ಲ. ಪಕ್ಷಿಗಳ ಕಲರವ ಧ್ವನಿ ಕೇಳಿ ಬಂದು ಮನಕ್ಕೆ ಉಲ್ಲಾಸ ನೀಡುತ್ತಿತ್ತು. ವಸಂತ ಕಾಲವಾದ್ದರಿಂದ ಮಾವಿನ ಮರದಲ್ಲಡಗಿ ಕುಳಿತಿದ್ದ ಕೋಗಿಲೆ ತನ್ನ ಮಂಜುಳವಾದ ಧ್ವನಿ ತೆಗೆದು ತನ್ನ ಇರುವನ್ನು ತೋರಿಸುತ್ತಿತ್ತು. ಎಲ್ಲೆಡೆ ಮಂಜು, ಆಕಾಶದಲ್ಲಿ ಹಾರಾಡಬೇಕಾಗಿದ್ದ ಮೋಡಗಳೆಲ್ಲ ಭೂಮಿಯ ಮೇಲೆ ಹಾರಾಡುತ್ತಿವೆ ಎಂಬ ಭ್ರಮೆ ಹುಟ್ಟಿಸುವಂತೆ, ಎಲ್ಲೆಡೆ ಮಂಜು ಕವಿದಿತ್ತು. ರಸ್ತೆ ಗುಡಿಸುವವರು ಆಗಲೆ ಬಂದು ತಮ್ಮ ತಮ್ಮ ಕೆಲಸದಲ್ಲಿ ನಿರತರಾಗಿದ್ದರು. ರಸ್ತೆಯಲ್ಲಿ ಜನ ಸಂಚಾರವಾಗಲಿ ರಸ್ತೆ ಸಂಚಾರವಾಗಲಿ ಹೆಚ್ಚಾಗಿ ಇರದೆ ಆಗೊಂದು ಈಗೊಂದು ವಾಹನಗಳು ಹಾಯ್ದು ಹೋಗುತ್ತಿದ್ದವು. ಜನ ಸಂಚಾರವಂತೂ ತೀರ ವಿರಳವಾಗಿತ್ತು. ಬಹುತೇಕ ಜನರು ಹಾಸಿಗೆಯಲ್ಲಿ ಬೆಚ್ಚಗೆ ಮಲಗಿಕೊಂಡಿದ್ದರು.

ಇಂಥ ಸಮಯದಲ್ಲಿ ಸುಮಾರು ಐವತ್ತು ಐವತ್ತೈದು ವರ್ಷದ ಮಧ್ಯಮ ವಯಸ್ಸಿನವರೊಬ್ಬರು ಕೈಯಲ್ಲಿ ಬಡಿಗೆ ಹಿಡಿದುಕೊಂಡು ಮುಂಜಾನೆಯ ವಾಯುಸೇವನೆಗೆ ಹೊರಟಿದ್ದರು. ಹಾಫ್ ಪ್ಯಾಂಟ್, ಫುಲ್ ಶರ್ಟ್ ಧರಿಸಿದ್ದರು. ಶರ್ಟನ್ನು ಪ್ಯಾಂಟಿನೊಳಗೆ ಸೇರಿಸಿ, ಮೇಲೆ ಸೊಂಟಕ್ಕೆ ದಪ್ಪಗಿನ ಬೆಲ್ಟ್ ಸುತ್ತಿದ್ದರು. ಕಾಲಿಗೆ ಕಪ್ಪು ಶೂ, ಮೊಣಕಾಲವರೆಗೆ ಬರುವ ದಪ್ಪ ಖಾಕಿ ಬಣ್ಣದ ಕಾಲು ಚೀಲಗಳು. ತಲೆಯ ಮೇಲೆ ಮಂಕಿ ಕ್ಯಾಪ್, ಕೊರಳಿಗೆ ಸ್ಕಾರ್ಫ್. ಭರಭರನೆ ಸಾಗುತ್ತಿದ್ದ ಅವರ ಮುಖದ ಮೇಲೆ ಅಂಥ ಚಳಿಯಲ್ಲೂ ಬೆವರ ಹನಿಗಳು ಮೂಡಿದ್ದವು. ಅವರು ದೊಡ್ಡ ದೊಡ್ಡ ಹೆಜ್ಜೆಗಳನ್ನು ಹಾಕುತ್ತ ಊರ ಹೊರಗಿದ್ದ ಆಟದ ಬಯಲಿನ ಹತ್ತಿರ ಬಂದರು. ಆಗವರ ದೃಷ್ಟಿ ಆಕಸ್ಮಿಕವಾಗಿ ಬಯಲಿನಲ್ಲಿದ್ದ ಫುಟ್ ಬಾಲ್ ಗ್ರಾಂಡಿನತ್ತ ಹರಿಯಿತು. ಅವರ ಕಾಲುಗಳು ಅಲ್ಲಿಯೇ ಜಡವಾದವು. ನೇರವಾಗಿ ಹೋಗಬೇಕಾದ ಅವರು ತಮ್ಮ ವಿಚಾರ

ಬದಲಿಸಿ, ಆಟದ ಬಯಲಿನತ್ತ ಹೆಜ್ಜೆ ಹಾಕಿದರು.

ಹರಿದ ಬಿಳಿ ಶರ್ಟ್ ಖಾಕಿ ಹಾಫ್ ಪ್ಯಾಂಟ್ ಹಾಕಿಕೊಂಡಿದ್ದ, ಕೆದರಿದ ತಲೆಗೂದಲಿನ ಸುಮಾರು ಹತ್ತು ಹನ್ನೆರಡು ವರ್ಷದ ಬಾಲಕನೊಬ್ಬ ಒಂಟಿಯಾಗಿ ಆಟದ ರೂಢಿ ನಡೆಸಿದ್ದ. ಅವನೆದುರು ಬಾಯಿ ಹರಿದು ಅಲ್ಲಲ್ಲಿ ಹೊಲಿಗೆ ಹಾಕಿಸಿಕೊಂಡು ಪಿಚ್ಚಿಯಾದ ಫುಟ್‌ಬಾಲ್ ಆಕಾರದ ಚೆಂಡೊಂದು ಬಿದ್ದಿತ್ತು. ಅದರ ಹೊಟ್ಟೆಯೊಳಗಿದ್ದ ಹರಿದ ಅರಿವೆ, ಅರಳೆ, ಮತ್ತೇನೇನೋ ಹೊರಗೆ ಬರಲು ಪ್ರಯತ್ನಿಸುತ್ತಿದ್ದವ

ವೃದ್ಧರ ದೃಷ್ಟಿ ಸುತ್ತಲೂ ಹರಿಯಿತು. ಸ್ವಲ್ಪ ದೂರದಲ್ಲಿ ನಿರ್ದಿಷ್ಟ ಅಂತರದಲ್ಲಿ ಎದುರು ಬದುರಿಗಿಟ್ಟ ಎರಡು ದೊಡ್ಡ ಕಲ್ಲುಗಳ ಕಂಡವು. ಆ ಬಾಲಕ ಎರಡೂ ಕಲ್ಲುಗಳ ಕಡೆಗೊಂದು ಬಾರಿ ನೋಡಿ ತನ್ನೆದುರಿಗಿದ್ದ ಚೆಂಡನ್ನು ಬಲಗಾಲಿನಿಂದ ಬಲವಾಗಿ ಒದ್ದ. ಮರುಕ್ಷಣ ಅವನ ಬಾಯಿಂದ ಚಿಕ್ಕ ಚೀತ್ಕಾರವೊಂದು ಹೊರಟಿತು ನರಳುತ್ತಲೇ ಆತ ಚೆಂಡಿನತ್ತ ನೋಡಿದ ಹರಿದು ಮುದ್ದೆಯಾದ ಚೆಂಡು ವಿಚಿತ್ರ ಗತಿಯಲ್ಲಿ ಉರುಳುತ್ತ ಎರಡೂ ಕಲ್ಲುಗಳ ಮಧ್ಯೆ ಹಾಯ್ದು ಹೋದಾಗ ಆ ಹುಡುಗ ತನ್ನ ನೋವು ಮರೆತು, ತನ್ನ ಎರಡೂ ಕೈಗಳನ್ನೂ ಮೇಲಕ್ಕೆತ್ತಿ "ಗೋಲ್" ಎಂದು ಕೂಗಿದ ಚೆಂಡಿನತ್ತ ಹೆಜ್ಜೆ ಹಾಕುತ್ತಿದ್ದಂತೆ 'ಹಾ' ಎಂದು ನರಳಿ ನೆಲಕ್ಕೆ ಕುಸಿದ.

ಅವನ ಬಲಗಾಲ ಹೆಬ್ಬೆರಳು ಒಡೆದ. ರಕ್ತ ಸೋರುತ್ತಿತ್ತು. ಜೇಬಿನಿಂದ ಹರಿದ ವಸ್ತ್ರವೊಂದನ್ನು ತೆಗೆದು ಬೆಟ್ಟಿಗೆ ಬಲವಾಗಿ ಕಟ್ಟಿದ. ನಂತರ ಮೆಲ್ಲಗೆ ನರಳುತ್ತ ಎದ್ದು ನಿಂತು ಕುಂಟುತ್ತ ಚೆಂಡಿನತ್ತ ಸಾಗಿ, ಅದನ್ನು ಎತ್ತಿಕೊಂಡು ಪುನಃ ತಾನು ಮೊದಲಿದ್ದ ಜಾಗೆಗೆ ಬಂದ ಚೆಂಡಿಗೂ ಕಲ್ಲುಗಳಿಗೂ ಇರುವ ಅಂತರವನ್ನು ಕಣ್ಣಿನಲ್ಲೇ ಅಳೆದ. ಆಮೇಲೆ ಎಡಗಾಲಿನಿಂದ ಚೆಂಡನ್ನು ಬಲವಾಗಿ ಒದ್ದ. ಮತ್ತೆ ಅವನ ಬಾಯಿಯಿಂದ ಚಿಕ್ಕ ಚೀತ್ಕಾರ. ಚೆಂಡು ಉರುಳುತ್ತ ಮುನ್ನಿನಂತೆಯೇ ಎರಡೂ ಕಲ್ಲುಗಳ ಮಧ್ಯೆ ಹಾಯ್ದು ಹೋಯಿತು. ನೋವಿನ ಮಧ್ಯದಲ್ಲಿಯೂ ಆ ಹುಡುಗನ ಮುಖದ ಮೇಲೆ ಹೆಮ್ಮೆಯ ಭಾವನೆ ಮೂಡಿತು.

ಆ ಹುಡುಗನಿಂದ ಸ್ವಲ್ಪ ದೂರದಲ್ಲಿರುವ ಮರದಡಿ ನಿಂತಿದ್ದ ವೃದ್ಧರಿಗೆ ಆತ ಫುಟ್‌ಬಾಲ್ ಆಟದ ರೂಢಿ ಮಾಡುತ್ತಿದ್ದಾನೆಂದು ತಿಳಿಯಲು ಹೆಚ್ಚು

ಹೊತ್ತು ಬೇಕಾಗಲಿಲ್ಲ.. ವೃದ್ಧರ ಮುಖ ತಾವರೆಯಂತೆ ಅರಳಿತು. ಅವರು ದೊಡ್ಡ ದೊಡ್ಡ ಹೆಜ್ಜೆಗಳನ್ನು ಹಾಕುತ್ತಾ ಹುಡುಗನತ್ತ ನಡೆದರು.

ಚೆಂಡು ಎತ್ತಿಕೊಂಡು ಕುಂಟುತ್ತ ತನ್ನ ಮೊದಲಿನ ಜಾಗೆಗೆ ಬರುತ್ತಿದ್ದ ಬಾಲಕ ವೃದ್ಧರನ್ನು ಕಂಡು ನಿಂತುಬಿಟ್ಟ. ಅವನ ಮುಖ ಭಯದಿಂದ ಬಿಳುಚಿಕೊಂಡಿತು. ತುಟಿಗಳು ಕಂಪಿಸತೊಡಗಿದವು. ಹುಡುಗ ಭೀತನಾಗಿದ್ದಾನೆಂದರಿತ ವೃದ್ಧರು ಸಮಾಧಾನ ಹೇಳಿದರು.

"ಮಗು...... ಹೆದರಬೇಡ ನಾನು ನಿನಗೇನೂ ಮಾಡುವುದಿಲ್ಲ."

ಬಾಲಕನಲ್ಲಿ ಸ್ವಲ್ಪ ಧೈರ್ಯ ಮೂಡಿತು. ಆದರೂ ಸಂಶಯ, ಇವರು ಏಕೆ ತನ್ನ ಬಳಿ ಬರುತ್ತಿದ್ದಾರೆ ?..

ಅಷ್ಟರಲ್ಲಿ ವೃದ್ಧರು ಹತ್ತಿರಕ್ಕೆ ಬಂದಿದ್ದರು. ಸಕ್ಕರೆಯ ಪಾಕ ಅದ್ದಿ ತೆಗೆದಂತ ಧನಿಯಲ್ಲಿ ಆತ್ಮೀಯತೆಯಿಂದ ಕೇಳಿದರು.

"ಮಗು ಏನು ಮಾಡ್ತಾ ಇದೀಯಾ ?"

"ಆಟದ ರೂಢಿ ಮಾಡ್ತಾ ಇದೀನಿ."

"ಒಬ್ಬನೇ ?"

"ಹಾಂ...... ನನ್ನ ಜೊತೆ ಯಾರೂ ಬರುವುದಿಲ್ಲ. ಅದಕ್ಕೆ...."

"ಅದು ಸರಿಯಪ್ಪ.... ಆದರೆ ಈ ಹರುಕು ಚೆಂಡಿನಿಂದ ಏಕೆ ಆಡುತ್ತಿರುವೆ ?"

"ನನ್ನ ಬಳಿ ಹೊಸ ಚೆಂಡು ಇಲ್ಲ ಕೊಳ್ಳಲು ನನ್ನ ಬಳಿ ಹಣವೂ ಇಲ್ಲ. ನಾನು ಬಡವ, ಅದಕ್ಕಾಗಿ ಈ ಹರಿದ ಚಂಡನ್ನೇ ತೆಗೆದುಕೊಂಡು ಹೊಲಿದು ಆಡುತ್ತಿದ್ದೇನೆ."

ವೃದ್ಧರ ದೃಷ್ಟಿ ಮಗುವಿನ ಕಾಲಿನತ್ತ ಹರಿಯಿತು. ಬಟ್ಟೆಗೆ ವಸ್ತ್ರ ಸುತ್ತಿದ್ದರೂ ಅಲ್ಲಿಂದ ಬಟ್ಟೆ ತೊಯ್ದು ರಕ್ತ ಜಿನುಗುತ್ತಿತ್ತು.

"ಅಯ್ಯೋ.... ನಿನ್ನ ಒಂದು ಕಾಲಿನಿಂದ ರಕ್ತ ಬರುತ್ತಿದೆ ಇನ್ನೊಂದು ಕೆಂಪಗಾಗಿ ಊದಿಕೊಂಡಿದೆ. ಏಕೆ ಮಗು ? ಚೆಂಡಾಟ ಆಡಿದರೆ ಕಾಲಿಗೇಕೆ ರಕ್ತ ಬರಬೇಕು ?"

ಆ ಹುಡುಗ ಒಮ್ಮೆಲೇ ಮೌನ ತಾಳಿದ. ಏನು ಹೇಳಬೇಕೆಂಬುದೇ ಆತನಿಗೆ ತಿಳಿಯಲಿಲ್ಲ. ಒಂದು ಬಾರಿ ವೃದ್ಧರ ಮುಖವನ್ನೂ ಒಂದು ಬಾರಿ

ಚೆಂಡನ್ನೂ ನೋಡಿದರೆ ಮತ್ತೊಮ್ಮೆ ತನ್ನ ಪಾದದತ್ತ ನೋಡುತ್ತಿದ್ದ. ನೋವಿನಿಂದಾಗಿ ಅವನ ಕಣ್ಣಲ್ಲಿ ನೀರು ಕಾಣಿಸಿಕೊಂಡಿದ್ದು ಅದು ಹೊರಗೆ ಬರಲು ಸರಿಯಾದ ಸಮಯವನ್ನು ಹುಡುಕುತ್ತಿತ್ತು.

ಏಕೋ ಏನೋ ಆ ವೃದ್ಧರಿಗೆ ಸಂಶಯ ಬಂದಿತು. ಕೆಳಗೆ ಬಿದ್ದಿದ್ದ ಚೆಂಡನ್ನು ಕೈಗೆತ್ತಿಕೊಂಡರು. "ಬೇಡಿ ಬೇಡಿ.... ಅದನ್ನು ಹಿಡಿಯಬೇಡಿ." ಎಂದು ಆ ಹುಡುಗ ಅಂಗಲಾಚಿದ. ವೃದ್ಧರ ಸಂದೇಹ ಮತ್ತಷ್ಟು ಬಲವಾಯಿತು. ಆ ಚೆಂಡನ್ನು ಸೂಕ್ಷ್ಮವಾಗಿ ಪರೀಕ್ಷಿಸತೊಡಗಿದರು.

ತನ್ನ ಮೊದಲಿನ ಸುಂದರವಾದ ರೂಪವನ್ನೇ ಕಳೆದುಕೊಂಡು, ವಿಕಾರವಾಗಿ ಸಧ್ಯ ಸ್ಮಶಾನದ ಹಾದಿಯಲ್ಲಿರುವ ಆ ಕಾಲಚೆಂಡನ್ನು ಕಂಡು ಆ ವೃದ್ಧರಿಗೆ ನಗೆ ಬಂತು ಬಹಳ ಪ್ರಯತ್ನಪಟ್ಟು ಆ ಮಗು ಎಲ್ಲಿ ಮನಸ್ಸಿಗೆ ನೋವು ಮಾಡಿಕೊಳ್ಳುತ್ತದೆಯೋ ಎಂದು ತಿಳಿದು ನಗೆ ತಡೆಹಿಡಿದು, ಚೆಂಡಿನ ಆಪರೇಷನ್ ಮಾಡತೊಡಗಿದರು.

ಮೊದಮೊದಲು ಅದರ ಹೊಟ್ಟೆಯೊಳಗಿಂದ ಹರಿದ ಅರಿವೆ, ಕಾಗದ, ಆರಳೆ ಹೊರಬಂದರೂ, ಕೊನೆಗೆ ಸಿಕ್ಕಿದ್ದು ಸಾಮಾನ್ಯ ಗಾತ್ರದ ಗುಂಡಗಿನ ಒಂದು ಸಣ್ಣ ಕಲ್ಲು ಸಂಶಯ ನಿಜವಾಯಿತು. ಚೆಂಡೇಕೆ ಇಷ್ಟು ಭಾರವಾಗಿದೆ ? ಅದನ್ನು ಕಾಲಿನಿಂದ ಒದ್ದರೆ ಏಕೆ ಬೆರಳು ಒಡೆದು ರಕ್ತ ಸೋರುತ್ತದೆ ಎಂಬ ಪ್ರಶ್ನೆಗೆ ಉತ್ತರ ದೊರಕಿತ್ತು

ಹರಿದು ಹೋದ ಆ ಚೆಂಡು ಉರುಳುತ್ತಾ ಹೋಗಬೇಕೆಂದು ಆ ಹುಡುಗ ಅದರಲ್ಲೊಂದು ಗುಂಡಗಿನ ಕಲ್ಲು ಇರಿಸಿದ್ದ.

ಆ ಮಗುವಿನಲ್ಲಿದ್ದ ಕ್ರೀಡಾ ಮನೋಭಾವ ಫುಟ್‌ಬಾಲ್ ಆಟದಮೇಲೆ ಇರಿಸಿದ್ದ ಪ್ರೀತಿ ಕಂಡು ವೃದ್ಧರ ಕಣ್ಣಲ್ಲಿ 'ಚಿಲ್' ಎಂದು ನೀರು ಚಿಮ್ಮಿತು. ಬಾಲಕನನ್ನು ಬಾಚಿ ತಬ್ಬಿಕೊಂಡು ಬೆನ್ನು ಸವರಿದರು. ಹುಡುಗ ಕಕ್ಕಾಬಿಕ್ಕಿಯಾಗಿದ್ದ. ತನಗೆ ಒದೆ ಎಲ್ಲಿ ಬೀಳುತ್ತೋ ಎಂದುಕೊಂಡಿದ್ದ ಆತನಿಗೆ ವೃದ್ಧರ ವರ್ತನೆ ವಿಚಿತ್ರವೆನಿಸಿತು.

'ನಿನಗೆ ಫುಟ್ ಬಾಲ್ ಆಟ ಎಂದರೆ ಇಷ್ಟವಾ ?"

ವೃದ್ಧರು ಕೇಳಿದರು.

"ಹೋ ಈ ಆಟ ಇದ್ರೆ ನಂಗೆ ಊಟ ತಿಂಡಿ ಏನೂ ಬೇಡ."

ವೃದ್ಧರ ಚಿಕ್ಕ ಚಿಕ್ಕ ಕಣ್ಣುಗಳು ಅರಳಿ ದೊಡ್ಡದಾದವು. ಸುಕ್ಕುಗಟ್ಟಿದಂತಿದ್ದ ಅವರ ಮುಖದ ಮೇಲೆ ಕಾಂತಿ ಮಿನುಗಿತು. ಅವರು ಬಾಲಕನ ಬೆನ್ನು ಚಪ್ಪರಿಸುತ್ತಾ ಹೇಳಿದರು,

"ಹಾಗಾದರೆ ನಾಳೆ ಬೆಳಿಗ್ಗೆ ಆರು ಗಂಟೆಗೆ ಸರಿಯಾಗಿ ನಮ್ಮ ಮನೆಗೆ ಬಾ. ನಾನು ನಿನಗೆ ಆಡಲು ಹೊಸದಾದ ಚೆಂಡು ಕೊಡುತ್ತೇನೆ. ನಮ್ಮ ಮನೆಯಲ್ಲಿಯೇ ಆಟದ ಬಯಲಿದೆ ನೆಟ್ ಇದೆ, ಚೆನ್ನಾಗಿ ಆಡಬಹುದು. ರೂಢಿ ಮಾಡಬಹುದು, ಬರುತ್ತೀಯಾ ?'

ಆ ಹುಡುಗ ತಬ್ಬಿಬ್ಬಾಗಿ ನಿಂತುಕೊಂಡ. ಏನೂಂತ ಹೇಳೋದು ? ಹೊಟ್ಟೆ ಹಸಿದವನ ಮುಂದೆ ನಾನಾ ತರಹದ ಭೋಜ್ಯ ಪದಾರ್ಥಗಳನ್ನಿಟ್ಟು "ಬೇಕಾ ತಿನ್ನುತ್ತೀಯಾ ?" ಎಂದು ಕೇಳಿದರೆ !

ಮೊದಲೇ ಫುಟ್ ಬಾಲ್ ಆಟ ಎಂದರೆ ಪ್ರಾಣ ಬಿಡುತ್ತಿದ್ದ ಆ ಬಾಲಕನಿಗೆ ಈ ರೀತಿ ಕೇಳಿದರೆ ಏನಾಗಬೇಡ ಅವನ ಹೃದಯ ಹಾರಿ ಬಾಯಿಗೆ ಬಂದಂತಾಗಿತ್ತು. ಒಂದು ದೃಷ್ಟಿಯಿಂದ ಆತ ಮೂಕನಾಗಿದ್ದ. ಇದು ಕನಸೋ... ನಿಜವೋ ತಿಳಿಯದು ... ಅವನ ಪರಿಸ್ಥಿತಿ ಕಂಡು ವೃದ್ಧರು ಮುಗುಳುನಗೆ ನಕ್ಕು ಹೇಳಿದರು.

"ನನ್ನ ಹೆಸರು ಅಪ್ಪಾಜಿ ಅಂತ.... ಬ್ಯಾಂಕ್ ರೋಡಿನಲ್ಲಿ ಸ್ವಲ್ಪ ಮುಂದೆ ಬಂದ್ರೆ ನನ್ನ ಮನೆಯಿದೆ. ನನ್ನ ಮನೆಗೆ ಹೊಂದಿಕೊಂಡೇ ಆಟದ ಬಯಲು ಇರೋದು. ನಾಳೆ ಬೆಳಿಗ್ಗೆ ಬರುತ್ತೀಯಲ್ಲವೇ ?"

"ಅಪ್ಪಾಜಿ.... ಅಪ್ಪಾಜಿ ಅಂದ್ರೇ ' ಹುಡುಗ ತಡವರಿಸಿದ. ಅವನ ಕಣ್ಣ ಮುಂದೆ ಮೂವತ್ತು ವರ್ಷಗಳ ಹಿಂದಿನ ಫುಟ್‌ಬಾಲ್ ಆಟಗಾರ ಹಾಯ್ದು ಹೋದ.

"ಹಾಂ...... ಹೌದಪ್ಪ .. ನೀನು ತಿಳಿದಂತೆ ನಾನೇ ಅಪ್ಪಾಜೀ... ನಿವೃತ್ತನಾದ ಫುಟ್ ಬಾಲ್ ಆಟಗಾರ. ನಿನಗೆ ಚೆನ್ನಾಗಿ ಆಟ ಕಲಿಸುವೆ."

ಒಮ್ಮೆಲೆ ಕೆಳಕ್ಕೆ ಬಾಗಿದ ಆ ಹುಡುಗ ಅಪ್ಪಾಜಿಯವರ ಕಾಲು ಹಿಡಿದುಕೊಂಡು ತನ್ನ ಕಣ್ಣೀರಿನಿಂದ ಅವರ ಪಾದ ತೊಳೆದ. ಅವನ ಕನಸಿನ ದೇವತೆ ಅವನ ಆದರ್ಶ ಗುರು ... ಅವನ ಕಣ್ಣೆದುರು ನಿಂತಿದ್ದ..... ಹುಡುಗನ ಕಣ್ಣೊಳಗಿಂದ ಪಟಪಟನೆ ಹನಿಗಳು ಉದುರತೊಡಗಿದವು. ಅಪ್ಪಾಜಿ ಆ ಮಗುವನ್ನು

ಎತ್ತಿ ನಿಲ್ಲಿಸಿದರು. ಬೆರಳುಗಳಿಂದ ಕಣ್ಣೀರು ಒರೆಸಿದರು.

"ನಾನು ಹೇಳಿದ್ದು ನೆನಪಿದೆಯಲ್ಲವೇ ? ಬೆಳಿಗ್ಗೆ ಸರಿಯಾಗಿ ಆರಕ್ಕೆ ಬಾ.... ನಾನು ಬೇರೆ ಹೊಸ ಚೆಂಡು ತಂದುಕೊಡುತ್ತೇನೆ.... ಈ ಇಂಟರ್ ನ್ಯಾಷನಲ್ ಚೆಂಡನ್ನು ತಿಪ್ಪೆಗೆ ಎಸೆ "

ಅಂದಾಗ ಹುಡುಗ ಕಿಲಕಿಲನೆ ನಕ್ಕ.

"ಆಯ್ತಪ್ಪ ಬರ್ತೀನೆ .. ನನ್ನ ಮನೆ ನೆನಪಿದೆ ತಾನೆ ? ನಾನಿನ್ನು ಬರಲಾ ?.... ಹಾಂ ಅಂದ ಹಾಗೆ ನಿನ್ನ ಹೆಸರು ?"

"ಅಮರ___ ಅಲ್ಲಿ ಕಾಣುವ ಶಾಲೆಯ ಹಿಂದೆ ನಮ್ಮ ಮನೆ ಇದೆ."

"ಸರಿ..... ನಾಳೆ ಬೆಳಗ್ಗೆ ಸರಿಯಾಗಿ ಬಂದುಬಿಡು ನಾನು ನಿನ್ನ ದಾರೀನೆ ಕಾಯ್ತಾ ಇರುತ್ತೀನಿ."

ಮತ್ತೊಮ್ಮೆ ಅವನ ಬೆನ್ನು ಸವರಿದ ಅಪ್ಪಾಜಿ ಅಲ್ಲಿಂದ ಹೊರಟು ಹೋದರು. ಕಾರ್ಗತ್ತಲೆಯಲ್ಲಿ ಸುಳಿದ ಬೆಳ್ಳಿ ಮಿಂಚಿನಂತೆ ತನ್ನ ಬಾಳಿನಲ್ಲಿ ಆಕಸ್ಮಿಕನಾಗಿ ಮೂಡಿದ ಅಪ್ಪಾಜಿಯವರನ್ನು ಅಮರ ಕಣ್ಣಿನಿಂದ ಮರೆಯಾಗುವವರೆಗೂ ನೋಡುತ್ತ ನಿಂತಿದ್ದು ನಂತರ ನಿಧಾನವಾಗಿ ಮನೆ ಕಡೆ ನಡೆದ. ಮಧ್ಯೆ ಬೀದಿಯ ಪಕ್ಕಕ್ಕಿದ್ದ ಕಸದ ತೊಟ್ಟಿ ಕಣ್ಣಿಗೆ ಬಿದ್ದಾಗ ಅಪ್ಪಾಜಿ ಹೇಳಿದ ಮಾತು ನೆನಪಾಗಿ ತನ್ನ ಕೈಯಲ್ಲಿದ್ದ ಇಂಟರ್ ನ್ಯಾಷನಲ್ ಚೆಂಡನ್ನು ತೂರಿ ತೊಟ್ಟಿಗೆಸೆದು 'ಹೊ ಹೊ ಹೋ' ಎಂದು ಜೋರಾಗಿ ನಕ್ಕ. ಆದರ ಮರುಕ್ಷಣವೇ ಚಿಕ್ಕಮ್ಮನ ನೆನಪಾಗಿ.... ನಗು ಅಲ್ಲಿಯೇ ಗಪ್.... ಎಂದು ನಿಂತುಬಿಟ್ಟಿತು

'ಮುಗಿದೇ ಹೋಯಿತು ಇಂದು ಚಿಕ್ಕಮ್ಮ ನನ್ನ ಚರ್ಮ ಸುಲಿದೇ ಬಿಡುತಾಳೇ ...' ಎಂದುಕೊಳ್ಳುತ್ತಾ ಅಮರ ಮನೆ ಕಡೆ ಓಡತೊಡಗಿದ. ತನ್ನ ಹಿಂದೆ ಭೂತ ಬೆನ್ನು ಹತ್ತಿದೆ ಎನ್ನುವಂತೆ ಓಡುತ್ತಿದ್ದ. ಅಮರನಿಗೆ ಇದೇ ಸ್ವಲ್ಪ ಹೊತ್ತಿನ ಮುಂಚೆ ಕಾಲಿಗೆ ಪೆಟ್ಟಾಗಿದೆ ನಡೆಯಲಾಗದು ಎಂಬುದೇ ಮರೆತುಹೋಗಿತ್ತು.

# 2

ಅಮರನ ತಂದೆ ರಾಮರಾಯರು. ಮಂಡಿಯೊಂದರಲ್ಲಿ ಗುಮಾಸ್ತರು. ತಂದೆ ಬಿಟ್ಟು ಹೋದ ಆಸ್ತಿ ಎಂದು ಆ ಚಿಕ್ಕ ಮನೆ ಬಿಟ್ಟರೆ ಅವರದ್ದು ಎಂದು ಹೇಳಿಕೊಳ್ಳುವಂಥ ತುಂಡು ಭೂಮಿ ಇಲ್ಲ. ಮಂಡಿ ಸಾಹುಕಾರ, ಹನ್ನೆರಡು ಗಂಟೆ ದುಡಿಮೆಗೆ ಕೊಡುವ ಮೂರು ನೂರು ರೂಪಾಯಿಯೇ ಅವರ ಜೀವನಾಧಾರ. ಆಗಾಗ ಯಾವಾಗಲಾದರೊಮ್ಮೆ ಮಂಡಿಗೆ ಬರುತ್ತಿದ್ದ 'ಖುಷಿ' ಅಥವಾ ಕಾಳಿನ ಸಹಾಯ ಒಮ್ಮೊಮ್ಮೆ ಆಸರೆಯೂ ಆಗುತ್ತಿತ್ತು.

ಲಕ್ಷ್ಮೀ ಅವರ ಮೊದಲ ಹೆಂಡತಿ ಅವರೊಂದಿಗೆ ಬಹಳ ದಿವಸ ಬಾಳಲಿಲ್ಲ. ಎರಡು ತಿಂಗಳಿನ ಹಸುಗೂಸನ್ನು ಅವರ ಕೈಯಲ್ಲಿಟ್ಟು ತೀರಿಕೊಂಡಳು. ಒಂದಾರು ತಿಂಗಳು ರಾಯರು ಕೈ ಬಾಯಿ ಸುಟ್ಟುಕೊಂಡು ಜೀವನ ಸಾಗಿಸಿದರೂ ಅಮರನನ್ನು ಹಿಡಿಯುವುದೇ ಕಠಿಣವಾಗಿತ್ತು. ಹೀಗಾಗಿ ತಮಗಾಗಿ ಅಲ್ಲದಿದ್ದರೂ ಅಮರನಿಗಾದರೂ, ಅವರು ಎರಡನೇ ಮದುವೆ ಮಾಡಿಕೊಳ್ಳಲೇ ಬೇಕಾಯಿತು.

ಸುಂದರಬಾಯಿ ಅಸುರನಿಗೆ ತಾಯಿಯಾಗಿ ಬರಲಿಲ್ಲ. ನಿಜ ಅರ್ಥದಲ್ಲಿ ಮಲತಾಯಿ ಆಗಿಯೇ ಬಂದಳು. ಮದುವೆಗೆ ಮುನ್ನ ಗಂಡನ ಬಗ್ಗೆ.... ಗಂಡನ ಮನೆಯ ಬಗ್ಗೆ ಎಷ್ಟೊಂದು ಕನಸುಗಳನ್ನು ಕಂಡಿದ್ದಳೋ ಅವೆಲ್ಲವುಗಳಿಗೂ ಅಮರ ಕಂಟಕನಾಗಿ ನಿಂತ. ಕಾದಂಬರಿಯಲ್ಲಿ ಓದಿದ, ಚಲನಚಿತ್ರದಲ್ಲಿ ನೋಡಿದ ರೋಮಾಂಚಕಾರೀ ಘಟನೆಗಳು ಮದುವೆಯಾಗಿ ಗಂಡನ ಮನೆಗೆ ಬಂದ ನಂತರ ಒಂದು ಬಾರಿಯೂ ನಡೆಯಲಿಲ್ಲ. ಪ್ರಥಮ ರಾತ್ರಿಯಂದು ಅವಳ ಗದ್ದ ಹಿಡಿದು ಮೇಲೆತ್ತಿ, ಅವಳ ಸುಂದರವಾದ ಕಣ್ಣುಗಳನ್ನೇ ನೋಡುತ್ತಾ "ಚಿನ್ನಾ.... ಸುಂದರೀ..... ನಾ ನಿನ್ನ ರೂಪಕ್ಕೆ ಮನಸೋತೆ..... ನಿನ್ನ ಈ ಸುಂದರವಾದ ತಾವರೆ ಕೋಶದಂತಿರುವ ಕಣ್ಣುಗಳ ಆಳದಲ್ಲಿ ನಾ ಮುಳುಗಿ ಹೋಗಿರುವೆ..... ನಿನ್ನ ಬಿಟ್ಟು ಈ ಜಗದಲ್ಲಿ ನನಗೆ ಬೇರಿನ್ನೇನೂ

ಕಾಣದು.... ನೀ ಇಲ್ಲದಿದ್ದರೆ ನನ್ನ ಬಾಳೆಲ್ಲ ಕತ್ತಲು. ನೀನೇ ನನ್ನ ಬಾಳ ಬೆಳಕು...." ಎಂದು ಹೇಳಬೇಕಾಗಿದ್ದ ರಾಮರಾಯರು.... ಅಂದೇ ರಾತ್ರಿ ತಮ್ಮ ಕೈಯಲ್ಲಿ ಆರು ತಿಂಗಳಿನ ಅಮರನನ್ನು ತಂದು ಅವಳ ಮಡಿಲಿಗೆ ಹಾಕಿ "ಸುಂದರೀ.... ನಾನು ನನಗಾಗಿ ಮದುವೆಯಾಗಲಿಲ್ಲ. ನಾನು ಮದುವೆಯಾದದ್ದು ಈ ತಬ್ಬಲಿ ಮಗುವಿಗಾಗಿ... ಇವನಿಗೆ ಒಬ್ಬ ಒಳ್ಳೆಯ ತಾಯಿಯನ್ನು ತರುತ್ತೇನೆ ಎಂದು ಲಕ್ಷ್ಮಿಗೆ ಮಾತು ಕೊಟ್ಟಿದ್ದೆ. ಈಗ ತಂದದ್ದೂ ಆಯಿತು ಇನ್ನು ಮೇಲೆ ಅಮರ ನಿನ್ನ ಮಗ.... ಅವನನ್ನು ಸಾಕುವುದು ನಿನ್ನ ಜವಾಬ್ದಾರಿ." ಎಂದು ಹೇಳಿ ಅಮರನನ್ನು ಅವಳ ಮಡಿಲಿಗೆಹಾಕಿ ತಾವು ಹಾಯಾಗಿ ನಿದ್ದೆ ಹೋದರು.

ತಾನು ಕಟ್ಟಿದ್ದ ಆಶಾಗೋಪುರ ಕಳಚಿ ಬಿದ್ದಿತ್ತು. ಸುಂದರವಾದ ಸ್ವಪ್ನಗಳು ಸುಟ್ಟು ಕರಗಿ ಹೋದವು. ಅದಕ್ಕೆಲ್ಲಾ ಕಾರಣನಾದ ಅಮರ.....ಅವಳ ಪಾಲಿಗೆ ಶತ್ರುವಾದ..... ಅಂದಿನಿಂದಲೇ ಅವಳ ಮನದಲ್ಲಿ ಪಾಪ ಬೇರೂರಿತು. ಸೇಡು ಮೊಳಕೆಯೊಡೆಯಿತು. ಅಮರನಿಗೆ ಹಿಂಸೆ ಪ್ರಾರಂಭವಾಯಿತು.

ಮಗುವಿಗೆ ಸರಿಯಾಗಿ ಹಾಲು ಕುಡಿಸಲಿಲ್ಲ— ಸ್ನಾನ ಮಾಡಿಸಲಿಲ್ಲ— ನಿದ್ದೆ ಬಂದಾಗ ಜೋಗುಳ ಹಾಡಿ ಮಲಗಿಸಲಿಲ್ಲ..... ತಾನಾಯಿತು ತನ್ನ ಕೆಲಸವಾಯಿತು. ರಾತ್ರಿ ಸಹ ಮಗುವನ್ನು ಹೊರಗೆ ತೊಟ್ಟಿಲಲ್ಲಿ ಮಲಗಿಸಿ, ತಾನು ಗಂಡನನ್ನು ಎಳೆದುಕೊಂಡು ತನ್ನ ಕೋಣೆಗೆ ಬರುತ್ತಿದ್ದಳು. ಮಗುವನ್ನು ಮರೆತು ಶೃಂಗಾರ ಚೇಷ್ಟೆಯಲ್ಲಿ ಮೈ ಮರೆಯುತ್ತಿದ್ದಳು. ಮಗು ಎದ್ದು ಅಳ ತೊಡಗಿದರೆ ಅದರ ಕಡೆ ಸ್ವಲ್ಪವೂ ಲಕ್ಷ್ಯ ಕೊಡುತ್ತಿರಲಿಲ್ಲ..... ಎತ್ತಿಕೊಂಡು ಹಾಲು ಕುಡಿಸಿ ಸಮಾಧಾನಪಡಿಸುತ್ತಿರಲಿಲ್ಲ ರಾಯರು ಹೇಳಿ ಹೇಳಿ ಬೇಸತ್ತು ಕೊನೆಗೆ ತಾವೇ ಎದ್ದು ಮಗುವನ್ನು ಸಮಾಧಾನಪಡಿಸುತ್ತಿದ್ದರು.

ತನ್ನ ಪಕ್ಕದಲ್ಲಿ ಹಾಯಾಗಿ ಮಲಗಿ, ತನ್ನೊಡನೆ ಸುಖಿಸಬಹುದಾಗಿದ್ದ ರಾಯರು, ಮೇಲೆದ್ದು ತನ್ನನ್ನು ನಿರಾಶೆಗೊಳಿಸುವುದಕ್ಕೆ ಅಮರನೇ ಕಾರಣ ಎಂಬುದು ಅವಳ ಮನದಿಂದ ಎಂದೂ ತೆಗೆಯದಂತಾಯಿತು. ಅಮರ ಅವಳ ಹೃದಯದಲ್ಲಿ ನೆಟ್ಟ ಮುಳ್ಳಿನಂತಾದ

ರಾಮರಾಯರು ಪತ್ನಿಗೆ ಎಷ್ಟೋ ಬಾರಿ ತಿಳಿಸಿ ಹೇಳಿದರು. ಸುಂದರಿ ಬಾಯಿ ಹೆಸರಿಗೆ ಸುಂದರಿಯಾಗಿದ್ದರೂ ಅವಳ ಹೃದಯ ಸುಂದರವಾಗಿರಲಿಲ್ಲ.

ಪತಿಯ ಮಾತನ್ನು ಆಕೆ ಗಾಳಿಗೆ ತೂರಿದಳು. ಆ ದರಿದ್ರ ಮಗುವಿಗೆ ತಾನು ತಾಯಿಯಾಗಿ ಬಂದಿಲ್ಲ ಎಂದಾಕೆ ಸ್ಪಷ್ಟವಾಗಿ ಹೇಳಿದಾಗ ರಾಮರಾಯರು ಮುಂದೆ ಮಾತನಾಡಲೇ ಇಲ್ಲ.

ಅಂದು ಆ ಹಸುಗೂಸಿನ ಮೇಲೆ ಪ್ರಾರಂಭವಾದ ಹಿಂಸೆ ಇಂದಿಗೂ ನಿಂತಿರಲಿಲ್ಲ.

ಸುಂದರಬಾಯಿಗೆ ಮದುವೆಯಾದ ವರ್ಷವೇ ಹುಟ್ಟಿದವಳು ಮಾಲತಿ, ಅನಂತರ ಒಂದು ಗಂಡು ಮಗು ವಸಂತ, ಮೂರನೇಯು ಹಾಗೂ ಕೊನೆಯವಳೇ ರತ್ನ. ತನ್ನ ಹೊಟ್ಟೆಯಿಂದ ಮೂರು ಮಕ್ಕಳಾದ ಮೇಲಂತೂ ಎಲ್ಲೋ ಅಲ್ಪ ಸ್ವಲ್ಪ ಅಮರನ ಬಗೆಗಿದ್ದ ಅನುಕಂಪ ತಾಯಿಯ ಮಮತೆ ಅಳಿದುಳಿದಿದ್ದು ಅದೂ ಸಂಪೂರ್ಣ ನಾಶವಾಗಿ ಹೋಯಿತು. ಅವಳ ದೃಷ್ಟಿಯಲ್ಲಿ ಮಾಲತಿ, ವಸಂತ, ರತ್ನ ಈ ಮೂವರೇ ಆಕೆಯ ಮಕ್ಕಳು. ಅಮರ . ಅದೊಂದು ಪೀಡೆ. ತನ್ನ ಬಾಳಿನ ಶಾಪ..... ಎಂದುಕೊಂಡಳು. ರಾಮರಾಯರು ತಮ್ಮ ಕಾಯಕ ಬಿಡಲಿಲ್ಲ. ಬುದ್ಧಿ ಹೇಳಿದರು, ತಿಳಿಸಿ ಹೇಳಿದರು. "ಆ ಮೂರು ಮಕ್ಕಳಿಗೂ ನಾಲ್ಕು ಚೊಂಬು ಸ್ನಾನಕ್ಕೆ ನೀರು ಹಾಕುವಾಗ, ಅಮರನಿಗೆ ಒಂದು ಚೊಂಬಾದರೂ ಹಾಕು. ಅವರ ಕೂದಲು ಬಾಚುವಾಗ, ಇವನಿಗೂ ಬಾಚು. ಅವರಿಗೆ ಬಟ್ಟೆ ತೊಡಿಸುವಾಗ ಇವನಿಗೂ ತೊಡಿಸು. ಅವರಿಗೆ ಊಟ ಕೊಡುವಂತೆ ಅಮರನಿಗೂ ಕೊಡು."

ರಾಮರಾಯರ ಬುದ್ಧಿವಾದ ತಿಳುವಳಿಕೆ ಎಲ್ಲಾ ಗಾಳಿಗೆ ತೂರಿಹೋದವು ಮನೆ ಎಂಬುದು ಕುರುಕ್ಷೇತ್ರವಾಯಿತು. ಅಕ್ಕಪಕ್ಕದ ಜನ ನಿಂತು ತಮಾಷೆ ನೋಡುವಂತಾದಾಗ ಇದರ ಪರಿಣಾಮ ಅಮರನ ಮೇಲೆ ಹಿಂಸೆಯ ಪ್ರತಿರೂಪ ತಾಳಿದಾಗ, ರಾಮರಾಯರು ತಮ್ಮ ಬಾಯಿಗೆ ಬೀಗ ಹಾಕಿಕೊಳ್ಳುವುದೇ ಸರಿಯಾದದ್ದು ಎಂಬ ನಿರ್ಣಯಕ್ಕೆ ಬಂದರು. ಪತಿಯ ಸೋಲು ಪತ್ನಿಯ ಗೆಲುವಾಯಿತು. ಅಂದು ಸೋತ ರಾಮರಾಯರು ಇಂದಿನವರೆಗೂ ಸೋಲುತ್ತಲೇ ಬಂದಿದ್ದರು.

ದೊಡ್ಡವನಾಗುತ್ತ ಅಮರ ಆ ಮನೆಗೆ ಹಿರಿಯ ಮಗನಾಗಿ ಬೆಳೆಯಲಿಲ್ಲ. ಒಬ್ಬ ನೌಕರನಾಗಿ ಬೆಳೆದ.... ಒಂದು ಆಳಾಗಿ ಬೆಳೆದ.... ಚಳಿಯಲ್ಲಿ ಬೆಚ್ಚಗೆ ಮುದುರಿಕೊಂಡು ಮಲಗಿದಾಗ ಮಲತಾಯಿ ಬಂದು ಒದ್ದು ಎಬ್ಬಿಸುತ್ತಿದ್ದಳು.

ಹಿತ್ತಲದಿಂದ ನೀರು ತಂದು ಹಾಕಬೇಕು, ಸೌದೆ ಒಟ್ಟಿ ನೀರೊಲೆ ಹೊತ್ತಿಸಬೇಕು, ಅಡಿಗೆ ಮನೆ ಕಸ ಹೊಡೆದು ಪಾತ್ರೆ ಬೆಳಗಬೇಕು, ಆರೂವರೆ ಎಂದರೆ ಎಲ್ಲರಿಗೂ ಕಾಫಿ ಮಾಡಿ ತಂದುಕೊಡಬೇಕು. ಎಲ್ಲರಿಗೂ ಸ್ನಾನಕ್ಕೆ ನೀರು ತಂದುಕೊಡಬೇಕು, ಅವರ ಬಟ್ಟೆ ಒಗೆಯಬೇಕು, ಪೇಟೆಗೆ ಹೋಗಿ ಸಾಮಾನು ತರಬೇಕು ಇಷ್ಟೆಲ್ಲಾ ಮಾಡಿಕೊಂಡು ತಾನು ಶಾಲೆಗೆ ಹೋಗಬೇಕು ಅದೂ ಅರೆಹೊಟ್ಟೆ ಉಂಡು.

ಶಾಲೆಗೆ ಬಂದಾಗ ಅವನ ಹೊಟ್ಟೆ ಹಸಿವಿನಿಂದ ಚುರುಗುಟ್ಟುತ್ತಿತ್ತು. ಪಾಠದ ಕಡೆಗೆ, ಲೆಖ್ಖದ ಕಡೆಗೆ ಲಕ್ಷ್ಯವೇ ಇರುತ್ತಿರಲಿಲ್ಲ ಮನಸೆಲ್ಲ ಹಸಿವೆಯತ್ತ ಹರಿಯುತ್ತಿತ್ತು ಅದನ್ನು ಗಮನಿಸಿದ ಗುರುಗಳು ಬೆತ್ತದಿಂದ ಅವನನ್ನು ದಂಡಿಸುತ್ತಿದ್ದರು ತಂಗಿಯ ಮುಂದೆ ದೂರು ಹೋಗುತ್ತಿತ್ತು. ಅದು ಸುಂದರಬಾಯಿಯ ಕಿವಿಗೆ ಬಿದ್ದರಂತೂ ಆಕೆ ಚಂಡಿ ಚಾಮುಂಡಿಯ ಅವತಾರ ತಾಳುತ್ತಿದ್ದಳು ಮೈ ಮುರಿಯುವ ಹಾಗೆ ಒದೆ. ನಂತರ ಉಪವಾಸ....

ಇಂಥ ವೇಳೆಯಲ್ಲಿ ಅಮರ ತನ್ನ ನೋವು ಮರೆಯಲು ಹಸಿವೆ ಎಂಬುದನ್ನು ಕಿತ್ತೊಗೆಯಲು ಆಟದ ಬಯಲಿಗೆ ಓಡುತ್ತಿದ್ದ. ಅಲ್ಲಿ ನಡೆಯುತ್ತಿದ್ದ ಫುಟ್‌ಬಾಲ್ ಆಟ ನೋಡುತ್ತ ಮೈ ಮರೆಯುತ್ತಿದ್ದ. ಆಗವನಿಗೆ ಹಸಿವೆ, ನೀರಡಿಕೆಗಳು ಬಾಧಿಸುತ್ತಿರಲಿಲ್ಲ. ಚಿಕ್ಕಮ್ಮನ ನಂಜಿನ ಮಾತುಗಳಾಗಲೀ, ಮೈಮುರಿಯುವ ಪೆಟ್ಟುಗಳಾಗಲೀ ನೆನಪಿಗೆಬರುತ್ತಿರಲಿಲ್ಲ. ತಾನು ಯಾವುದೋ ಒಂದು ಅದ್ಭುತ ಪ್ರಪಂಚದಲ್ಲಿರುವಂತೆ, ರೆಕ್ಕೆ ಕಟ್ಟಿಕೊಂಡು ಆಕಾಶದಲ್ಲಿ ಹಾರುತ್ತಿರುವಂತೆ, ಕೆಳಗಿದ್ದವರು ತನ್ನತ್ತ ಕೈ ಬೀಸಿ ಕೆಳಗೆ ಬಾ ಕೆಳಗೆ ಎಂದು ಕರೆದಂತೆಯೂ ತಾನು ಕೆಳಗೆ ಬಾರದೆ ಶಕ್ತಿಯಿದ್ದರೆ ನೀವೇ ಬನ್ನಿ ನನ್ನ ಜೊತೆ ಹಾರಿ ಎಂದಂತೆಯೂ ಅವರೆಲ್ಲರಿಗೆ ತನ್ನಂತಹ ಶಕ್ತಿ ಇರದಿದ್ದರಿಂದ ಅವರೆಲ್ಲ ಕೈ ಕೈ ಹಿಸುಕಿಕೊಂಡು ತನ್ನನ್ನು ಶಪಿಸುತ್ತಿರುವಂತೆಯೂ ಕನಸು ಕಾಣುತ್ತಿದ್ದ. ಒಮ್ಮೊಮ್ಮೆ ಆ ಮನೆ ಬಿಟ್ಟು ಓಡಿ ಹೋಗಬೇಕು ಬೇರೆಲ್ಲಿಯಾದರೂ ಕೂಲಿ ಮಾಡಿಕೊಂಡು ಜೀವಿಸಿದರಾಯಿತು ಎಂದು ಯೋಚಿಸುತ್ತಿದ್ದ. ಆದರ ಮರುಕ್ಷಣ ತಂದೆಯ ದೈನ್ಯ ಮುಖ ಅವನೆದುರು ಬಂದು ನಿಂತು ಅವನ ನಿರ್ಧಾರವನ್ನು ಶಿಥಿಲಗೊಳಿಸುತ್ತಿತ್ತು. ಅಮರ ತಂದೆಗಾಗಿ ಬದುಕಿದ್ದ ತಂದೆ ಅಮರನಿಗಾಗಿ__

ತನ್ನ ಚಿಕ್ಕಮ್ಮ ತನಗೆ ನೀಡುತ್ತಿರುವ ಹಿಂಸೆಯನ್ನು ತಡೆಯಲು ತಂದೆ ಮಾಡುತ್ತಿದ್ದ ಪ್ರಯತ್ನ ಅಮರನಿಗೆ ತಿಳಿದಿತ್ತು. ಪ್ರಯತ್ನ ಸಫಲವಾಗದೆ, ಚಿಕ್ಕಮ್ಮ ಅವರ ಮೇಲೆ ಹರಿಹಾಯ್ದು ಬಾಯಿಗೆ ಬಂದ ಪದಗಳಲ್ಲಿ ಅವರಿಗೆ ಮಂಗಳಾರತಿ ಮಾಡಿ, ನಂತರ ಅಮರನತ್ತ ಹೊರಳುತ್ತಿದ್ದಳು. ಅಮರನಿಗೆ ಬೈಗಳ ಜೊತೆ, ಮೈ ಮುರಿಯುವಂತಹ ಪೆಟ್ಟುಗಳು ಬೀಳುತ್ತಿದ್ದವು. ಗಂಡನ ಮೇಲಿನ ಕೋಪವನ್ನು ಆ ಪತಿವ್ರತೆ, ಮಹಾಸತಿ, ಜಗದಾಂಬೆ, ಅಮರನ ಮೇಲೆ ಹಾಕುತ್ತಿದ್ದಳು ಅಮರನ ಮೈಗೆ ಬಿದ್ದ ಒಂದೊಂದು ಪೆಟ್ಟನ್ನೂ ತಮ್ಮ ಮೈಮೇಲೆ ಬಿದ್ದಂತೆ ಚಿತ್ರಹಿಂಸೆ ಅನುಭವಿಸುತ್ತಿದ್ದರು ರಾಮರಾಯರು. ಪತ್ನಿ ಹೊರಟು ಹೋಗುತ್ತಲೂ ಅಮರನನ್ನು ಅಪ್ಪಿಕೊಂಡು ಗೋಳೋ ಎಂದು ಅತ್ತು ಬಿಡುತ್ತಿದ್ದರು "ಕಂದಾ . ನಾನು ಮತ್ತೊಂದು ಮದುವೆ ಮಾಡಿಕೊಂಡು ನಿನ್ನ ಜೀವಕ್ಕೆ ಕುತ್ತು ತಂದೆನಪ್ಪ." ಎಂದು ಬಡಬಡಿಸುತ್ತಿದ್ದರು. ಆಗ ಅಮರ ಎಲ್ಲ ನೋವು ಮರೆತು "ಅಪ್ಪಾ" ಎಂದು ತಂದೆಯನ್ನು ಅಪ್ಪಿಕೊಳ್ಳುತ್ತಿದ್ದ.

ಮನೆಯತ್ತ ಓಡುತ್ತಲೇ ಅಮರ ಇದನ್ನೆಲ್ಲಾ ಯೋಚಿಸುತ್ತಿದ್ದ. ಅವನಿಗೆ ಗೊತ್ತಿತ್ತು... ಇಂದು ತನಗೆ ಮಹಾ ಮಂಗಳಾರತಿ ಆಗುತ್ತದೆ ಎಂದು. ಅದರಂತೆಯೇ ಆಯಿತು.

ಅಮರ ಮನೆ ತಲುಪಿದಾಗ ತಂದೆ ಹೊರಟುಹೋಗಿದ್ದರು. ತಾಯಿ ಅಂದರೆ ಚಿಕ್ಕಮ್ಮ ಮಹಾ ಕಾಳಿಯ ಅವತಾರ ತಾಳಿದ್ದಳು.

"ಎಲ್ಲಿ ಹಾಳಾಗಿ ಹೋದನೋ ಅಮರ ?" ಎಂದು ಪ್ರೀತಿಯಿಂದ ಅಬ್ಬರಿಸಿ ಕೇಳುತ್ತಿದ್ದರು. ವಸಂತ "ನನಗೆ ಗೊತ್ತಿಲ್ಲಮ್ಮ ... ನಾನು ಏಳುವುದಕ್ಕೆ ಮೊದಲೇ ಹೊರಟುಹೋದ. ನನಗೆ ಬೆಡ್ ಟೀ ಸಹ ಕೊಟ್ಟಿಲ್ಲ." ಎಂದರೆ ಬಚ್ಚಲು ಮನೆಯಿಂದಲೇ ಮಾಲತಿ ಅರಚಿಕೊಂಡಳು "ಅಮ್ಮಾ ನನ್ನ ಸ್ನಾನಕ್ಕೆ ನೀರು ತೋಡಿಲ್ಲ...... ಅಮರನನ್ನು ಕಳಿಸು...." ಅಳುತ್ತಾ ಅಳುತ್ತಾ ಬಂದ ರತ್ನಾ .... "ಅಮ್ಮಾ ನಾನು ಸಂಡಾಸಕ್ಕೆ ಹೋಗಬೇಕು." ಎಂದಳು. ಸುಂದರಮ್ಮನಿಗೆ ಹುಚ್ಚು ಹಿಡಿದಂತಾಯಿತು. "ಈ ಹಾಳು ಶನಿ ಮುಂಡೆ ಅಮರ ಒಂದು ಗಳಿಗೆ ಮನೆ ಬಿಟ್ಟು ಹೋದರೆ ಎಲ್ಲಾ ಕೆಲಸ ನಿಂತು ಹೋಗುತ್ತೆ..... ಎಲ್ಲಿ ಅಂತ ಹುಡುಕಲಿ." ಎಂದು ಚಡಪಡಿಸುತ್ತಿದ್ದಾಗಲೇ .. ವಸಂತ ಕೂಗಿದ

"ಅಮ್ಮಾ ಅಮರ ಬಂದ .. "

ತಮ್ಮ ಕೈಯಲ್ಲಿದ್ದ ಬಳೆಗಳನ್ನು ಮೇಲೆರಿಸಿ ಆ ಮಹಾತಾಯಿ,ಸುತ್ತಲೂ ದೃಷ್ಟಿ ಬೀರಿದಳು. ಕಂಡದ್ದು ಪೊರಕೆ. ಅಮರ ಒಳಗೆ ಕಾಲಿಡುವುದಕ್ಕೂ ಪೊರಕೆ ಸೇವೆ ಪ್ರಾರಂಭವಾಗುವುದಕ್ಕೂ ಸರಿಹೋಯ್ತು. "ಎಲ್ಲಿ ಹಾಳಾಗಿ ಹೋಗಿದ್ಯೋ ಶನಿ...." ಎನ್ನುತ್ತಾ ಅವರು ಪೊರಕೆಯಿಂದ ಬಾರಿಸುತ್ತಿರುವಾಗ "ಚಿಕ್ಕಮ್ಮ ಹೊಡೆಯಬೇಡಮ್ಮ .... ನಾನು ನನ್ನ ಪಾಲಿನ ಎಲ್ಲಾ ಕೆಲಸ ಮಾಡಿ ಹೋಗಿದ್ದೇನಮ್ಮಾ ...." ಎಂದು ಗೋಗರೆದ ಅಮರ "ಓಹೋಹೊ..... ಎಲ್ಲಾ ಕೆಲಸಾ ಮಾಡಿ ಹೋಗಿದ್ದಿಯಾ ? ಹಾಗಾದರೆ ಮಾಲತಿ ಸ್ನಾನಕ್ಕೆ ನೀರು ಕೊಡೋರು ಯಾರು ? ವಸಂತನಿಗೆ ಟೂತ್‌ಪೇಸ್ಟ್ ಹುಡುಕೋರು ಯಾರು ? ರತ್ನಾನ ಕಕ್ಕಸಿಗೆ ಕರೆದುಕೊಂಡು ಹೋಗೋರು ಯಾರು ? ಹೇಳೊ ನೀನಾ ನಿಮ್ಮಪ್ಪನಾ__ ?"

"ಚಿಕ್ಕಮ್ಮ .... ಅಪ್ಪನ ತಂಟೆಗೆ ಬರಬೇಡ " ಎಂದ ಅಮರ.

"ಅಬಬಬಾ .. ಪಿತೃಭಕ್ತ ಶ್ರವಣಕುಮಾರ ನೋಡು ನೀನು. ತಂದೆಯ ಹೆಸರು ಎತ್ತುತ್ತಲೂ ಎಂಥಾ ಕೋಪ ಬಂತು ನೋಡು... ಇನ್ನೂ ನಿಂತೇ ಇದ್ದೀಯಲ್ಲ.... ಹೋಗು ಇದೇ ಕೋಪವನ್ನು ಕೆಲಸದ ಮೇಲೆ ತೋರಿಸಿ ಬೇಗ ಬೇಗ ಮುಗಿಸು... "

"ಆಗಲಿ ಚಿಕ್ಕಮ್ಮ .... ಹಾಗೇ ಆಗಲಿ...."

ಅಮರ ಬಚ್ಚಲು ಮನೆ ಕಡೆ ಓಡಿದ ಅಂದವನ ಊಟಕ್ಕೆ ಸೊನ್ನೆ ... ಬರೀ ಹೊಟ್ಟೆಯಲ್ಲಿ ಸ್ಕೂಲಿಗೆ ಹೋಗಬೇಕಾಯಿತು. ಎಲ್ಲಾ ಕೆಲಸ ಮಾಡಿ, ಸ್ಕೂಲಿಗೆ ಹೊರಟು ನಿಂತ ಅಮರ ಚಿಕ್ಕಮ್ಮನಿಗೆ ಹೇಳಿದ, "ಚಿಕ್ಕಮ್ಮ..... ಊಟಕ್ಕೆ ಬಡಿಸಮ್ಮ ಸ್ಕೂಲಿಗೆ ಹೋಗಬೇಕು."

"ಇನ್ನೂ ಅಡಿಗೆಯಾಗಿಲ್ಲ ಸಲ್ಪ ತಡೆ...." ಎಂದರು ಸುಂದರಮ್ಮ ಒಳಗಿನಿಂದಲೇ.

ಅದೇ ಹತ್ತು ನಿಮಿಷ ಮೊದಲು ವಸಂತ, ಮಾಲತಿ ಬಿಸಿಬಿಸಿ ಅಡಿಗೆ ಊಟ ಮಾಡಿದ್ದನ್ನು ಅಮರ ಕಂಡಿದ್ದ.

"ಬಿಸಿ ಇಲ್ಲದಿದ್ದರೆ ತಂಗಳಾದರೂ ನೀಡು ಚಿಕ್ಕಮ್ಮಾ ...." ಎಂದು ಆತ ಗೋಗರೆದಾಗ ಅರ್ಧ ಹಸಿವು ಹಿಂಗುವಷ್ಟು ನಿನ್ನೆಯ ಊಟ ಅವನಿಗೆ ದೊರೆ

ಯಿತು. ಅದನ್ನೆ ಉಂಡು, ಹರಿದ ಪುಸ್ತಕಗಳೊಡನೆ ಆತ ಶಾಲೆಯ ಕಡೆ ನಡೆದಾಗ ಯೋಚಿಸುತ್ತಿದ್ದ.

ಈ ರೀತಿಯಿದ್ದು ಶಾಲೆ ಕಲಿಯುವುದರಲ್ಲಿ ಅರ್ಥವಾದರೂ ಏನಿದೆ? ಶಾಲೆ ಕಲಿತು ಪಾಸಾಗಿ ನೌಕರಿ ಸಂಪಾದಿಸಬೇಕು ತಾನೆ? ಓದಲು ಪುಸ್ತಕ ಎಲ್ಲಿ.... ತೊಡಲು ಒಳ್ಳೆಯ ಬಟ್ಟೆ ಇಲ್ಲ ... ಹೊಟ್ಟೆಗಂತೂ ಹಿಟ್ಟು ಇಲ್ಲೇ ಇಲ್ಲ ಇಂಥ ಸಂಭ್ರಮಕ್ಕೆ ಓದು ಬೇರೆ ಕೇಡು. ಅಭ್ಯಾಸದಲ್ಲಿ ಮನಸ್ಸೂ ಕೂಡಾ ಇಲ್ಲ.... ಏನು ಮಾಡುವುದು? ಎಂದಾತ ಹಲವಾರು ಬಾರಿ ಯೋಚಿಸುತ್ತಿದ್ದ. ತನ್ನನ್ನು ತಾನೇ ನೂರು ಬಾರಿ ಈ ಪ್ರಶ್ನೆ ಕೇಳಿಕೊಂಡು ಉತ್ತರ ಹುಡುಕುತ್ತಿದ್ದ.... ಕೊನೆಗೊಂದು ನಿರ್ಣಯಕ್ಕೆ ಬರುತ್ತಿದ್ದ.

'ಓದಿಗಿಂತ.... ಫುಟ್‌ಬಾಲ್ ಆಟದಲ್ಲಿ ಮನಸ್ಸು ಹಾಕಿದರೆ ಇಂದಿಲ್ಲ ನಾಳೆ ನಾನೊಬ್ಬ ಒಳ್ಳೆಯ ಆಟಗಾರನಾಗಬಹುದು. ಆಗ ಅನೇಕ ಸಂಘ ಸಂಸ್ಥೆಗಳು ನನ್ನನ್ನು ಕರೆದು ತಾವೇ ಗೌರವ ಹುದ್ದೆ ಕೊಡುತ್ತವೆ.... ಅದರಿಂದ ತಾನೂ ತನ್ನ ತಂದೆಯೂ ಹಾಯಾಗಿ ಆರಾಮವಾಗಿ ಇರಬಹುದು.'

ಎಂದು ಅವನ ಮನಸ್ಸು ಇದೇ ಯೋಗ್ಯವೆಂದು ಸಾರಿ ಸಾರಿ ಹೇಳಿತು.

## 3.

ಅಪ್ಪಾಜಿಯವರು ಬೆಳಿಗ್ಗೆ ಆರು ಗಂಟೆಗೆ ಬರಲು ಹೇಳಿದ್ದು, ಮಲಗುವ ಮುನ್ನ ಅಮರನಿಗೆ ನೆನಪಾಯಿತು. ಆರು ಗಂಟೆಗೆ ಹೋಗಬೇಕೆಂದರೆ ಅಷ್ಟರೊಳಗೆ ಮನೆಯ ಎಲ್ಲಾ ಕೆಲಸ ಮುಗಿಸಿ ಹೋಗಬೇಕಿತ್ತು. ಅದಕ್ಕಾಗಿ ನಸುಕಿನ ನಾಲ್ಕು ಗಂಟೆಗೆ ಏಳಬೇಕೆಂದು ಆತ ನಿರ್ಧರಿಸಿದ. ಅಲಾರಾಮ್ ಹೊಡೆಯುವ ಗಡಿಯಾರ ವಸಂತನ ಬಳಿ ಇದ್ದುದರಿಂದ ಆತ ಮೆಲ್ಲನೆ ವಸಂತನ ಬಳಿ ಬಂದು ಕೇಳಿದ,

"ವಸಂತ.... ಸ್ವಲ್ಪ ಗಡಿಯಾರ ಕೊಡ್ತೀಯಾ ಬೆಳಿಗ್ಗೆ ಬೇಗ ಏಳಬೇಕಾಗಿದೆ...."

"ಇಲ್ಲಪ್ಪಾ .. ಅದು ಕೆಟ್ಟು ಹೋದರೆ ಅಮ್ಮ ನನ್ನ ಬೈತಾಳೆ___"

"ನಾನೇನೂ ಅದನ್ನ ಕೆಡಿಸೊಲ್ಲ....ಚೆನ್ನಾಗಿ ಉಪಯೋಗಿಸ್ತೀನಿ ಕಣೊ"

ಜಪ್ಪಯ್ಯ ಅಂದರೂ ವಸಂತ ಕೊಡಲಿಲ್ಲ. ಅವರ ಮಾತು ಕತೆ ರಾಮರಾಯರ ಕಿವಿಗೆ ಬಿದ್ದು ಅವರು ಸಿಟ್ಟು ಬೆಂಕಿಯಾಗಿ ವಸಂತನಿಗೆ ಗದರಿದರು,

"ಅಷ್ಟು ಹೊತ್ತಿಂದ ಪಾಪ ಗೋಗರಿತಿದ್ದಾನೆ ಕೊಡೋಕೇನೊ ಧಾಡಿ"

"ಹೂಂ...... ಕೆಟ್ಟು ಹೋಯ್ತುಂದ್ರೆ ಯಾರು ರಿಪೇರಿ ಮಾಡ್ಸೋರು ?"

"ಅದು ಕೆಟ್ರೆ___ ನೀನೇನೋ ರಿಪೇರಿ ಮಾಡ್ಸೋನು .. ನಿಮ್ಮ ತಾತ ಗಳಿಸಿ ಇಟ್ಟಿದ್ದಾನೆಯೇ ಇಲ್ಲಿ ? ತರೋನು ನಾನು, ಕೆಟ್ಟರೆ ಅದನ್ನ ರಿಪೇರಿ ಮಾಡ್ಸೋನೂ ನಾನೇ ! ತಿಳೀತಾ ?"

ಸೊಟ್ಟ ಮುಖ ಮಾಡಿದ ವಸಂತ ಮನದಲ್ಲಿಯೇ ಅವರನ್ನು ಶಪಿಸುತ್ತ ಗಡಿಯಾರ ನೀಡಿದ. ಅದು ತನಗಾದ ಸೋಲೆಂದು ತಿಳಿದ ಆತ ಅದರ ಪ್ರತೀಕಾರ ತೀರಿಸಿಕೊಳ್ಳದೆ ಬಿಡಬಾರದೆಂದು ತೀರ್ಮಾನಿಸಿದ.

ನಸುಕಿನ ನಾಲ್ಕು ಗಂಟೆಗೆ ಗಡಿಯಾರದ ಗಂಟೆ ಬಾರಿಸಿದಾಗ, ಅಮರ ಧಡಧಡನೆ ಎದ್ದವನೇ ಟಕ್ ಎಂದು ಅದನ್ನು ಬಂದು ಮಾಡಿದ. ಆದರೂ ಮಾಲತಿ ಗೊಣಗಿದಳು, "ಏಯ್ ಅವಿವೇಕಿ ಬೇಗ ಬಂದು ಮಾಡದನ್ನ.. ನನ್ನ ನಿದ್ದೇನೆಲ್ಲ ಹಾಳು ಮಾಡಿಬಿಟ್ಟೆ" ಅದಕ್ಕೆ ಕಿವಿಗೊಡದೆ ಎದ್ದು ದೀಪ ಉರಿಸಿದ ಅಮರ ಹಿತ್ತಲಿನತ್ತ ನಡೆದ. ಹತ್ತು ನಿಮಿಷ ಬಿಟ್ಟು ಮುಖತೊಳೆದು ಬಂದಾಗ ದೀಪ ಆರಿತ್ತು. ಹೋಗುವಾಗ ದೀಪ ಉರಿಯುತ್ತಿದ್ದುದು ಅವನಿಗೆ ಚೆನ್ನಾಗಿ ನೆನಪಿನಲ್ಲಿತ್ತು. ಈಗ ಆರಿದೆಯಲ್ಲಾ ಎಂದುಕೊಳ್ಳುತ್ತಾ ದೀಪದ ಗುಂಡಿ ಅದುಮಿದ. ದೀಪ ಹತ್ತಿಕೊಂಡಿತು, ಛುಗಿಲ್ ಎಂದು ಓಡಿದೆದ್ದ ವಸಂತ ಅಬ್ಬರಿಸಿದ,

"ಏ ಮಹಾತ್ಮಾ ... ಆರಿಸೋ ಅದನ್ನ.... ದೀಪ ಇದ್ರೆ ನನಗೆ ನಿದ್ರೆ ಬರೊಲ್ಲ." ವಸಂತನ ಬಾಯಿಗೆ ಎಲ್ಲಿ ಚಿಕ್ಕಮ್ಮ ಎಚ್ಚೆತ್ತುಬಿಡುತ್ತಾಳೋ ಎಂಬ ಹೆದರಿಕೆಯಿಂದ ಅಮರ ಪಟಕ್‌ನೇ ದೀಪ ಆರಿಸಿದ.

ಹಿತ್ತಲಿನಿಂದ ನೀರು ಸೇದಿ ತಂದು ಬಚ್ಚಲು ಮನೆಗೆ ಸುರಿಯಬೇಕಿತ್ತು. ಬಚ್ಚಲು ಮನೆಗೆ ದೀಪವಿರಲಿಲ್ಲ. ಈ ಕೋಣೆಯ ದೀಪ ಹಾಕಿದರೆ ಅದರ ಬೆಳಕು ಬಚ್ಚಲು ಮನೆಯ ಒಳಗೂ ಬೀಳುತ್ತಿತ್ತು. ಕತ್ತಲೆಯಲ್ಲಿ ಹೇಗೆ ಕೆಲಸ

ಮಾಡುವುದು ? ಎಂದು ಯೋಚಿಸುತ್ತ ಅಡಿಗೆ ಮನೆಗೆ ಬಂದು ಅಮರ ದೀಪ ಉರಿಸಿ ಸೀಮೆಎಣ್ಣೆ ಬುಡ್ಡಿ ಹುಡುಕಿದ. ಅದೃಷ್ಟಕ್ಕೆ ಅದು ದೊರೆಯಿತು. ಬುಡ್ಡಿ ಹೊತ್ತಿಸಿ ಹಿತ್ತಲಿಗೆ ಬಂದ. ಬಚ್ಚಲು ಮನೆಯ ಕಟ್ಟೆ ಮೇಲೆ ದೀಪ ಇರಿಸಿ ಬಾವಿಯತ್ತ ನಡೆದ.

ಅರ್ಧ ಗಂಟೆಯಲ್ಲಿ ನೀರು ತುಂಬುವದಾಯಿತು. ಅಡಿಗೆ ಮನೆ ಕಸ ಗುಡಿಸಿ ಪಾತ್ರೆಗಳನ್ನೆಲ್ಲ ಎತ್ತಿಕೊಂಡು ಹಿತ್ತಲಿಗೆ ಬಂದ. ಕತ್ತಲೆಯಲ್ಲಿಯೇ ಅವುಗಳನ್ನು ಬೆಳಗಿ ತೊಳೆದು ನಂತರ ಬಚ್ಚಲಿಗೆ ಬಂದು ಬುಡ್ಡಿ ಬೆಳಕಿನಲ್ಲಿ ಮತ್ತೊಮ್ಮೆ ತಿಳಿನೀರಿನಿಂದ ತೊಳೆದು ಅಡಿಗೆ ಮನೆಯಲ್ಲಿರಿಸಿದ ನೀರೊಲೆಗೆ ಉರಿ ಹಾಕಿದ. ನೀರು ಕಾಯಿಸಿ ಸ್ನಾನ ಮಾಡಿ ಅಡಿಗೆ ಮನೆಗೆ ಬಂದಾಗ ಐದೂವರೆ ಸಮೀಪಿಸುತ್ತಿತ್ತು. ಒಲೆ ಹೊತ್ತಿಸಿ ಚಹ ಮಾಡಿ ತಾನೊಂದು ಕಪ್ ಕುಡಿದು ಕೈಲಿ ಮತ್ತೊಂದು ಕಪ್ ಹಿಡಿದುಕೊಂಡು ತಂದೆಯ ಕೋಣೆಗೆ ಬಂದ.

ರಾಮರಾಯರಿಗೆ ಅಚ್ಚರಿ ! ಇದೀಗ ಐದೂವರೆ. ಇಷ್ಟು ಬೇಗ ಅಮರ ಏಕೆ ಬಂದಿದ್ದಾನೆಂದು. ಅದರೊಂದಿಗೆ ಗಾಬರಿ. ಅಮರ ಅವರ ಕೈಗೆ ಚಹ ಕೊಡುತ್ತ ಹೇಳಿದ,

"ಅಪ್ಪ.... ನಾನು ಆರು ಗಂಟೆಗೆ ಆಡಲು ಹೋಗಬೇಕು. ನೀರು ತುಂಬಿದ್ದೇನೆ. ನೀರು ಕಾಯಿಸಿದ್ದೇನೆ, ಎಲ್ಲಾ ಪಾತ್ರೆ ತೊಳೆದಿಟ್ಟಿದ್ದೇನೆ, ಚಹಾ ಮಾಡಿ ಡಿಕಾಕ್ಷನ್ ಸೋಸಿ ಇರಿಸಿದ್ದೇನೆ. ನೀನು ಸ್ವಲ್ಪ... ಎಲ್ಲರಿಗೂ ಸ್ನಾನಕ್ಕೆ ನೀರು ತೋಡಿಕೊಡ್ತೀಯಾ ? ಅಂದರೆ ನಾನು ಹೋಗುತ್ತೇನೆ "

ಅಮರ ದೈನ್ಯದಿಂದ ಬೇಡಿದಾಗ ರಾಮರಾಯರ ಕರುಳು ಚುರ್ರೆಂದಿತು. ನಿಜವಾಗಿಯೂ ಅಮರ ಮಾಡಿದ ಕೆಲಸವನ್ನು ಅವನ ತಾಯಿ ಇಲ್ಲ ತಂಗಿ ಮಾಡಬೇಕು. ಕಡಿದರೆ ನಾಲ್ಕು ತುಂಡು ಆಗುವ ಹೆಣ್ಣು ಮನೆಯಲ್ಲಿದ್ದೂ ಅಮರ ಈ ಎಲ್ಲಾ ಕೆಲಸ ಮಾಡಬೇಕಾಯಿತಲ್ಲಾ ಎಂದು ಅವರು ಮರಮರ ಮರುಗಿದರು. ಅಮರನ ಈ ಪರಿಸ್ಥಿತಿಗೆ ತಾವೇ ಕಾರಣರೆಂದು ಅವರಿಗನಿಸಿ, ಪಶ್ಚಾತ್ತಾಪದಿಂದ ಅವರ ಕಣ್ಣಲ್ಲಿ ನೀರು ಕಾಣಿಸಿಕೊಂಡಿತು. ಕೈಲಿ ಹಿಡಿದ ಚಹದ ಕಪ್ಪು ತುಟಿಯವರೆಗೂ ತಂದಿದ್ದ ಅವರು ಹಾಗೆಯೇ ಕೂತುಬಿಟ್ಟರು ! ಕಣ್ಣಿನಿಂದ ಉದುರಿದ ಒಂದೆರಡು ಹನಿ ಕಣ್ಣೀರು ಚಹದ ಕಪ್ಪಿನಲ್ಲಿ ಉದುಳಿ

ಬಿರಿತುಹೋಯಿತು.

ಅಮರನಿಗೆ ತಂದೆಯ ವೇದನೆ ಅರ್ಥವಾಯಿತು. ಅವನೂ ವಿವಶನಾಗಿದ್ದ. ತಂದೆಯೂ ವಿವಶರಾಗಿದ್ದರು... ಅದರ ಹೊರತು ಬೇರೆ ದಾರಿಯೇ ಇರಲಿಲ್ಲ! ಇಲ್ಲದಿದ್ದರೆ ಮನೆಯೊಂದು ಕುರುಕ್ಷೇತ್ರವಾಗುತ್ತಿತ್ತು.... ರೋಡಿನಲ್ಲಿದ್ದ ಜನರೆಲ್ಲ ನಿಂತು ತಮಾಷೆ ನೋಡುತ್ತಿದ್ದರು.

"ಅಪ್ಪಾ...." ಎಂದು ಎಚ್ಚರಿಸಿದ ಅಮರ.

"ಉಂ...." ರಾಮರಾಯರು ಎಚ್ಚೆತ್ತು ಕೇಳಿದರು.

"ನಾನು ಹೋಗಲೇನಪ್ಪ .. ವೇಳೆ ಆಗ್ತಾ ಇದೆ."

"ಹಾಂ.... ನೀ ಹೋಗು ಅಮರ ನಾನೆಲ್ಲಾ ನೋಡಿಕೊಳ್ತೀನಿ."

"ಅಯ್ಯಪ್ಪಾ ..."

ಆಗಲೇ ಐದೂಮುಕ್ಕಾಲು! ಆರು ಗಂಟೆಗೆ ಅಪ್ಪಾಜಿಯವರ ಮನೆ ತಲುಪಬೇಕಾಗಿತ್ತು. ಬಟ್ಟೆ ಧರಿಸಿದ ಅಮರ.... ಅವರ ಮನೆಯತ್ತ ಓಡಲಾರಂಭಿಸಿದ...... ಕೇವಲ ಹತ್ತು ನಿಮಿಷಗಳಲ್ಲಿ ಅವರ ಅಪ್ಪಾಜಿಯವರ ಮನೆ ತಲುಪಿದ್ದ. ಅಪ್ಪಾಜಿ ಗೇಟು ಬಳಿಯೇ ಕಾಯ್ದಿದ್ದರು ಅಮರನಿಗಾಗಿ...... ಸರಿಯಾದ ವೇಳೆಗೆ ಬರಬೇಕೆಂದು ಏದುಸಿರುಬಿಡುತ್ತಾ ಓಡಿ ಬರುತ್ತಿರುವ ಅಮರನನ್ನು ಕಂಡು ಅವರ ಎದೆ ಹೆಮ್ಮೆಯಿಂದ ಬೀಗಿತು. ನಿನ್ನೆ ತಾವು ಅಮರನ ಬಗ್ಗೆ ಕಂಡ ಕನಸು ನನಸಾಗುವುದರಲ್ಲಿ ಸಂಶಯವಿಲ್ಲ ಎಂದು ಅವರಿಗೆ ಮನದಟ್ಟಾಯಿತು. ಗೇಟಿನ ಬಳಿ ಬಂದ ಅಮರನನ್ನು ಅವರು ಸ್ವಾಗತಿಸಿದರು,

"ಗುಡ್ ಮಾರ್ನಿಂಗ್ ಅಮರ...."

"ಗುಡ್ ಮಾರ್ನಿಂಗ್ ಸರ್......"

ಗೇಟು ತೆರೆದುಕೊಂಡು ಅಮರ ಒಳಗೆ ಬಂದ. ಅಪ್ಪಾಜಿ ಒಳಗೆಬಂದು ತಮ್ಮ ಕೈಯಲ್ಲಿದ್ದ ವಾಚಿನೆಡೆ ದೃಷ್ಟಿ ಹರಿಸಿ,

"ವಾ ಸರಿಯಾದ ಸಮಯಕ್ಕೆ ಬಂದೆ...... ಗುಡ್...." ಅಂದರು.

ಅಮರನಿಗಾದ ಹಿಗ್ಗು ಅಷ್ಟಿಷ್ಟಲ್ಲ. ನಾಲ್ಕು ಗಂಟೆಗೆ ಎದ್ದು ತೆಗೆದುಕೊಂಡ ಪರಿಶ್ರಮ ಸಫಲವಾದಂತೆನಿಸಿತು.

ಅಪ್ಪಾಜಿ ಅಮರನನ್ನು ಕರೆದುಕೊಂಡು ತಮ್ಮ ಕಾಂಪೌಂಡ್‌ನಲ್ಲಿಯೇ

ಇದ್ದ ಆಟದ ಬಯಲಿಗೆ ಬಂದರು. ಸುಂದರವಾದ ಆ ಬಯಲನ್ನು ಕಂಡಾಗ ಅಮರನ ಮನದಲ್ಲಿ ಹರುಷದ ಬುಗ್ಗೆಗಳು ಎದ್ದವು. ಬಯಲಿನ ಮಧ್ಯದಲ್ಲಿ ಒಂದು ಚೆಂಡು, ಅದನ್ನು ನೋಡುತ್ತಲೇ ಒಂದು ಬಗೆಯ ರೋಮಾಂಚನ ಉಂಟಾಯಿತು. ಓಡುತ್ತಾ ಹೋಗಿ ಕಾಲಿನಿಂದ ಬಲವಾಗಿ ಚಿಮ್ಮಿದ. ಬಾಣದ ಹಾಗೆ ಮೇಲೆ ಹಾರಿದ ಚೆಂಡು ನೆಟ್‌ಗೆ ತಾಗಿ ಮೂರು ನಾಲ್ಕು ಸಾರಿ ಪುಟಿದು ಅಲ್ಲಿಯೇ ಉರುಳಿತು

"ಗುಡ್ ಶಾಟ್" ಎಂದರು ಅಪ್ಪಾಜಿ. ಅಮರನ ಹೆಗಲ ಮೇಲೆ ಕೈ ಹಾಕಿ, ನೆಟ್‌ನತ್ತ ನಡೆಯುತ್ತ ಅಪ್ಪಾಜಿ ಹೇಳಿದರು,

'ಅಮರ ನೀನೇನೋ ಚೆಂಡನ್ನು ಚಿಮ್ಮಿ ನೆಟ್‌ನತ್ತ ಒದ್ದೆ. ಅದು ಗೋಲೂ ಆಯಿತು. ಆದರೆ ನೀನು ತೆಗೆದುಕೊಂಡ ನಿರ್ಣಯ ಮಾತ್ರ ಆವೇಶದಲ್ಲಿ ತೆಗೆದುಕೊಂಡದ್ದು. ಆವೇಶ ಬಂದಾಗ ನಿನ್ನನ್ನು ನಿನಗೆ ಕಂಟ್ರೋಲ್‌ನಲ್ಲಿಟ್ಟುಕೊಳ್ಳಲು ಆಗಲಿಲ್ಲ. ಇದು ಬಹಳ ಅಪಾಯಕಾರಿಯಾದುದು, ಇದರಿಂದ ಎಷ್ಟು ಹಿತ ಸಾಧ್ಯವೋ ಅಷ್ಟೇ ಅಹಿತವೂ ಆಗುವ ಸಂಭವವಿದೆ. ಆದ್ದರಿಂದ... ಆಟದಲ್ಲಿ ನಿರ್ಣಯ ತೆಗೆದುಕೊಳ್ಳುವ ಮುನ್ನ ವಿವೇಚನೆ ಅವಶ್ಯ.... ನಮ್ಮ ಮನಸ್ಸನ್ನು ನಾವು ಹಿಡಿತದಲ್ಲಿಟ್ಟುಕೊಂಡು, ಸಾಂಘಿಕವಾಗಿ ಆಡಬೇಕಾಗುತ್ತದೆ. ಆವಾಗಲೇ ನಮಗೆ ಜಯ ಸಾಧ್ಯ, ನನ್ನ ಈ ಮಾತನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟುಕೋ."

ಅಮರ ಅಪ್ಪಾಜಿಯವರು ಹೇಳಿದ ಒಂದೊಂದು ಮಾತನ್ನೂ ಲಕ್ಷ್ಯದಲ್ಲಿಟ್ಟುಕೊಂಡ. ನಂತರ ಕೆಳಗೆ ಬಾಗಿ ನೆಟ್ಟಿನಲ್ಲಿದ್ದ ಚೆಂಡನ್ನು ಎತ್ತಿಕೊಂಡ, ಇಬ್ಬರೂ ಕೂಡಿ ಬಯಲಿನ ಮಧ್ಯಕ್ಕೆ ಬಂದರು. ಅಷ್ಟರಲ್ಲಿ "ಗುಡ್‌ಮಾರ್ನಿಂಗ್ ಅಂಕಲ್" ಎಂಬ ಧ್ವನಿ ಕೇಳಿ ಬಂತು. ಅಪ್ಪಾಜಿ ಸರಕ್‌ನೆ ಹೊರಳಿದರು ಅಮರನೂ ಸಹ ಆಕಡೆಯೇ ನೋಡಿದ. ಅಪ್ಪಾಜಿಯವರ ಬಂಗಲೆ ಕಾಂಪೌಂಡಿಗೆ ಹೊಂದಿ ಮತ್ತೊಂದು ಭವ್ಯವಾದ ಬಂಗಲೆ.... ಕಾಂಪೌಂಡ್ ಗೋಡೆಯ ಆಚೆ ನಿಂತ ಸುಮಾರು ಎಂಟು ವರ್ಷದ ಹುಡುಗಿ ಅಪ್ಪಾಜಿಯವರಿಗೆ ವಂದನೆ ಸಲ್ಲಿಸಿದ್ದಳು. ತುಂಬಾ ಮುದ್ದಾದ ಹುಡುಗಿ.... ನೋಡಿದರೆ ಪ್ರೀತಿ ಬರುವಂತಿತ್ತು. ಕಾಂಪೌಂಡಿನಾಚೆ ನಿಂತಿದ್ದರಿಂದ ಕೇವಲ ಆಕೆಯ ಮುಖಮಾತ್ರ ಕಾಣುತ್ತಿತ್ತು. ಉಳಿದ ದೇಹ ಗೋಡೆಗೆ ಮರೆಯಾಗಿತ್ತು. ತನ್ನೆರಡೂ ಕೈ

ಗಳನ್ನು ಗೋಡೆಯ ಮೇಲೆ ಅಕೆ ಇಟ್ಟಿದ್ದಳು. ಆ ಹುಡುಗಿಯ ಕಡೆ ಹೊರಳಿದ ಅಪ್ಪಾಜಿ,

"ಗುಡ್ ಮಾರ್ನಿಂಗ್ ದೀಪಾ." ಎಂದರು. ದೀಪಾಳ ಮುಖ ಹೂವಿನಂತೆ ಅರಳಿತು. "ಆಟ ಆಡಲು ಬರುತ್ತೀಯಾ ?" ಅಪ್ಪಾಜಿ ಪ್ರಶ್ನಿಸಿದರು.

"ಬರಬೇಕೆಂದು ಇಷ್ಟ ಅಂಕಲ್...... ಆದರೆ ಹೇಗೆ ಬರಲಿ ?"

"ಆ ಕಡೆಯಿಂದ ಹಾಯ್ದು ಬಾ."

"ಓ ಅಂಕಲ್ ಬಹಳ ದೂರವಾಯಿತು. ನಮ್ಮ ಕಾಂಪೌಂಡ್ ದಾಟಿ, ಬೀದಿಗಿಳಿದು.... ನಂತರ ನಿಮ್ಮ ಕಾಂಪೌಂಡ್ ಗೇಟನ್ನು ತೆಗೆದು, ಒಳಗೆಬಂದು ಗೇಟು ಮುಚ್ಚಿ.... ನಿಮ್ಮ ಮನೆ ಸುತ್ತು ಹಾಕಿ ಅಲ್ಲಿಗೆ ಬರಬೇಕೆಂದರೆ ಸಾಕು ಸಾಕಾಗುತ್ತದೆ.'

ದೀಪಾಳ ವಿವರಣೆ ಕೇಳಿ ಅಪ್ಪಾಜಿ ಹೊಟ್ಟೆ ಹುಣ್ಣಾಗುವಂತೆ ನಕ್ಕು ಬಿಟ್ಟರು.

"ಹಾಗಾದರೆ ಕಾಂಪೌಂಡ್ ಜಿಗಿದು ಬಾ."

"ಅದು ನನ್ನಿಂದ ಸಾಧ್ಯವಿಲ್ಲ ಅಂಕಲ್."

"ಏಕೆ ಮರಿ ?"

"ಇಷ್ಟು ದೊಡ್ಡ ಎತ್ತರದ ಗೋಡೆ ಜಿಗಿಯಲು ನನ್ನಿಂದಾಗದು ಅಂಕಲ್ ನಾನೇನೂ ಹನುಮಂತನಲ್ಲ "

ಈ ಬಾರಿ ಅಮರ ಸಹ ಅಪ್ಪಾಜಿಯವರೊಂದಿಗೆ ನಗೆಯಲ್ಲಿ ಪಾಲುಗಾರನಾದ. ದೀಪಾ ನೋಡಲು ಎಷ್ಟು ಮುದ್ದಾಗಿದ್ದಳೋ ಅಷ್ಟೇ ಮುದ್ದಾಗಿ ಮಾತೂ ಸಹ ಆಡುತ್ತಿದ್ದಳು. ಅಪ್ಪಾಜಿಯವರು ಅಮರನಿಗೆ ಹೇಳಿದರು,

"ಅಮರ ಅವಳನ್ನ ಕರೆದುಕೊಂಡು ಬಾ."

ಅಮರನಿಗೆ ಸಂಕೋಚವೆನಿಸಿದರೂ ಎಲ್ಲಿ ಅಪ್ಪಾಜಿ ತಪ್ಪು ತಿಳಿದುಕೊಳ್ಳುತ್ತಾರೋ ಎಂದು ಹೆದರಿ ಗೋಡೆಯತ್ತ ಓಡಿದ. ಗೋಡೆಯ ಮೇಲೆ ಎರಡೂ ಕೈ ಊರಿ ಓಣ್ ಎಂದು ಜಿಗಿದು ಗೋಡೆ ಏರಿದ. ಕೆಳಕ್ಕೆ ಬಾಗಿ ತನ್ನೆರಡು ಕೈಗಳಿಂದ ದೀಪಾಳ ಕೈ ರಟ್ಟೆಯನ್ನು ಬಲವಾಗಿ ಹಿಡಿದು ಮೇಲೆಳೆದುಕೊಂಡು ನಂತರ ಮೊದಲು ತಾನು ಕೆಳಗಿಳಿದು ಅನಂತರ ದೀಪಾಳ ಕಂಕುಳಲ್ಲಿ ಕೈ ಹಾಕಿ ಕೆಳಗಿಳಿಸಿಕೊಂಡ. ಇಷ್ಟು ಮಾಡುವುದರೊಳಗೆ ಅವನ ಮುಖ

ಕೆಂಪಗೆ ಕೆಂಜಗಂತಾಯಿತು.

"ತುಂಬಾ ಮಜಾ ಅಂಕಲ್ ಈ ರೀತಿ ಬರೋದು..." ಎಂದು ಹೇಳುತ್ತ ಅಮರನ ಕಡೆ ತಿರುಗಿ "ನೀನು ದಿನಾ ನನ್ನ ಇದೇ ರೀತಿ ಇಳಿಸಿಕೋ" ಎಂದಳು ಅಪ್ಪಾಜಿ ಗಟ್ಟಿಯಾಗಿ ನಕ್ಕುಬಿಟ್ಟರು.

ಸುಮಾರು ಒಂದು ಒಂದೂವರೆ ಗಂಟೆಗಳ ಕಾಲ ಅಪ್ಪಾಜಿಯವರು ಅಮರನಿಗೆ ಆಟ ತಿಳಿಸಿ ಹೇಳಿದರು. ದೀಪಾ ಸುಮ್ಮನೆ ಕುಳಿತು ಕೇಳುತ್ತಿದ್ದಳು. ನಂತರ ಒಂದು ಹತ್ತು ನಿಮಿಷ ಅಪ್ಪಾಜಿ ಚೆಂಡನ್ನು ಹೇಗೆ ಪಾಸ್ ಮಾಡಬೇಕೆಂದು ಹೇಗೆ ಎದುರಾಳಿಗಳನ್ನು ಫೌಲ್ ಮಾಡಬೇಕೆಂದು ಮುಂತಾದುವನ್ನು ತೋರಿಸಿದರು.

ಎಂಟೂವರೆ ಆಗುತ್ತಲೂ ಅಮರನ ಎದೆ ಧಡ್ ಎಂದಿತು. ಇಂದೂ ಸಹ ಊಟಕ್ಕೆ ಸೊನ್ನೆ ಎಂದುಕೊಂಡ ಮನದಲ್ಲಿ. ಅಪ್ಪಾಜಿಯವರಿಗೆ ಹೇಳಿ ಮನೆಗೆ ಹೊರಟ.

"ಅಮರ...... ಅಮರ." ಎಂದು ಕೂಗಿದಳು ದೀಪಾ.

ಅಮರನಿಗೆ ಒಂದು ಬಗೆಯ ಕಚಗುಳಿ ಇಟ್ಟಂತಾಯಿತು. ಹೊರಳಿನಿಂತ.

"ನಾಳೆ ಬರ್ತಿಯಾ ?"

"ಹಾಂ.... ಬರ್ತೀನಿ"

"ಖಂಡಿತಾ ಬರಬೇಕು ಮತ್ತೆ."

"ಖಂಡಿತ."

"ನೀನು ಬರೋವರ್ಗೂ ನಾನು ಆಚೆಗೇ ನಿಂತಿರತೀನಿ ನೀನು ಬಂದು ಇವತ್ತಿನ ತರಾ ಇಳಿಸಿಕೊಳ್ಳಬೇಕು ಗೊತ್ತಾಯ್ತಾ ?"

ದೀಪಾಳ ಮಾತು ಕೇಳಿ ಅಪ್ಪಾಜಿ ನಗುತ್ತ ಹುಚ್ಚು ಹುಡುಗಿ ಎಂದರೆ ಅಮರ ಪೆದ್ದು ಪೆದ್ದಾಗಿ ನಕ್ಕ ಹುಚ್ಚನಂತೆ.

ಅಮರ ಮನೆಗೆ ಬಂದಾಗ ರಣರಂಗ ಅವನಿಗಾಗಿ ಕಾದು ಕುಳಿತಿತ್ತು. ರಾಮರಾಯರು, ಅಮರ ಆ ಕಡೆ ಹೋಗುತ್ತಲೂ ತಾವೂ ಎದ್ದು ಹಿತ್ತಲಿಗೆ ಹೋಗಿ ಬಂದರು. ಸ್ನಾನ ಮಾಡಿದರು, ಅಲ್ಲಿಂದ ಮನೆಯಲ್ಲಿದ್ದವರನ್ನೆಲ್ಲ ಮೇಲೆಬ್ಬಿಸಿ, "ಏಳಿ.. ಹಲ್ಲುಜ್ಜಿ ಏಳಿ ಸ್ನಾನಮಾಡಿ." ಎಂದು ಪೀಡಿಸತೊಡಗಿದರು. ಅವರು ಎಂಟು ಗಂಟೆಗೆ ಮಂಡಿಯಲ್ಲಿರಬೇಕು. ಅದಕ್ಕಾಗಿ ಏಳೂ

ವರೆಗೆ ಮನೆ ಬಿಡಬೇಕು. ಹೀಗಾಗಿ ತಮ್ಮ ವೇಳೆಯಾಗುವುದಕ್ಕೆ ಎಲ್ಲರೂ ಎದ್ದು ಸ್ನಾನ ಮಾಡಿದರೆ ಅವರನ ಕೆಲಸ ತಪ್ಪ ಮಾಡಿದಂತಾಗುತ್ತದೆಂದು ಅವರು ಯೋಚಿಸುತ್ತಿದ್ದರು. ಆದರೆ ಅವರು ಯೋಚಿಸಿದಂತೆ ಉಳಿದವರು ಯೋಚಿಸಬೇಕಲ್ಲ ? ಆರೂವರೆಗೆ ಎದ್ದು ಯಾರಿಗೂ ಅಭ್ಯಾಸವಿಲ್ಲ. ಸುಂದರಮ್ಮ ಸಹಿತ ಏಳುವುದು ರಾಮರಾಯರು ಮುಂಡಿಗೆ ಹೋದ ನಂತರವೇ. ಇಂದು ರಾಮರಾಯರು ಎಲ್ಲರನ್ನು ಎಬ್ಬಿಸಲು ಪ್ರಾರಂಭಿಸಿದಾಗ ಎಲ್ಲರೂ ಕೆರಳಿದ ಹುರಿಯಾದರು. ರಾಯರ ಮೇಲೆ ಕಿರಿಹಾಯ್ದರು. ಬೇಸತ್ತ ರಾಮರಾಯರು ಸೋಲೊಪ್ಪಿಕೊಂಡು ಅವರ ಪಾಡಿಗೆ ಅವರನ್ನು ಬಿಟ್ಟು ಮುಂಡಿಗೆ ಹೊರಟು ಹೋದರು.

ಮನೆಯಲ್ಲಿ ಮೊದಲು ಎದ್ದವರು ಸುಂದರಮ್ಮನೇ, ಅವರಾಗಿ ಏಳಲಿಲ್ಲ. ಅಮರ ತಂದು ಚಹ ಕೊಟ್ಟಾಗಲೇ ಹಾಸಿಗೆಯ ಮೇಲೆ ಕುಳಿತು ಕುಡಿದು ಏಳುತ್ತಿದ್ದ ಅವರು ಅಂದು ಒಮ್ಮೆಲೆ ಎದ್ದು ಕುಳಿತರು. "ಧಂ ಧಮಾರ್" ಅಂದು ಪಾತ್ರೆ ಬಿದ್ದ ಸದ್ದು ಕೇಳಿಸಿತು. ಅಡಿಗೆ ಮನೆಯಿಂದ "ಅಯ್ಯೋ.... ಈ ಅಮರ ಯಾವುದೋ ಪಾತ್ರೆಯನ್ನು ಎತ್ತಿ ಹಾಕಿದ.... ಇಬ್ಬ ಸೇರಿನ ಕೊಡ ಕೆಡವಿಬಿಟ್ಟ ಅಂತಾ ಯೋಚಿಸಿ ಅವನನ್ನು ಶಪಿಸುತ್ತಾ ಮೇಲೆದ್ದು ಅಡಿಗೆ ಮನೆಗೆ ಬಂದು ನೋಡುತ್ತಾರೆ, ಅಲ್ಲಿ ಅಮರನ ಸುಳಿವೇ ಇಲ್ಲ. ಮೇಲೆ ಘಳಿಯ ಮೇಲೆ ಬಾಯಿ ಮುಚ್ಚಿ ಇರಿಸಿದ್ದ ಹಾಲಿನ ಪಾತ್ರೆಗೆ ಬೆಕ್ಕು ಹಾರಿದ್ದರಿಂದ ಪಾತ್ರೆ ಕೆಳಕ್ಕೆ ಬಿದ್ದು ಸಪ್ಪಳವಾಗಿತ್ತು. ಕೆಳಕ್ಕೆ ಚೆಲ್ಲಿದ ಹಾಲನ್ನು ಕರಿಯ ಬೆಕ್ಕೊಂದು ಕಣ್ಣು ಮುಚ್ಚಿ ಒಳ್ಳೇ ಪ್ರೀತಿಯಿಂದ ಕುಡಿಯುತ್ತಿತ್ತು. ಸುಂದರಮ್ಮನವರಿಗೆ ರೇಗಿ ಹೋಯಿತು ಹಾಲು ಚೆಲ್ಲಿ ಹೋಗಿದ್ದಕ್ಕಲ್ಲ .... ಬೆಳಗ್ಗೆ ಎದ್ದ ಕೂಡಲೇ ಕರಿಬೆಕ್ಕು ಕಂಡಿದ್ದಕ್ಕೆ.... ಸುಂದರಮ್ಮನ ಪಾದದ ಸಪ್ಪಳ ಕೇಳುತ್ತಲೂ ಬೆಕ್ಕು ಕಣ್ಣೆತ್ತಿ ಅವರ ಕಡೆ ನೋಡಿತು. ಅದರ ಕೆಂಪು ಕಣ್ಣುಗಳು ಭಯ ಹುಟ್ಟಿಸುವಂತಿತ್ತು. ಸುಂದರಮ್ಮನವರಲ್ಲಿ ನಡುಕವುಂಟಾಯಿತು. ವಿಚಿತ್ರವಾದ ಧನಿಯಲ್ಲಿ ಚೀರಿಕೊಂಡರು. ಅವರ ಧ್ವನಿಗೆ ಬೆಕ್ಕು ಗಾಬರಿಯಾಗಿ ಅಲ್ಲಿಂದ ಪಲಾಯನ ಮಾಡಿದರೆ, ಮಲಗಿಕೊಂಡಿದ್ದ ಮಾಲತಿ ವಸಂತ ಮೊದಲುಗೊಂಡು ಓಡಿಬಂದರು. ಚಡ್ಡಿಯಲ್ಲಿಯೇ ಉಚ್ಚೆ ಮಾಡಿಕೊಂಡಿದ್ದ ರತ್ನಾ ಅಳುತ್ತ ಬಂದಳು. ವಸಂತ ಗರಬಡಿದು ನಿಂತು ತಾಯಿಯ

ಕಡೆ ನೋಡುತ್ತ "ಏನಮ್ಮಾ ಏನಾಯ್ತು." ಎಂದು ಕೇಳಿದ. "ಕರಿ ಬೆಕ್ಕು ಬಂದಿತ್ತೋ ವಸಂತ, ಅದರ ಕೆಂಪು ಕಣ್ಣು ನೋಡಿದರೆ ಮೈ ನಡುಕ ಬರು ತ್ತಿತ್ತು. ಗಾಬರಿಯಾಗಿ ಚೀರಿಕೊಂಡೆ."

"ಇಷ್ಟೇನಾ.... ನಾನು ಹಾವ್ರೋ ಚೇಳೋ ಬಂದಿರಬೇಕೆಂದು ತಿಳಿದು ಗಾಬರಿಯಾಗಿ ಓಡಿಬಂದೆ... " ಎಂದಳು ಮಾಲತಿ.

ಕೆಳಗೆ ಬಿದ್ದ ಪಾತ್ರೆ ಎತ್ತಿಟ್ಟು ಹಾಲನ್ನ ಬೇರೆ ಅದಕ್ಕೆ ತೆಗೆಯುತ್ತಾ ಸುಂದರಮ್ಮ ಸಿಡಿಮಿಡಿಮಾಡಿದರು.

"ಬೆಳಿಗ್ಗೆ ಏಳುತ್ತಲೂ ಹಾಳು ಬೆಕ್ಕಿನ ಮುಖ ನೋಡಿದೆ. ಅದೂ ಕರೀ ಬೆಕ್ಕು, ಅಪಶಕುನ. ಇಂದು ಏನೇನು ಕೇಡು ಕಾದಿದೆಯೋ ? ಎಲ್ಲಾ ಈ ಅಮರನದೇ ಕೆಲಸ...... ಬೆಳಿಗ್ಗೆ ಏಳುತ್ತಲೂ ಅಡಿಗೆ ಮನೆ ಕಿಟಕಿ ಸಹ ಮುಚ್ಚದೆ ಪರಾರಿಯಾಗಿದ್ದಾನೆ ಬರಲಿ ಮನೆಗೆ...."

ಇಷ್ಟೆಲ್ಲ ಆದಮೇಲೆ ಅವರ ಲಕ್ಷ್ಯಕ್ಕೆ ಬಂದದ್ದು ಈಗಾಗಲೇ ಎಂಟೂ ವರೆಯಾಗಿದೆ ಎಂದು. ಒಮ್ಮೆಲೆ ಮನೆಯಲ್ಲಿ ಭೂಕಂಪವಾದಂತಾಯಿತು. ಎಲ್ಲ ರಿಗೂ ಒಮ್ಮೆಲೆ ಹಿತ್ತಲಕ್ಕೆ ಹೋಗುವ ಒಮ್ಮೆಲೇ ಪಾಟಕ್ಕೆ ಹೋಗುವ ಗಡಿ ಬಿಡಿ.... ಸುಂದರಮ್ಮನಿಗೆ ಇದರ ಜೊತೆ ಅಡಿಗೆ ಮಾಡುವ ಗಡಿಬಿಡಿ. ಇದರ ನಡುವೆ ರತ್ನಾಳ ಕಿರಿಕಿರಿ, "ಅಮ್ಮಾ ಕಕ್ಕಸು...." ಒಬ್ಬರಿಗೊಬ್ಬರು ಹಾಯುತ್ತ ದಿಕ್ಕು ತೋಚದೆ ಓಡಾಡುತ್ತಿರುವಾಗ ಸ್ನಾನಕ್ಕೆ ಹೊರಟ ಮಾಲತಿಯು ಪರ ಕಾರಕ್ಕೆ ಗಂಟು ಬಿದ್ದಿದ್ದರಿಂದ ಅದನ್ನು ಬಿಡಿಸಲಾಗದೆ ಆಕೆ ಅಡಿಗೆ ಮನೆಗೆ ಬಂದಳು. ಈಳಿಗೆ ಬಿಚ್ಚಿ ಅದಕ್ಕೆ ಪರಕಾರದ ಹಾರವನ್ನು ಹೆಚ್ಚಿ ಹಾಗೇ ಸ್ನಾನದ ಮನೆಗೆ ಓಡಿದಳು. ಬಾಯಿ ತೆರೆದ ಈಳಿಗೆ ಹಾಗೆಯೇ ಉಳಿದು ಹೋಯಿತು.

ಇಂತಹ ಅಮೃತ ಘಳಿಗೆಯಲ್ಲಿಯೇ ಅಮರನ ಪ್ರವೇಶವಾಯಿತು ಅವ ನನ್ನು ಮೊದಲು ಕಂಡವರೇ ಸುಂದರಮ್ಮ. ಕಿಟಕಿ ತೆರೆಯುತ್ತಿದ್ದಂತೆ ದೂರ ದಲ್ಲಿ ಮನೆ ಕಡೆ ಓಡಿ ಬರುತ್ತಿದ್ದ ಅಮರ ಕಣ್ಣಿಗೆ ಬಿದ್ದ. "ಬರಲಿ ಇಂದು ಶಿಕ್ಷಶಾಸ್ತಿ ಮಾಡುತ್ತೇನೆ ಸಾಯೋವರೆಗೂ ಮರೆಯಬಾರದು. ಎಂದು ತಮ್ಮ ಷ್ಟಕ್ಕೆ ತಾವೇ ಅಡಿಕೊಳ್ಳುತ್ತ ಶಾವಿಗೆ ಹಾಕುವ ಬಡಿಗೆ ತರಲು ಅಡಿಗೆ ಮನೆಗೆ ಬಂದರು. ಅಲ್ಲಿ ಬಾಯಿ ತೆರೆದಿದ್ದ ಈಳಿಗೆ ಅವರನ್ನು ಸ್ವಾಗತಿಸಿತು. ಸಿಟ್ಟನಲ್ಲಿ

ಬುಸುಗುಡುತ್ತಾ ಬಂದ ಸುಂದರಮ್ಮ ಅದೇ ಸಿಟ್ಟಿನ ಭರದಲ್ಲಿ ಈಳಿಗೆಯ ಮೇಲೆ ಕಾಲಿಟ್ಟರು. 'ಚಕ್' ಎಂಬ ಸಪ್ಪಳ.... ಅರ್ಧ ಪಾದ ಕೊಯ್ದು ಈಳಿಗೆಗೆ ರಕ್ತದ ಅಭಿಷೇಕವಾಯಿತು.

ಸುಂದರಮ್ಮ ನೋವು ತಾಳಲಾರದೆ ಬೊಬ್ಬೆ ಹಾಕಿದರು. ಸ್ನಾನಮಾಡುತ್ತಿದ್ದ ಮಾಲತಿ, ಹಿತ್ತಲಲ್ಲಿದ್ದ ವಸಂತ, ಕಕ್ಕಸಕ್ಕೆಂದು ಬೀದಿಗೆ ಬಂದ ರತ್ನಾ ಎಲ್ಲರೂ ಅಡಿಗೆ ಮನೆಯೊಳಕ್ಕೆ ಧಾವಿಸಿದರು ಅಷ್ಟರಲ್ಲಿ ಮನೆಯ ಹತ್ತಿರ ಬಂದಿದ್ದ ಅಮರನಿಗೂ ಸುಂದರಮ್ಮ ಸುಶ್ರಾವ್ಯ ಕಂಠದಲ್ಲಿ ಕೂಗಿಕೊಂಡು ಮಂಗಲವಾದ್ಯ ಬಾರಿಸಿದ್ದು ಕೇಳಿಸಿ, ಆತನೂ ಮನೆಯೊಳಕ್ಕೆ ನುಗ್ಗಿದ.

ಸುಂದರಮ್ಮನ ಪರಿಸ್ಥಿತಿ ಕಂಡು ವಸಂತ, ಮಾಲತಿ, ರತ್ನ ಕಂಗಾಲಾಗಿ ಹೋದರು. ಅಮರ ಬಂದವನೇ ಆ ದೃಶ್ಯ ಕಂಡ. ಸರಕ್‌ನೆ ಅತ್ತ ಇತ್ತ ನೋಡಿ ತೂಗು ಹಾಕಿದ ಪಂಚೆ ಎಳೆದುಕೊಂಡು ಬಚ್ಚಲು ಮನೆಗೆ ಹೋದ. ತಣ್ಣೀರಿನಲ್ಲಿ ಅದನ್ನು ಅದ್ದಿ ನಾಲ್ಕು ಮಡಿಕೆ ಮಾಡಿ, ಸುಂದರಮ್ಮನವರ ಬಳಿ ಓಡಿ ಬಂದು ಅವರ ಪಾದಕ್ಕೆ ಬಲವಾಗಿ ಕಟ್ಟತೊಡಗಿದ.

ಅಮರನ ಸೇವಾಭಾವನೆ ಕಂಡು ಸುಂದರಮ್ಮನಿಗೆ ಸಂತೋಷವಾಗಲಿಲ್ಲ. ಅದರ ಬದಲು ಅವನ ಮೇಲೆ ಕೋಪ ಉಕ್ಕಿ ಬಂತು. ಇದಕ್ಕೆಲ್ಲ ಆ ಹಾಳು ಕರಿಬೆಕ್ಕೇ ಕಾರಣ. ಅದರ ಮುಖ ನೋಡಿದ್ದಕ್ಕೇ ಹೀಗಾಯಿತು. ಇಷ್ಟೆಲ್ಲಾ ಆಗಬೇಕಾದರೆ ಅಮರ ಮನೆಯಲ್ಲಿ ಇರದೇ ಇರುವುದು ಎಂದುಕೊಳ್ಳುತ್ತಾ ಕೆಳಕ್ಕೆ ಬಗಿದ ಅವನ ಬೆನ್ನ ಮೇಲೆ ರಪರಪ ನಾಲ್ಕು ಏಟು ಹಾಕಿದರು. ಹಾಗೆಯೇ ಅಲ್ಲಿಯೇ ರಕ್ತ ಹರಿದು ಬಂದುದ್ದನ್ನು ಕಂಡು ಮೂರ್ಛೆಹೋದರು. ಅವರನ್ನು ಎತ್ತಿ ತಂದು ಮಂಚದ ಮೇಲೆ ಮಲಗಿಸಿದ ಅಮರ ಹತ್ತಿರದಲ್ಲಿದ್ದ ವೈದ್ಯರ ಕಡೆ ಓಡಿದ.

ಹತ್ತು ಹದಿನೈದು ನಿಮಿಷಗಳಲ್ಲಿ ವೈದ್ಯರು ಬಂದರು. ಕಾಲು ಪರೀಕ್ಷಿಸಿದರು. ಪಾದ ಅರ್ಧಕ್ಕರ್ಧ ಕತ್ತರಿಸಿ ಹೋಗಿದ್ದರಿಂದ ಅದನ್ನು ಜೋಡಿಸಿ ಹೊಲಿಗೆ ಹಾಕಬೇಕು ಇಲ್ಲದಿದ್ದರೆ ಪೂರ್ತಿ ಪಾದವೇ ಕೊಳೆತು ಹೋಗುತ್ತದೆ ಎಂದರು ಎಲ್ಲರ ಕೈ ಕಾಲುಗಳೂ ತಣ್ಣಗಾದವು.

ವೈದ್ಯರು ಸುಂದರಮ್ಮನಿಗ ಎಚ್ಚರ ಬರದಿರಲು ಹಾಗೂ ರಕ್ತ ಹೋಗುವುದು ನಿಲ್ಲಬೇಕೆಂದು ಎರಡು ಚುಚ್ಚುಮದ್ದು ಚುಚ್ಚಿ, ಗಾಯಕ್ಕೆ ಪಟ್ಟಿಹಾಕಿ

ಎದ್ದು ನಿಂತರು. ಆಗ ಅಮರ ಕೇಳಿದ,

“ನಿಮ್ಮ ಫೀ ಅಪ್ಪ ಬಂದಮೇಲೆ ಕೊಡುತ್ತೇವೆ ಡಾಕ್ಟ್ರೇ.”

ವೈದ್ಯರು ಹೊರಟು ಹೋದರು. ತಾಯಿಯ ಬಳಿ ಒಬ್ಬರಿದ್ದು ಅವರನ್ನು ನೋಡಿಕೊಳ್ಳಲು ತಿಳಿಸಿದ ಅಮರ ಮಂಡಿಯ ಕಡೆ ಓಡಿದ. ರಾಮರಾಯರು ಈ ವಾರ್ತೆ ಕೇಳಿ ಗಾಬರಿಯಾದರು. ಅಮರನ ಕೈಗೆ ಹದಿನೈದು ರೂಪಾಯಿ ಹಾಕಿ, “ನೀನು ಕೂಡಲೇ ರಿಕ್ಷಾದಲ್ಲಿ ಅವಳನ್ನು ಕರೆದುಕೊಂಡು ಆಸ್ಪತ್ರೆಗೆ ಹೋಗು__ ನಾನು ನೇರವಾಗಿ ಅಲ್ಲಿಗೆ ಬರುತ್ತೇನೆ.’ ಎಂದರು

ಸರಿಯೆಂದು ಹೇಳಿ ಅಮರ ಪುನಃ ಮನೆಯ ಕಡೆ ಓಡಿದ. ದಾರಿಯಲ್ಲಿ ಬರುತ್ತಿದ್ದ ಆಟೋ ಹಿಡಿದು ಸುಂದರಮ್ಮನನ್ನು ಆಸ್ಪತ್ರೆಗೆ ದಾಖಲು ಮಾಡಿದ. ಅವರ ದೈವ ಚೆನ್ನಾಗಿತ್ತು. ದೊಡ್ಡ ವೈದ್ಯರು ಅಲ್ಲಿಯೇ ಇದ್ದುದರಿಂದ ಕೂಡಲೇ ಅವರಿಗೆ ಸೇವೆ ದೊರೆಯಿತು. ಒಂದು ಗಂಟೆ ತೆಗೆದುಕೊಂಡ ವೈದ್ಯರು ಅವರ ಪಾದವನ್ನು ಸರಿಯಾಗಿ ಜೋಡಿಸಿ ಹೊಲಿಗೆ ಹಾಕಿದರು. ಪಾದಕ್ಕೆ ಮೂವತ್ತಾರು ಹೊಲಿಗೆ ಬಿದ್ದಿದ್ದವು. ಅವರಿಗಿನ್ನೂ ಎಚ್ಚರ ಬಂದಿರಲಿಲ್ಲ, ಅಮರನ ಕೈಗೆ ಕೆಲವೊಂದು ಮಾತ್ರೆಗಳನ್ನು ಬರೆದ ಚೀಟಿ ಕೊಟ್ಟು, ಇವನ್ನ ಕೂಡಲೇ ತರಿಸು ಅಂದನು. ಅದಕ್ಕಾಗಿ ಅಮರ ತಂದೆಯ ದಾರಿ ಕಾಯುತ್ತ ಕುಳಿತ.

ರಾಮರಾಯರು ಕೂಡಲೇ ಬರುತ್ತೇನೆ ಎಂದವರು ಬರಲಿಲ್ಲ. ಏಕೆ ಬರಲಿಲ್ಲ ಎಂದು ಯೋಚಿಸಿ ಯೋಚಿಸಿ ಅಮರ ಹಣ್ಣಾದ. ಅಷ್ಟರಲ್ಲಿ ಸುಂದರಮ್ಮನವರಿಗೆ ಪ್ರಜ್ಞೆ ಬಂದಿತ್ತು. ನೋವಿನಿಂದ ನರಳುತ್ತಿದ್ದರು. ಎರಡು ಸಾರಿ ವೈದ್ಯರು ಬಂದು ಮಾತ್ರೆ ಇನ್ನೂ ಏಕೆ ತರಲಿಲ್ಲ ಎಂದು ಅಮರನ ಮೇಲೆ ಹರಿಹಾಯ್ದಿದ್ದರು. ಅಮರನಿಗೆ ಏನು ಮಾಡಬೇಕೆಂಬುದೇ ತಿಳಿಯದಂತಾಗಿತ್ತು. ಇನ್ನೊಮ್ಮೆ ಮಂಡಿಯವರೆಗೆ ಹೋಗಿ ಬಂದರಾಯಿತೆಂದು ವಿಚಾರಿಸಿದ ಆತ ಮೇಲೇಳುವುದಕ್ಕೂ ಆಸ್ಪತ್ರೆಯ ಮುಂದೆ ರಿಕ್ಷಾ ಒಂದು ಬಂದು ನಿಂತಿತು. ಅದರಿಂದ ಕೆಳಗಿಳಿದ ರಾಮರಾಯರು ಬಾಡಿಗೆ ಕೊಟ್ಟು ಆಸ್ಪತ್ರೆಯೊಳಕ್ಕೆ ಬಂದರು. ಅವರನ್ನು ಕಂಡು ಅಮರ ಗಾಬರಿಯಾದ. ಹಣೆಗೆ ಪಟ್ಟಿ, ಎಡಗೈ ಮೊಣಕೈಗೆ ಪಟ್ಟಿ.... “ಏನಾಯಿತಪ್ಪಾ ?” ಎಂದು ಕೇಳಿದ ಅಮರ ಕಾತರದಿಂದ.

“ಏನೋಪ್ಪ ಬೆಳಗ್ಗೆ ಯಾರ ಮುಖ ನೋಡಿ ಎದ್ದೆನೋ ಏನೋ__ ಬರೀ

ಕೆಡುಕೇ ಆಗುತ್ತದೆ. ಸುಂದರೂ ಕಾಲು ಹೆಚ್ಚಿಕೊಂಡಳು. ನಾನು ಆಸ್ಪತ್ರೆಗೆಂದು ಬರುತ್ತಿರುವಾಗ ಹಿಂದಿನಿಂದ ಸೈಕಲ್ ಬಂದು ಹೊಡೆಯಿತು. ಮತ್ತೆ ನಾನೇ ಸಮೀಪದ ಆಸ್ಪತ್ರೆಗೆ ಹೋಗಿ ಪಟ್ಟಿ ಹಾಕಿಸಿಕೊಂಡು ಬಂದೆ"ಎಂದರು.

ಅಮರ ಮುಖ ಕೆಳಗೆ ಹಾಕಿ, "ಅಪ್ಪಾ ! ಬೆಳಿಗ್ಗೆ ನೀವು ನೋಡಿದ್ದು ನನ್ನ ಮುಖವೇ" ಎಂದಾಗ ರಾಮರಾಯರ ಕರುಳಲ್ಲಿ ಕತ್ತರಿ ಆಡಿಸಿದಂತಾಯಿತು. ಅಮರನನ್ನು ಅಪ್ಪಿಕೊಂಡು "ಇಲ್ಲಪ್ಪಾ ಇಲ್ಲ. ನಾನು ನಿನಗೇ ಅಂತ ಅನ್ನಲಿಲ್ಲ. ನನ್ನ ಕ್ಷಮಿಸಿಬಿಡು "

ಒಳಗೆ ಬಂದ ರಾಮರಾಯನ್ನು ಕಂಡು ಸುಂದರಮ್ಮ ಭೀತಿಯಿಂದ ಕಣ್ಣುಗಳನ್ನು ದೊಡ್ಡದು ಮಾಡಿ ಕೇಳಿದರು. ಅವರು ತಮ್ಮ ನೋವನ್ನು ಮರೆತುಬಿಟ್ಟಿದ್ದರು.

"ರೀ.... ರೀ .. ಏನಾಯಿತ್ರಿ ?"

"ಏನಿಲ್ಲ ಸುಂದ್ರೂ . ನಿನ್ನ ನೋಡೋಕೆ ಅಂತ ಆಸ್ಪತ್ರೆ ಕಡೆ ಬರ್ತಿದ್ದೆ. ಸೈಕಲ್ ಬಂದು ಹೊಡೆಯಿತು. ನೀನೇನೂ ಗಾಬರಿಯಾಗಬೇಡ ಹಾಂ.....ಅಂದ ಹಾಗೆ ನೀನು ಹೇಗಿದೀಯಾ ?"

ಆವಾಗಲೇ ಸುಂದರಮ್ಮನಿಗೆ ನೋವಿನ ನೆನಪಾದದ್ದು.

"ಅಯ್ಯೋ ವಿಪರೀತ ನೋವು ಅಂದ್ರೆ...... ಸಾಯೋ ಹಾಗೆ ಆಗ್ತಿದೆ. ಎಲ್ಲಾ ಈ ಅನಿಷ್ಟ ಮುಖದ ಅಮರನಿಂದಲೇ ಆದದ್ದು ನೋಡಿ."

"ಯಾಕೆ ಸುಮ್ನೆ ಅವನಿಗೆ ಅಂತೀಯಾ ? ಅಮರ ಇಲ್ದಿದ್ರೆ ನಿನಗೆ ನನಗೆ ಯಾರೂ ನೀರು ಬಿಡೊಲ್ಲ ಕಣೇ ...ಅಮರ ಇದ್ದ ಅಂತ ನೀನು ಆಸ್ಪತ್ರೆ ಕಂಡೆ. ಅವನು ಇರದಿದ್ರೆ ಏನಾಗುತ್ತಿತ್ತು ಸ್ವಲ್ಪ ಯೋಚಿಸು."

ತಂದೆ ಹಾಗೂ ಚಿಕ್ಕಮ್ಮನ ಮಧ್ಯೆ ನಡೆದ ವಾಗ್ವಾದ ನಿಲ್ಲಿಸಲು ಅಮರ ಹೇಳಿದ.

"ಅಪ್ಪಾ ಈ ಮಾತ್ರೆಗಳನ್ನು ಕೂಡಲೇ ತರಿಸಬೇಕಂತೆ!"

"ನೀನೇ ಹೋಗಿ ತೆಗೆದುಕೊಂಡು ಬಂದುಬಿಡು."

ಎಂದು ಹೇಳಿದ ರಾಯರು ಅವನ ಕೈಗೆ ಇಪ್ಪತ್ತುರೂಪಾಯಿನ ನೋಟು ಕೊಟ್ಟರು. ಸುಂದರಮ್ಮನ ಬಾಯಿ ಊರಗಲ ತೆಗೆದುಕೊಂಡಿತು.

"ರೀ ಏನೂಂದ್ರೆ ... ಇಪ್ಪತ್ತು ರೂಪಾಯಿ ಕೊಡ್ತೀರಲ್ರೀ."

"ಇರಲೇಳೇ ಅವನೇನೂ ಓಡಿಹೋಗೊಲ್ಲ. ಕಾಲು ಮುರಿದುಕೊಂಡು ಬಿದ್ದಿದ್ರೂ ನಿನಗೆ ಬುದ್ಧಿ ಬರಲಿಲ್ಲ ನೋಡು."

ರಾಮರಾಯರು ಗದರಿದರು. ಅವರ ಪುಣ್ಯ, ಸಧ್ಯ ಸುಂದರಮ್ಮ ಚಂಡಿ ಅವತಾರ ತಾಳದೆ ತೆಪ್ಪಗಾದರು.

ಅರ್ಧ ಗಂಟೆ ಬಿಟ್ಟು ವಾಪಸಾದಾಗ ಅಮರ ಪಾತ್ರೆಗಳ ಜೊತೆಗೆ, ಮನೆಗೆ ಹೋಗಿ ಕಾಫಿ ಮಾಡಿಕೊಂಡು, ಫ್ಲಾಸ್ಕಿನಲ್ಲಿ ಹಾಕಿ ತೆಗೆದುಕೊಂಡು ಬಂದಿದ್ದ. ಜೊತೆಗೆ ಬ್ರೆಡ್. ಅದನ್ನೆಲ್ಲ ಕಂಡು ಅವನ ಮುಂದಾಲೋಚನೆಗೆ ಸೇವಾ ಭಾವನೆಗೆ ರಾಮರಾಯರ ಕಣ್ಣಲ್ಲಿ ನೀರು ಕಾಣಿಸಿಕೊಂಡಿತು. ಹೆಂಡತಿ ಕಡೆ ಹೊರಳಿ ನುಡಿದರು

"ನೋಡಿದೆಯೇನೇ ನಿನ್ನ ಮಕ್ಕಳು ಯಾರೂ ಬರದಿದ್ರೂ, ಅಮರ ನಿನಗಾಗಿ ಕಾಫಿ ಮಾಡಿಕೊಂಡು ಬ್ರೆಡ್ ಸಹಿತ ತಂದಿದ್ದಾನೆ."

ಸುಂದರಮ್ಮ ತಲೆ ತಗ್ಗಿಸಿದರು.

ಮನೆಯ ಭಾರವೆಲ್ಲಾ ಈಗ ಅಮರನ ಮೇಲೆಯೇ. ಎಳೆಯ ಕಂದನ ಬೆನ್ನ ಮೇಲೆ ಇಷ್ಟು ದೊಡ್ಡ ಭಾರಬಿದ್ದಾಗ ರಾಮರಾಯರು ವಿಲಿವಿಲಿ ಒದ್ದಾಡಿದರು. ವಿಚಿತ್ರ ರೀತಿಯ ಮಾನಸಿಕ ಹಿಂಸೆ ಅನುಭವಿಸಿದರು. ಅಮರ ಬೆಳಿಗ್ಗೆ ಐದು ಗಂಟೆಗೆ ಎದ್ದು ಎಲ್ಲ ಕೆಲಸ ಮಾಡಿ ವಸಂತ, ಮಾಲತಿ ಹಾಗೂ ರತ್ನಾರ ಸ್ನಾನವಾದ ಮೇಲೆ ಅವರಿಗೆ ತಿಂಡಿ ಕಾಫಿ ಕೊಟ್ಟು ಬೇಳೆ ಬೇಯಲು ಬಿಟ್ಟು ಆಸ್ಪತ್ರೆಗೆ ಓಡುತ್ತಿದ್ದ. ಸುಂದರಮ್ಮನವರಿಗೆ ತಿಂಡಿ ಕಾಫಿ ಕೊಟ್ಟು ಮನೆಗೆ ಬರುತ್ತಿದ್ದ. ನಂತರ ಅನ್ನ ಸಾರು ಪಲ್ಲೆ ಮಾಡಿ ಮೂವರಿಗೂ ಊಟ ಹಾಕಿ ಆಸ್ಪತ್ರೆಗೆ ಊಟ ತೆಗೆದುಕೊಂಡು ಹೋಗುತ್ತಿದ್ದ. ಆಮೇಲೆ ಶಾಲೆ. ಸಂಜೆ ರಾಯರೇ ಆಸ್ಪತ್ರೆಗೆ ಹೋಗಿ ಸುಂದರಮ್ಮನಿಗೆ ಕಾಫಿ ಕೊಟ್ಟು ಮನೆಗೆ ಬರುತ್ತಿದ್ದರು. ತಾವೇ ಒಲೆ ಹೊತ್ತಿಸಿ, ಅಡಿಗೆಗೆ ನೀರಿಡುತ್ತಿದ್ದರು.

ಅಮರ, ಅಪ್ಪಾಜಿಯವರಿಗೆ ಭೇಟಿಯಾಗಿ ನಡೆದ ಸಮಾಚಾರ ತಿಳಿಸಿದಾಗ ಅವರು ಅಮರನನ್ನು ಬಾಚಿ ತಬ್ಬಿಕೊಂಡರು. ಈ ಎಳೆ ಮಗು ಇಷ್ಟೆಲ್ಲ ಕೆಲಸ ಮಾಡಿ ಆಟದ ಕಡೆ ಲಕ್ಷ್ಯ ಕೊಡುತ್ತಿದೆಯಲ್ಲ ಎಂದು ಆಶ್ಚರ್ಯ ಅವರಿಗೆ.

ಅಂದಿನಿಂದ ಅಮರ ಬೆಳಿಗ್ಗೆ ಆಡಲು ಹೋಗುವ ಬದಲು ಸಾಯಂಕಾಲ ಆರು ಗಂಟೆಗೆ ಅಪ್ಪಾಜಿಯವರ ಮನೆಗೆ ಹೋಗತೊಡಗಿದ. ಏಳೂವರೆವರೆಗೂ

ಅಲ್ಲಿದ್ದು ನಂತರ ಮನೆಗೆ ಬಂದು ತಂದೆಗೆ ನೆರವಾಗುತ್ತಿದ್ದ. ಮೂವರಿಗೂ ಊಟ ಹಾಕಿ, ಚಿಕ್ಕಮ್ಮನಿಂದ ಊಟ ತೆಗೆದುಕೊಂಡು ಆಸ್ಪತ್ರೆಗೆ ಹೋಗಿ ಬಂದನೆಂದರೆ ಒಂದು ದಿನದ ಕೆಲಸ ಮುಗಿದಂತೆ

ಆಸ್ಪತ್ರೆಯಿಂದ ಮರಳಿ ಬರುವಾಗ ಕಡಿಮೆ ಕಡಿಮೆ ಎಂದರೆ ಹತ್ತು ಹೊಡೆಯುತ್ತಿತ್ತು. ಎರಡು ತುತ್ತು ಅನ್ನ ತಿಂದು, ಪುಸ್ತಕ ತೆಗೆದು ಓದಲು ಕೂಡುತ್ತಿದ್ದ.... ಬೆಳಗಿನಿಂದ ಓಡಾಡಿ ದಣಿವಾದ್ದರಿಂದ ಕಣ್ಣುಗಳು ತಮ್ಮಷ್ಟಕ್ಕೆ ತಾವೇ ಮುಚ್ಚಿಕೊಳ್ಳುತ್ತಿದ್ದವು ಬೆಳಗಾಗುವವರೆಗೂ ಸುಂದರ ಕನಸುಗಳು__ ಒಳ್ಳೆಯ ಫುಟ್‌ಬಾಲ್, ಚಿನ್ನದ ಷೀಲ್ಡ್...... ರೇಶಿಮೆಯ ಬಟ್ಟೆ ತೊಟ್ಟ ಅಮರ.... ಮೈದಾನದಲ್ಲಿ ಆಟವಾಡುತ್ತಿದ್ದಾನೆ...... ಸುತ್ತಲೂ ಚಪ್ಪಾಳೆ... ಅಪ್ಪಾಜಿ ಬಂದು ಬೆನ್ನು ತಟ್ಟುತ್ತಾರೆ

ಅಮರ ಕಣ್ಣು ತೆರೆದಾಗ, ಅಪ್ಪ ಬೆನ್ನು ತಟ್ಟಿ ಹೇಳುತ್ತಿದ್ದರು, "ಏಳು ಮಗು ಬೆಳಗಾಯಿತು."

ಮತ್ತೊಂದು ದಿನ ಪ್ರಾರಂಭವಾಗುತ್ತಿತ್ತು ಹಿಂದಿನ ದಿನದಂತೆ.

# 4.

ವರ್ಷಗಳು ಉರುಳಿವೆ. ಅಮರ ಈಗ ಇಪ್ಪತ್ತಾರು ವರ್ಷಗಳ ಸುಂದರ ತರುಣ. ನಿಯಮಿತವಾಗಿ ವ್ಯಾಯಾಮ ಮಾಡುವುದರಿಂದ ಹಾಗೂ ಆಟದ ರೂಢಿ ಮಾಡುತ್ತಿರುವುದರಿಂದ ಹುರಿಕಟ್ಟಿದ ಗಟ್ಟಿ ಮೈ, ಎತ್ತರ ನಿಲುವಿನಿಂದ ಯಾರನ್ನಾದರೂ ಒಂದೇ ಬಾರಿ ಆಕರ್ಷಿಸುವಷ್ಟು ವ್ಯಕ್ತಿತ್ವ ಪಡೆದಿದ್ದಾನೆ. ಫುಟ್‌ಬಾಲ್ ಆಟದಲ್ಲಿ ಅಪ್ಪಾಜಿಯವರಿಂದ ದೀಕ್ಷೆ ಪಡೆದ ಆತನನ್ನು ಸರಿಗಟ್ಟುವ ಆಟಗಾರರು ರಾಜ್ಯದಲ್ಲಿಯೇ ಯಾರೂ ಇಲ್ಲ ಅನ್ನುವಷ್ಟರ ಮಟ್ಟಿಗೆ ಅವನ ಖ್ಯಾತಿ ಪಡೆದಿದೆ ಅನೇಕ ಪಂದ್ಯಗಳಲ್ಲಿ ಆಡಿ ವಿಜಯಶಿಲ್ಪಿ ಎನಿಸಿಕೊಂಡಿದ್ದಾನೆ. ಆದರೆ ಅವನ ದುರ್ದೈವಕ್ಕೆ ರಾಜ್ಯ ಮಟ್ಟದ ಅಥವಾ ಪ್ರಥಮ ದರ್ಜೆಯ ಆಟಕ್ಕೆ ಅವನ ಆಯ್ಕೆ ಆಗುತ್ತಿರಲಿಲ್ಲ. ಇದರ ಬಗ್ಗೆ ಅನೇಕ ಪತ್ರಿಕೆ

ಗಳು ಕೆಂಡ ಕಾರೀ ಖಾರವಾಗಿ ಬರೆದಿದ್ದರೂ ಉಪಯೋಗವಾಗಲಿಲ್ಲ. ಆಯ್ಕೆ ಸಮಿತಿ ಕಣ್ಣು ತೆರೆಯದಿದ್ದುದರಿಂದ ಪ್ರತಿಭೆ ಇದ್ದರೂ ಇಲ್ಲದಂತಾಗಿದೆ ಅವನ ಪರಿಸ್ಥಿತಿ. ಉಚ್ಚಮಟ್ಟದ ಪಂದ್ಯದಲ್ಲಿ ರಾಜ್ಯವನ್ನು ಪ್ರತಿನಿಧಿಸಿ ಆಟವಾಡಬೇಕು. ತನ್ನ ಕ್ರೀಡಾ ಪ್ರತಿಭೆಯನ್ನು ದೇಶಕ್ಕೆ ತೋರಿಸಿಕೊಡಬೇಕೆನ್ನುವ ಅವನ ಆಶೆ ಗಾಳಿಗೋಪುರವಾಗುತ್ತಿದೆ. ಒಳ್ಳೆಯ ಕ್ರೀಡಾಪಟುವಾಗಿ ದೇಶದ ಕೀರ್ತಿಯಾಗಿ ಬೆಳೆದು ದೊಡ್ಡ ಬ್ಯಾಂಕಿನಲ್ಲಿಯೋ, ವಾಣಿಜ್ಯ ಸಂಸ್ಥೆಯಲ್ಲಿಯೋ ಹೆಸರಿಗೆ ಮಾತ್ರ 'ಆಫೀಸರ್' ಎಂದು ಕೆಲಸ ಮಾಡುವ ಹೆಚ್ಚು ಸಂಬಳ ಬಯಸುವ ಕಾರು ಬಂಗಲೆ ಹೊಂದುವ ಆಶೆ ಅವನದು. ಹೆತ್ತ ತಂದೆ ತಾಯಿಗಳಿಗೆ ತೃಪ್ತಿಯ ಜೀವನ ನಡೆಸಲು ಅನುವು ಮಾಡಿ ಕೊಡಬೇಕೆಂಬ ಅವನ ಆಶೆಗೆ ಪ್ರತಿ ಸಾರಿಯೂ ಕಲ್ಲು ಬೀಳುತ್ತಿದೆ.

ವಿದ್ಯೆಯಂತೂ ಅವನ ತಲೆಗೆ ಹತ್ತಲಿಲ್ಲ. ಮೊದಲಿನಿಂದಲೂ ವಿದ್ಯೆಯ ಬಗ್ಗೆ ಅಲಕ್ಷ್ಯ ಭಾವನೆ ಮಾಡಿದ್ದರಿಂದ ಸರಸ್ವತಿ ಅವನಿಗೆ ಒಲಿಯಲೇ ಇಲ್ಲ. ಇದರಿಂದಾಗಿ ಜನರ ಅವಹೇಳನಕ್ಕೆ ಗುರಿಯಾದ ಅವನು ತನ್ನೆಲ್ಲ ಶಕ್ತಿಯನ್ನು ಫುಟ್‌ಬಾಲ್ ಆಟದತ್ತ ಕೇಂದ್ರೀಕರಿಸಿದ. ಪರಿಣಾಮ, ಉತ್ತಮ ಆಟಗಾರನಾದ, ಆದರೆ ವಿದ್ಯಾರ್ಥಿಯಾಗಲಿಲ್ಲ.

ಎಸ್.ಎಸ್.ಎಲ್.ಸಿ. ಯಲ್ಲಿ ನಾಲ್ಕು ಸಾರಿ ಫೇಲಾಗಿ ಕಾಲೇಜು ಕಟ್ಟೆ ಹತ್ತಿದ ಆತ ಪಿ.ಯು.ಸಿ. ಮುಗಿಸಲು ಮೂರು ವರ್ಷ ತೆಗೆದುಕೊಂಡ. ಬಿ. ಎ. ಒಂದನೇ ಭಾಗದಲ್ಲಿ ಇದು ಎರಡನೇ ವರ್ಷ. ಅವನಿಗಿಂತ ಚಿಕ್ಕವನಾದ ವಸಂತ ಬಿ. ಕಾಂ. ಪ್ರಥಮ ದರ್ಜೆಯಲ್ಲಿ ಪಾಸಾಗಿ ಕೆಲಸದ ಬೇಟೆ ಪ್ರಾರಂಭಿಸಿದ್ದಾನೆ. ಮಾಲತಿಗಾಗಲೇ ಮದುವೆಯಾಗಿದೆ. ಅವಳು ಪಿ. ಯು. ಸಿ. ಮುಗಿಸುತ್ತಲೂ ಅವಳಿಗೆ ಕಂಕಣ ಬಲ ಕೂಡಿ ಬಂದಿತು. ಅವಳ ಪತಿ ಸುಂದರ, ಹೆಸರಿಗೆ ತಕ್ಕ ಹಾಗೆ ಸುಂದರಾಂಗನೇ. ಎಲ್.ಐ.ಸಿ. ಯಲ್ಲಿ ಮ್ಯಾನೇಜರ್, ಕೈ ತುಂಬಾ ಸಂಬಳ. ಬಂಗ್ಲೆ, ಕಾರು. ಮಾಲತಿಯ ಮಾವ ಅಂದರೆ ಸುಂದರನ ತಂದೆ ಶ್ರೀಪಾದರಾಯರು ನಿವೃತ್ತ ಕಲೆಕ್ಟರ್. ಮನೆತನದಿಂದಲೂ ಶ್ರೀಮಂತಿಕೆ ಬೆಳೆದುಬಂದಿತ್ತು. ಅದರೊಂದಿಗೆ ಕೆಲಸದಲ್ಲಿದ್ದಾಗ ಸಹ ಅವರು ಸಾಕಷ್ಟು ಗಳಿಸಿದ್ದರು. ಸುಂದರನ ಮೊಮ್ಮಕ್ಕಳವರೆಗೆ ಕೂತು ತಿಂದರೂ ಸವೆಯಲಾರದಷ್ಟು ದೊಡ್ಡ ಆಸ್ತಿ.

ಅಷ್ಟು ದೊಡ್ಡ ಸಾಹುಕಾರರು ಬಡತನ ಮನೆತನಕ್ಕೆ ಸೇರಿದ ಮಾಲತಿಯನ್ನು ಮನಸಾರೆ ಮೆಚ್ಚಿ ಸೊಸೆಯೆಂದು ಸ್ವೀಕರಿಸಿದ್ದರು ಅವರಿಗೆ ಬಡವರ ಮಗಳೇ ಬೇಕಾಗಿದ್ದಳು. ಅಲ್ಲದೆ ಮಾಲತಿ ಕಣ್ಣು ಮೂಗಿನಿಂದಲೂ ಚೆನ್ನಾಗಿದ್ದು ಅವಶ್ಯವಿದ್ದಷ್ಟು ಶಿಕ್ಷಣ ಪಡೆದಿದ್ದಳಾದ್ದರಿಂದ ಯಾವದೇ ರೀತಿಯ ಭಾರವಿಲ್ಲದಂತೆ ಮದುವೆ ಮಾಡಿಕೊಳ್ಳಲು ರಾಮರಾಯರಿಗೆ ಕೇಳಿಕೊಂಡಿದ್ದರು

ಇಂಥ ಸಂಬಂಧ ತಾನಾಗಿಯೇ ಹುಡುಕಿಕೊಂಡು ಬಂದಿದ್ದು ತಮ್ಮ ಪೂರ್ವ ಜನ್ಮದ ಪುಣ್ಯ ಎಂದು ತಿಳಿದುಕೊಂಡ ರಾಮರಾಯರು ಕಷ್ಟಪಟ್ಟು ತಮ್ಮ ಶಕ್ತಿ ಮೀರಿ ಶ್ರಮಿಸಿ ಮದುವೆ ಮಾಡಿಕೊಟ್ಟರು. ಅದೂ ಇದೂ ಸೇರಿ ಸುಮಾರು ಏಳೆಂಟು ಸಾವಿರ ರೂಪಾಯಿ ಸಾಲವಾಗಿತ್ತು ಐದು ಸಾವಿರ ಮಂಡಿ ಸಾಹುಕಾರರಿಂದ ತಿಂಗಳಿಗೆ ನೂರು ರೂಪಾಯಿಯಂತೆ ಸಂಬಳದಲ್ಲಿ ಹಿಡಿದುಕೊಳ್ಳುವ ಕರಾರಿನ ಮೇಲೆ ಪಡೆದಿದ್ದರು ಹೇಗೂ ವಸಂತ ಬಿ. ಕಾಂ. ಪಾಸಾಗಿದ್ದಾನೆ ಒಳ್ಳೆಯ ನೌಕರಿ ದೊರೆಯುತ್ತದೆ. ಸಾಲವನ್ನು ಸುಲಭವಾಗಿ ತೀರಿಸಬಹುದೆಂಬ ಆಲೋಚನೆ ರಾಯರದು

ಆದರೆ ಎಷ್ಟು ತಿರುಗಿದರೂ ಎಲ್ಲಿಯೂ ನೌಕರಿ ಅತನಿಗೆ ದೊರೆಯಲಿಲ್ಲ. ಪ್ರತಿದಿನ ಮುಂಜಾನೆ ಕೈಯಲ್ಲಿ ಡಿಗ್ರಿ ಹಿಡಿದುಕೊಂಡು ಹೊರಡುತ್ತಿದ್ದ. ಮಧ್ಯಾಹ್ನ ಎರಡಕ್ಕೆ ಬರುತ್ತಿದ್ದ. ಊಟ ಮಾಡಿ ನಾಲ್ಕಕ್ಕೆ ಹೊರಬಿದ್ದನೆಂದರೆ ರಾತ್ರಿ ಎಂಟು ಗಂಟೆಗೆ ಬಾಡಿದ ಮುಖ ಹೊತ್ತು ಮರಳುತ್ತಿದ್ದ..... ನಿರಾಶೆಯ ಕತ್ತಲಲ್ಲಿ ದಾರಿ ಕಾಣದೆ ತಿರುಗುತ್ತಿರುವಾಗ ಫಲ ಸಿಗದೆ ಉಂಟಾದ ಆಕ್ರೋಶವೆಲ್ಲ ಸಮಯ ಸಿಕ್ಕಾಗ ಅಮರನ ಮೇಲೆ ಕಾರಿಕೊಳ್ಳುತ್ತಿದ್ದ.

ಒಂದು ಮುಂಜಾವು ವಸಂತ ಸ್ನಾನಕ್ಕೆಂದು ಹೋದಾಗ ನೀರು ಇನ್ನೂ ಕಾದಿರಲಿಲ್ಲ. ಮಾಲತಿ ಹಾಗೂ ರತ್ನಾ ಒಮ್ಮೆಲೆ ಸ್ನಾನ ಮಾಡಿದ್ದರಿಂದ, ನೀರೆಲ್ಲಾ ಖಾಲಿಯಾಗಿತ್ತು ಪುನಃ ನೀರು ತುಂಬಿ ಅಮರ ಕಾಯಲು ಇರಿಸಿದ್ದ ಹೀಗಾಗಿ ನೀರಿನ್ನೂ ಕಾಯ್ದಿರಲಿಲ್ಲ.

ಸ್ನಾನದ ಕೋಣೆಯಿಂದಲೇ ಆರ್ಭಟಿಸಿದ ವಸಂತ,

“ಲೋ ಕತ್ತೆ.... ನೀರೇಕೆ ಕಾಯಿಸಲಿಲ್ಲ ?”

ಕತ್ತೆ ಎಂದರೆ ಉತ್ತರ ಕೊಡುವವರು ಯಾರು ? ಈ ಬಾರಿ ವಸಂತ ಎತ್ತರದ ಧನಿಯಲ್ಲಿ ಕೂಗಿದ,

"ಲೇ ಅಮರ.... ನಿನಗೇ ನಾನು ಕೂಗಿದ್ದು."

"ಅಮರ ಕತ್ತೆಯಲ್ಲವ್ವೋ ಸ್ವಲ್ಪ ಗೌರವ ಕೊಟ್ಟು ಮಾತನಾಡು."

ಅವನಿಗೆ ಉತ್ತರ ಕೊಟ್ಟವರು ರಾಮರಾಯರು. ಮುಂದಿಗೆ ಹೊರಡಲು ತಯಾರಾಗುತ್ತಿದ್ದ ಅವರಿಗೆ ವಸಂತನ ಅಬ್ಬರ ಕೇಳಿದ್ದರಿಂದ ಅವರೇ ಉತ್ತರಿಸಿದ್ದರು.

"ಏಕೆ ಏನಾಯ್ತು ? ಕತ್ತೆ ಎಂದದ್ದು ತಪ್ಪಾಯಿತೇ ? ಆ ಮೊದ್ದುಮಗನಿಗೆ ಕತ್ತೆ ಎನ್ನದೇ ಅರಬ್ಬೀ ಕುದುರೆ ಎನ್ನಬೇಕೆ ? ವಯಸ್ಸು ಇಪ್ಪತ್ತೈದಾದರೂ ಬುದ್ದಿ ಬರಲಿಲ್ಲ.... ಓದಿಲ್ಲ ಬರಹವಿಲ್ಲ, ಕತ್ತೆಯಂತೆ ವಯಸ್ಸಾಯಿತೇ ವಿನಹ ಬುದ್ಧಿ ಬಲಿಯಾಲಿಲ್ಲ "

ಸುಂದರಮ್ಮ ವಸಂತನ ಸಹಾಯಕ್ಕೆ ಬಂದರು.

"ಏನೇ ನೀನು ಮಾತಾಡ್ತಾ ಇರೋದು .. ಸ್ವಲ್ಪ ಹಿಂದೆ ಮುಂದೆ ಯೋಚಿಸಿ ಮಾತನಾಡು...... ಅಮರ ಓದದಿದ್ದರೂ ಈ ಮನೆಯ ಆಧಾರ ಸ್ಥಂಭ ಅವನೇ...... ಅವನಿರದಿದ್ದರೆ ನೀವಾರೂ ಒಂದು ಹೆಜ್ಜೆ ಮುಂದೆ ಸರಿಯಲಾರಿರಿ.... ಒಂದು ವಾರದ ಕಾಲ ನೀನು ಆಸ್ಪತ್ರೆಯಲ್ಲಿ ಬಿದ್ದುಕೊಂಡಾಗ, ನಿನಗೂ ನಿನ್ನ ಈ ಮೂರೂ ಮುದ್ದು ಮಕ್ಕಳಿಗೂ ಅನ್ನ ಹಾಕಿದವನೇ ಅವನು ನೀನು ಮನೆಗೆ ಬಂದ ನಂತರ ಒಂದು ತಿಂಗಳ ಕಾಲ ನಿನ್ನನ್ನೂ ಕೂಡಿಸಿ ಸೇವೆ ಮಾಡಿದ್ದಾನೆ. ನಿನ್ನ ಸ್ವಂತ ಮಕ್ಕಳು ಒಂದು ದಿನವೂ ನಿನ್ನ ಕಡೆ ಹೊರಳಿ 'ಅಮ್ಮಾ ಹೇಗಿದ್ದೀಯಾ ?' ಅಂತ ಕೇಳಲಿಲ್ಲ.... ಏನೇ ಅಂತ ಹುಡುಗನಿಗೆ ಕತ್ತೆ ಅನ್ನಲಿಕ್ಕೆ ನಾಚಿಕೆ ಬರೋದಿಲ್ಲೇನೆ ?"

"ಎದಕ್ಕೆ ಬರಬೇಕ್ರೀ ನಾಚಿಕೆ ಒಂದನೇ ಹೇಣ್ತಿ ಸತ್ತ ಆರು ತಿಂಗಳಿಗೆ ಮದಿವಿ ಆಗಿ ಒಂಭತ್ತ ತಿಂಗಳ ಕೂಸಿಗೆ ಮಲತಾಯಿ ತರಲಿಕ್ಕೆ ನಿಮಗೆ ನಾಚಿಕೆ ಬರಲಿಲ್ಲ, ಇನ್ನು ನಮಗ್ಯಾಕ ಬರಬೇಕು ನಾಚಿಕೆ ?"

"ಜಗದಾಂಬೆ. ಮಹಮ್ಮಾಯೀ.... ನಿನ್ನ ತಡವಿ ನನ್ನ ಜೋಡೀಲೆ ನಾನೇ ಕೆನ್ನೆಗೆ ಹೊಡೆದುಕೊಂಡಂಗಾಯ್ತು ತಪ್ಪಾಯ್ತು ಮಹರಾಯ್ತಿ. ಎಂದು ಗಲ್ಲ ಗಲ್ಲ ಬಡಿದುಕೊಂಡು ರಾಯರು ಮುಂದಿ ಕಡೆ ನಡೆದರು ಅಷ್ಟರಲ್ಲಿ ಆಗಲೇ ನೀರೊಲೆಗೆ ಉರಿ ಮಾಡಿ ನೀರು ಕಾಯಿಸಿದ್ದ. ಈ ಕಲಹಕ್ಕೆ ಮೂಲ ಕಾರಣನಾದ ನಾರದ ಮುನಿ ವಸಂತ, ಹಾಯಾಗಿ ಹಿಂದಿ ಸಿನಿಮಾ ಹಾಡನ್ನು ಗುನ

ಗುತ್ತ ಸ್ನಾನ ಮಾಡುತ್ತಿದ್ದ.

ಒಂದು ದಿನ ವಸಂತ ಒಂದು ಸಮಾಚಾರ ತಂದ. ನಗರದ ಕೋ-ಆಪ ರೇಟಿವ್ ಬ್ಯಾಂಕಿನಲ್ಲಿ ಒಂದು ಅಕೌಂಟೆಂಟ್ ಜಾಗ ಖಾಲಿಇದೆ. ಆ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರ್ ದೀಪಾಳ ತಂದೆ ವರದರಾಜು. ಅವರಿಗೆ ಒಂದು ಮಾತು ಹೇಳಿದರೆ ಕೆಲಸ ಸಿಗತ್ತೆ ಅಂತ.

ರಾಮರಾಯರು ಆದದ್ದಾಗಲೀ ಅಂತ ಮರುದಿನ ಮುಂಜಾನೆ ನಸುಕಿನಲ್ಲಿಯೇ ವರದರಾಜು ಅವರ ಮನೆಯ ಬಾಗಿಲು ತಟ್ಟಿದರು. ಬಾಗಿಲು ತೆರೆದವಳು ದೀಪಾನೇ. ರಾಮರಾಯರನ್ನು ಕಂಡು ಕೈಮುಗಿದು ಒಳಗೆ ಕುಳ್ಳರಿಸಿದಳು. ರಾಮರಾಯರು ಕೇಳಿದರು,

"ನಿಮ್ಮ ತಂದೆ ಇದ್ದಾರೇನಮ್ಮ ?"

"ಇದ್ದಾರೆ."

"ಸ್ವಲ್ಪ ಮಾತಾಡಬೇಕಾಗಿದೆ ಕರೀತೀಯಾ ?"

ದೀಪಾ ಒಳಗೆ ಹೋದ ಎರಡೇ ನಿಮಿಷದಲ್ಲಿ ವರದರಾಜು ಅವರು ಹೊರಗೆ ಬಂದರು. ರಾಮರಾಯರು ಎದ್ದು ನಿಂತೊಡನೆ ವಸಂತನೂ ಸಹ ಎದ್ದು ನಿಂತ.... ವರದರಾಜು ಕುಳಿತುಕೊಂಡ ನಂತರ ಇಬ್ಬರೂ ಕುಳಿತರು. ರಾಮರಾಯರು ಪೀಠಿಕೆ ಹಾಕಿದರು.

"ನಾನು ರಾಮರಾಯ ಅಂತ ಇವನು ನನ್ನ ಮಗ...."

"ಹಾಂ... ಅಂದರೆ ಅಮರನಿಗಿಂತ ಚಿಕ್ಕವನು."

"ಹಾ..... ಹೌದು ." ರಾಮರಾಯರು ತಡವರಿಸಿದರು. ಹಾಗಾದರೆ ಇವರ ಬಳಿ ತಮ್ಮ ಜನ್ಮ ಪತ್ರಿಕೆ ಇದೆ ಅಂದಂತಾಯಿತೆಂದುಕೊಂಡು ತೆಪ್ಪಗೆ ಕುಳಿತಾಗ ವರದರಾಜು ಅವರೇ ಮಾತನಾಡಿದರು.

"ವಸಂತ ಬಿ. ಕಾಂ. ಪಾಸಾಗಿದ್ದಾನೆ. ನಮ್ಮ ಬ್ಯಾಂಕಿಗೆ ಕೆಲಸದ ಸಲುವಾಗಿ ಅರ್ಜಿ ಹಾಕಿದ್ದಾನೆ ಅವನಿಗೇ ಕೆಲಸ ಸಿಗಬೇಕು.... ಇದೇ ತಾನೇ ನೀವು ಹೇಳಲಿಕ್ಕೆ ಬಂದದ್ದು "

ಚಕಿತರಾದ ರಾಮರಾಯರು ಹೌದೆಂದು ಗೋಣು ಹಾಕಿದರು.

"ವಸಂತನಿಗೆ ನಾನು ಕೆಲಸ ಕೊಡಿಸುತ್ತೇನೆ. ಆದರೆ ನೀವು ಬಂದು ಹೇಳಿದಿರಿ ಅದಕ್ಕೆ ಅಂತಲ್ಲ. ನಿನ್ನೆ ರಾತ್ರಿಯೇ ಅಮರ ಬಂದು ತಿಳಿಸಿ ನನ್ನ ಕಾಲು

ಹಿಡಿದುಕೊಂಡ ರಾಮರಾಯರೇ ನಾನು ಈ ರೀತಿ ಹೇಳುತ್ತಿದ್ದೇನೆ ಅಂತ ಸಿಟ್ಟಾಗಬೇಡಿ. ನಿಮ್ಮ ಅಮರ ಅಂದರೆ ಒಂದು ವಜ್ರವಿದ್ದಂತೆ. ಅಂತ ಹುಡುಗ ದೀವಿಗೆ ತೆಗೆದುಕೊಂಡು ಹುಡುಕಿದರೂ ಸಿಗುವುದಿಲ್ಲ. ಅಂಥವನನ್ನು ನೀವು ಯಾವ ರೀತಿ ನಡೆಸಿಕೊಳ್ಳುತ್ತೀರಿ ಎಂಬುದು ನಿಮಗೇ ಗೊತ್ತು."

ಧಡಧಡ ಮುಖದ ಮೇಲೆ ಹೊಡೆದಂತೆ ಮಾತನಾಡಿ ವರದರಾಜುರವರು ಎದ್ದು ಹೋಗಿಯೇಬಿಟ್ಟರು. ಅವರ ಹಿಂದೆಯೇ ದೀಪಾ ಕಾಫಿ ತೆಗೆದುಕೊಂಡು ಬಂದಳು. ಬಿಸಿಯಾದ ಕಾಫಿ ಸಹ ಅವರಿಗೆ ಬೇವಿನ ರಸದಂತೆನಿಸಿತು.

ಕಾಫಿ ಕುಡಿದು ಬರುತ್ತೇನೆಂದು ಹೇಳಿದ ರಾಯರು ಮೇಲೆದ್ದರು

ಪಕ್ಕದ ಮನೆಯೇ ಅಪ್ಪಾಜಿಯವರ ಮನೆ. ಅವರ ಆರೋಗ್ಯವೂ ಸರಿಯಿರಲಿಲ್ಲ. ಮಾತಾಡಿಸಿಕೊಂಡು ಹೋದರಾಯಿತೆಂದು ರಾಯರು ಅವರ ಮನೆ ಕಡೆ ನಡೆದರು. ವಸಂತ ಅಲ್ಲಿಂದಲೇ ಮನೆ ಕಡೆ ನಡೆದ.

ಮಂಚದ ಮೇಲೆ ಮಲಗಿದ್ದ ಅಪ್ಪಾಜಿಯವರು ಎದ್ದು ಕುಳಿತರು. ಅವರ ಪಕ್ಕದಲ್ಲಿಯೇ ಕುಳಿತಿದ್ದ ಅಮರ ಅವರಿಗೆ ನಿಧಾನವಾಗಿ ಕಾಫಿ ಕುಡಿಸುತ್ತಿದ್ದ. ಅದನ್ನು ನೋಡಿ ರಾಯರ ಎದೆ ತುಂಬಿ ಬಂತು. ಅಮರನ ಹೃದಯದಲ್ಲಿ ಎಂತಹ ಕೋಮಲವಾದ ಸೇವಾ ಭಾವನೆ ದೇವರು ತುಂಬಿರುವನಲ್ಲಾ ಎಂದು. ಬೆಳಗಿನ ಕೆಲಸ ಮುಗಿಸಿಕೊಂಡು ಗುರುಗಳ ಸೇವೆಗೆ ಹಾಜರಾಗಿದ್ದ. ಅಪ್ಪಾಜಿಯವರು ರಾಮರಾಯರನ್ನು ಸ್ವಾಗತಿಸಿ ಕುಳ್ಳಿರಿಸಿದರು. ಅಮರ ಅವರಿಗೂ ಕಾಫಿ ತಂದುಕೊಟ್ಟ. ಸ್ವಲ್ಪ ಹೊತ್ತು ಮಾತಾಡುತ್ತಾ ಕುಳಿತಿದ್ದ ರಾಯರು ಅಪ್ಪಾಜಿಯವರಿಗೆ ನಮಸ್ಕಾರ ಹೇಳಿ ಹೊರಗೆ ಹೋಗುವಾಗ ದೀಪಾ ಒಳಗೆ ಬಂದಳು. ಅಮರನನ್ನು ಕಂಡು ಅವಳ ಮೊಗ ತಾವರೆಯಂತೆ ಅರಳಿತು.

ಸ್ವಲ್ಪ ಹೊತ್ತು ಅಮರ ಮತ್ತು ದೀಪಾ ಅಪ್ಪಾಜಿಯ ಬಳಿ ಕುಳಿತಿದ್ದು ನಂತರ ಮೇಲೆದ್ದರು. ಅಮರ ಮನೆಗೆ ಹೋಗಿ ಊಟ ಮಾಡಿಕೊಂಡು ಕಾಲೇಜಿಗೆ ಹೋಗಬೇಕಾಗಿತ್ತು. ಅಮರನನ್ನು ಕಳಿಸಲು ದೀಪಾ ಗೇಟಿನವರೆಗೂ ಬಂದಳು.

"ನಿಮ್ಮ ತಂದೆಯವರಿಗೆ ಚೆನ್ನಾಗಿ ಉಗಿದು ಕಳಿಸಿದರು ನಮ್ಮ ಡ್ಯಾಡಿ."

"ಏನೂಂತ ?" ... ಅಮರನ ಮುಖದ ಮೇಲೆ ಭಯ ಮೂಡಿತು.

"ನೀ ಏಕೆ ಅಷ್ಟು ಹೆದರಿಕೋತೀಯಾ ? ಅಂಥಾದ್ದೇನೂ ಆಗಿಲ್ಲ.

ವಸಂತನ ಬಗ್ಗೆ ನಿಮ್ಮ ತಂದೆ ಹೇಳಬೇಕು ಅನ್ನೋವಾಗ್ಲೇ— ಎಲ್ಲಾ ಡ್ಯಾಡಿ ಹೇಳಿಬಿಟ್ರು, ವಸಂತನಿಗೆ ನೌಕರಿ ದೊರೆಯುತ್ತೆ......ಆದರೆ ನೀವು ಬಂದು ಹೇಳಿದಿರಿ ಅಂತಲ್ಲ ... ನನಗೆ ನಿನ್ನೆ ರಾತ್ರಿಯೇ ಅಮರ ಬಂದು ಎಲ್ಲಾ ಹೇಳಿದಾನೆ. ಅಮರನಿಗೋಸ್ಕರ ವಸಂತನಿಗೆ ನೌಕರಿ ಸಿಗುತ್ತೆ ಎಂದರು.... ಆಗ ನೀನು ನೋಡಬೇಕಿತ್ತು ಅಮರ.... ವಸಂತನ ಮುಖಾನ, ಒಳ್ಳೇ ಹರಳೆಣ್ಣೆ ಕುಡಿದವರ ಥರಾ ಇತ್ತು.

ಅಮರ ಯಾವ ಮಾತೂ ಆಡಲಿಲ್ಲ. ಏನೇ ಆದರೂ ಸಧ್ಯ ನಡೆದದ್ದು ಅಷ್ಟು ಒಳ್ಳೆಯದಾಗಲಿಲ್ಲ ಅನ್ನಿಸಿತು ಅವನಿಗೆ

"ನನ್ನ ಹೆಸರು ಹೇಳಬಾರದಾಗಿತ್ತು ನಿಮ್ಮ ಡ್ಯಾಡಿ."

"ಏಕೆ ? ನಿಮ್ಮಿಂದ ಎಂಥ ಉಪಕಾರವಾಯ್ತು ಅಂತ ತಿಳಿಯೋದೂ ಬೇಡವೆ ?"

"ಅದನ್ನು ತಿಳಿದುಕೊಂಡು ಅರ್ಥ ಮಾಡಿಕೊಳ್ಳುವವರು ಯಾರು ?.... ಅಪಾರ್ಥ ಮಾಡಿಕೊಂಡು ಮತ್ತಿಷ್ಟು ರಾಮಾಯಣ ಮಾಡುವವರೇ ಇದ್ದಾರೆ. ನೋಡ್ತಾ ಇರು ನಮ್ಮ ಮನೆಯಲ್ಲಿ ಇದೇ ರೀತಿ ಆಗುತ್ತೆ...."

ದೀಪಾ ಮೌನವಾಗಿದ್ದಳು.

"ದೀಪಾ ನಾನಿನ್ನು ಬರಲಾ ? ಅಂದ ಹಾಗೆ ನಿನ್ನ ಕಾಲೇಜು...."

"ಹೋಗಬೇಕು ಇನ್ನೊಂದು ಮಾತು ಕೇಳಲಾ ?" ಕೇಳಲೋ ಬೇಡವೋ ಎನ್ನುತ್ತ ಕೇಳಿದ್ದಳು ದೀಪಾ.

"ಕೇಳು ದೀಪಾ ಅದಕ್ಕೇನು ?"

"ನಿನ್ನೆ ನಿಮ್ಮ ತಂದೆ ನಮ್ಮ ಮನೆಗೆ ಬಂದಾಗ ಒಳಗೆ ಬಂದ ಡ್ಯಾಡಿ ಕೇಳಿದರು. ಅಮರನ ವಿಷಯ ಕುರಿತು ರಾಮರಾಯರನ್ನು ವಿಚಾರಿಸಲೇನು? ಅಂತ ! ನಾನೇ ಬೇಡ ಅಂದೆ."

"ಬಹಳ ಒಳ್ಳೇದು ಮಾಡಿದೆ ದೀಪಾ .. ಒಂದು ವೇಳೆ ನಿನ್ನ ತಂದೆ ಈ ವಿಷಯ ಎತ್ತಿದ್ದರೆ ಆಕಾಶಕ್ಕೆ ನೆಗೆದ ನನ್ನ ತಂದೆ ಹೂಂ ಅಂದು ನಾಳೆಯೇ ಮುಹೂರ್ತ ವಿಡಿ ಓಲಗ ಊದೋಣ ಅಂತಿದ್ರು. ಅಷ್ಟು ಸಂತೋಷ ಆಗ್ತಿತ್ತು ಅವರಿಗೆ."

"ಏಕೆ ನಿನಗೆ ಸಂತೋಷ ಆಗ್ತಾ ಇರಲಿಲ್ಲವಾ ?"

ತನಗೆ ತಿರುಗಿ ಬಾಣವಾಗಿ ಬಂದ ಪ್ರಶ್ನೆಗೆ ಒಂದು ಕ್ಷಣ ಅಮರನಿಗೆ ಏನು ಉತ್ತರಿಸಬೇಕೆಂಬುದೇ ತಿಳಿಯಲಿಲ್ಲ. ಆಮೇಲೆ ನಿಧಾನವಾಗಿ ನುಡಿದ.

'ದೀಪಾ__ ನಿನ್ನ ಜೊತೆ ಮದುವೆ ಮಾಡಿಕೊಳ್ಳೋದು ನನ್ನ ಸೌಭಾಗ್ಯ ಅಂತ ತಿಳೀತೇನೆ ? ನಿನ್ನ ತಂದೆ ದೇವರಂಥವರು....ಅವರು....ಹಾಗೂ ಅಪ್ಪಾಜಿ ಇರದಿದ್ರೆ ಇಷ್ಟರಲ್ಲಿ ನನಗೆ ಹುಚ್ಚು ಹಿಡಿಯಬಹುದಿತ್ತು...... ಇಲ್ಲ ಆತ್ಮಹತ್ಯೆ ಮಾಡಿಕೊಂಡು ಸಾಯಬೇಕಾಗಿತ್ತು.... ಅಥವಾ ಶಾಲೆ ಕಾಲೇಜು ಎಲ್ಲಾ ಬಿಟ್ಟು ಮನೆಕೆಲಸಕ್ಕೇ ನಿಲ್ಲಬೇಕಾಗಿತ್ತು. ಇಂಥ ಕಠಿಣ ಪ್ರಸಂಗದಲ್ಲಿ ನೀ ನನ್ನ ಬಳಿಗೆ ಬಂದೇ. ಲಾವಾರಸದಂತೆ ತಪ್ತವಾದ ನನ್ನ ಮನಸ್ಸಿಗೆ ಶಾಂತಿ ನೀಡಿದೆ. ವಿನಾಶದತ್ತ ಅಂತ್ಯದತ್ತ ನಡೆದಿದ್ದ ನನ್ನಲ್ಲಿ ಹೊಸ ಆಸೆ ಹುಟ್ಟಿಸಿದೆ. ನನ್ನ ಜೀವನಕ್ಕೊಂದು ಹೊಸ ತಿರುವು ನೀಡಿದವಳೇ ನೀನು ದೀಪಾ ನೀನಿಲ್ಲದಿದ್ದರೆ__ ನೀನಿಲ್ಲದಿದ್ದರೆ ನನ್ನ ಬಾಳೇ ಶೂನ್ಯ ನೀ ನನ್ನ ಬಾಳಬೆಳಕು ಜೀವನದ ಉಸಿರು "

ಅಮರನಿಗೆ ಮುಂದೆ ಮಾತನಾಡಲಾಗಲಿಲ್ಲ... ಬಿಕ್ಕಳಿಸಲಾರಂಭಿಸಿದ. ದೀಪಾಳ ಗಂಟಲೂ ಕಟ್ಟಿ ಬಂದಿತ್ತು. ಅಮರನ ಹೆಗಲ ಮೇಲೆ ಕೈ ಹಾಕಿ ತನ್ನ ಕಡೆ ಹೊರಳಿಸಿದಳು. ಇಬ್ಬರ ಕಣ್ಣುಗಳಲ್ಲಿ ಕಣ್ಣೀರಿನ ತೊಡಗಳಾಗಿದ್ದವು. ಅಮರ ದೀಪಾಳನ್ನು ಗಟ್ಟಿಯಾಗಿ ಅಪ್ಪಿಕೊಂಡು ಮಗುವಿನಂತೆ ಅತ್ತುಬಿಟ್ಟ. ದೀಪಾ ಅವನನ್ನು ಸಮಾಧಾನ ಪಡಿಸುವ ಗೋಜಿಗೆ ಹೋಗಲಿಲ್ಲ. ಅದೇ ಸಮಯದಲ್ಲಿಯೂ ದೀಪಾಳಿಗೆ ಅವನ ಅಪ್ಪುಗೆ ಹಿತವೆನಿಸಿತು. ಅವನ ದುಃಖ ತಪ್ತವಾದ ಹೃದಯಕ್ಕೆ ತನ್ನ ಅಪ್ಪುಗೆ ಶಾಂತಿ ನೀಡುವುದಾದರೆ ನೀಡಲಿ__ ಇದರಿಂದ ತನಗೂ ಆನಂದ ಸಿಕ್ಕುತ್ತದೆಯಲ್ಲಾ ಎಂದು ಸುಮ್ಮನೇ ನಿಂತು ಅಮರನ ಬೆನ್ನು ಸವರುತ್ತಿದ್ದಳು.

ಎರಡು ನಿಮಿಷಗಳಲ್ಲಿ ಅಮರ ಸುಧಾರಿಸಿಕೊಂಡಿದ್ದ.

"ಸಾರಿ ದೀಪಾ.... "

ಅಮರ ಮುಖ ತೊಳೆಯಲೆಂದು ಚಿಕ್ಕ ತೋಟಕ್ಕೆ ನೀರು ಬಿಡುತ್ತಲಿದ್ದ ಟ್ಯಾಪ್ ಬಳಿ ಬಂದ__ ಮುಖ ತೊಳೆದುಕೊಂಡ. ಅಲ್ಲಿಯ ವಾತಾವರಣ ಬಹಳ ರಮ್ಯವಾಗಿತ್ತು.__ ದೀಪಾ ಹಸಿರು ಹುಲ್ಲಿನ ಮೇಲೆ ಕುಳಿತು ಕೊಂಡಳು.

"ಏಕೆ ದೀಪಾ.... ಕಾಲೇಜಿಗೆ ಹೋಗುವುದಿಲ್ಲವೇ ?"

"ತುಂಬ ಬೇಜಾರು "

"ಹಾಗೆ ಮಾಡಬೇಡ... ಈ ವರ್ಷ ನಿನ್ನದು ಫೈನಲ್. ಚೆನ್ನಾಗಿ ಓದಿ ಪಾಸಾಗು."

"ನನಗೆ ಓದಿ ಪಾಸಾಗಿ ಏನು ಮಾಡಬೇಕಾಗಿದೆ ಹೇಳು ಅಮರ. ನನಗೆ ನನ್ನ ಡ್ಯಾಡಿಗೆ ಇರೋದು ಒಂದೇ ಆಸೆ ... ಅದು ಏನೂಂತ ನಿನಗೆ ಗೊತ್ತಿದೆ.... ಅಮರ ನೀನು ಹೂಂ ಅಂದುಬಿಡು."

"ದೀಪಾ ... ನಾನೊಂದು ಮಾತು ಹೇಳಲೇ ?"

"ಹೇಳು ಅಮರ ಬೇಡವೆಂದವರಾರು !"

"ನಾನು ಹೇಳಿದಂತೆ ಕೇಳುತ್ತೀಯಾ ?"

"ಖಂಡಿತವಾಗಿ ಕೇಳುತ್ತೇನೆ ಅಂತ ಪ್ರಮಾಣ ಮಾಡೋದಿಲ್ಲ. ಒಂದು ವೇಳೆ ಅದು ನನ್ನ ಶಕ್ತಿ ಮೀರಿದ ವಿಷಯ ವಾದರೆ ಪ್ರಮಾಣದ ಗತಿ ?"

"ಅಂಥಾದ್ದೇನೂ ಇಲ್ಲ ನೀನು ಮನಸ್ಸು ಮಾಡಿದರೆ ಸರಳವಾಗಿ ಮಾಡಬಲ್ಲೆ "

"ಹೇಳು ಹಾಗಾದ್ರೆ."

"ನೀನು ನನ್ನನ್ನು ಮರೆತುಬಿಡು. ಬೇರೆ ಯಾರನ್ನಾದ್ರೂ ರಾಜಕುಮಾರ ನಂಥವನನ್ನು ಮದುವೆ ಮಾಡಿಕೋ '

"ಅಮರ ' ಇದನ್ನು ನೀನು ನಿನ್ನ ಮನಸ್ಸಿನಿಂದ ಹೇಳ್ತಾ ಇದೀಯಾ ?"

"ಹಾಯ್ ದೀಪಾ__ ನನಗೆ ನೀನು ಸುಖವಾಗಿರುವುದು ಬೇಕು. "

"ನಿಜ ಅಮರ....ನೀನೇನೋ ಸೌಖ್ಯವಾಗಿರಬೇಕಂತ ಈ ಮಾತು ಹೇಳಿದೆ. ಆದರೆ ನಿನ್ನ ಬಿಟ್ಟು ಬೇರೆಯವರ ಜೊತೆ ಮದುವೆಯಾಗಿ ನಾನು ಸುಖವಾಗಿರುತ್ತೇನೆ ಅಂತ ಹೇಗೆ ಭಾವಿಸುತ್ತಿ !"

ಅಮರ ನಿರುತ್ತರನಾದ.

"ಅಮರ ನಾನು ನಿನ್ನ ಪ್ರೀತಿಸಿದ್ದೇನೆ.... ನಿನ್ನ ಬಯಸಿದ್ದೇನೆ. ನಿನ್ನನ್ನೇ ಮದುವೆ ಆಗಬೇಕೂಂತ ಕನಸು ಕಂಡಿದ್ದೇನೆ."

"ನಾನು ಬಡವ ದೀಪಾ ನಿನಗೆ ಬೇಕಾದ ಸುಖ ನಾನು ನೀಡಲಾರೆ. ನನ್ನ ಬಳಿ ನನ್ನದು ಎನ್ನುವ ಒಂದೂ ವಸ್ತುವಿಲ್ಲ ಆಳಿಲ್ಲ, ಕಾಳಿಲ್ಲ, ಕಾರಂತೂ

ಇಲ್ಲೇ ಇಲ್ಲ .."

"ಆಳು, ಕಾಳು, ಕಾರು ಇವನ್ನೆಲ್ಲಾ ನಾನು ಪ್ರೀತಿಸುವುದಿಲ್ಲ ಅಮರ. ನನಗೆ ಬೇಕಾಗಿರೋದು ನಿನ್ನ ಪ್ರೀತಿ... ಅದನ್ನು ನಾನು ಕೇಳ್ತಾ ಇರೋದು. ನಿನ್ನ ಬಳಿ ನೀನು ಹೇಳಿದಂತೆ ಏನೂ ಇಲ್ಲದಿರಲಿಕ್ಕಿಲ್ಲ... ನೀನು ಬಡವ ಆಗಿರಬಹುದು....ಆದರೆ ಹೃದಯ ಶ್ರೀಮಂತವಾಗಿದೆ....ನಿನ್ನ ಆ ಶ್ರೀಮಂತ ಹೃದಯ ನನಗೆ ಬೇಕು. ನಿನ್ನದಾಗಿರುವ ಆ ಹೃದಯವನ್ನು ನನಗೆ ಕೊಡು ಅಮರ..... ಆ ಹೃದಯ ನನಗೆ ಬೇಕು..."

"ದೀಪಾ ಅಷ್ಟು ಭಾವುಕಳಾಗಬೇಡ... ಪ್ರೀತಿಯ ಆವೇಶದಲ್ಲಿ ಕಲ್ಪನಾ ಪ್ರಪಂಚವನ್ನು ವೈಮರೆತು ತಪ್ಪು ಹೆಜ್ಜೆ ಇಡಬೇಡ. ನಾಳೆ ವಾಸ್ತವಿಕ ಪ್ರಪಂಚಕ್ಕೆ ಬಂದಾಗ, ಅದರ ಬಗ್ಗೆ ಪಶ್ಚಾತ್ತಾಪ ಪಡಬೇಕಬೇಕಾದೀತು."

"ಅಂಥ ಸಮಯ ಬರಲಾರದು ಎಂದು ಅನಿಸುತ್ತದೆ ಅಮರ. ನನ್ನ ನಿನ್ನ ಗೆಳೆತನ ಇಂದು ನಿನ್ನೆಯದಲ್ಲ. ಹತ್ತು ಹನ್ನೆರಡು ವರ್ಷ ನಾನು ನಿನ್ನ ನೋಡ್ತಾ ಬಂದಿರುವೆ. ನನ್ನ ಡ್ಯಾಡಿ ವಿಷಯ ನಿನನಗಿನ್ನೂ ತಿಳಿಯದು. ಅವರು ಒಂದು ಬಾರಿ ಯಾರ ಮುಖ ನೋಡುತ್ತಾರೋ ಅವಾಗಲೇ ಅಂಥವರು ಯಾರೂಂತ ತಿಳಿದುಕೊಂಡುಬಿಡುತ್ತಾರೆ. ನಿನ್ನ ನಾನು ಅಂದು ಮನೆಗೆ ಕರೆದುಕೊಂಡು ಹೋದೆ ನೋಡು ಅಂದೇ ಹೇಳಿದರು...."

"ಏನೂಂತ ?"

"ದೀಪಾ... ಈ ಹುಡುಗ ನಾಳೆ ಅತೀ ಎತ್ತರದ ಸ್ಥಾನಕ್ಕೆ ಹೋಗುತ್ತಾನೆ ಹೆಸರಿಗೆ ತಕ್ಕಂತೆ ಅಮರನಾಗ್ತಾನೆ ಅಂತ."

"ಎಲ್ಲಾ ತಮಾಷೆ"

"ತಮಾಷೆ ಅಲ್ಲ ಅಮರ ನಿಜ ವಿಷಯ ... ಅದಕ್ಕೆಂತಲೇ ನಾನು ನಿನ್ನ ಬೆನ್ನು ಬಿದ್ದಿದ್ದು.... ನಿನ್ನ ಜೊತೆ ನಾನೂ ಅಮರಳಾಗಬೇಕೂ ಅಂತ."

"ನೀನೊಂದು ಹುಚ್ಚು ಹುಡುಗಿ."

"ಹೌದು ಮತ್ತೆ ನಾನು ಹುಚ್ಚಿ ಅಂತಲೇ ನಿನ್ನ ಹಿಂದೆ ತಿರುಗ್ತಿರೋದು. ಇಲ್ಲದಿದ್ರೆ.... ನನ್ನ ಮದುವೆಯಾಗಿ ನಾಲ್ಕು ಮಕ್ಕಳು ಆಗ್ತಾ ಇದ್ದವು."

ಕಿಲ ಕಿಲ ನಕ್ಕಳು ದೀಪಾ...... ಅಮರನ ಕಿವಿಗಳಲ್ಲಿ ಚೂರಿಯಿಂದ ಕಚ್ ಕಚ್ ಎಂದು ಚುಚ್ಚಿದಂತಾಯಿತು.

"ದೀಪಾ..... ನನಗಾಗಿ ನೀನು ಎಂತಹ ತ್ಯಾಗ ಮಾಡಿದೆ ಅನ್ನೋದು ನನಗೆ ಗೊತ್ತಿದೆ...... ಇನ್ನೂ ಸಮಯ ಮೀರಿಲ್ಲ, ನಾನೊಂದು ಉಪಾಯ... ನನ್ನ ಬೆನ್ನು ಹತ್ತಬೇಡ..... ದೀಪಾ ನಾನು ಹೇಳಿದಷ್ಟು ಕೇಳು ನೀನು ಮನಸ್ಸು ಮಾಡಿದ್ರೆ. '

"ಬೇಕಾದಷ್ಟು ಗಂಡು ಸಿಗುತ್ತವೆ ಅಲ್ಲವೆ ? ಹೌದು ಅಮರ ನೂರಕ್ಕೆ ನೂರರಷ್ಟು ನಿನ್ನ ಮಾತು ನಿಜ.... ನಾನು ಒಂದು ಮಾತು ಹೇಳಿದರೆ ಡ್ಯಾಡೀ ನೂರು ಗಂಡು ತಂದು ನನ್ನೆದುರು ನಿಲ್ಲಿಸ್ತಾರೆ ನಾಳೆಯೇ ಆದರೆ ನನಗೆ ಬೇಕಾಗಿಲ್ಲ ಯಾಕೆ ಗೊತ್ತೆ ?"

"ಏಕೆ ?"

"ನಾನು ನಿನ್ನ ಪ್ರೀತಿಸಿದ್ದೇನೆ... ನನ್ನ ಪ್ರೀತಿ ಅಂತಿಂಥ ಪ್ರೀತಿ ಅಲ್ಲ .. ಈ ಸೂರ್ಯ ಚಂದ್ರ ತಾರೆಗಳು ಇರುವ ತನಕ ಉಳಿಯುವ ಪ್ರೀತಿ ಅಮರ ಪ್ರೀತಿ.... ಅಮರ ಹೆಣ್ಣು ಜೀವನದಲ್ಲಿ ಒಂದು ಬಾರಿ.... ಒಂದೇ ಒಂದು ಬಾರಿ ಒಬ್ಬನನ್ನು ಪ್ರೀತಿಸ್ತಾಳೆ, ಆ ಪ್ರೀತಿ ಮತ್ತೊಬ್ಬನಿಗೆ ದೊರೆಯಲಾರದು ಒಬ್ಬನನ್ನು ಪ್ರೀತಿಸಿ ಮತ್ತೊಬ್ಬನನ್ನು ಮದುವೆಯಾದ ಹೆಣ್ಣುಗಳು ಬಹಳವಿರಬಹುದು. ಆದರೆ ನಾನು ಒಬ್ಬನಿಗೆ ಹೃದಯ ಇನ್ನೊಬ್ಬನಿಗೆ ದೇಹ ಕೊಡುವಂಥವಳಲ್ಲ..... ನಿನ್ನನ್ನು ಪ್ರೀತಿಸಿದ್ದೇನೆ. ನನ್ನ ಹೃದಯ ದೇಹ ಎರಡೂ ನಿನಗೆ. ಅಮರ..... ಒಂದೊಂದು ಬಾರಿ ನನಗನ್ನಿಸುತ್ತದೆ.... ನಾನು ನೀನು ಆ ಪ್ರಪಂಚದಲ್ಲಿ ನನ್ನ ನಿನ್ನ ಸಂಬಂಧ ಇಂದು ನಿನ್ನೆಯದಲ್ಲ ಅಥವಾ ಇದೇ ಜನ್ಮದ್ದಲ್ಲ.... ನನ್ನ ನಿನ್ನ ಸಂಬಂಧ ಏಳು ಜನ್ಮಗಳ ಸಂಬಂಧ..... ನನ್ನ ನಿನ್ನ ಪ್ರೀತಿ ಏಳು ಜನುಮಗಳ ಪ್ರೀತಿ. ಹಿಂದಿನ ಏಳು ಜನ್ಮಗಳಲ್ಲಿ ನಾವು ಪ್ರೀತಿಸಿದ್ದೆವು...... ಮುಂದಿನ ಏಳು ಜನ್ಮಗಳೂ ಒಂದಾಗಿರುತ್ತೇವೆ ...ಏನೇ ಆಗಲಿ ಏನೇ ಬರಲಿ.... ಒಂದಾಗಿಯೇ ಇರೋಣ ಅಮರ......ಒಂದಾಗಿ ಜೀವಿಸುವಾ.....ಪ್ರಸಂಗ ಬಂದರೆ ಒಂದಾಗಿ ಮಡಿಯುವಾ....."

"ದೀಪಾ "

ಅಮರ ದೀಪಾಳನ್ನು ಅಪ್ಪಿಕೊಂಡು ಹುಚ್ಚನಂತೆ ಅವಳ ಕೆನ್ನೆಗಳಲ್ಲಿ ಗಲ್ಲ ಚುಂಬಿಸತೊಡಗಿದ.... ದೀಪಾಳ ಮೈಮನಗಳೆಲ್ಲಾ ಹರ್ಷದ ಬುಗ್ಗೆಗಳೆದ್ದವು......ಹೃದಯದಲ್ಲಿ ಪ್ರೇಮದ ತರಂಗಗಳೆದ್ದು ದೇಹದ ತುಂಬೆಲ್ಲಾ ವ್ಯಾಪಿಸಿ

ರೋಮಾಂಚವನನ್ನುಂಟು ಮಾಡಿದವು....'ಓಹ್....ದೇವರೇ ಈ ಕ್ಷಣ ಈ ಕ್ಷಣ ಕೊನೆಯುವರೆಗೂ ಹೀಗೇ ಇರಬಾರದೇ ? ಸಮಯದ ಗತಿ ಒಮ್ಮೆಲೆ ಇದೇ ರೀತಿ ಗಕ್ ಎಂದು ನಿಂತು ಬಿಡಬಾರದೇ? ಓ ಸೂರ್ಯ ನೀನು ಅಲ್ಲೇ ಇರು ಏ ಗಾಳಿ ನೀನು ಮುಂದೆ ಹೋಗಬೇಡ... ಹಾರುವ ಹಕ್ಕಿಯೇ ನೀನೆಲ್ಲಿದ್ದಿಯೋ ಅಲ್ಲೇ ಇರು.....ಅಂದರೆ....ಅಂದರೆ ನನ್ನನ್ನು ತೋಳ ತೆಕ್ಕೆಯಲ್ಲಿ ಬಂಧಿಸಿರುವ ಅಮರ ಅಲ್ಲಿಯೇ ಇರುತ್ತಾನೆ.....ನಾನವನ ತೋಳ ಬಂದಿಯಾಗಿಯೇ ಇರುತ್ತೇನೆ ನನ್ನನ್ನು ಚುಂಬಿಸುತ್ತಿರುವ ಅವನ ತುಟಿಗಳೂ ಸಹ ನನ್ನ ಕೆನ್ನೆಯ ಮೇಲೆಯೇ ಶಾಶ್ವತವಾಗಿರುತ್ತವೆ. ನಾವು ಶಾಶ್ವತವಾಗಿ ಅಮರ ಪ್ರೇಮಿಗಳಾಗಿ ಹೀಗೆ ಇರುತ್ತೇವೆ.'

ಎಷ್ಟು ಹೊತ್ತು ಅಮರ ದೀಪಾ ಒಬ್ಬರನ್ನೊಬ್ಬರು ಅಪ್ಪಿಕೊಂಡು ಹಾಗೇ ನಿಂತಿದ್ದರೋ ತಿಳಿಯದು ಬದಿಯ ರಸ್ತೆಯಲ್ಲಿ ನೀರಿನ ವಾಹನ ಗಂಟೆ ಬಾರಿಸುತ್ತಾ ಓಡಿದಾಗಲೇ ಅವರಿಗೆ ಎಚ್ಚರ.

"ಓಹ್... ಎಲ್ಲಿಯೋ ಬೆಂಕಿ ಬಿದ್ದಿದೆ." ಎಂದಳು ರೂಪಾ.

"ಇಲ್ಲ."

"ಎಲ್ಲಿ ?"

"ನನ್ನ ನಿನ್ನ ಹೃದಯದಲ್ಲಿ ...ಆದರೆ ಈ ಬೆಂಕಿಯನ್ನು ಆರಿಸಲು ನೀರು ಬೇಕಾಗಿಲ್ಲ....ಅಲ್ಲವೇ ?"

ದೀಪಾ ನಾಚಿ ಮುದ್ದೆಯಾದಳು,.....ಅಮರನಿಗೆ ವೇಳೆಯಾಗಿತ್ತು. ಹೊರಟು ನಿಂತ ಭಾರವಾದ ಹೃದಯದಿಂದ ಅವರಿಬ್ಬರೂ ಬೇರೆಯಾದರು.

## 5.

ಎರಡು ಮೂರು ದಿವಸ ರಾಮರಾಯರು ನೆಲದ ಮೇಲೆ ಓಡಾಡಲೇ ಇಲ್ಲ. ಇನ್ನು ಹನ್ನೆರಡು ದಿನಗಳಲ್ಲಿ ವಸಂತನಿಗೆ ನೌಕರಿ ದೊರೆಯುತ್ತದೆ

ಎನ್ನುವುದಕ್ಕಿಂತಲೂ ಆತನಿಗೆ ನೌಕರಿ ದೊರೆಯುವುದು ಅಮರನ ಶಿಫಾರಸಿನ ಮೇಲೆ ಎನ್ನುವುದು ಹೆಚ್ಚಿನದಾಗಿತ್ತು. ಇನ್ನು ತಮ್ಮ ಕಷ್ಟದ ದಿವಸಗಳು ಮುಗಿದವು. ಹೇಗೂ ಒಬ್ಬಳ ಮದುವೆಯಾಗಿದೆ. ವಸಂತನಿಗೆ ನೌಕರಿ ದೊರೆತರೆ ತಮ್ಮ ಉಳಿದ ಸಾಲವೂ ತೀರುತ್ತದೆ. ಮುಂದೆ ರತ್ನಾಳ ಮದುವೆಮಾಡಲು ವಸಂತನ ಸಹಾಯ ದೊರೆಯುತ್ತದೆ ಅಥವ ವಸಂತ ಹಾಗೂ ರತ್ನಾರ ವಿವಾಹವನ್ನೂ ಒಂದೇ ಹಂದರದಲ್ಲಿ ಮಾಡಿದರೂ ಆಗಬಹುದು ಎಂದವರು ಗಾಳಿಗೋಪುರವನ್ನು ಕಟ್ಟುತ್ತಿದ್ದರು. ಅಮರನ ಬಗ್ಗೆ ಅವರಿಗೆ ಚಿಂತೆಯೇ ಇರಲಿಲ್ಲ. ತಮಗಿಂತ ಹೆಚ್ಚಾಗಿ ಅಪ್ಪಾಜಿ ಹಾಗೂ ದೀಪಾಳ ತಂದೆ ಅವನ ಬೆನ್ನ ಹಿಂದೆ ಇದ್ದಾರೆಂಬ ಧೈರ್ಯ ಅವರಿಗಿತ್ತು. ನೂರಾರು ಜನ ಶ್ರೀಮಂತ ಹುಡುಗರು ದೀಪಾಳ ಹಿಂದೆ ಬೆನ್ನು ಹತ್ತಿದಾಗಲೇ ಅವರನ್ನೆಲ್ಲಾ ಬದಿಗೆ ಸರಿಸಿ ರೂಪಾ ಅಮರನನ್ನು ಆರಿಸಿಕೊಂಡಿದ್ದಳು. ಅದನ್ನು ಗಟ್ಟಿಯಾಗಿ ತಂದೆಯ ಮುಂದೆ ಹೇಳಿದಾಗ ಒಂದು ಕ್ಷಣ ತಂದೆ ಕೂಡಾ ದಂಗಾಗಿ ಕುಳಿತಿದ್ದರು. ಆ ಮೇಲೆ ರಾಮರಾಯರಿಗೆ ಹಾಗೂ ಅಮರನಿಗೆ ಕರೆ ಬಂದಿತು. ವರದರಾಜು ಅದರಿಂದ ಅಮರನಿಗೆ ಇದರ ಬಗ್ಗೆ ಮೊದಲೇ ಸ್ವಲ್ಪ ತಿಳಿದಿರಬೇಕು ಅಂತ ಕಾಣುತ್ತೆ. ಆದರೆ ರಾಮರಾಯರಿಗೆ ಮಾತ್ರ ಮೊದಲು ಸ್ವಲ್ಪ ಭೀತಿಯೇ ಉಂಟಾಯಿತು. ವರದರಾಜುವಿನಂಥ ಅಗರ್ಭ ಶ್ರೀಮಂತರು ತನ್ನಂಥ ಬಡವನಿಗೆ ಹೇಳಿ ಕಳಿಸಬೇಕೆಂದರೆ . ಅದೂ ಕಾರು ಕೊಟ್ಟು ಏನು ವಿಷಯವೋ ಎಂದು ಹೆದರಿ ಕಂಗಾಲಾಗಿದ್ದರು.

ರಾಮರಾಯರ ಮನೆಯ ಮುಂದೆ ಕಾರು ಬಂದು ನಿಂತದ್ದು ಅದು ಪ್ರಥಮ ಸಲ....ನಿಜ ಹೇಳಬೇಕೆಂದರೆ ರಾಮರಾಯರಿದ್ದ ಚಾಳ ಒಂದು ಸುಧಾಮನ ಕುಟೀರವಿದ್ದಂತಿತ್ತು. ಅಲ್ಲಿದ್ದ ಹತ್ತು ಹನ್ನೆರಡು ಮನೆಗಳ ಕಥೆ ಎಲ್ಲಾ ಒಂದೇ. ಎಲ್ಲರೂ ಬಡತನದಲ್ಲಿ ಬಳಲುವವರೇ. ಹೀಗಾಗಿ ಅಲ್ಲಿ ಕಾರು ಬಂದಾಗ, ದೊಡ್ಡದೊಂದು ಸಂತೆಯೇ ನೆರೆಯಿತು. ಚಿಕ್ಕ ಚಿಕ್ಕ ಮಕ್ಕಳು ಬೆಲ್ಲಕ್ಕೆ ಇರುವೆ ಮುತ್ತಿದಂತೆ ಕಾರನ್ನು ಮುತ್ತಿದರು. ರಾಮರಾಯರನ್ನು ಕರೆಯಲು ಹೋದ ಡ್ರೈವರ್ ಮರಳಿ ಬರುವಷ್ಟರಲ್ಲಿ ಅವನಿಗೆ ಕಾರೇ ಕಾಣಿಸಲಿಲ್ಲ. ಅದರ ಸುತ್ತುಮುತ್ತೂ ಜನ, ಅದರ ಮೇಲೂ ಸಹ ಮಕ್ಕಳು ಮುತ್ತಿಬಿಟ್ಟಿದ್ದರು.ಅವರನ್ನೆಲ್ಲಾ ಓಡಿಸಬೇಕಾದರೆ ಅವನಿಗೆ ಸಾಕುಸಾಕಾಯಿತು

ರಾಮರಾಯರನ್ನು ವರದರಾಜು ಅವರು ಒಳ್ಳೇ ಗೌರವದಿಂದ ಕಂಡು ಸ್ವಾಗತಿಸಿದರು. ಅಲ್ಲಿ ಬಡವ ಶ್ರೀಮಂತರೆಂಬ ಭಾವನೆಯೇ ಬರಲಿಲ್ಲ ರಾಮರಾಯರು ಕುಳಿತುಕೊಳ್ಳುತ್ತಲೂ ಅವರ ಮಲ್ಲನೇ ಒಳಗೆ ಜರಿದುಕೊಂಡ ಅವರ ಮೇಲಿಂದ ಮೇಲೆ ದೀಪಾಳ ಭೇಟಿಗೆ ಬರುತ್ತಿದ್ದುದರಿಂದ ಆತ ಮನೆ ಯುವನೇ ಆಗಿದ್ದ. ಹೀಗಾಗಿ ಅವನ ಬಗ್ಗೆ ಯಾರೂ ತಪ್ಪು ತಿಳಿದುಕೊಳ್ಳ ಲಿಲ್ಲ.

ಕಾಫಿ ತಿಂಡಿ ಬಂದಿತು. ಲಕ ಲಕ ಹೊಳೆಯುವ ಬೆಳ್ಳಿ ಪಾತ್ರೆಗಳಲ್ಲಿ, ಬೆಳ್ಳಿ ಪ್ಲೇಟು ತಮ್ಮ ಕೈಗೆ ತೆಗೆದುಕೊಳ್ಳುವಾಗ ಒಂದು ಬಾರಿ ಕೈ ನೋಡಿ ಕೊಂಡ ರಾಯರು ಅದನ್ನು ತಮ್ಮ ಧೋತರಕ್ಕೆ ಒರೆಸಿಕೊಂಡು ನಂತರ ತಟ್ಟೆ ಹಿಡಿದರು. ತಮ್ಮ ಕೈಗೆ ಹತ್ತಿದ ಕೊಳೆ ಎಲ್ಲಿ ತಟ್ಟೆಗೆ ತಗಲುತ್ತೋ ಅನ್ನುವ ಭಯ.

ತಿಂಡಿ ತಿಂದು ಕಾಫಿ ಕುಡಿದಾದ ಮೇಲೆ ವರದರಾಜು ಅವರು ಮಾತಿಗೆ ಪ್ರಾರಂಭಿಸಿದರು.

"ನೋಡಿ ರಾಮರಾಯರೇ ... ನನಗೆ ಇರೋಳು ಒಬ್ಬಳೇ ಮಗಳು, ನನ್ನ ಎಲ್ಲ ಆಸ್ತಿಗೂ ಆಕೆಯೇ ಒಡತಿ. ನನಗೆ ಬೇರೆ ಮಕ್ಕಳಂತೂ ಇಲ್ಲ, ಹೆಂಡ ತಿಯೂ ತೀರಿ ಹೋಗಿ ಹತ್ತು ವರ್ಷಗಳಾದವು. ಆಕೆಗೆ ನಾನೇ ತಾಯಿ, ನಾನೇ ತಂದೆ... ಮುದ್ದಿನಿಂದ ಸಾಕುತ್ತ ಬಂದಿರುವೆ. ಅವಳಿಗೆ ಕೊಂಚ ನೋವಾದರೂ ಅದು ನನ್ನಿಂದ ಸಹಿಸೋಕೆ ಆಗೊಲ್ಲ. ಅವಳನ್ನು ಬಿಟ್ಟರೆ ನನಗೆ ಬೇರೆ ಯಾರೂ ಇಲ್ಲ "

ಹೇಳಹೇಳುತ್ತಿರುವಂತೆಯೇ, ಅವರಿಗರಿವಿಲ್ಲದಂತೆ ಅವರ ಕಣ್ಣಾಲಿಗಳು ತುಂಬಿ ಬಂದಿದ್ದವು. ಗಾಗಲ್ ತೆಗೆದು ವಸ್ತ್ರದಿಂದ ಕಣ್ಣೀರು ಒರೆಸಿಕೊಂಡು ಒಂದು ಬಾರಿ ಕ್ಯಾಕರಿಸಿ ಗಂಟಲು ಸರಿಪಡಿಸಿಕೊಂಡರು... ರಾಮರಾಯರು ಯಾವ ಮಾತು ಆಡದೇ ಅತ್ತಿತ್ತ ಅಲುಗಾಡದೇ ಕುಳಿತಿದ್ದರು. ಅವರಿಗೆ ಏನು ಮಾತಾಡಬೇಕು ಏನು ಮಾಡಬೇಕು ಎಂಬುದೇ ತಿಳಿಯದಾಗಿತ್ತು. ಅದಕ್ಕೆ ಮಾತನಾಡದಿರುವುದೇ ಉತ್ತಮವೆಂದು ಮೌನವ್ರತಧಾರಣ ಮಾಡಿ ದ್ದರು. ಒಂದೆರಡು ನಿಮಿಷ ಬಿಟ್ಟು....ವರದರಾಜು ಅವರೇ ಮಾತನಾಡಿ ದರು.

"ದೀಪಾ ಅಮರನನ್ನು ತುಂಬಾ ಪ್ರೀತಿಸ್ತಾಳೆ, ಅಮರ ಕೂಡಾ ಅವಳನ್ನು ಪ್ರೀತಿಸ್ತಾನೆ. ಅವರಿಬ್ಬರೂ ಯಾವ ಮುಚ್ಚುಮರೆಯಿಲ್ಲದೆ ನನ್ನ ಮುಂದೆ ಇರೋ ವಿಷಯ ತಿಳಿಸಿದಾರೆ. ಅವರದು ಪವಿತ್ರ ಪ್ರೇಮ ನಾನು ನನ್ನ ಮನಸ್ಸಿನಲ್ಲಿ ಅಮರನನ್ನೇ ಅಳಿಯ ಮಾಡಿಕೊಬೇಕು ಅಂತ ಇದೆ ಬಡವ ಶ್ರೀಮಂತ ಅನ್ನೋ ವಿಷಯ ಮರೆತು ನಿಮ್ಮ ಅಭಿಪ್ರಾಯ ತಿಳಿಸಿ"

ರಾಮರಾಯರಿಗೆ ತಾವುಕೇಳುತ್ತಿರುವುದು ಸತ್ಯವೋ ಅಸತ್ಯವೋ ಎಂದು ತಿಳಿಯುವುದೇ ಕಠಿಣವಾಯಿತು. ವಿಮಾನದಲ್ಲಿ ಗೌರಿಶಂಕರದ ಶಿಖರದವರೆಗೂ ಒಯ್ದು ಆಮೇಲೆ ಒಮ್ಮೆಲೆ ಕೆಳಗೆ ಚೆಲ್ಲಿದಂತಾಯ್ತು. ಅಮರ ಇಷ್ಟು ಭಾಗ್ಯಶಾಲಿ ಎಂದವರು ತಿಳಿದಿರಲಿಲ್ಲ. ಇಂಥ ಸೌಭಾಗ್ಯ ಎಷ್ಟು ಜನಗಳ ಪಾಲಿಗಿದೆ? ಎಲ್ಲೋ ಲಕ್ಷಕ್ಕೊಬ್ಬರು. ತಮ್ಮ ಅಮರ ಲಕ್ಷಕ್ಕೆ ಒಬ್ಬ ಎಂದು ಅವರಿಗೆ ಮನದಟ್ಟಾಯಿತು.

ಯೋಚನೆ ಯಲ್ಲಿ ಮುಳುಗಿದ್ದ ಅವರನ್ನು ವರದರಾಜು ಅವರೇ ಬಡಿದು ಎಬ್ಬಿಸಿದರು.

"ರಾಮರಾಯರೇ ಇದಕ್ಕೆ ನೀವೇನಂತೀರಿ?"

"ನೀವು ಹೇಗೆ ಹೇಳ್ತೀರೋ ಹಾಗೆ ಸರ್. ನಿಮ್ಮ ಮಾತು ಮೀರಿ ನಾನಿಲ್ಲ.... ಅಮರ ಸಹ ನಿಮ್ಮ ಮಗನಿದ್ದ ಹಾಗೆ ಅವನ ಕಲ್ಯಾಣ ಆಗೋ ಹಾಗಿದ್ರೆ ನನಗೆ ಯಾವುದೇ ರೀತಿಯ ಅಭ್ಯಂತರವಿಲ್ಲ."

ರಾಮರಾಯರ ಹೃದಯ ತುಂಬಿ ಬಂದಿತ್ತು ಒಳಗೆ ಕುಳಿತಿದ್ದ ದೀಪ ಹಾಗೂ ಅಮರ ಈ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದರು. ದೀಪಾಳ ಹೃದಯದಲ್ಲಿ ಹರ್ಷದ ತರಂಗಗಳು ಏಳುತ್ತಾ ಇದ್ದವು. ಅವಳು ಅಮರನ ಕೈಯನ್ನು ತನ್ನ ಕೈಯಲ್ಲಿ ತೆಗೆದುಕೊಂಡು ಅದಮುತ್ತಾ "ಅಮರ .. ಡ್ಯಾಡಿ ಕರೆದು ಕೇಳಿದರೆ 'ಹೂಂ' ಅಂದುಬಿಡು ಪ್ಲೀಸ್." ಎಂದಳು. ಅಮರ ಯಾವ ಆವೇಗ ಅಥವಾ ಉದ್ವೇಗಕ್ಕೆ ಒಳಗಾಗದೆ ಶಾಂತವಾಗಿಯೇ ನುಡಿದ,

"ದೀಪಾ.... ನಾನು ನಿನ್ನ ಬಿಟ್ಟು ಯಾರನ್ನೂ ಪ್ರೀತಿಸೊಲ್ಲ ಜಗತ್ತಿನಲ್ಲಿ ನನ್ನ ತಂದೆಗೆ ಬಿಟ್ಟು ಯಾರನ್ನಾದರೂ ಅತೀ ಹೆಚ್ಚು ಪ್ರೀತಿಸ್ತಾ ಇದ್ರೆ, ಅದು ನೀನು ಮಾತ್ರ..... ನನಗೂ ನಿನ್ನೊಡನೆ ಮದುವೆ ಮಾಡಿಕೊಂಡು ಹಾಯಾಗಿ ಹಕ್ಕಿಯಂತೆ ಇರಬೇಕು ಅನ್ನೋ ನೂರೆಂಟು ಆಶೆಗಳಿವೆ. ಅದರೊಂದಿಗೆ ನನ್ನ

ಭವಿಷ್ಯದ ಗುರಿ ಆಕಾಂಕ್ಷೆ ಇದೆಯಲ್ಲ, ಅದನ್ನು ನಾನು ಮುಟ್ಟಬೇಕಾಗಿದೆ ಈಗಲೇ ನಾನು ಪ್ರೀತಿಗೆ ಮನಸೋತು ಮದುವೆಯಾದರೆ ನನಗನಿಸುತ್ತೆ... ಆ ಗುರಿ ಮುಟ್ಟಲಾರೆನೆಂದು. ಆದಕ್ಕಾಗಿ ಸ್ವಲ್ಪ ದಿವಸ ತಡೆದುಕೋ......ಇನ್ನೊಂದಿಷ್ಟು ಅವಧಿ ಈ ವರ್ಷ ನಡೆಯುವ ರಾಜ್ಯ ಮಟ್ಟದ ಪಂದ್ಯಕ್ಕೆ ನಾನೇ ನಾಯಕನೆಂದು ಆರಿಸಲಾಗುತ್ತೆ ಎಂಬ ವಿಶ್ವಾಸ ನನಗಿದೆ. ಒಂದು ಬಾರಿ ಕೇವಲ ಒಂದು ಬಾರಿ ನನಗೆ ಅವಕಾಶ ಸಿಕ್ಕರೆ ಸಾಕು. ಆಗ ನೋಡು... ಇಡೀ ದೇಶದ ತುಂಬೆಲ್ಲ ನನ್ನ ಹೆಸರು. ಪತ್ರಿಕೆಗಳಲ್ಲಿ ನನ್ನ ಫೋಟೋ.... ಆಗ ನನಗೆ ಒಳ್ಳೆಯ ನೌಕರಿ ಸಿಗಲು ತೊಂದರೆಯೇ ಆಗಲಾರದು.... ಯಾರ ಹಂಗೂ ಇಲ್ಲದೆ ನಾನೂ ನೀನೂ ಸುಖವಾಗಿ ಬಾಳಬಹುದು, ಅಲ್ಲವೆ ?"

"ನಿಜ ಅಮರ.... ನಿನ್ನ ಮಾತು ನಿಜ.... ಆದರೆ ಹೀಗೇ ಕಾಲ ಕಳೆಯುತ್ತ ನಾನು ಮುದುಕಿಯಾಗಬಾರದು ಅಷ್ಟೇ.

"ನೀನು ಮುದುಕಿಯಾದ್ರೆ ನಾನು ಹಾಗೇ ಇರಬೇಕಾ ? ಹುಡುಗನ ಹಾಗೆ. ನಾನೂ ಮುದುಕನಾಗ್ತೀನೆ ನಿನ್ನ ಜೊತೆಗೆ.... ಬೇಕಾದ್ರೆ ಮುದುಕರಾದ ಮೇಲೆಯೇ ಮದ್ವೆ ಆಗಬಹುದು, ಅದೂ ಒಂಥರಾ ಮಜವಾಗಿರುತ್ತೆ."

ಅಮರನ ಮಾತಿಗೆ ದೀಪಾ ಹೊಟ್ಟೆ ಹುಣ್ಣಾಗುವಂತೆ ನಕ್ಕಳು. ನಕ್ಕು ನಕ್ಕು ಕಣ್ಣಲ್ಲಿ ನೀರು ಕಾಣಿಸಿಕೊಂಡಿತು. ಆವಾಗಲೇ ವರದರಾಜು ಕೂಗಿದರು,

"ದೀಪಾ ಸ್ವಲ್ಪ ಬರ್ತಿಯೇನಮ್ಮಾ ?"

ಇನ್ನೂ ನಗುತ್ತಿದ್ದ ದೀಪಾಳ ನಗು ಒಮ್ಮೆಲೆ ನಿಂತುಬಿಟ್ಟಿತು. ಅಮರನ ಕಡೆಗೊಮ್ಮೆ ಕಳ್ಳನೋಟ ಬೀರಿ,

"ನಾವಿಬ್ಬರೂ ನಿರೀಕ್ಷಿಸಿದ ಘಳಿಗೆ ಬಂದೇಬಿಟ್ಟಿತು. ನೀವುಂಟು ಅವರುಂಟು... ನನ್ನ ಕೇಳಿದರೆ ನಾನು ಸ್ಪಷ್ಟವಾಗಿ ನನಗೆ ಒಪ್ಪಿಗೆ ಇದೆ ಬೇಕಾದಾಗ ಮದುವೆಮಾಡಿ ಅಂತ ಹೇಳಿಬಿಡ್ತೀನೆ."ಎಂದಳು.

"ಎಂಥವಳೇ ನೀನು.... ಲಜ್ಜೆಗೆಟ್ಟವಳು ಅಂತಾರೆ ನೋಡು ಅವರೆಲ್ಲ." ಎಂದ ಅಮರ.

"ಅಂದ್ಕೊಳ್ಳಲಿ ಬಿಡು, ಅದರಿಂದ ನನಗೇನಾಗಬೇಕಾಗಿದೆ. ಮದುವೆ ಆಗುವವರು ಅವರಾ ! ಇಲ್ಲ ನಾನಾ ?" ಉತ್ತರಕ್ಕೆ ಪ್ರತಿ ಉತ್ತರ ಕೊಡು

ತ್ತಿರುವಾಗಲೇ ರಾಮರಾಯರು ಕೂಗಿದರು.

"ಅಮರ ಸ್ವಲ್ಪ ಬರ್ತೀಯೇನಪ್ಪ ”

ಒಳಗಿನಿಂದ ಅಮರ ಹಾಗೂ ದೀಪಾ ಒಮ್ಮೆಲೆ ಖೊಕ್ ಖೊಕ್ ಎಂದು ನಕ್ಕಿದ್ದು ಇಬ್ಬರಿಗೂ ಕೇಳಿಸಿ ಸ್ಪಷ್ಟವಾಗಿ.

ಎರಡು ನಿಮಿಷ ಬಿಟ್ಟು ಅಮರ ಹಾಗೂ ದೀಪಾ ಒಬ್ಬರ ಹಿಂದೊಬ್ಬರು ಕಳವು ಮಾಡಿದಾಗ ಸಿಕ್ಕವರಂತೆ ಬಂದು ನಿಂತುಕೊಂಡರು. ವರದರಾಜುರವರೇ ಅಮರನ ಕಡೆ ಹೊರಳಿ,

"ಅಮರ.. ನೀನು ಮತ್ತು ದೀಪಾ ಪ್ರೀತಿಸಿರೋ ವಿಷಯ ನಮಗೆಲ್ಲ ಗೊತ್ತು. ಇದರಿಂದ ನನಗೆ ಬಹಳ ಸಂತೋಷವೇ ಆಗಿದೆ ನಿನ್ನ ತಂದೆಯವರು ಒಪ್ಪಿದ್ದಾರೆ ಇದಕ್ಕೆ ನೀನೇನಂತೀಯಾ ”

ಅಮರ ದೀಪಾಳ ಕಡೆ ನೋಡಿದ. ಅವನ ಪಕ್ಕೆಗೆ ತನ್ನ ಮೊಣಕೈಯಿಂದ ತಿವಿದು ದೀಪಾ ಪಿಸುಗುಟ್ಟಿದಳು. "ಹುಂ ಅಂತ ಹೇಳು, ಇಲ್ಲದಿದ್ದರೆ ಜೀವನ ಪರ್ಯಂತ ಒದ್ದಾಡಬೇಕಾಗುತ್ತದೆ '

ಅಮರ ಹಾಗೆಯೇ ನಿಂತೇ ಇದ್ದ. ವರದರಾಜು ಮತ್ತೊಮ್ಮೆ ಕೇಳಿದರು.

"ಹೇಳು ಅಮರ ನಿನ್ನ ಮನಸ್ಸಿನಲ್ಲಿ ಏನಿದೆ ಹೇಳಿಬಿಡು."

"ನಾನು ದೀಪಾಳನ್ನು ಪ್ರೀತಿಸುವ ವಿಷಯ ಸತ್ಯ.. ನಾನು ಅವಳನ್ನೇ ಮದುವೆಯಾಗುವುದೂ ಸತ್ಯ ನೀವು ಒಪ್ಪಿಕೊಂಡದ್ದು ನನಗೆ ಬಹಳ ಸಂತೋಷ ”

ದೀಪಾಳ ಮುಖ ಊರಗಲವಾಯಿತು. 'ವಾ . ಅಂತೂ ಗಂಡಸರ ಹಾಗೆ ಮಾತನಾಡಿದ ' ಎಂದುಕೊಂಡಳು ಮನದಲ್ಲಿ. ವರದರಾಜು ಅವರು ಹಿಗ್ಗಿ ರಾಮರಾಯರ ಕಡೆ ನೋಡುತ್ತಾ "ಇದಕ್ಕೆ ನೀವೇನಂತೀರೀ ” ಎಂದರು.

"ನಾನು ತಮಗೆ ಮೊದಲೇ ಹೇಳಿದ್ದೇನ ನಿಮ್ಮ ತೀರ್ಮಾನವೇ ನನ್ನ ತೀರ್ಮಾನ ಅಂತ ” ರಾಮರಾಯರು ಅಂತಿಮ ಮಾತು ಆಡಿದರು.

"ನನ್ನದೇನು ತೀರ್ಮಾನ ರಾಯರೇ ? ಮಿಯಾ ಬೀಬಿ ರಾಜಿ ತೊ ಕ್ಯಾ ಕರೇಗಾ ಖಾಜೀ ?' ವರದರಾಜುವಿನ ಮಾತಿಗೆ ರಾಮರಾಯರು ಹೃದಯ ತುಂಬಿ ನಕ್ಕರು. ಆದರೆ ಜೀವಮಾನದಲ್ಲಿಯೇ ಅವರಿಗಿಷ್ಟು ಸಂತಸ ಎಂದೂ ಆಗಿರಲಿಲ್ಲ

ಒಂದು ಸೆಕೆಂಡ್ ಕಾಲ ಸುಮ್ಮನಿದ್ದ ಅಮರ ಹೇಳಿದ,

"ನೀವಿಬ್ಬರೂ ತಪ್ಪು ತಿಳಿದುಕೊಳ್ಳುವುದಿಲ್ಲವೆಂದರೆ ನನ್ನದೊಂದು ಮಾತು." ರಾಮರಾಯರು, ವರದರಾಜು ಅಲ್ಲದೆ ದೀಪಾ ಸಹಿತ ಅಮರನ ಕಡೆ ನೋಡಿದರು.

"ಮದುವೆಗೆ ದಯವಿಟ್ಟು ಅವಸರಪಡಬೇಡಿ. ದೀಪಾಳದು ಫೈನಲ್ ಇದೆ ಅವಳ ಪರೀಕ್ಷೆ ಮುಗಿಯಲಿ ... ನನ್ನದೂ ಒಂದು ಹಿರಿಯಾಸೆ ಇದೆ. ಈ ಬಾರಿ ರಾಜ್ಯದ ಫುಟ್ ಬಾಲ್ ಪಂದ್ಯಕ್ಕೆ ನಾನೇ ನಾಯಕನಾಗಬೇಕೆಂದು. ಅದು ನನ್ನ ಜೀವನದ ಒಂದೇ ಒಂದು ಹಿರಿಯಾಸೆ. ಅದೊಂದು ಪೂರೈಸಿತೆಂದರೆ___ ನಾನು ಎಲ್ಲದಕ್ಕೂ ಸಿದ್ಧ."

"ಅದಕ್ಕೇನು ? ನಿನ್ನಂತೆಯೇ ಆಗಲಿ..... ನಾಳೆ ನಾನೇ ಸಂಬಂಧಪಟ್ಟ ಸಚಿವರಿಗೆ ಫೋನು ಮಾಡಿ ನಿನ್ನ ಆಯ್ಕೆಯಾಗುವಂತೆ ನೋಡಿಕೊಳ್ಳುತ್ತೇನೆ."

"ನೋ ನೋ.... ದಯವಿಟ್ಟು ಹಾಗೆ ಮಾಡಬೇಡಿ. ಮತ್ತೊಬ್ಬರ ಶಿಫಾರಸಿನ ಮೇಲೆ ಅಥವಾ ವರದರಾಜು ಅವರ ಅಳಿಯ ಎಂದು ನನ್ನ ಆಯ್ಕೆಯಾಗುವುದು ಬೇಡ. ನನ್ನ ಆಯ್ಕೆ ಪೂರ್ಣ ನನ್ನ ಯೋಗ್ಯತೆ ಮೇಲೆ ಆಗಲಿ..... ಅಪ್ಪಾಜಿಯವರ ಗರಡಿಯಲ್ಲಿ ಪಳಗಿದವ ನಾನು ನನ್ನ ಆಯ್ಕೆಯ ಬಗ್ಗೆ ನನಗೆ ಭರವಸೆ ಇದೆ. ತಾವು ಇದರ ಬಗ್ಗೆ ಗಮನವಿಡಿ. ನನ್ನಷ್ಟಕ್ಕೆ ನನ್ನನ್ನು ಬಿಟ್ಟು ಬಿಡಿ.___"

"ಅಮರ ನಿನ್ನ ಅಭಿಮಾನ ಹಾಗೂ ಆತ್ಮವಿಶ್ವಾಸವನ್ನು ನಾನು ಮೆಚ್ಚಿಕೊಳ್ಳುತ್ತೇನೆ.... ಆದರೆ ಯಾವಾಗಲೂ ನೋಡಲು ಕೆಟ್ಟದ್ದನ್ನು ವಿಚಾರಿಸಿ, ನಂತರ ಒಳ್ಳೆಯದರ ಬಗ್ಗೆ ಆಸೆಪಡಬೇಕೂಂತ ಅದಕ್ಕೇ ಅಂತ ಯೋಚಿಸು. ಒಂದು ವೇಳೆ ನಿನ್ನ ಆಯ್ಕೆ ಆಗಲಿಲ್ಲ ಅಂತ ತಿಳಿ . . ಆವಾಗ ?"

"ಎಲ್ಲಿಯವರೆಗೂ ನನ್ನಿಂದ ಸಾಧ್ಯವೋ ಅಲ್ಲಿಯವರೆಗೂ ನಾನು ಕಾಯುತ್ತೇನೆ."

"ಅಂದರೆ ಮದುವೆಯ ವಿಷಯ ?"

"ಅನಿವಾರ್ಯವಾಗಿ ಅದೂ ಮುಂದೆ ಹೋಗುತ್ತದೆ !"

"ಅದಕ್ಕೆ ದೀಪಾ ಒಪ್ಪಬೇಕಲ್ಲಾ "

"ಅವಳಿಗೆ ಒಪ್ಪಿಗೆಯಿದ್ದರೆ ಒಪ್ಪಲಿ, ಇಲ್ಲಾ ಈ ವಿಷಯ ಈಗಾಗಲೇ

ನಾನು ಅವಳೊಡನೆ ಚರ್ಚಿಸಿದ್ದೇನೆ. ಕಾಯುವುದಾದರೆ ಕಾದಲಿ ಇಲ್ಲಾ...."

ಮಾತನ್ನ ಅರ್ಧಕ್ಕೆ ಬಿಟ್ಟು ಅಮರ ದೀಪಾಳ ಕಡೆ ನೋಡಿ ಮಾತನ್ನು ಮುಂದುವರೆಸಿ,

"ಅವಳಿಗೆ ಸ್ವಾತಂತ್ರ್ಯವಿದೆ. ಬೇರೆ ಯಾರನ್ನಾದರೂ ನನಗಿಂತ ಯೋಗ್ಯರಾದವರನ್ನು ಆಕೆ ಮದುವೆಯಾಗಿ ಸುಖವಾಗಿರಲಿ."

ರಾಮರಾಯರು ಅಮರನ ನಿರ್ಣಯ ಕೇಳಿ ಬೆಚ್ಚಿಬಿದ್ದರು. ಎಂಥ ಉತ್ತಮ ಸಂಬಂಧ. ಈ ಹುಚ್ಚು ಹುಡುಗ ಲಟಿದ ಮೋಹದಲ್ಲಿ ಬಿದ್ದು ಅದನ್ನು ಕಳೆದುಕೊಳ್ಳುತ್ತಿದ್ದಾನಲ್ಲ ಎಂದು ಸಿಟ್ಟು ಅದರೊಡನೆ ವ್ಯಥೆ ವರದರಾಜು ಅವರು ಸ್ವಲ್ಪ ವಿಚಾರಿಸಿ ನುಡಿದರು.

"ನೋಡು ಅಮರ.... ನಿನ್ನ ವಿಚಾರವನ್ನು ತಾತ್ವಿಕವಾಗಿ ನಾನು ಒಪ್ಪಿಕೊಳ್ಳುತ್ತೇನೆ ಅಂತ ಇಟ್ಟುಕೋ..... ಆದರೆ ನೀನು ಮದುವೆ ಮುಂದೆ ಹಾಕಿ ಅದಕ್ಕಾಗಿ ಏಕೆ ಕಾಯಬೇಕು ? ಮದುವೆ ಮಾಡಿಕೊಂಡ ನಂತರವೂ ಪ್ರಯತ್ನ ಮಾಡಬಹುದಲ್ಲಾ ?"

"ನಿಮ್ಮ ಮಾತು ಒಂದು ದೃಷ್ಟಿಯಿಂದ ಸತ್ಯ ಸರಿ ಆದರೆ ಮದುವೆ ಆದಮೇಲೆ ಇದ್ದ ಮೋಹ ಇದೇ ರೀತಿ ಉಳಿಯುವುದಿಲ್ಲ. ಕಡಿಮೆಯಾಗಿ ಒಂದು ದಿನ ನಶಿಸಿ ಹೋಗುತ್ತದೆ. ಅಲ್ಲದೇ ಕಾಲೇಜು ಕಲಿಯುತ್ತಿರುವ ನಾನು ನನ್ನ ಹೊಟ್ಟೆಯೇ ಭಾರವಾಗಿರುವಾಗ ದೀಪಾಳನ್ನು ಮದುವೆಯಾಗಿ ಅವಳನ್ನು ಎಂತು ಸಾಕಲಿ ? ನನಗೆ ನೌಕರಿ ಬೇರೆ ಇಲ್ಲ."

"ಅಮರ ನಿನ್ನ ಮಾತು ಕೇಳಿ ನನಗೆ ನಗಬೇಕೋ ಅಳಬೇಕೋ ತಿಳಿಯದಂತಾಗಿದೆ. ನಿನಗೆ ಹಣದ ಕೊರತೆ ಎಲ್ಲಿದೆ ? ನೀನು ನೌಕರಿ ಏಕೆ ಮಾಡಬೇಕು ? ನಾನಿಲ್ಲವೇ ? ನನಗಿರುವವಳು ದೀಪಾ ಒಬ್ಬಳೇ ಈ ಎಲ್ಲ ಆಸ್ತಿ ಪಾಸ್ತಿ ಅವಳಿಗೆ ಸೇರಿದ್ದು. ಮದುವೆಯಾದ ನಂತರ ನೀನು ಇದಕ್ಕೇ ಯಜಮಾನ....ಹಾಯಾಗಿ ಇದ್ದರಾಯಿತು."

"ಅದು ನನ್ನಿಂದ ಆಗದು ಸಾರ್ ನಾನು ನನ್ನ ದುಡಿಮೆಯಲ್ಲಿ ಬದುಕಲು ಇಷ್ಟಪಡುತ್ತೇನೆ ಹೆಂಡತಿಯ ಆಸ್ತಿಯಲ್ಲಿ ಬದುಕುವ ಇಚ್ಛೆ ನನಗಿಲ್ಲ. ಎಲ್ಲಿಯ ತನಕ ನನ್ನ ಕಾಲ ಮೇಲೆ ನಿಲ್ಲುವ ಶಕ್ತಿ ನನಗೆ ಬರುವುದಿಲ್ಲವೋ ಅಲ್ಲಿಯ ತನಕ ನಾನು ಮದುವೆ ಮಾಡಿಕೊಳ್ಳಲಾರೆ."

"ನೀನೊಬ್ಬ ಹುಚ್ಚ." ವರದರಾಜು ಅಬ್ಬರಿಸಿದ.

"ಹಾಗೇ ತಿಳಿದುಕೊಳ್ಳಿ......ನನಗೆ ಕೋಪವಿಲ್ಲ. ಇದರ ಮೇಲೆ ನಿಮ್ಮಿಷ್ಟ. ನೀವು ಹಿರಿಯರು__ನೀವೆಲ್ಲಾ ಹೇಗೆ ಹೇಳುತ್ತೀರೋ ನಾನು ಆ ರೀತಿ ಕೇಳಲು ಸಿದ್ಧನಿದ್ದೇನೆ."

"ಏನು ರಾಮರಾಯರೇ ನಿಮ್ಮ ವಿಚಾರವೇನು ?"

"ನನ್ನ ವಿಚಾರವೇನು ? ತಾವು ಹೇಗೆ ಹೇಳುತ್ತೀರೋ ಹಾಗೆ."

"ಹಾಗಾದರೆ ಮುಂದಿನ ತಿಂಗಳು ಮುಹೂರ್ತ ತೆಗೆಸೋಣವೇ ?"

"ಆಗಬಹುದು ಆದರೆ.... ನಾನು ಬಡವ... ನಿಮ್ಮ ಮಗಳಿಗೆ ಯಾವುದೇ ರೀತಿಯ ಒಡವೆ ಮಾಡಿಸುವುದು ನನ್ನಿಂದ ಆಗದು...."

"ಅದರ ಬಗ್ಗೆ ನೀವೇನೂ ಯೋಚಿಸಬೇಡಿ ನಾನೇ ಮಗಳ ಮೈಮೇಲೆ ಹದಿನೈದು ತೊಲೆ ಚಿನ್ನ ಹಾಕಿ. ಐವತ್ತು ಸಾವಿರ ವರದಕ್ಷಿಣೆ ಕೊಟ್ಟು...... ಮದುವೆ ಸಹ ಮಾಡಿಕೊಡುತ್ತೇನೆ "

ರಾಮರಾಯರಿಗೆ ಮೂರ್ಛೆ ಬರುವುದೊಂದೆ ಬಾಕಿ ಉಳಿದಿತ್ತು.

"ನೀವು ಮನುಷ್ಯರಲ್ಲ ಸ್ವಾಮಿ ದೇವರು " ಎಂದರು ಗದ್ಗದ ಕಂಠದಿಂದ.

"ನಿಮ್ಮ ಮಗನೇ ರತ್ನದಂತಿದ್ದಾನೆ ರಾಯರೇ..... ಅವನ ನಡತೆ, ಅಭಿಮಾನ, ಹಾಗೂ ಗುಣಗಳಿಗೆ ಕೊಡಬೇಕು ಲಕ್ಷ ವರಹಗಳನ್ನ.... ಹಾಗಾದರೆ ಮಾತು ಮುಗಿದಂತೆ ಆಯಿತೆ ?"

"ಡ್ಯಾಡಿ ಒಂದು ನಿಮಿಷ ನಿಲ್ಲಿ."

ಮಧ್ಯದಲ್ಲಿ ಬಾಯಿ ಹಾಕಿ ದೀಪಾಳ ಕಡೆ ಇಬ್ಬರೂ ಹೊರಳಿದರು.

"ನನ್ನ ಕೇಳುವುದಾದರೆ ಅಮರ ಹೇಳುವುದು ಸರಿ ಡ್ಯಾಡಿ. ಅದಕ್ಕಾಗಿ ಸಧ್ಯ ಮದುವೆ ವಿಚಾರ ಮಾಡಬೇಡಿ .. ಮುಂದೆ ಹಾಕಿ, ನಂತರ ನಾವು ಇದರ ಬಗ್ಗೆ ವಿಚಾರಿಸೋಣ."

"ದೀಪಾ ! ಇದೇನಮ್ಮ ನಿನ್ನ ಮಾತು? ನೀನಿನ್ನೂ ತರುಣಿಯಿರಬಹುದು ನಿನಗಿನ್ನೂ ವಯಸ್ಸು ಇರಬಹುದು ಆದರೆ ನಾನು ಹಾಗಲ್ಲವಮ್ಮ ನಾನು ಆಗಲೆ ಮುದುಕನಾಗಿದ್ದೇನೆ ವಯಸ್ಸಾಗಿದೆ__ ಇಂದೋ ನಾಳೆಯೋ ಬಿದ್ದು ಹೋಗುವ ಹಾಳು ಮರ ನಾನು..... ನನಗೆ ನಿನ್ನ ಮದುವೆ ಮಾಡಲು ನಿನ್ನ ಹೊಟ್ಟೆಯಿಂ

ಹುಟ್ಟಿದ ಮಗುವನ್ನು ಆಡಿಸುವ ಆಸೆ ಇದೆ. ಅದನ್ನೆಂತು ತಡೆಯಲಮ್ಮ."

"ಡ್ಯಾಡಿ." ದೀಪಾ ವರದರಾಜುವನ್ನು ಅಪ್ಪಿಕೊಂಡು ಹಸುಗೂಸಿನ ರೀತಿ ಅತ್ತುಬಿಟ್ಟಳು.

"ಡ್ಯಾಡಿ ಇನ್ನೊಮ್ಮೆ ಈ ರೀತಿ ಮಾತ-ಡಬೇಡಿ. ನನ್ನಿಂದ ಕೇಳಲು ಆಗೋಲ್ಲ. ನೀವು ಇನ್ನು ಬದುಕಬೇಕು. ನನ್ನ ಒಂದಲ್ಲ ಹತ್ತು ಮಕ್ಕಳನ್ನು ಆಡಿಸುವಷ್ಟು ಕಾಲ ಇರಬೇಕು ಡ್ಯಾಡಿ."

ಆ ದುಃಖದಲ್ಲಿಯೂ ವರದರಾಜುಗೆ ನಗೆ ಬಂದಿತು.

"ಹಾಗಾದರೆ ನಿನಗೆ ಹತ್ತು ಮಕ್ಕಳನ್ನು ಹೆರುವ ಆಶೆ ಇದೆಯಂತಾಯಿತು" ಅಂದಾಗ ಎಲ್ಲರ ನಗೆ ಬಾಂಬು ಸಿಡಿಯಿತು. ದುಃಖದ ಕಾರ್ಮೋಡಗಳು ಚದುರಿ, ಹೊಂಬಿಸಿಲು ಮೂಡಿತು ... ಇನ್ನು ಒಂದು ವರ್ಷ ಮದುವೆ ಬೇಡ ಎಂಬ ತೀರ್ಮಾನಕ್ಕೆ ಎಲ್ಲರು ಬಂದರು.

## 6.

ವರದರಾಜು ಅವರು ಹೇಳಿದಂತೆ ನಡೆದು ತೋರಿಸಿದರು. ಇಪ್ಪತ್ತು ದಿವಸಗಳು ಕಳೆಯುವಷ್ಟರಲ್ಲಿ ವಸಂತನಿಗೆ ನೌಕರಿ ದೊರೆತ ಬಗ್ಗೆ ಕಾಗದ ಬಂದಿತು. ಮನೆಯಲ್ಲಿ ಹಿಗ್ಗಿನ ಹೊಳೆ ಹರಿಯಿತು. ಸುಂದರಮ್ಮನಿಗಂತೂ ಸ್ವರ್ಗ ಮೂರೇ ಗೇಣು ಉಳಿದಿತ್ತು. ಪತಿಯ ಕನಿಷ್ಠ ಪಗಾರದಲ್ಲಿ ಇಪ್ಪತ್ತನಾಲ್ಕು ವರ್ಷ ಕಳೆದ ಆಕೆಗೆ ವಸಂತನ ದೊಡ್ಡ ಪಗಾರದಲ್ಲಿ ತನ್ನ ಎಲ್ಲ ಆಶೆ ತೀರಿಸಿಕೊಳ್ಳುವ ಬಯಕೆ 'ಭುಗಿಲ್' ಎಂದು ಎದ್ದಿತು. ಕೊರಳಲ್ಲಿ ಕೇವಲ ಕರಿಮಣಿ, ಕೈಯಲ್ಲಿ ಸಾದಾಕಾಜಿನ ಬಳೆ ಕಂಡ ಆಕೆಗೆ ಕೊರಳಲ್ಲಿ ಚಿನ್ನದ ಸರ ಕೈಯಲ್ಲಿ ನಾಲ್ಕು ನಾಲ್ಕು ಚಿನ್ನದ ಬಳೆ ಹಾಕಿಕೊಂಡು ಓಣಿಯನ್ನು ಮೆರೆಯುವ ಹಂಬಲ ಕೊರೆಯತೊಡಗಿತು....ರಾಮರಾಯರಿಗೆ ತಮ್ಮ ಭಾರ ಅರ್ಧಕ್ಕರ್ಧ ಕಡಿಮೆ ಆದಂತೆನಿಸಿ, ಸಮಾಧಾನದ ಉಸಿರು ಬಿಟ್ಟರು. ಅಮರನಿಗೆ

ಒಂದು ಬಗೆಯ ತೃಪ್ತಿ .. ತಾನು ಕೇಳಿದ್ದಕ್ಕೆ ಪರದ್ವಾಜರು ಅವನ್ನು ವಸಂತನಿಗೊಂದು ದಾರಿ ಮಾಡಿಕೊಟ್ಟಿರಲ್ಲಾ ಎಂದು.

ಆದರೆ ಎಲ್ಲಕ್ಕಿಂತ ಹೆಚ್ಚಿನ ಕನಸು ಕಂಡವರು ರತ್ನಾ, ಆಕೆಗೆ ಓದು ಬೇಸರ ತಂದಿತ್ತು. ಕಾಲೇಜಿನಲ್ಲಿ ತನ್ನ ಶ್ರೀಮಂತ ಗೆಳತಿಯರನ್ನು ಕಂಡ ಆಕೆಗೆ ಒಂದು ಬಗೆಯಿಂದ ಜಿಗುಪ್ಸೆ ಬಡತನದ ಬಗ್ಗೆ ತಿರಸ್ಕಾರ ತಾನೂ ಅವರಂತೆ ರೇಷ್ಮೆ ಸೀರೆ ಉಡಬೇಕು, ಜಪಾನಿ ಟೆರಿಲೀನ್ ಬಟ್ಟೆ ತೊಡಬೇಕು. ಜೀನ್ಸ್ ಧರಿಸಬೇಕು ಮ್ಯಾಕ್ಸಿ ತೊಡಬೇಕ ಎಂಬ ವಯಸ್ಸಿಗೆ ತಕ್ಕ ಆಸೆಗಳು, ಅವಳ ಗೆಳತಿಯರು, ಮುಖಕ್ಕೆ ಸ್ನೋ ಪೌಡರ್ ಹಚ್ಚಿಕೊಂಡು ಕಪ್ಪು ಪೆನ್ಸಿಲ್ಲಿನಿಂದ ಹುಬ್ಬು ತೀಡಿ, ತುಟಿಗೆ ಕೆಂಪು ಬಳಿದುಕೊಂಡು ಬಂದಾಗ ಅವರನ್ನು ಕಂಡು ತಾನೂ ಅದೇ ರೀತಿ ಸಿಂಗರಿಸಿಕೊಳ್ಳಬೇಕೆಂದು ಬಯಸುವಳು, ಅವರು ಪರ್ಸ್‌ನಿಂದ ನೂರುನೂರರ ನೋಟು ತೆಗೆದು ಖರ್ಚು ಮಾಡುವುದನ್ನು ಕಂಡು ದಂಗಾಗಿದ್ದಳು. ಅವರ ಜೊತೆ ಓಡಾಡಿ ಅವರ ಬಾಲ ಬಡಿದು. ಅವರು ಹುಣ್ಣಿಮೆ ಅಂದರೆ ಹುಣ್ಣಿಮೆ ಎಂದೂ, ಅಮಾವಾಸ್ಯೆ ಅಂದರೆ ಅಮಾವಾಸ್ಯೆ ಎಂದು ಆಕೆಗೆ ಸಾಕುಸಾಕಾಗಿತ್ತು. ಆದರೆ ಅದನ್ನು ಬಿಡುವಂತಿಲ್ಲ. ಬಿಟ್ಟರೆ, ಕ್ಯಾಂಟೀನ್ ತಪ್ಪುತ್ತದೆ, ವಾರಕ್ಕೊಂದರಂತೆ ನೋಡಲು ಸಿಗುವ ಸಿನಿಮ ಸಹ ತಪ್ಪುತ್ತದೆ. ಯಾವಾಗಾದರೊಮ್ಮೆ ಗೆಳತಿಯರ ಮನೆಯಲ್ಲಿ ಪಾರ್ಟಿ ಇದ್ದಾಗ ಉಟ್ಟುಕೊಳ್ಳಲು ಕೊಡುವ ಶಿಫಾನ ಸೀರೆ ತಪ್ಪುತ್ತದೆ.

ಹೀಗಾಗಿ ಆಕೆ ಅವರೊಡನೆ ಓಡಾಡುತ್ತಿದ್ದಳು. ಈಗ ಅಣ್ಣನಿಗೆ ನೌಕರಿ ದೊರೆತಿದೆ. ಕೈ ತುಂಬ ಸಂಬಳ ಬರುತ್ತದೆ. ತಿಂಗಳಿಗೊಂದು ಸೀರೆ ತರಿಸಬಹುದು. ಮೇಕಪ್ ಸಾಮಾನು ತರಿಸಬಹುದು.... ಅಲ್ಲದೆ.. ಅಲ್ಲದೆ ತಂದೆ ಇನ್ನು ತನ್ನ ಮದುವೆ ಕೂಡ ಬೇಗ ಮಾಡಬಹುದು. ಇದನ್ನೆಲ್ಲ ಒಬ್ಬಾಕೆಯೇ ಇದ್ದಾಗ ನೆನೆದು ನಕ್ಕಿದ್ದುಂಟು.

ಎಲ್ಲರ ಕನಸು ಒಂದು ಬಗೆಯದಾದರೆ ವಸಂತ ಕಂಡ ಕನಸೇ ಬೇರೆ. ಇಲ್ಲಿಯವರೆಗೂ ದಾರಿದ್ರ್ಯದಲ್ಲಿ ಮುಳುಗಿ ಈಗ ಮೇಲೆ ಬಂದದ್ದಾಯಿತು ತಂದೆಗೆ ಒಂದೊಂದು ರೂಪಾಯಿಗೂ ಕಾಡಿ ಬೇಡಿ, ಇಸಿದುಕೊಂಡಿದ್ದಾಯಿತು. ಶ್ರೀಮಂತ ಗೆಳೆಯರ ಹಿಂದೆ ಓಡಾಡಿ ಅವರ ಚಾಕರಿ ಮಾಡಿ, ಅವರಿಂದ ಬಿಟ್ಟಿ ಚಹಾ, ಬಿಟ್ಟಿ ಸಿಗರೇಟು, ಬಿಟ್ಟಿ ಸಿನಿಮಾ ಗಿಟ್ಟಿಸಿದ್ದಾಯಿತು. ಈಗ ನಾನೇ

ರಾಜ. ನಾನೇ ದುಡಿಯುತ್ತೇನೆ. ಕೈ ತುಂಬಾ ಗಳಿಸುತ್ತೇನೆ. ಮನಸ್ಸಿಗೆ ಬಂದಂತೆ ಖರ್ಚು ಮಾಡುತ್ತೇನೆ......ನನ್ನನ್ನು ಯಾರು ಕೇಳುವವರಿಲ್ಲ....ಅಲ್ಲದೇ ಅಲ್ಲದೆ....ಇನ್ನು ನಾನು ಪಂಕಜಾಳನ್ನು ಮದುವೆ ಮಾಡಿಕೋ ಬಹುದು. ಪಂಕಜಾಳ ನೆನಪು ಬರುತ್ತಲೂ ವಸಂತನ ಹೃದಯದಲ್ಲಿ ಹರ್ಷದ ಬುಗ್ಗೆಗಳೇ ಡ್ವನ್ರು. ಪಂಕಜಾಳ ಮುಖ ಅವನೆದುರು ತೇಲಿ ಬಂದಿತು.

ಪಂಕಜಾ ಅವನ ಜೊತೆಯಲ್ಲಿಯೇ ಓದುತ್ತಿರುವ, ಮಹೇಶನ ತಂಗಿ. ನೋಡಲು ಅಷ್ಟು ಸುಂದರಿಯಲ್ಲದಿದ್ದರೂ, ಪುರುಷರನ್ನು ಸುಲಭವಾಗಿ ತನ್ನತ್ತ ಆಕರ್ಷಿಸಿಕೊಳ್ಳುವ ಎಲ್ಲ ಗುಣಗಳೂ ಅವಳಲ್ಲಿದ್ದವು. ಒಂದು ರೀತಿಯಿಂದ ಚೆಲ್ಲುಚೆಲ್ಲಾದ ಹುಡುಗಿ__ಕಪಿಯಂತಿದ್ದ ವಸಂತ ಆಕೆಯ ಕೈಗೆ ಸಿಕ್ಕ ಮಂಗನಾತಾಗಿದ್ದ....ಅವರ ಹಿಂದೆ ಹಿಂದೆ ತಿರುಗುತ್ತಿದ್ದ. ವಿವಿಧ ಬಗೆಯ ಪೋಷಾಕು ಧರಿಸಿ ತನ್ನ ಮೈಮಾಟ ಪ್ರದರ್ಶಿಸಿ ಗಂಡುಗಳನ್ನು ತನ್ನ ಕಿರುಬೆರಳ ತುದಿಯಿಂದ ಕುಣಿಸುತ್ತಿದ್ದಳು, ಪಂಕಜಾ. ಅವಳನ್ನು ಕಣ್ತುಂಬಾ ನೋಡಿ, ಮಾತನಾಡಿಸಲೆಂದೇ ವಸಂತ ಮಹೇಶನ ನೆವ ಮಾಡಿಕೊಂಡು ದಿನಕ್ಕೊಂದು ಬಾರಿಯಾದರೂ ಅವರ ಮನೆಗೆ ಹೋಗುತ್ತಿದ್ದ. ಪಂಕಜಗೇನೂ ಗೊತ್ತು ವಸಂತ ಬರುತ್ತಿರುವದು ತನ್ನನ್ನು ನೋಡಲೆಂದು. ಅವಳಿಗೂ ಒಂದು ಬಗೆಯ ಖುಷಿ ಆಗುತ್ತಿತ್ತು. ಹೀಗೆ....ಒಬ್ಬರಿಗೊಬ್ಬರು ಮನಸೋತು..... ಹತ್ತಿರವಾದರು. ಪ್ರೇಮಿಗಳೂ ಆದರು. ಬ್ಯಾಂಕಿನಲ್ಲಿ ನೌಕರಿ ದೊರೆಯುತ್ತಲೂ, ಆ ಸಿಹಿ ಸುದ್ದಿ ತಿಳಿಸಲು ವಸಂತ ಮಹೇಶನ ಮನೆಗೆ ಓಡಿದ. ವಸಂತ ಹೇಳಿದ ಸುದ್ದಿ ಕೇಳಿ ಮಹೇಶ ಒಳಗೆ ಓಡಿ ತಾಯಿಗೆ ತಿಳಿಸಿದ. ಮಹೇಶನ ತಾಯಿ ಮಹಾ ಜಾಣೆ ಆಗಲೇ ವಸಂತನ ಮೇಲೆ ಬಲೆ ಒಗೆದೇ ಬಿಟ್ಟರು. ನಾಟಕದ ಪ್ರಥಮ ಅಂಕ ಪ್ರಾರಂಭವಾಯ್ತು. ಹಿತ್ತಲಕಡೆಯಿಂದ ಮಹೇಶ ಜರಿದುಕೊಂಡ. ತಾಯಿ ಪಂಕಾಜಳ ಕೈಲಿ ತಿಂಡಿ ಮತ್ತು ಕಾಫಿ ಕೊಟ್ಟು ಒಳಗಿನ ಕೋಣೆಗೆ ಕಳಿಸಿ ವಸಂತನನ್ನು ಕೂಗಿದರು. ಒಳಗೆ ಏನು ಮಸಲತ್ತು ನಡೆದಿದೆ ಎಂಬುದರ ವಾಸನೆ ತಿಳಿಯದೇ ವಸಂತ ನಿತ್ಯ ಬರುವಂತೆ ಒಳಗೆ ಬಂದ. ಮಹೇಶನ ತಾಯಿ ಆತನಿಗೆ ನೌಕರಿ ಸಿಕ್ಕ ಬಗ್ಗೆ ತಮ್ಮ ಸಂತಸ ವ್ಯಕ್ತಪಡಿಸಿ, ತಿಂಡಿ ತಿನ್ನಲು ಕೋಣೆಗೆ ಕಳಿಸಿದರು. ವಸಂತ ಒಳಗೆ ಹೋಗುತ್ತಲೂ, ಕೋಣೆಯ ಬಾಗಿಲು ಮೆಲ್ಲನೆ ಮುಚ್ಚಿಕೊಂಡರು. ತನಗಾಗಿ ಮೊದಲೇ ಕಾಯ್ದು ನಿಂತಿದ್ದ

ಪಂಕಜಾಳನ್ನು ಕಂಡು ವಸಂತನಿಗೆ ಪಂತ್ರಸ್ತು ಮತ್ತು ಏರಿದಂತಾಯಿತು. ಅವಳನ್ನು ಕಂಡು ಅವನ ಬಾಯಿಯಿಂದ ಮಾತೇ ಹೊರಡಲಿಲ್ಲ.

ಮೊದಲೇ ಚೆಲ್ಲುಚೆಲ್ಲಾದ ಪಂಕಜಾಗೆ ಈಗ ಹಿರಿಯರಿಂದ ಪ್ರೋತ್ಸಾಹ ಬೇರೆ ದೊರೆತಿದ್ದರಿಂದ ಒಂದು ಹಜ್ಜೆ ಮುಂದೆ ಹೋದಳು. ವಸಂತನನ್ನು ತನ್ನ ಬಲೆಯಲ್ಲಿ ಕೆಡವಿಕೊಳ್ಳಲು ತನ್ನ ರೂಪವೆಲ್ಲ ಬೀಸಿದಳು ವಸಂತನ ಹತ್ತಿರ ಹತ್ತಿರ ಸರಿದಳು. ವಸಂತ ಅದರ ಅರ್ಥ ಗ್ರಹಿಸಿ ಆಕೆಯನ್ನು ತನ್ನ ತೋಳ ತೆಕ್ಕೆಯಲ್ಲಿ ಬಂಧಿಸಿ ಮುದ್ದಿಸಿದ.

ಅಂದಿನಿಂದ ಪ್ರತಿ ದಿವಸ ಸಾಯಂಕಾಲ ಅವನ ಹಾಜರಿ ಮಹೇಶನ ಮನೆಗೆ. ಅವನ ಮನೆಯವರು ಒಂದರ್ಧ ಗಂಟೆ ಏಕಾಂತ ಒದಗಿಸುತ್ತಿದ್ದರು. ಒಂದು ತಿಂಗಳು ಕಳೆ ಯುವಷ್ಟರಲ್ಲಿ ವಸಂತನ ಪರಿಸ್ಥಿತಿ ಎಲ್ಲಿಗೆ ಬಂದಿತೆಂದರೆ.... ಆತ ಪಂಕಜಳನ್ನು ಬಿಟ್ಟು ಒಂದು ಅರೆಗಳಿಗೆ ಸಹ ಇರದಾದ. ಇದನ್ನೇ ಕಾಯು ತ್ತಿದ್ದ ಪಂಕಜಾಳ ತಾಯಿ ಪಂಕಜಾಳನ್ನು ನಾಲ್ಕು ದಿವಸ ಊರಿಗೆ ಕಳಿಸಿ ಬಿಟ್ಟರು. ನೀರಿನಿಂದ ತೆಗೆದೊಗೆದ ಮೀನಿನಂತೆ ವಸಂತ ಚಡಪಡಿಸಿದ.... ಪಂಕಜಾಳನ್ನು ತೋರಿಸಲು ಕರೆದುಕೊಂಡು ಹೋಗಿದ್ದಾರೆ ಎಂಬಸುದ್ದಿ ಅವನ ಕಿವಿಗೆ ಬಿದ್ದಾಗ ಅವನ ಎದೆಗುಂಡಿಗೆ ಹಾರಿತೊಡಗಿತು. ಒಂದು ದಿನ ಗಟ್ಟಿ ಮಾಡಿ ಪಂಕಜಾಳ ತಾಯಿಗೆ ಮುಂದೆ ಹೇಳಿಯೇಬಿಟ್ಟ ತಾನು ಪಂಕಜಳನ್ನು ಮದುವೆ ಆಗುವೆನೆಂದು

ಅವರೂ ಇದೇ ದಾರಿ ಕಾಯುತ್ತಿದ್ದರು. ಗಾಳಕ್ಕೆ ಮೀನು ಸರಿಯಾಗಿ ಸಿಕ್ಕಿಕೊಂಡಿತ್ತು. ಸುಲಭವಾಗಿ ಬಿಡಕೂಡದು ಎಂದು ಯೋಚಿಸಿದ ಅವರು ಚೆನ್ನಾಗಿ ನಾಟಕವನ್ನೇ ಆಡಿದರು. ಈಗಾಗಲೇ ಪಂಕಜಾಳಿಗೆ ಗಂಡು ಗೊತ್ತಾ ಗಿದೆಯೆಂದೂ ಅವರಿಗೆ ವರದಕ್ಷಿಣೆ ವಗೈರೆ ಕೊಡುವ ಶಕ್ತಿ ಇಲ್ಲವೆಂದೂ ಮದು ವೆಯ ಖರ್ಚಿಗೂ ತಮ್ಮ ಬಳಿ ಹಣವಿಲ್ಲವೆಂದೂ ಗೋಳಾಡಿದರು.

ವಸಂತನ ತಲೆಯಲ್ಲಿ ಪಂಕಜಾಳ ಭೂತ ಹೊಕ್ಕಿಕೊಂಡಿತ್ತು. ಸುಮಾರು ಇಪ್ಪತ್ತು ಇಪ್ಪತ್ತೈದು ದಿವಸ ಅವಳ ಸಂಗದಲ್ಲಿ ಕಳೆದಿದ್ದ. ಅವಳ ದೇಹಸ್ಪರ್ಶ ಅವನ ಮೈ ಬಿಸಿ ಮಾಡಿತು ಪಂಕಜಾ ಇಲ್ಲದಿದ್ದರೆ ಜಗತ್ತಿಗೇ ಬೆಂಕಿಹತ್ತಿ ಅದು ಉರಿದುಹೋಗುವುದೇನೋ ಎಂದಾತ ಭಾವಿಸಿ, ಬಾಯಿಗೆ ಬಂದಂತೆ ಮಾತು ಕೊಟ್ಟ. "ನನಗೆ ಒಂದು ನಯ ಪೈಸೆ ವರದಕ್ಷಿಣೆ ಬೇಡ.... ನಿಮ್ಮ

ಅನುಕೂಲಕ್ಕೆ ತಕ್ಕಂತೆ ಮದುವೆ ಮಾಡಿಕೊಡಿ. [illegible]ವಿಗೆ ತಿಳಿಯದಂತೆ ನಾನು ಸ್ವಲ್ಪ ಖರ್ಚಿಗೆಂದು ಹಣ ಕೊಡುತ್ತೇನೆ. ಎಂದ.

ರೋಗಿ ಬಯಸಿದ್ದೂ ಹಾಲು ಅನ್ನ, [illegible] ಕೇಳಿದ್ದೂ ಹಾಲು ಅನ್ನ ಅನ್ನುವಂತಾಯಿತು. [illegible] ತಪ್ಪದೆ [illegible]. ಇದರ ಮರುದಿನವೇ ಪಂಕಜಾ [illegible] ಬಂದಳು. [illegible] ವಸಂತ ಓಡಿ ಬಂದವನೇ ಅವಳನ್ನಪ್ಪಿಕೊಂಡು ಅತ್ತುಬಿಟ್ಟ. ಮುಂದೆ ಎರಡು ಮೂರು ದಿನ ಕಳೆದಿರಲಿಲ್ಲ. ಪಂಕಜಾಳ ತಾಯಿಯ ಕೈಗೆ ಐದು ಸಾವಿ [illegible]ಯಿಗಳು ಬಂದವು.

ಒಂದು ವಾರ ಮನೆಯಲ್ಲಿ ದೊಡ್ಡ ಸಮಾಚಾರಕವೇ ನಡೆಯಿತು

ಎಲ್ಲರೂ ಕಂಡ ಅವರವರ ಕನಸಿನ ಕನ್ನಡಿ ಒಡೆದು ಚೂರಾದವು. ನಾನು ಪಂಕಜಾಳನ್ನೇ ಮದುವೆ ಯಾಗುತ್ತೇನೆ ಇಷ್ಟು ದಿವಸ [illegible] ದಿನಗಳಲ್ಲಿ ಎಂದು ಬಾಂಬ್ ಹಾಕಿದವನಂತೆ ವಸಂತ [illegible] ರಾವ ರಾ [illegible] ಎದೆಯೊಡೆದು [illegible]ಯಿತು. ಇಷ್ಟು [illegible] ಮನೆಯಾದರೆ [illegible]ಂದೆ ವಾಲ ತಿಯ ಮದುವೆ ಮಾಡಿದ ಸಾಲ [illegible]ಗತಿಯೇನು? [illegible] ನೆ ಎಂತು ಸಾಗಿಸುವುದು? [illegible]ಲ್ಲವೆ ರತ್ನಾ [illegible]ದ ವೆ ಹೇಗೆ [illegible] [illegible]ಗೆ ಯೋಚನೆ [illegible] ಯೋಚನಾ ಶಕ್ತಿ [illegible] ಉಳಿದಿದ್ದ.

[illegible] ನವರಿಗೆ ಹುಚ್ಚು ಹಿಡಿಯುವುದೊಂದೇ [illegible] ಉಳಿದಿತ್ತು. ತನ್ನ [illegible] ಎಂದು, [illegible] ತಪ್ಪೆಲ್ಲ ಆಸೆ [illegible] ಕುಲಪುತ್ರ [illegible] ಮದುವೆ ಮಾಡಿಕೊಂಡರೆ ತಮ್ಮ ಚಿನ್ನದ ಒಡವೆ [illegible] ಗತಿ

ರತ್ನಾ ಹಾರಾರಿದ್ದಳು ವಸಂತನಿಗೆ ನೌಕರಿ ದೊರೆತ [illegible]ಲೂ ಆಕೆ ಕಾಲೇಜಿನಲ್ಲಿ ಟಾಂ ಟಾಂ ಹೊಡೆದಿದ್ದಳು ಇನ್ನು ಮೇಲೆ ಯಾವ ಕೊರತೆಯೂ ಇಲ್ಲವೆಂದು ಹೇಳಿದ ಆಕೆ ತನ್ನಣ್ಣ ಒಂದು ಡಜನ್ ಸೀರೆ ತಂದು ಕೊಡುತ್ತಾನೆ ಎಂದು ಡಾಂಗುರ ಸಾರಿದ್ದಳು ಅವನ ಮದುವ ಎದ್ದಿ ಕೇಳಿ .... ಸೀರೆಗಳಂತೂ ದೂರ, ರವಿಕೆಗೂ ಗತಿ ಇಲ್ಲ ಅನಿಸಿತು ಅವಳಿಗೆ ಮೇಕಪ್ ಸಾಮಾನುಗಳು ಕಣ್ಣ ಮುಂದೆ ಕುಣಿಯತೊಡಗಿ ಆಕೆ ಗಂಟೆಗಟ್ಟಲೆ ಅಳುತ್ತ

ಕಾಳಿತಿದ್ದಳು.

ಎಲ್ಲರಿಗೂ ಒಂದು ಬಗೆಯ ಚಿಂತೆಯಾದರೆ ಅಮರನಿಗೆ ಇನ್ನೊಂದು ಬಗೆಯದು. ಮನೆಗೆ ಹಿರಿಯ ಮಗನಾದ ನಾನು ತಂದೆಗೆ ಭಾರವಾಗಿ ಕುಂತೆನಲ್ಲ ಎಂದು. ಒಂದು ತತ್ವಕ್ಕೆ ಒಂದು ಸಿದ್ಧಾಂತಕ್ಕೆ ಕಟ್ಟುಬಿದ್ದು ಎಷ್ಟು ಜನರನ್ನು ಹಾಳು ಮಾಡುತ್ತಿರುವೆನಲ್ಲಾ? ತಾನು ಬೆನ್ನು ಹತ್ತಿದ್ದು ಪರೀಕ್ಷೆಕೆ ಆಗಲಿಕ್ಕಿಲ್ಲವೇ? ತಾನು ಕಟ್ಟಿದ ಆಶಾಮಂದಿರ ಮರಳಿನ ಮನೆ ಆಗಲಿಕ್ಕಿಲ್ಲವೇ? ಎಂದವನ ಯೋಚನೆ

ಹತ್ತು ಹನ್ನೆರಡು ದಿನಗಳಲ್ಲಿ ವಸಂತನ ಮದುವೆ ಆಗಿಯೇ ಹೋಯಿತು. ವಿಜೃಂಭಣೆಯ ಮದುವೆಯ ಕನಸು ಕಂಡವರಿಗೊಂದು ಕಹಿ ಅನುಭವ ಕೊಟ್ಟ. ಆ ಮದುವೆಯಲ್ಲಿ ಸುಂದರಮ್ಮನವರಿಗೆ ಒಂದು ಒಳ್ಳೆಯ ಸೀರೆ ಸಹ ದೊರೆಯಲಿಲ್ಲ. ರತ್ನಾಳಂತೂ ದೂರ.... ತಮ್ಮ ಸರಿದ ಕೋಟು, ಟೊಪ್ಪಿಗೆ ಧರಿಸಿಯೇ ರಾಮರಾಯರು ಮದುವೆಗೆ ಬಂದವರಿಗೆ ಸ್ವಾಗತ ಕೋರಿದರು.... ಬೊಂಬೆಯ ಮದುವೆಯಂತೆ ವಸಂತನ ಮದುವೆ ನಡೆದುಹೋಯಿತು.. ಮನೆಗೆ ಬಂದ ಮಹಾಲಕ್ಷ್ಮಿ ಪಂಕಜಾ ವಸಂತನ ಹೃದಯ ರಾಜ್ಯದಿಂದ ಆಕೆಯೇ ಮನೆಯ ಯಜಮಾನಿಯಾದಳು. ಇದ್ದ ಒಂದೇ ಕೊಠಡಿ ಅಲ್ಲಿ ರಾಮರಾಯರು ರತ್ನಾ ಮಲಗುತ್ತಿದ್ದರು, ಆ ಕೊಠಡಿ ವಸಂತ, ಪಂಕಜಾಗೆ ಸೇರಿತು. ರಾಮರಾಯರು, ಸುಂದರಮ್ಮ, ರತ್ನಾ, ಅವರ ನಡುಮನೆಗೆ ಬಂದರು. ಸಂಸಾರ ರಥ ಹೊಸ ದಾರಿಯ [illegible].

ಗಂಡ ಹೆಂಡತಿ ಸುತ್ತಿದರು, ತಿರುಗಿದರು. ಸುಂದರಮ್ಮ ಒಂದೆರಡು ಸಾರಿ ಅವರ ಜೊತೆ ಮಗಳು ರತ್ನಾಳನ್ನು ಕಳಿಸಿದರು. ವಸಂತ ಸುಮ್ಮನಿದ್ದರೂ, ಪಂಕಜಾ ಕಿರಿಕಿರಿ ಮಾಡಿದಳು. ಸುಂದರಮ್ಮನವರ ಮಾತು ಕೇಳಿ ರತ್ನಾ ಒಂದೆರಡು ಬಾರಿ ಪಂಕಜಾಳಿಗೆ ತಿಳಿಸದೇ ಅವಳ ಒಳ್ಳೆಯ ಸೀರೆಯುಟ್ಟು ಕಾಲೇಜಿಗೆ ಹೋದಳು.... ಅದು ತಿಳಿದು ಪಂಕಜಾ ಹಸಿದ ಹುಲಿಯಾದಳು. ತನ್ನ ಮೇಕಪ್ ಸಾಮಾನುಗಳು ರತ್ನಾಳ ಬಳಿ ಹೋದದ್ದು ಕಂಡು ಆಕೆಗೆ ಸಹಿಸಲಾಗಲಿಲ್ಲ. ಇದೆಲ್ಲ ಸೇರಿ ಒಂದು ಜ್ವಾಲಾಮುಖಿಯ ರೂಪ ತಾಳಿ, ಆಸ್ಫೋಟಿಸಿದ್ದು ಮೂರನೇ ತಾರೀಖಿನ ದಿನ..

ಒಂದನೇ ತಾರೀಖಿಗೆ ವಸಂತ ತನ್ನ ಎರಡನೇ ಸಂಬಳ ತೆಗೆದುಕೊಂಡ.

ಒಂದನೇ ಸಂಬಳದಲ್ಲಿ ಅರ್ಧ ತಾನಿಟ್ಟುಕೊಂಡು, ಉಳಿದ ಅರ್ಧ ತಾಯಿಯ ಉಡಿಗೆ ಹಾಕಿದ್ದ. ಒಂದುನೂರಾ ಐವತ್ತು ರೂಪಾಯಿ ಬಡ್ಡಿ ಕಟ್ಟಿದ ಐದು ಸಾವಿರ ರೂಪಾಯಿ ಸಾಲ ಮಾಡಿದ್ದನ್ನು ಆದರ ಬಡ್ಡಿ ? ಅದು ಆ ವಿಷಯ ಇನ್ನೂ ಯಾರ ಗಮನಕ್ಕೂ ಬಂದಿರಲಿಲ್ಲ. ಉಳಿದದ್ದು ಒಂದು ಜೊತೆ ಬಟ್ಟೆಗಾಯಿತು.

ಎರಡನೇ ತಿಂಗಳ ಪಗಾರದ ಮುಖ ಸುಂದರಮ್ಮ ಕಾಣಲೇ ಇಲ್ಲ. ಅದು ನೇರವಾಗಿ ಪಂಕಜಾಳ ಕೈಗೆ ಹೋಯಿತು. ಒಂದೆರಡು ದಿವಸ ರಾಮರಾಯರು ಕಾದರು... ತಮ್ಮ ಖರ್ಚಿಗೆ ಬೇಕಾದಾಗ ಮನೆ ನಡೆಸುವುದು ತೊಂದರೆಯಾದಾಗ ... ಸುಂದರಮ್ಮನವರನ್ನು ಕೇಳಿದರು. ಸುಂದರಮ್ಮನವರ ಕೈಗೂ ಸಂಬಳ ಬಂದಿರಲಿಲ್ಲ.. ಮೂರನೇ ತಾರೀಖು ರಾತ್ರಿ ಅವರು ವಸಂತನನ್ನು ಕೇಳಿದರು. ಸಂಬಳ ಬಂದಿತ್ತು ಆದರೆ ಅದೆಲ್ಲಾ ಖರ್ಚಾಯಿತು. ಎಂದ ವಸಂತ. ಪರಿಸ್ಥಿತಿ ಕೈ ಮೀರಿ ಹೋಗಿತ್ತು.

ಅದರ ಪರಿಣಾಮ ಒಂದೇ ವಾರದಲ್ಲಿ ವಸಂತ ಪಂಕಜಾಳನ್ನು ಕರೆದುಕೊಂಡು ಬೇರೆ ಮನೆ ಮಾಡಿದ, ರಾಮರಾಯರು ಹಾಸಿಗೆ ಹಿಡಿದವರು ಒಂದು ವಾರ ಮೇಲೇಳಲಿಲ್ಲ ... ಅವರು ಸುಂದರಮ್ಮನಿಗೆ ಒಂದೇ ಒಂದು ಮಾತನ್ನು ಹೇಳಿದರು,

“ನೋಡಿದೆಯೇನೇ ನಿನ್ನ ವಂಶೋದ್ಧಾರಕನನ್ನು. ಇವನೇ ನಿನ್ನ ಬಾಯಿಗೆ ನೀರು ಬಿಡುತ್ತಾನೆಂದು ತಿಳಿದು ಕಣ್ಣು ಬಾಯಿ ಬಿಡುತ್ತಿದ್ದೆ. ಈಗ ನೋಡು ಬಗಲಲ್ಲಿ ಹೆಂಡತಿ ಬರುತ್ತಲೂ ಕೈಕೊಟ್ಟು ಓಡಿಹೋದ. ಉಳಿದವನು ಯಾರು ? ಅದೇ ಅಮರ ತಾನೇ ! ನಿನ್ನಿಂದ ಪೊರಕೆ ಏಟು ತಿಂದವ, ತಂಗಳನ್ನ ಹಳಸಿದ ಅನ್ನ ತಿಂದು ನಿನ್ನ ಸೇವೆ ಮಾಡುತ್ತ ದೊಡ್ಡವನಾದವ. ”

ಸುಂದರಮ್ಮ ತಮ್ಮ ಜೀವನದಲ್ಲಿ ಪ್ರಥಮ ಬಾರಿ ಸೋಲೊಪ್ಪಿಕೊಂಡರು. ಪಶ್ಚಾತ್ತಾಪದ ಬೆಂಕಿಯಲ್ಲಿ ಬೆಂದು ಹೋದರು. ರಾಮರಾಯರ ಕಾಲಿಗೆ ಬಿದ್ದು,

“ನನ್ನದು ತಪ್ಪಾಯ್ತು ಅಂದ್ರೆ ನನ್ನ ಬುದ್ಧಿಗೆ ಏನೋ ಮಂಕು ಕವಿದಿತ್ತು. ವಜ್ರವನ್ನು ಹರಳೆಂದು ದೂರ ಬಿಸಾಡಿ, ಗಾಜನ್ನು ಭದ್ರವಾಗಿರಿಸಿಕೊಂಡಿದ್ದೆ. ನಾನು ಬದುಕಿರಬಾರದು.” ಎಂದಾಗ ರಾಮರಾಯರು ಸಪ್ನಾ

ಥಾನ ಮಾಡಿ ಎಲ್ಲಾ ದೈವೇಚ್ಛೆ ಎಂದರು.

# 7.

ಅವರ ಎಷ್ಟು ಶೋಕತಪ್ತನಾಗಿದ್ದನೋ ದೀಪಾ ಅಷ್ಟೇ ಆನಂದಿತಳಾಗಿದ್ದಳು. ಒಂದು ವಾರದಲ್ಲಿ ಕ್ರೀಡಾಕಮಿಟಿ ಸಭೆ ಸೇರಲಿದ್ದು ಅದರಲ್ಲಿ ಅಮರನೇ ನಾಯಕನೆಂದು ಆರಿಸುವುದಾಗಿ ಕಮಿಟಿಯ ಅಧ್ಯಕ್ಷರು ಮಾತು ಕೊಟ್ಟಿದ್ದರು. ದೀಪಾ ಅಮರನಿಗೆ ತಿಳಿಯದಂತೆ ಪ್ರಯತ್ನ ಮಾಡಲು ಡ್ಯಾಡಿಗೆ ಹೇಳಿದ್ದರಿಂದ ವರದರಾಜುರವರು ಹಿಂದಿನ ದಿನ ಅಧ್ಯಕ್ಷರಿಗೆ ಫೋನ್ ಮಾಡಿ ಅಮರ ತಮ್ಮ ಅಳಿಯನಾಗುವವನಿದ್ದಾನೆಂದು ಹೇಳಿ ಶಿಫಾರಸು ಮಾಡಿದ್ದರು. ಅವರ ಶಿಫಾರಸಿಗಿಂತ ಅಮರ ಒಳ್ಳೆಯ ಆಟಗಾರನಾದುದರಿಂದ ಕ್ರೀಡಾ ಕಮಿಟಿ ಆಯ್ಕೆ ಸಮಿತಿಯ ಚೇರ್ಮನ್ ರಂಗಪ್ಪನವರು ಸಂತೋಷದಿಂದ ಒಪ್ಪಿಕೊಂಡಿದ್ದರು. ದೀಪಾ ಸಂತೋಷದಿಂದ ಕೇಕೆ ಹಾಕಿದ್ದಳು. ಅಮರ ಒಂದು ಬಾರಿ ನಾಯಕನಾಗಿ ಆಡಿದರೆ ಸಾಕು. ಮುಂದೆ ದೇಶದ ತುಂಬೆಲ್ಲ ಅವನ ಪ್ರತಿಭೆ ಶ್ರೀಗಂಧದ ಸುವಾಸನೆಯಂತೆ ಹರಡುವುದರಲ್ಲಿ ದೂರವಿಲ್ಲ. ಅನಂತರ... ತಮ್ಮಿಬ್ಬರ ಮದುವೆ....

ಮದುವೆ ಎಂಬ ಶಬ್ದ ಮನದಲ್ಲಿ ಮೂಡುತ್ತಲೂ ಅವಳ ಕೆಂದಾವರೆಯಂತಹ ಮುಖ ಕಿವಿಯವರೆಗೂ ಕೆಂಪಗಾಯಿತು.

ಮನದಲ್ಲಿಯೇ ಸುಂದರ ಸ್ವಪ್ನಗಳನ್ನು ಹೆಣೆಯುತ್ತಾ ಕಾಲೇಜುಗೇಟು ಪ್ರವೇಶಿಸಿದಾಗ ದೀಪಾಳ ಮುಖದ ಮೇಲೆ ತುಂಟ ನಗೆ ಮಿನುಗುತ್ತಿತ್ತು. ತುಟಿಗಳು ಸ್ವಲ್ಪವೇ ತೆರೆದು ಅರೆಬಿರಿದ ಗುಲಾಬಿಯಂತೆ ಕಾಣುತ್ತಿದ್ದವು. ಮೊದಲೇ ಸುಂದರವಾದ ಮುಖಕ್ಕೆ ಕಪ್ಪು ಹಚ್ಚಿದ ಕಣ್ಣುಗಳು ಅರಳಿ ನಿಂತು ಮತ್ತಷ್ಟು ಮೆರಗು ನೀಡಿದ್ದವು. ಈ ರೂಪಸಿಯನ್ನು ನೋಡಿ, ಮರದಡಿಯಲ್ಲಿ ನಿಂತು ತನ್ನ ಚಂಡಾಳಚಾರಡಿಯ ಗ್ಯಾಂಗಿನೊಂದಿಗೆ ನಿಂತ ಜಗನ್ನಾಥ ಎದೆಯುವ

ದೀಪಾಳಿ ಕ್ಕೈ ಎಲ್ಲಾ ಉರಿದುಹೋಯಿತು. ಹೊರಳಿ ನಿಂತು ನಾಲ್ಕು ಹೆಜ್ಜೆ ಮುಂದೆ ಬಂದು ಜನಾರ್ಥನನ ಮುಖಕ್ಕೆ ಚೆನ್ನಾಗಿ ಉಗುಳಿ "ಮನೇಲಿ ನಿನ್ನ ತಂಗಿ ತಾಯಿ ಇರಬೇಕಲ್ಲ.... ಅವರನ್ನೂ ಒಂದು ಸಾರಿ ಮಜಾ ಮಾಡು ... ಆಮೇಲೆ ಬೇಕಾದ್ರೆ ನಾನು ಬರತೀನಿ' ಎಂದಳು.

ಜನಾರ್ಧನನ ಮುಖ ಚಪ್ಪೆ ಇಳಿದುಹೋಯಿತು. ಅವನ ಗೆಳೆಯರ ಗುಂಪು ನಕ್ಷತ್ರದ ಹಾಗೆ ನಿಂತುಬಿಟ್ಟರು ಜನಾರ್ಧನನಿಗೆ ಈ ರೀತಿ ಅವಮಾನ ಆದುದು ಅವನೆಂದೂ ಕಂಡಿರಲಿಲ್ಲ ಕೇವಲ ಅವಮಾನವಲ್ಲ ಉರುಳು ಹಾಕಿಕೊಂಡು ಸಾಯುವಂಥ ಅವಮಾನ.

ಜನಾರ್ಧನ ಕೆರಳಿದ ಸರ್ಪವಾದ... ಸೇಡು ತೀರಿಸಿಕೊಳ್ಳಲು ಸಮಯ ಕಾಯುತೊಡಗಿದ. ಅವನು ಬಯಸಿದ ಸಮಯ ಮರುದಿನವೇ ಕೂಡಿತು. ರೋಜಿ ಜನಾರ್ಧನನ ಪ್ರೇಯಸಿ ದುಡ್ಡಿಗಾಗಿ ಬೇಕಾದ್ದನ್ನು ಮಾಡಲು ಸಿದ್ಧಳಿದ್ದವಳು. ಕಳೆದ ಎರಡು ವರ್ಷಗಳಿಂದ ಜನಾರ್ಧನ ಹಾಗೂ ಅವನ

ಗೆಳೆಯರಿಗೆ ವಿವಿಧ ರೀತಿಯ ಮನರಂಜನೆ ಒದಗಿಸುತ್ತಿರುವ ಪಾತರಗಿತ್ತಿ.... ದುಡ್ಡಿಗಾಗಿ ಬೇಕಾದ ಕೆಲಸ ಮಾಡಲು ಸಿದ್ಧಳಿದ್ದವಳು.. ಒಂದು ಸಾವಿರ ರೂಪಾಯಿ ಅವಳ ಕೈಗೆ ಬಿದ್ದಾಗ ಯೋಜನೆ ರೂಪುಗೊಂಡಿತು.

ಕಾಲೇಜಿನಿಂದ ಸ್ವಲ್ಪ ಅಂತರದಲ್ಲಿ ಇರುವದು ಚಿಕ್ಕ ತೋಟ. ನಾಲ್ಕಾರು ಮಾವಿನ ಮರಗಳು ಗುತ್ತಾಗಿ ಬೆಳೆದು ಅದು ಕದ್ದು ಪ್ರೇಮಿಸುವ ಪ್ರೇಮಿಗಳಿಗೆ ಪ್ರಶಸ್ತ ಸ್ಥಳವಾಗಿತ್ತು. ಸಂಜೆಗೆ ಮತ್ತು ಮಧ್ಯಾಹ್ನ.. ಪ್ರಶಾಂತವಾದ ಸ್ಥಳದಲ್ಲಿ ಕುಳಿತು ಓದಬೇಕೆನ್ನುವ ವಿದ್ಯಾರ್ಥಿಗಳು ಅಲ್ಲಿ ಬರುತ್ತಿದ್ದರು. ಆದರೆ ಸಂಜೆ ನಾಲ್ಕು ಗಂಟೆಯಾಯಿತೆಂದರೆ ಒಂದು ರೀತಿಯಿಂದ ಬಿಕೋ ಅನ್ನುತ್ತಿತ್ತು..

ರೋಜಿ ತನ್ನ ಇಬ್ಬರು ಗೆಳತಿಯರೊಂದಿಗೆ ದೀಪಾಳನ್ನು ಹಿಡಿದರು. ಒಂದು ಚಾಪ್ಟರ್ ಸರಿಯಾಗಿ ಅರ್ಥವಾಗಿಲ್ಲ ಅದನ್ನು ತಿಳಿಸಿಕೊಡು ಎಂದು ಹೇಳಿ ಈಗ ಸಮಯವಾಗಿದೆ ನಾಳೆ ತಿಳಿಸುವೆ ಎಂದಾಕೆ ಎಷ್ಟು ರೀತಿಯಿಂದ ವಿನಂತಿಸಿಕೊಂಡರೂ ಕೇಳದೇ ಆಕೆಯನ್ನು ಮಾವಿನ ತೋಪಿನತ್ತ ಎಳೆದೊಯ್ದರು

ಅಪ್ಪಾಜಿಯವರ ಆರೋಗ್ಯ ಕೆಟ್ಟಿದ್ದರಿಂದ ಅವರನ್ನು ನೋಡಲು ಹೊರಟಿದ್ದ ಅವನು, ಹೋಗುವಾಗ ದೀಪಾಳನ್ನು ಕರೆದುಕೊಂಡು ಹೋದರಾಯಿತೆಂದು ತಿಳಿದು, ಅವಳ ಕ್ಲಾಸಿನತ್ತ ಬರುತ್ತಿರುವಾಗ ದೀಪಾ ರೋಜಿ ಹಾಗೂ ಅವಳ ಗೆಳತಿಯರೊಂದಿಗೆ ಮಾವಿನ ತೋಪಿನತ್ತ ಹೋಗುತ್ತಿರುವದನ್ನು ಕಂಡು ಅವನ ಹುಬ್ಬುಗಳು ಗಂಟಿಕ್ಕಿದವು. ಕೂಗಿ ನಿಲ್ಲಿಸಬೇಕೆಂದರೆ, ದೂರದಲ್ಲಿದ್ದ ಆಕೆಗೆ ಕೇಳಿಸುತ್ತಿರಲಿಲ್ಲ. ಅಲ್ಲದೇ ಅವಳ ಹೆಸರು ಹಿಡಿದು ಕೂಗಿದರೆ ಮತ್ತೊಂದು ಅವಾಂತರವಾದೀತೆಂದು, ಆಕೆ ಹೋದತ್ತ ಆತ ಹಿಂಬಾಲಿಸಿದ.

ಹಸಿದ ಹೆಬ್ಬುಲಿ ಜಿಂಕೆಯನ್ನೇ ಕಾಯುತ್ತ ಮರದ ಹಿಂದೆ ಅಡಗಿ ನಿಂತಿದ್ದ ಜನಾರ್ಧನ. ದೀಪಾ ಮರದ ಬಳಿ ಬರುತ್ತಲೂ ಅವರೆದುರು ಕಾಣಿಸಿಕೊಂಡ. ಭೀತರಾದ ಗೆಳತಿಯರು "ರೋಜಿ....ನಮಗೆ ಹೊತ್ತಾಯ್ತಮ್ಮಾ... ನಾವು ಬರುತ್ತೇವೆ" ಎಂದು ಏನೇನೋ ನೆವ ಹೇಳಿ ಹೊರಟುಹೋದರು. ರೋಜಿ ಸಹಿತ ಅವರ ಹಿಂದೆಯೇ ನಡೆದಳು. ಮೊದಲೇ ಮಾತನಾಡಿಕೊಂಡಂತೆ ಜನಾರ್ಧನನ ಕೈಗೆ ಸಿಕ್ಕಿಹಾಕಿಕೊಂಡವಳ ದೀಪಾ ಮಾತ್ರ....

ತಾನು ಪೂರ್ವ ನಿಯೋಜಿತ ಬಲೆಯಲ್ಲಿ ಸಿಕ್ಕಿ ಹಾಕಿಕೊಂಡಿರುವೆ ಎಂದಂತೆ. ಆಕೆ ಬಲೆಯಿಂದ ಪಾರಾಗಲು ಯೋಚಿಸತೊಡಗಿದಳು.

ಕೂಗಿಕೊಳ್ಳುವಂತಿಲ್ಲ.....ಕೂಗಿಕೊಂಡರೂ ಧ್ವನಿ ದೂರದವರೆಗೂ ಕೇಳಿಸಲಾರದು ...ಕೇಳಿಸಿದರೂ ಯಾರು ಸಹಾಯಕ್ಕೆ ಬರುವಂತಿಲ್ಲ.....ಆಗಲೇ ಎಲ್ಲ ವಿದ್ಯಾರ್ಥಿಗಳು ಹೊರಟು ಹೋಗಿದ್ದಾರೆ....ಅಲ್ಲದೇ ಕೂಗಿಕೊಳ್ಳುವುದರಿಂದ ಮರ್ಯಾದೆಗೆ ಕುಂದು....ನಾಲಗೆಯಿಲ್ಲದ ಜಗತ್ತು ತಲೆಗೊಂದು ಗೂಟ ಕಟ್ಟಿ ಕೂಡಿಸಲು ಹಿಂದೆ ಮುಂದೆ ನೋಡಲಾರದು. ಏನು ಮಾಡುವದು ? ಎಂದಾಕೆ ಯೋಚಿಸುತ್ತಿದಂತೆ ಅವಳಮೇಲೆ ಹಾರಿದ್ದ ಜನಾರ್ಧನ. ಅವನಿಂದ ಆಕೆ ತಪ್ಪಿಸಿಕೊಂಡರೂ ಅವನ ಕೈಗೆ ಆಕೆಯ ಸೀರೆ ಸೆರಗು ಸಿಕ್ಕಿಬಿಟ್ಟಿತು. ಜನಾರ್ಧನ ದುಃಶಾಸನನಾಗಲು ಹಿಂದೆಮುಂದೆ ನೋಡಲೇ ಇಲ್ಲ. ಒಂದು ಕ್ಷಣದಲ್ಲಿಯೇ ದೀಪಾಳ ವಸ್ತ್ರಾಪಹರಣ ನಡೆದು ಹೋಯಿತು. ತನ್ನೆರಡೂ ಕೈಗಳಿಂದ ಮಾನವ ಮುಚ್ಚಿಕೊಳಲು ಪ್ರಯತ್ನಿಸಿದ ದೀಪಾ ದೀನಳಾಗಿ ಬೇಡಿದಳು.

"ಜನಾರ್ಧನ ನಿನಗೆ ಕೈ ಮುಗಿಯುತ್ತೇನೆ ನಾನು ನಿನ್ನ ತಂಗಿಯ ಸಮಾನ .. ದಯವಿಟ್ಟು ಕೈ ಮುಗಿಯುತ್ತೇನೆ ನನ್ನ ಬಿಟ್ಟು ಬಿಡು....."

"ತಂಗಿ....? " ಅಟ್ಟಹಾಸ ಮಾಡಿ ನಕ್ಕು ಜನಾರ್ಧನ ನುಡಿದ. "ಮನೆಯಲ್ಲಿರುವ ನನ್ನ ತಂಗಿಯೊಬ್ಬಳನ್ನೇ ನಾನು ತಂಗಿ ಎಂದು ತಿಳಿದಿರುವದು ?...."

"ಏಕೆ ಅವಳನ್ನು ಸಹ ನಿನ್ನ ಕಾಮಪಿಪಾಸೆ ತೀರಿಸುವ ಒಂದು ಹೆಣ್ಣೆಂದು ಏಕೆ ತಿಳಿಯಬಾರದು ?" ಗುಡುಗಿನಂತೆ ಬಂದ ಧ್ವನಿಗೆ ಜನಾರ್ಧನ ಹಿಂತಿರುಗಿ ನೋಡಿದ. ಅಮರ ಅವನೆದುರು ಕಾಲಯಮನಂತೆ ನಿಂತಿದ್ದ. ಅವನ ಕಣ್ಣುಗಳು ಕೆಂಪಗಾಗಿ ಕೆಂಡದುಂಡೆಯಂತೆ ಕಾಣುತ್ತಿದ್ದವು. ಮೂಗಿನ ಹೊರಳೆಗಳು ಉಬ್ಬಿದ್ದವು. ಕೆಳದುಟಿಯನ್ನು ಕಚ್ಚಿ ಹಿಡಿದು ಫೂತ್ಕರಿಸುತ್ತಿದ್ದ ಅವರನನ್ನು ನೋಡಿ, ದೀಪಾಳಿಗೆ ಜೀವದಲ್ಲಿ ಜೀವ ಬಂದಂತಾಯಿತು. "ಅಮರ.... ಅಮರ .. " ಎಂದು ಕೂಗುತ್ತಾ ಓಡಿಬಂದು ಅವನನ್ನು ತಬ್ಬಿದಳು. ಜನಾರ್ಧನ ಅವಳನ್ನು ಹಿಡಿಯಲು ಮುಂದೆ ಬಂದ.

ನಿಂತ ಸ್ಥಳದಿಂದ ಸ್ವಲ್ಪ ಮುಂದೆ ಬಂದ, ಅಮರನ ಮೊಣಕಾಲು ಮೇಲೆ ಬಂದಿತು. ಮೊಣಕಾಲಿನ ಭಾರೀ ಪ್ರಹಾರ ಜನಾರ್ಧನನ ಮರ್ಮಾಂಗಕ್ಕೆ

ಬಿದ್ದಾಗ ಆತ ವಿಕಾರವಾಗಿ ಚೀರಿಕೊಂಡ. ಎರಡೂ ಕೈಗಳನ್ನು ತೊಡೆಸಂದಿಯಲ್ಲಿ ಸಿಕ್ಕಿಸಿಕೊಳ್ಳುತ್ತಿರುವಂತೆ ಹಾರಿ ನೆಗೆದ ಅಮರನ ಒದೆ— ಅವನ ಎದೆಯ ಮೇಲೆ—ನಾಲ್ಕು ಮಾರು ದೂರ ಉರುಳಿ ಬಿದ್ದ. ಆತನಿಗೆ ಮುಂದೆ ಏಳಲಾಗಲಿಲ್ಲ.

ಅಮರ ದೀಪಾಳ ಕಡೆ ಹೊರಳಿ ಅಲ್ಲಿಯೇ ಬಿದ್ದಿದ್ದ ಸೀರೆ ಎತ್ತಿ ಅವಳಿಗೆ ಎತ್ತಿ ನೀಡಿದ.....ಎರಡೇ ನಿಮಿಷಗಳಲ್ಲಿ ಅವರು ಮನೆ ಕಡೆ ನಡೆದಿದ್ದರು.

ಅಪ್ಪಾಜಿಯವರನ್ನು ಮಾತನಾಡಿಸಿ, ಒಂದರ್ಧ ಗಂಟೆ ಕುಳಿತು ನಂತರ ಅಮರ ಹಾಗೂ ದೀಪಾ ಕೂಡಿಕೊಂಡು ದೀಪಾಳ ಮನೆಗೆ ಬಂದು ವರದರಾಜು ಪತ್ರಿಕೆ ನೋಡುತ್ತ ಕುಳಿತವರು ಅವರನ್ನು ನೋಡಿ 'ಹಾಯ್ ಹೀರೊ' ಅಂದರು. ಅಮರ ತಲೆತಗ್ಗಿಸಿದ. ದೀಪಾ ಕಾಫಿ ತರುತ್ತೇನೆ ಎಂದು ಹೇಳಿ ಒಳಗೆ ಹೋಗಬೇಕು ಎನ್ನುವಷ್ಟರಲ್ಲಿಯೇ ಹೊರಗಡೆ ಜೀಪು ಬಂದು ನಿಂತ ಸಪ್ಪಳ.....ಅದರ ಹಿಂದೆ ಭಾರೀ ಬೂಟಿನ ಧ್ವನಿ. ಮುಂದೆ ಮುಂದೆ ಓರ್ವ ಎಸ್ಪಿ.ನ ಕಡೆ ನೋಡಿ, 'ವರದರಾಜು ಏನು ಸಮಾಚಾರ !' ಎಂದು ಕೇಳಿದರು. ಪಿ.ಎಸ್.ಪಿ.ಗೆ ವರದರಾಜು ಯಾರು ? ಅವರ ಸ್ಥಾನಮಾನ ಏನು ?ಅನ್ನೋದು ಚೆನ್ನಾಗಿ ಗೊತ್ತು......ವಿನೀತನಾಗಿ ನುಡಿದ,

"ದಯವಿಟ್ಟು ಕ್ಷಮಿಸಿ ಸರ್ ...ನಾನು ಅಮರನನ್ನು ಅರೆಸ್ಟ್ ಮಾಡಲು ಬಂದಿರುವೆ."

ಒಂದು ಕ್ಷಣ ವರದರಾಜುವಿಗೆ ಕಣ್ಣಿಗೆ ಕತ್ತಲೆ ಬಂದಂತಾಯಿತು. ನಂತರ ಸುಧಾರಿಸಿಕೊಂಡು,

"ಏಕೆ ?" ಎಂದು ಕೇಳಿದರು.

"ಕಾಲೇಜಿನಲ್ಲಿ ಜನಾರ್ಧನ ಎಂಬುವನ ಮೇಲೆ ಹಲ್ಲೆ ಮಾಡಿದ ಆರೋಪವಿದೆ ಸಾರ್......ಸಧ್ಯ ಜನಾರ್ಧನ ಹಾಸ್ಪೆಟಲಿಗೆ ಸೇರಿಸಲಾಗಿದೆ."

"ಜನಾರ್ಧನ ಎಂದರೆ ಯಾರು ? ಅವನಿಗೂ ಅಮರನಿಗೂ ಏನು ಸಂಬಂಧ ."

"ಜನಾರ್ಧನ ಹಾಗೂ ಅಮರ ಒಂದೇ ಕಾಲೇಜಿನಲ್ಲಿ ಓದುತ್ತಿದ್ದಾರೆ ಜನಾರ್ಧನ...." ಒಂದು ಕ್ಷಣ ತಡೆದು ಪಿ.ಎಸ್.ಐ. ಮುಂದುವರೆಸಿದ....

"ಸಚಿವರ ಹೆಂಡತಿ ತಮ್ಮ ಸರ್......"

ಅಮರನ ಸ್ವಭಾವ ವರದರಾಜುಗೆ ಚೆನ್ನಾಗಿ ಗೊತ್ತು. ಎಂದೂ ಅಪ್ಪಿ ತಪ್ಪಿಯೂ ಸಹ ಅಮರ ಕೆಟ್ಟ ಕೆಲಸ ಮಾಡಿರಲಿಲ್ಲ. ಈ ಸುದ್ದಿ ಸುಳ್ಳು ಇರಬೇಕು. ಇಲ್ಲಾ ಇದಕ್ಕೆ ಏನಾದ್ರೂ ಪ್ರಬಲ ಕಾರಣವಿರಬೇಕು ಎಂದುಕೊಂಡ ಅವರು ಪಿ.ಎಸ್.ಐ. ಗೆ ಕೂತುಕೊಳ್ಳಲು ಹೇಳಿ ಅಮರನ ಕಡೆ ಹೊರಳಿ .... "ಏನು ಅಮರ ಇದೆಲ್ಲ ನಿಜವೇ ?' ಎಂದು ಕೇಳಿದರು. ಒಂದು ಬಾರಿ ಅಮರ ದೀಪಾಳ ಕಡೆ ನೋಡಿ "ಹೌದು ಸರ್ ನಿಜ" ಎಂದ ವರದರಾಜುವಿಗೆ ನಂಬಿಕೆಯೇ ಆಗಲಿಲ್ಲ.... "ನಾನು ನಂಬಲಾರೆ ಅಮರ." ಎಂದಾಗ ಅಮರ ಹೇಳಿದ "ಇದು ನಿಜ ಸಾರ್ ಯಾವುದೋ ಒಂದು ವಿಷಯದ ಬಗ್ಗೆ ನನಗೂ ಅವನಿಗೂ ತಂಟೆ ಬಂತು. ನಾನೆರಡು ಒದೆ ಕೊಟ್ಟೆ" ಅಷ್ಟರಲ್ಲಿ ದೀಪಾ ಹೇಳಿದಳು "ಡ್ಯಾಡಿ... ಅಮರ ಹೇಳಿದ್ದು ನಿಜ ಆತ ಜನಾರ್ಧನನಿಗೆ ಹೊಡೆದದ್ದು ನಿಜ. ನನ್ನ ಕೇಳಿದರೆ... ಜನಾರ್ಧನನಂಥವನನ್ನು ಜೀವಸಹಿತ ಬಿಡಬಾರದು..... ಇಂದು ಅಮರ ಬರದಿದ್ದರೆ ನನ್ನ ಗತಿ ಏನಾಗುತ್ತಿತ್ತೋ."

ಅಳುತ್ತಳುತ್ತ ದೀಪ ಎಲ್ಲ ವಿಷಯ ಹೇಳಿ ಮುಗಿಸಿದಾಗ, ವರದರಾಜುವ ಕಣ್ಣುಗಳಲ್ಲಿ ನೀರಾಡಿತು ಅವರು ದೀಪಾಳ ಚಾರಿತ್ರ್ಯಕ್ಕೆ ಕಳಂಕ ಬಾರದಿರಲೆಂದು ತಪ್ಪು ತನ್ನ ಮೇಲೆ ತೆಗೆದುಕೊಂಡುದನ್ನು ಕಂಡು ಹೆಮ್ಮೆಯಿಂದ ಅವನ ಬಗ್ಗೆ ಅವರಲ್ಲಿ ಅಪಾರ ಗೌರವ ಮೂಡಿ ಬಂದಿತು. ಪ್ರೀತಿಯಿಂದ ಅವನನ್ನು ಅಪ್ಪಿಕೊಂಡ ಅವರು "ಅಮರ ನೀನು ಸಾಮಾನ್ಯನಲ್ಲ" ಎಂದರು. ನಂತರ ಪಿ.ಎಸ್ ಐ. ಕಡೆ ಹೊರಳಿ "ಸಚಿವರ ಫೋನ್ ನಂಬರ್ ಇದೆಯಾ?" ಎಂದು ಕೇಳಿದರು. ಅವರಿಗೆ ನಂಬರ್ ದೊರೆಯಿತು ತಕ್ಷಣ... ವರದರಾಜು ರಿಂಗ್ ಮಾಡಿದರು.

ಆಕಡೆಯಿಂದ ಫೋನು ಎತ್ತಿದವರು ಸಚಿವರ ಕಾರ್ಯದರ್ಶಿ. ನಂತರ ಸಚಿವರೊಡನೆ ಸಂಪರ್ಕ ನೀಡಲಾಯಿತು ವರದರಾಜು ಸಚಿವರೊಡನೆ ಸ್ವಲ್ಪ ಖಾರವಾಗಿ ನುಡಿದು ಕೊನೆಗೆ ಒಂದು ವೇಳೆ ಅಮರನ ಮೇಲೆ ಕಾರ್ಯ ಕ್ರಮ ತೆಗೆದುಕೊಂಡರೆ ಈ ವಿಷಯ ಅಸೆಂಬ್ಲಿಯಲ್ಲಿ ನಾನೇ ಎತ್ತುವಂತೆ ವಿರೋಧ ಪಕ್ಷದ ಧುರೀಣರಿಗೆ ಹೇಳುತ್ತೇನೆ ಎಂದರು. ಪ್ರಕರಣ ಅಲ್ಲಿಗೇ ಮುಗಿಯಿತು. ಫೋನಿನಲ್ಲಿಯೇ ಪಿ ಎಸ್. ಐ. ಗೆ ಸಚಿವರು ಕಂಪ್ಲೆಂಟ್ ಹಿಂದಕ್ಕೆ ಪಡೆಯಲು ನಾನು ಜನಾರ್ಧನನಿಗೆ ಹೇಳುತ್ತೇನೆ..... ನೀವು ಹೋಗಿ ಎಂದು ಸಚಿವರು

ಆದೇಶ ನೀಡಿದರು.

ಅಮರ ವರದರಾಜುವಿನ ಕಾಲು ಹಿಡಿದುಕೊಂಡು "ಸರ್ ನೀವು ನನ್ನನ್ನ ಕಾಪಾಡಿದಿರಿ ಸರ್.... ನಿಮ್ಮ ಉಪಕಾರ ಹೇಗೆ ತೀರಿಸಲಿ ?" ಎಂದ ಗದ್ಗದ ಕಂಠದಿಂದ. ವರದರಾಜು ಅವನ ರಟ್ಟೆ ಹಿಡಿದು ಮೇಲೆಬ್ಬಿಸಿ "ಅಮರ ನೀನು ನನ್ನ ಮನೆತನದ ಮರ್ಯಾದೆ ಉಳಿಸಿದೆ.... ಆ ಋಣ ನಾನು ಹೇಗೆ ತೀರಿಸಲಿ ಹೇಳು ?" ಎಂದರು. ಹರ್ಷದಿಂದ ಕಣ್ಣೀರು ಒರೆಸಿಕೊಂಡ ದೀಪಾ ನಗುತ್ತಾ, "ಒಂದು ಕಪ್ ಕಾಫಿ ಕೊಟ್ಬು ಡ್ಯಾಡಿ." ಎಂದಾಗ ಮೂವರೂ ನಗು ಮರೆತು ಜೋರಾಗಿ ನಕ್ಕರು ಮನತುಂಬಿ.

ಅಮರ ಮನೆಗೆ ಬಂದಾಗ ರಾತ್ರಿ ಎಂಟು ಹೊಡೆದಿತ್ತು. ಸುಂದರಮ್ಮ ಸ್ವಲ್ಪ ಬದಲಾಯಿಸಿದ್ದರು. ಅಮರನ ಬಗೆಗಿದ್ದ ಜಿಗುಪ್ಸೆ... ತಿರಸ್ಕಾರ ಈಗ ಅವರಲ್ಲಿರಲಿಲ್ಲ. ವಸಂತ ಕೈ ಕೊಟ್ಬು ಹೋದ ನಂತರವಂತೂ ಅವರೂ ಅರ್ಧ ಕ್ಕರ್ಧ ಇಳಿದು ಹೋಗಿದ್ದರು. ಅಮರನ ಅರ್ಧ ಕೆಲಸ ಕಡಿಮೆಯಾಗಿದ್ದವು. ಊಟಕ್ಕೆ ಬಿಸಿಬಿಸಿ ಅಡಿಗೆ ದೊರೆಯುತ್ತಿತ್ತು.

ರಾಮರಾಯರು ಇನ್ನೂ ಬಂದಿರಲಿಲ್ಲ. ಸುಂದರಮ್ಮ ಕಣ್ಣೀರುಹಾಕುತ್ತಾ ಕುಳಿತಿದ್ದರು. ರತ್ನಾ ಕೈಲಿ ಪುಸ್ತಕ ಹಿಡಿದು ಓದಲಾರದೆ ಹಾಗೇ ಯೋಚಿಸುತ್ತಾ ಕುಳಿತಿದ್ದಳು ಆಗಬಂದ ಅಮರನಿಗೆ ಸ್ವಲ್ಪ ಗಾಬರಿಯಾಯಿತು. "ಏಕೆ ಚಿಕ್ಕಮ್ಮಾ ? ಏನಾಯ್ತು !" ಎಂದು ಕೇಳಿದ. ಸುಂದರಮ್ಮ ಅಳುತ್ತಾ ತಿಳಿಸಿದರು. "ಮಾಲತಿ ಗಂಡ ಸುಂದರನನ್ನು ಆಸ್ಪತ್ರೆಗೆ ಸೇರಿಸಿದ್ದಾರೆಂದು." ಅಮರನಿಗೂ ಈ ಸುದ್ದಿ ಕೇಳಿ ದುಃಖವಾಗದೆ ಇರಲಿಲ್ಲ.

ರಾತ್ರಿ ಹತ್ತು ಗಂಟೆಯಾದಾಗ ರಾಮರಾಯರು ಬಂದರು. ಅವರಿಗೂ ಸಮಾಚಾರ ತಿಳಿದು ಸ್ವಲ್ಪ ಹೊತ್ತು ತಲೆಯ ಮೇಲೆ ಕೈ ಹೊತ್ತು ಕುಳಿತವರು ನಂತರ ಜಾಗೃತರಾದರು. ಮರು ದಿನ ಅಮರ ಸುಂದರಮ್ಮನವರನ್ನು ಕರೆದು ಕೊಂಡು ಮಾಲತಿಯ ಊರಿಗೆ ಹೋಗುವುದೆಂದು ನಿರ್ಧಾರವಾಯಿತು.

# 8.

ಅಮರ ಸುಂದರಮ್ಮನವರ ಜೊತೆಗೆ ಮಾಲತಿಯ ಊರಿಗೆ ಹೋಗುತ್ತಿದ್ದಂತೆ ಅಂದು ಬೆಳಿಗ್ಗೆಯೇ ಫುಟ್ ಬಾಲ್ ಟೀಮಿನ ಆಯ್ಕೆ ಪಟ್ಟಿ ಹೊರ ಬಿದ್ದಿತು. ಇಪ್ಪತ್ತೊಂದು ಜನರ ಹೆಸರುಗಳು . ಅವರಲ್ಲಿ ಹದಿನೈದು ದಿನ ಬಿಟ್ಟು ನಾಯಕನನ್ನು ಹಾಗೂ ಅಂತಿಮ ಆಟಗಾರರನ್ನು ಆರಿಸುವುದಾಗಿ ತಿಳಿಸಲಾಗಿತ್ತು... ಆಯ್ಕೆ ಹೊಂದಲ್ಪಟ್ಟವರ ಹೆಸರು ಅಂಟಿಸಲಾಗಿದೆ ಎಂದು ತಿಳಿಯುತ್ತಲೂ ಕ್ರೀಡಾ ಕೂಟ ಆಫೀಸಿಗೆ ಧಾವಿಸಿದಳು. ಹೊರಗಡೆಯಲ್ಲಿ ನೋಟಿಸ್ ಬೋರ್ಡಿಗೆ ಲಿಸ್ಟ್ ತಗಲಿಸಲಾಗಿತ್ತು . ಇಪ್ಪತ್ತೊಂದು ಹೆಸರುಗಳಲ್ಲಿ ಅಮರನ ಹೆಸರೇ ಇರಲಿಲ್ಲ. ಎಂಥ ಆಘಾತ ! ನಾಯಕನಾಗಿ ಆಯ್ಕೆಯಾಗಬೇಕಾದವನ ಹೆಸರು ಪಟ್ಟಿಯಲ್ಲಿಯೇ ಇಲ್ಲವೆಂದರೆ ! ...ಅವಳ ಆಶೆಗೋಪುರ ಕುಸಿದು ಬೀಳುತ್ತಿದ್ದಂತೆ ಅಮರನ ಮುಖ ಅವಳೆದುರು ತೇಲಿಬಂತು. ಕರವಸ್ತ್ರದಿಂದ ಕಣ್ಣೀರು ಒರೆಸಿಕೊಳ್ಳುತ್ತ ರಿಕ್ಷಾದಲ್ಲಿ ಆಕೆ ಮನೆ ಸೇರಿದಳು ವರದರಾಜು ಯಾವುದೋ ಕೆಲಸದನಿಮಿತ್ತ ಬೇರೆ ಊರಿಗೆ ಹೋದವರು ರಾತ್ರಿ ಬರುವವರಿದ್ದರು ದೀಪಾ ಕೋಣೆಯಲ್ಲಿ ಬಾಗಿಲು ಹಾಕಿಕೊಂಡು ಮಲಗಿದ್ದವಳು......ಊಟಕ್ಕೂ ಹೊರಗೂ ಬರಲಿಲ್ಲ ತಿಂಡಿಗೂ ಹೊರಗೆ ಬರಲಿಲ್ಲ.... ಅಡಿಗೆಯವ, ಕೆಲಸದಾಕೆ ಇಬ್ಬರೂ ಒಂದೇ ಸಮನೆ ದೀಪಾಳನ್ನು ಕರೆದುಕರೆದು ಬೇಸತ್ತರು ಆಕೆ ಬಾಗಿಲು ತೆಗೆದು ಹೊರಗೆ ಬರುವುದು ದೂರ.... ಒಳಗಿನಿಂದಲೇ "ನಾನೊಲ್ಲೆ" ಎಂದು ಸಹ ಉತ್ತರ ನೀಡಲಿಲ್ಲ....ಕೇವಲ ಆಕೆಯ ಬಿಕ್ಕಳಿಕೆ ಅಷ್ಟೇ ಕೇಳಿ ಬರುತ್ತಿತ್ತು

ವರದರಾಜು ಅವರು ಮನೆಗೆ ಬಂದಾಗ ರಾತ್ರಿ ಹತ್ತುವರೆ. ದೀಪಾ ಆಗಲೇ ಮಲಗಿಕೊಂಡಿರಬಹುದು ಎಂದು ತಿಳಿದುಕೊಂಡು ಬಂದ ಅವರಿಗೆ ಅಡಿಗೆಯಾಕೆ ವರದಿ ಸಲ್ಲಿಸಿದಾಗ....ಬೂಟು ಸಹ ಬಿಚ್ಚದೇ ಹಾಗೇ ದೀಪಾಳ

ಕೋಣೆ ಕಡೆ ಧಾವಿಸಿದರು.

"ದೀಪಾ ...ದೀಪಾ....ಬಾಗಿಲು ತೆಗೆಯಮ್ಮ ...ನಾನು ಬಂದಿದ್ದೇನೆ..." ಡ್ಯಾಡಿಯ ಧ್ವನಿ ಕೇಳಿ...ಬಾಗಿಲು ತೆಗೆದ ದೀಪಾ ತಂದೆಯನ್ನ ಅಪ್ಪಿಕೊಂಡು ಹಸುಗೂಸಿನಂತೆ ದೊಡ್ಡ ಧ್ವನಿ ತೆಗೆದು ಅತ್ತುಬಿಟ್ಟಳು. ಗಾಬರಿಯಿಂದ ವರದ ರಾಜು ಅವರ ಹೃದಯ ಒಡೆದುಹೋಯಿತು. ಆಕೆಯನ್ನು ಸಮಾಧಾನ ಪಡಿಸಿದಷ್ಟು ಆಕೆ ಜೋರಾಗಿ ರೋಧಿಸುತ್ತಿದ್ದಳು ವರದರಾಜು ಸೋತು ಸಣ್ಣಗಾಗ ಹತ್ತಿ ಹತ್ತು ಹದಿನೈದು ನಿಮಿಷಗಳು...ದೀಪಾ ನಾರ್ಮಲ್‌ಗೆ ಬಂದಿದ್ದಳು ಬಾಥರೂಮಿಗೆ ಹೋಗಿ ಮುಖ ತೊಳೆದು ಬಂದಳು. ವರದ ರಾಜು ಅವಳಿಗೆ ಕುಡಿಯಲು ಒಂದು ಗ್ಲಾಸು ತಣ್ಣೀರು ಕೊಟ್ಟರು. ನೀರು ಕುಡಿದ ಮೇಲೆ ದೀಪಾ ಶಾಂತಳಾದಳು. ಉದ್ವಿಗ್ನತೆ ಕಡಿಮೆಯಾಗಿತ್ತು. ನಿಧಾನವಾಗಿ ವಿಷಯ ತಿಳಿಸಿದಳು. ವರದರಾಜು ಅವರಿಗೂ ಶಾಕ್ ಹೊಡೆದಂತಾಯಿತು. ಮರುಕ್ಷಣ ಅವರ ಸಿಟ್ಟು ಬೆಂಕಿಯಾಗಿ....ಫೋನಿದ್ದ ಮೇಜಿನೆಡೆ ಹೋಗಿ ಸೆಲೆಕ್ಷನ್ ಕಮಿಟಿ ಚೇರ್‌ಮನ್‌ರ ಮನೆಗೆ ಫೋನ್ ಮಾಡಿದರು. ಫೋನು ಎತ್ತಿದವ ಅವರ ಪಿ ಎ. ನಂತರ ಕನೆಕ್ಷನ್ ಚೇರ್‌ಮನ್‌ರಿಗೆ ಕೊಡಲಾಯಿತು. ಒಂದೇ ಧನಿಯಲ್ಲಿ ವರದರಾಜು ಚೇರಮನ್‌ರನ್ನು ತರಾಟೆಗೆ ತೆಗೆದುಕೊಂಡರು. ವರದರಾಜು ಅವರ ಮಾತು ಮುಗಿಯುವವರೆಗೆ ಸುಮ್ಮನಿದ್ದ ಚೇರ್‌ಮನ್‌ರು ನಂತರ ನುಡಿದರು

"ನೋಡಿ ವರದರಾಜುವರೆ, ಕೇವಲ ನಾನಷ್ಟೆ ಅಲ್ಲ ನಾಲ್ಕು ಜನ ಕಮಿಟಿ ಮೆಂಬರರು ಅಮರನನ್ನೇ ನಾಯಕ ಮಾಡಲು ಮತ ನೀಡಿದ್ದೇವು. ಅದೂ ಒಪ್ಪಿಯೂ ಕೂಡಾ ಆಗಿತ್ತು. ಅಷ್ಟರಲ್ಲಿ ಸಚಿವರ ಫೋನು ಬಂದಿತು. ಟೀಮಿನ ನಾಯಕನೆಂದು ಅವರ ಸಂಬಂಧಿ ಜನಾರ್ಧನನ್ನು ಆಯ್ಕೆ ಮಾಡು.... ಟೀಮಿನಿಂದ ಅಮರನ ಹೆಸರು ತೆಗೆದು ಹಾಕಿರಿ ಎಂದು. ಈಗ ನೀವೇ ಹೇಳಿ ... ನಾವು ಏನು ಮಾಡಬೇಕು ? ನಮ್ಮ ಕಮಿಟಿ ಸಚಿವರ ಕೆಳಗೆ ಕೆಲಸಮಾಡುವಂತಹದು. ಸ್ವತಂತ್ರವಾಗಿ ನಿರ್ಣಯ ತೆಗೆದುಕೊಳ್ಳುವ ಹಕ್ಕು ನಮಗಿಲ್ಲ. ಕೇವಲ ಸೂಚಿಸುವುದು ಮಾತ್ರ ನಮ್ಮ ಕೆಲಸ... ನಮ್ಮ ಕರ್ತವ್ಯ ನಾವು ಮಾಡಿದೆವು...

ವರದರಾಜು ಗಾದಿಯ ಮೇಲೆ ಕುಳಿತುಕೊಂಡರು. ಒಮ್ಮೆಲೆ ಅವರು

ಮುದುಕರಾದಂತೆ ಕಂಡರು. ಹುರುಪೆಲ್ಲ ಜರ್ರನೆ ಇಳಿದು ಹೋಗಿತ್ತು. ದೀಪಾಳ ಬೆನ್ನ ಮೇಲೆ ಕೈ ಇರಿಸುತ್ತಾ ಹೇಳಿದರು,

"ದೀಪಾ ಇದೆಲ್ಲ ಜನಾರ್ಧನನ ಕೆಲಸ.... ಸಚಿವರ ಸಂಬಂಧ ಆತನಿಗಿದೆ. ಹೀಗಾಗಿ ಪ್ರತಿಭೆಯಿದ್ದರೂ ಅಮರನ ಆಯ್ಕೆಯಾಗಲಿಲ್ಲ. ಜನಾರ್ಧನ ತನಗೆ ಆದ ಅಪಮಾನದ ಸೇಡು ತೀರಿಸಿಕೊಂಡ. ನೀನು ಇದರ ಬಗ್ಗೆ ಏನೂ ತಿಳಿದುಕೊಳ್ಳಬೇಡ. ಇನ್ನೂ ಎರಡು ತಿಂಗಳು ಅವಧಿ ಇದೆ. ನಾನು ಇದರ ಬಗ್ಗೆ ಸಿ. ಎಂ. ಅವರಿಗೆ ಭೇಟಿಯಾಗಿ ವಿಚಾರಿಸುತ್ತೇನೆ. ನಮ್ಮ ಹಾಗೆ ಪತ್ರಿಕೆಗಳು ಸುಮ್ಮನೆ ಕೂಡುವುದಿಲ್ಲ. ನೋಡ್ತಾ ಇರು."

ಸಮಾಧಾನ ತೆಗೆದುಕೊಳ್ಳುವುದರ ಹೊರತು ಬೇರೆ ದಾರಿಯೇ ಇರಲಿಲ್ಲ. ದೀಪಾ ಮೇಲೆದ್ದಳು. ಡ್ಯಾಡಿ ಜೊತೆ ಕೂತು ಗಂಟಲಿಗೆ ಇಳಿದಷ್ಟು ಊಟ ಮಾಡಿದಳು ಸುಮ್ಮನೆ ಗಾದಿಯ ಮೇಲೆ ಉರುಳಿದಳು.... ನಿದ್ದೆ ದೂರ ಬಹು ದೂರ ಓಡಿಹೋಗಿತ್ತು

ವರದರಾಜು ಅವರು ಹೇಳಿದಂತೆ ಮರುದಿನ ಎಲ್ಲ ಪತ್ರಿಕೆಗಳು ಕೆಂಡಕಾರಿದ್ದವು. ಆಯ್ಕೆ ಸಮಿತಿಯನ್ನು ಖಂಡಿಸಿದ ಅವರು ಸಚಿವರೊಬ್ಬರ ಸಂಬಂಧಿಗೆ ನಾಯಕಪಟ್ಟ ಕೊಟ್ಟ ಬಗ್ಗೆ ಉಲ್ಲೇಖಿಸಿ ರಾಜ್ಯಕ್ಕೆ ಉತ್ತಮ ಆಟಗಾರನೆಂದು ಹೆಸರು ಪಡೆದಿರುವ 'ಅಮರ'ನ ಹೆಸರು ಆಯ್ಕೆ ಪಟ್ಟಿಯಲ್ಲಿಯೇ ಇಲ್ಲದಿರುವ ಬಗ್ಗೆ ತೀವ್ರ ವಿಡಂಬನೆ ವ್ಯಕ್ತಪಡಿಸಿದ್ದರು.

ವಿರೋಧಪಕ್ಷದ ಧುರೀಣರು ಇದನ್ನೇ ಮುಖ್ಯ ವಿಷಯಮಾಡಿ "ಪ್ರತಿಭಾವಂತರಿಗೆ ಸರಿಯಾದ ಪ್ರೋತ್ಸಾಹವಿಲ್ಲದಿರುವುದರಿಂದ ನಮ್ಮ ದೇಶದ ಪ್ರತಿಭಾವಂತರು ಪರದೇಶಕ್ಕೆ ಪಲಾಯನ ಮಾಡುತ್ತಿದ್ದಾರೆ" ಎಂದು ಹೇಳಿ ಅದಕ್ಕೆ ಅಮರನ ಉದಾಹರಣೆ ಕೊಟ್ಟಿದ್ದರು. ಎರಡು ದಿವಸ ಇದರ ಬಗ್ಗೆ ಸಚಿವರಾಗಲಿ ಸಂಬಂಧಪಟ್ಟ ಇಲಾಖೆಯವರಾಗಲೀ ತುಟಿ ಎರಡು ಮಾಡದೆ ಪೂರ್ತಿ ಮೌನವ್ರತಾಧಾರಣೆ ಮಾಡಿದ್ದರಿಂದ ವಿಷಯ ಅಲ್ಲಿಗೇ ಮುಗಿದುಹೋಯಿತು.

ನಾಲ್ಕು ದಿವಸ ಬಿಟ್ಟು ಅಮರ ಹಾಗೂ ಸುಂದರಮ್ಮ ಮರಳಿ ಬಂದರು. ಸುಂದರ ಇನ್ನೂ ಆಸ್ಪತ್ರೆಯಲ್ಲಿಯೇ ಇದ್ದಾನೆ. ಪ್ರಕೃತಿ ಸ್ವಲ್ಪ ಗುಣವಾಗಿದೆ ಅಷ್ಟೆ. ಇನ್ನೂ ಹದಿನೈದು ದಿವಸ ಏನೂ ನಿರ್ದಿಷ್ಟವಾಗಿ ಹೇಳುವಂತಿಲ್ಲವೆಂದು ವೈದ್ಯರು ಹೇಳಿದ್ದರಿಂದ ಸುದ್ದಿ ತಂದರು. ಮಾಲತಿಗೆ ಮೂರು ತಿಂಗಳು....

ಒಂದು ವೇಳೆ ಏನಾದರೂ ಹೆಚ್ಚು ಕಡಿಮೆಯಾದರೆ ಮುಂದೇನು ಗತಿ ಎಂಬ ಚಿಂತೆಯ ಕರಾಳ ಛಾಯೆ ಕಾಡತೊಡಗಿತ್ತು..

ಅಮರನಿಗೆ ಎಲ್ಲ ವಿಷಯ ತಿಳಿದು ಹೋಗಿತ್ತು. ಪತ್ರಿಕೆ ಓದಿ ಆತ ತಿಳಿದುಕೊಂಡಿದ್ದ. ಅವನಿಗಾದ ವ್ಯಥೆ ಹೇಳತೀರದು. ಆತ ಮನದಲ್ಲಿಯೇ ಕೊರಗುತ್ತಿದ್ದ. ನಾನು ವ್ಯಥೆ ಪಟ್ಟರೆ, ಅಪ್ಪಾಜಿ, ದೀಪಾ... ಹಾಗೂ ವರದ ರಾಜು ಅವರಿಗೆ ಮತ್ತಷ್ಟು ದುಃಖವಾಗುತ್ತದೆ ಎಂದು ವಿಚಾರಿಸಿದ ಆತ ಹೃದಯದಲ್ಲಿ ದುಃಖದ ಜ್ವಾಲಾಮುಖಿಯೇ ಅಡಗಿದ್ದರೂ ಅದನ್ನೆಲ್ಲಾ ನುಂಗಿ ನಗುತ್ತಿದ್ದ.

ಬಂದ ದಿನವೇ ಸಾಯಂಕಾಲ ಅಪ್ಪಾಜಿಯವರನ್ನು ಕಾಣಲು ಹೋದ. ಅಪ್ಪಾಜಿ ಹಾದಿಯ ಮೇಲೆ ಎದ್ದು ಕೂತು ಎದುರಿಗಿದ್ದವರ ಜೊತೆ ಮಾತ ನಾಡುತ್ತಿದ್ದರು ಅವರ ಎದುರಿಗಿದ್ದವರು ವಕೀಲರೆಂದು ಅವರ ಕೋಲುನೋಡಿ ಹೇಳಬಹುದಿತ್ತು. ಅಮರ ಬರುತ್ತಲೇ ಅವರು ಮಾತು ನಿಲ್ಲಿಸಿದರು. ಅಪ್ಪಾಜಿ ಯಿಂದ ಆರೋಗ್ಯ ಅಮರ ವಿಚಾರಿಸುತ್ತಿದ್ದಂತೆಯೇ ವಕೀಲರು ಎದ್ದು ಹೊರಟು ಹೋದರು

ಅಪ್ಪಾಜೀಯವರ ಆರೋಗ್ಯ ಸುಧಾರಿಸಿತ್ತು. ಅವರು ಅಮರನ ಆಯ್ಕೆ ಬಗ್ಗೆ ತಮ್ಮ ದುಃಖ ವ್ಯಕ್ತಪಡಿಸಿದರು. ಅದನ್ನು ಪ್ರತಿಭಟಿಸಿ ಬರೆದ ಪತ್ರ ತೋರಿಸಿದರು. ಮರುದಿವ , ಸ್ವತಃ ತಾವೇ ಹೋಗಿ ಸಚಿವರನ್ನು ಕಂಡು ಬರ ವುದಾಗಿ ತಿಳಿಸಿದರು. ತನ್ನ ಬಗ್ಗೆ ಅವರು ಹೋರಾಡುತ್ತಿರುವುದನ್ನು ಕಂಡು ಅಮರನ ಕಣ್ಣಲ್ಲಿ ನೀರು ಬಂದಿತು.

ಅಪ್ಪಾಜಿಯವರ ಮನೆಯಿಂದ ಅಮರ ನೇರವಾಗಿ ರೂಪಾಳ ಬಳಿ ಬಂದು ತನಗೆ ದುಃಖವಾಗಿದೆ ಎಂದು ಅಮರ ತೋರಿಸಲು ಪ್ರಯತ್ನಿಸಲಿಲ್ಲ. ಅದರಂತೆ ದೀಪಾ ಸಹ ತನಗೇನೂ ಆಗಿಲ್ಲವೆಂಬಂತೆ ವರ್ತಿಸಿದರು. ಇಬ್ಬರ ಮಾತನ್ನು ನಡೆಯುತ್ತಿದ್ದ ತುಮುಲ ಯುದ್ಧ ಪರಸ್ಪರರಿಗೆ ಗೊತ್ತು. ಆದರೂ ಅದನ್ನು ಮುಚ್ಚಿಕೊಂಡು, ಕೃತಕ ನಗೆ ನಗುತ್ತಾ ಮಾತನಾಡಿದರು ಯೋಗಕ್ಷೇಮ ವಿಚಾರಿಸಿದರು. ಸ್ವಲ್ಪ ಸಮಯ ಅಲ್ಲಿ ಕಳೆದು ಅಮರ ಮನೆಗೆ ವಾಪಸಾದ. ರಾಮರಾಯರು ಬಂದಿದ್ದರು ಸುಂದರನ ಕ್ಷೇಮ ಸಮಾಚಾರ ವಿಚಾರಿಸಿ, ಸುಮ್ಮನಾದರು. ಅಮರನನ್ನು ಮಾತನಾಡಿಸುವ ಧೈರ್ಯ ಅವರಿಗಾಗಲಿಲ್ಲ.

ಪತ್ರಿಕೆಗಳು ಹಾಗೂ ಸಾರ್ವಜನಿಕರು ತೋರಿದ ಆಕ್ರೋಶಕ್ಕೆ ಕೊನೆಗೊಮ್ಮೆ ಸಚಿವರು ಪ್ರತಿಕ್ರಿಯೆ ತೋರಿಸಿದರು. ಅಪ್ಪಾಜಿಯವರು ಹೋಗಿ ಸಚಿವರನ್ನು ಕಂಡಾಗ....ಒಂದು ಕ್ಷಣ ಅವರು ದಂಗಾದರು. ಅಪ್ಪಾಜಿಯವರಂಥ ಅಂತರರಾಷ್ಟ್ರೀಯ ಖ್ಯಾತಿ ಪಡೆದ ಆಟಗಾರರು, ಜೀನೆ ಬಿದ್ದಾಗ್ಯೂ ಅದನ್ನು ಲೆಕ್ಕಿಸದೇ, ತಮ್ಮ ತನಕ ದೂರು ತಂದಿದ್ದಕ್ಕೆ ಅವರು ತಮ್ಮ ತೀವ್ರ ಸಂತಾಪ ಸೂಚಿಸಿ ಆಯ್ಕೆ ಸಮಿತಿಯು ನಿರ್ಣಯವನ್ನು ಮತ್ತೊಮ್ಮೆ ಪರಿಶೀಲಿಸುವುದಾಗಿ ಹೇಳಿಕೆ ನೀಡಿದರು.

ದೀಪಾ ಅಮರ....ಅಪ್ಪಾಜೀ .. ವರದರಾಜು ಅಲ್ಲದೇ ಸಾವಿರಾರು ಜನ ಕ್ರೀಡಾಪಟುಗಳಿಗೆ ಇದರಿಂದ ಎಷ್ಟೋ ಸಮಾಧಾನವಾಯಿತು.

ಎಂಟು ಹತ್ತು ದಿನಗಳು ಕಳೆದವು ಸುಂದರನ ಪರಿಸ್ಥಿತಿ ಇನ್ನೂ ಸುಧಾರಿಸಿಲ್ಲವೆಂದೂ ಅವನನ್ನು ಮನೆಗೆ ಕರೆತಂದಿಟ್ಟರೂ ಇನ್ನೂ ವಿಶ್ರಾಂತಿ ಪಡೆಯಲು ತಿಳಿಸಿದ್ದಾರೆಂದು ಮಾಲತಿಯ ಪತ್ರ ಬಂದಿತು.

ಒಂದು ದಿನ ಕಾಲೇಜಿನಿಂದ ಬರುತ್ತಿರುವಾಗ ದೀಪಾ ಅಮರನಿಗೆ ಹೇಳಿದಳು___ "ಈಗ ಕೆಲವು ತಿಂಗಳುಗಳಿಂದ ರತ್ನ ಹಾಗೂ ರಾಜು ಬಹಳ ಹತ್ತಿರವಾಗುತ್ತಿದ್ದಾರೆ.....ಕಾಲೇಜಿನಲ್ಲಿ ಗುಸುಗುಸು ಪ್ರಾರಂಭವಾಗಿದೆ.....ಸ್ವಲ್ಪ ಎಚ್ಚರಿಕೆ ತೆಗೆದುಕೋ " ಎಂದು ಹೇಳಿದಳು.

ಇದೇ ವಿಷಯದ ಬಗ್ಗೆ ಮನೆಯಲ್ಲಿ ರಾದ್ಧಾಂತವಾಯಿತು. ಸುಂದರಮ್ಮ ಸಹ ರತ್ನಾಳ ಪಕ್ಷ ವಹಿಸಿ ಮಾತನಾಡಿದಳು. ರಾಮರಾಯರಂತೂ ಸಿಟ್ಟು ಬೆಂಕಿಯಾಗಿದ್ದರು___ರತ್ನಾ ಮಾತ್ರ ಯಾವುದಕ್ಕೂ ಹೆದರದೆ ಹೇಳಿದಳು.

"ನಾನೇನು ತಪ್ಪು ಮಾಡಿರುವೆ. ರಾಜುನ ಜೊತೆ ಸ್ವಲ್ಪ ಹೆಚ್ಚು ಮಾತನಾಡಿದ್ದಕ್ಕೆ ತಲೆಮೇಲೆ ಗೂಬೆ ಕೂಡಿಸ್ತಾ ಇದ್ದೀರಾ___ ದೀಪಾ ಅಮರನ ಜೊತೆ ಎಷ್ಟು ಸಲಿಗೆಯಿಂದ ಇದ್ದಾಳೆ....ಅದಕ್ಕೇಕೆ ನೀವು ಏನೂ ಅನ್ನುವುದಿಲ್ಲ."

ಎಲ್ಲರ ಬಾಯಿ ಕಟ್ಟಿಹೋಯಿತು. ಆ ವಿಷಯ ಅಲ್ಲಿಗೇ ಮುಗಿದು ಹೋಯಿತು. 'ಹಾಳಾಗಿ ಹೋಗು' ಎಂದು ಹೇಳಿದ ರಾಯರು ಸುಮ್ಮನಾದರು.

ಒಂದು ದಿನ ಆಯ್ಕೆ ಸಮಿತಿ ಚೇರ್‌ಮನ್ನರು ಅಮರನಿಗೆ ಹೇಳಿ ಕಳಿಸಿದರು. ಅಮರ ಹೋಗಿ ಅವರನ್ನು ಕಂಡ. ಚೇರ್‌ಮನ್ನರು ಅವನನ್ನು ಕರೆದು

ಕುಳ್ಳಿರಿಸಿ ತುಂಬಾ ಗೌರವದಿಂದ ಮಾತನಾಡಿದರು. ಒಂದು ಗಂಟೆ ಕಾಲ ಅವನಿಗೆ ತಿಳುವಳಿಕೆ ಹೇಳಿದರು, ಅವನ ಆಟ ಪ್ರಶಂಸಿಸಿದರು. ನಿನ್ನಂಥ ಆಟಗಾರ ರಾಜ್ಯದಲ್ಲಿಯೇ ಇಲ್ಲ ಎಂದೂ ಸಹ ಮಾತನಾಡಿ ಒಂದು ವೇಳೆ ನೀನು ಮೊನ್ನೆ ನಡೆದ ಕಾಲೇಜಿನಲ್ಲಿ ಮಾರಾಮಾರಿ ವಿಷಯದ ಬಗ್ಗೆ ಜನಾರ್ಧನನಿಗೆ ಕ್ಷಮೆ ಕೋರಿ ಪತ್ರ ಬರೆದುಕೊಟ್ಟರೆ ನಾಯಕನ ಸ್ಥಾನ ಗ್ಯಾರಂಟಿಯೆಂದು ಆಶ್ವಾಸನೆಯಿತ್ತರು.

ಅಮರನ ರಕ್ತ ಕುದಿಯತೊಡಗಿತು. ನ್ಯಾಯವಾಗಿ ನಡೆದುಕೊಂಡು ಕ್ಷಮಾ ಪತ್ರ ಬರೆದುಕೊಡಬೇಕೆಂಬ ಮಾತು ಕೇಳಿ ಆತನ ತಲೆ ಬಿಸಿಯಾಯಿತು ಚೇರ್ ಮನ್ ರಿಗೂ ಅವನಿಗೂ ಮಾತಿನ ಚಕಮಕಿ ನಡೆದು,

"ಯಾವುದೇ ಪ್ರಸಂಗದಲ್ಲಿಯೂ ನಾನು ಕ್ಷಮೆ ಕೋರಲಾರೆ. ಕ್ಷಮೆ ಕೋರಲು ನಾನು ಮಾಡಿದ ತಪ್ಪಾದರೂ ಏನು ?" ಎಂದಾತ ಕೇಳಿದ. ಚೇರ್ ಮನ್‌ರು ಅದಕ್ಕೆ ಕೋಪಿಸಿಕೊಳ್ಳದೆ ನೀನಿನ್ನೂ ಬಿಸಿ ರಕ್ತದ ತರುಣ, ಕೆಲಸವಾಗಬೇಕಾದರೆ ಕತ್ತೆ ಕಾಲಾದರೂ ಹಿಡಿಯಬೇಕು. ಹಿಡಿದು ಅವರಿಂದ ಕೆಲಸ ಮಾಡಿಸಿಕೊಳ್ಳಬೇಕು" ಎಂದು ಪುನಃ ತಿಳುವಳಿಕೆ ಹೇಳಿದರು. ಎಲ್ಲವೂ ವ್ಯರ್ಥವಾಯಿತು ಅಮರ . ಭೂತ ಬಡಿದವರಂತೆ ಬಡಬಡಿಸುತ್ತ ಎದ್ದು ಹೊರಗೆ ಬಂದ. ಚೇರ್ ಮನ್ ರು ತಮ್ಮ ಪ್ರಯತ್ನದಲ್ಲಿ ಸೋತಿದ್ದರು.

## 9.

ಪಂಕಜಳನ್ನು ಕಟ್ಟಿಕೊಂಡು ವಸಂತನಿಗೆ ಸಾಕು ಸಾಕಾಯಿತು. ದಿನನಿತ್ಯದ ಖರ್ಚಿಗೆಂದೇ ಆಕೆ ನೂರು ರೂಪಾಯಿ ಕೇಳಲಾರಂಭಿಸಿದ್ದಳು. ಟ್ಯಾಕ್ಸಿಯಲ್ಲಿ ಓಡಾಟ, ಲೇಡಿಸ್ ಕ್ಲಬ್.... ಸಂಘ ಸಂಸ್ಥೆಗಳಿಗಾಗಿ ಡೊನೇಷನ್... ಮನೆಯಲ್ಲಿ ಟಿ. ವಿ. ಫ್ರಿಜ್, ಡೈನಿಂಗ್ ಟೇಬಲ್, ಎಲ್ಲಾ ಕಂತಿನ ಸಾಲದ ಮೇಲೆ ತಂದಿರಿಸಲಾಯಿತು. ವಸಂತ ಆಕೆಗೆ ಎಷ್ಟು ತಿಳಿಸಿ ಹೇಳಿದ, "ನನ್ನ ಸಂಬಳ ಏಳುನೂರು ಅದರಲ್ಲಿ ಒಂದೂವರೆನೂರು ಬಡ್ಡಿಗೇ ಹೋಗುತ್ತದೆ.

ಉಳಿದ ಹಣದಲ್ಲಿ ಇದೆಲ್ಲ ಸಾಗಿಸಲು ಸಾಧ್ಯವಿಲ್ಲ."

ಪಂಕಜಾ ಇವೆಲ್ಲ ಮಾತುಗಳಿಗೆ ಕಿವಿಗೊಡಲಿಲ್ಲ. ನಿಮ್ಮ ಪರಿಸ್ಥಿತಿ ಹೀಗಿದ್ದರೆ ನನ್ನನ್ನೇಕೆ ಮದುವೆಯಾದಿರಿ ? ಸನ್ಯಾಸಿಯಾಗಬೇಕಾಗಿತ್ತು. ನನ್ನ ಮನಸ್ಸಿಗೆ ತಕ್ಕಂತೆ ಇರುವುದಾದರೆ ಹೇಳಿ, ಇಲ್ಲ ನನ್ನ ತಾಯಿಯ ಕಡೆ ಹೊರಟುಹೋಗುತ್ತೇನೆ ಎಂದಳು ವಸಂತನಿಗೆ ಆಕೆಯನ್ನು ಬಿಟ್ಟಿರಲಾಗದು. ಅವನ ಈ ವಿವಶತೆ ತಿಳಿದಿದ್ದರಿಂದಲೇ ಪಂಕಜಾ ಅವನನ್ನ ಸೂತ್ರದ ಗೊಂಬೆ ಮಾಡಿ ಆಡಿಸಲಾರಂಭಿಸಿದಳು

ಹೆಂಡತಿಯ ಮಾತಿಗೆ ಕೂಗಿದ ವಸಂತ... ಸಾಲ ಮಾಡಿದ, ಮಾಡಿದ ಕೊನೆಗೆ ಸಾಲವೂ ಸಿಗದಂತಾಯಿತು. ಸಾಲಗಾರರು ತಗಾದೆ ಮಾಡಲಾರಂಭಿಸಿದರು ಅದೇ ವೇಳೆಗೆ ಕಾಳೀಬಾಯಿ ಹದಿನೈದು ಸಾವಿರ ರೂಪಾಯಿ ಜಮೆ ಮಾಡಲು ಹಣ ಕೊಟ್ಟಳು. ಅವಳ ಪತಿ ತೀರಿಕೊಂಡಿದ್ದ. ಫಂಡು ಬಂದ ಹಣ ಫಿಕ್ಸೆಡ್ ಡಿಪಾಜಿಟ್ ಮಾಡಲು ಆಕೆ ನೀಡಿದಳು ವಸಂತನ ತಲೆ ಗಿರ್ ಎಂದು ತಿರುಗಿತು ಹೇಗಾದರೂ ಮಾಡಿ ಈ ಹಣ ಸ್ವಲ್ಪ ಮಟ್ಟಿಗೆ ಬಳಸಿಕೊಂಡು ಸಾಲಗಾರರ ಕಾಟದಿಂದ ಮುಕ್ತನಾಗಬೇಕು ಅನಂತರ ಪುನಃ ತುಂಬಿದರಾಯಿತೆಂದು.... ಅವರಿಗೆ ಹದಿನೈದು ಸಾವಿರ ರೂಪಾಯಿ ಜಮೆ ಮಾಡಿದ ಬಗ್ಗೆ ತಾನೇ ರಸೀದಿ ಬರೆದು ಸೀಲು ಹೊಡೆದು ಸಹಿ ಹಾಕಿ ಕೊಟ್ಟುಬಿಟ್ಟ. ಪಾಪ ! ಬ್ಯಾಂಕಿನ ವ್ಯವಹಾರ ತಿಳಿಯದ ಕಾಳೀಬಾಯಿ ಪಾವತಿ ತೆಗೆದುಕೊಂಡು ಹೊರಟು ಹೋದಳು.

ನಾಲ್ಕೈದು ದಿವಸ ವಸಂತ ಹಾಗೂ ಪಂಕಜ ಗಾಳಿಯ ಕುದುರೆಯೇರಿ ಚೆಲ್ಲಾಟ ಆಡಿದರು. ವ ಊರು ದಿವಸ ರಜಾ ಹಾಕಿ ಮಜಾ ಮಾಡಿಬಂದರು. ಊರಿಗೆ ಬಂದು ಮನೆಗೆ ಕಾಲಿರಿಸುವುದಕ್ಕೂ ಪೋಲೀಸರು ಬಂದು ವಸಂತನನ್ನು ಬಂಧಿಸಲಿಕ್ಕೂ ಸರಿಹೋಯಿತು. ಕಾಳೀಬಾಯಿಯ ಹಣ ಬ್ಯಾಂಕಿಗೆ ಜಮೆ ಮಾಡಿಲ್ಲವೆಂದು ತಿಳಿದುಹೋಗಿತ್ತು.

ಪಾಪ ! ಕಾಳೀಬಾಯಿಗೆ ಈ ವಿಷಯವೇನೂ ತಿಳಿಯದು. ಆಕೆ ಬ್ಯಾಂಕಿಗೆಂದು ಹಣ ಕೊಟ್ಟ ಮರುದಿನವೇ ಅವಳ ಮಗಳನ್ನು ನೋಡಲು ಬಂದವರು ಹುಡುಗಿಯನ್ನು ಪಾಸು ಮಾಡಿ ಒಂದು ವಾರದಲ್ಲಿ ಮದುವೆ ಮಾಡಿಕೊಡಿ ಎಂದರು. ಆಗ ಆಕೆಗೆ ಹಣದ ಅವಶ್ಯಕತೆ ಬಿದ್ದು ಕೂಡಲೇ ಬ್ಯಾಂಕಿಗೆಬಂದಳು.

ವಸಂತ ರಜೆಯ ಮೇಲಿದ್ದ. ಆವನ ಬದಿಲ್ಲಿ ಕೆಲಸಿತವರ ಕಡೆ ರಸೀದಿ ಕೊಟ್ಟು ಆಕೆ, "ಈ ಹಣ ನನಗೆ ಬೇಕಾಗಿದೆ ತೆಗೆದುಕೊಡಿ." ಎಂದಳು. ಆವಾಗಲೇ ತಿಳಿದದ್ದು ವಸಂತ ಮೋಸ ಮಾಡಿದ್ದಾನೆಂದು... ಕೂಡಲೇ ಪೋಲೀಸರಿಗೆ ದೂರು ಹೋಯಿತು. ವಸಂತನನ್ನು ಹುಡುಕಿಸಿದರು. ಆತನ ಪತ್ತೆಯಿಲ್ಲ.... ರಾಮರಾಯರು ಪಾತಾಳಕ್ಕೆ ಇಳಿದುಹೋದರು. ಮನೆತನದ ಮರ್ಯಾದೆಯೆಲ್ಲ ಬೀದಿಗೆ ಬಂದಿತು. ಸುಂದರಮ್ಮ ವಸಂತನನ್ನು ಬಾಯಿ ನೋಯುವವರೆಗೂ ಶಪಿಸಿದರು

ಈ ವಿಷಯವೇ ತಿಳಿಯದ ವಸಂತ, ಮೂರು ದಿನ ಹಾಯಾಗಿ ಕಳೆದು ಊರಿಗೆ ಬಂದ. ಅವನ ಮನೆಯೆದುರು ಕಾವಲಿದ್ದ ಪೋಲೀಸು ವಸಂತ ಬಂದ ಸಮಾಚಾರ ತಿಳಿಸುತ್ತಲೂ ಪಿ. ಎಸ್. ಐ. ಬಂದು ಅವನನ್ನು ಬಂಧಿಸಿದರು. ಬ್ಯಾಂಕ್ ಖಾತೆದಾರರನ್ನು ಮೋಸಪಡಿಸಿದ ಹಾಗೂ ಬ್ಯಾಂಕ್ ಹಣ ದುರುಪಯೋಗಪಡಿಸಿಕೊಂಡ ಅಪರಾಧದ ಮೇಲೆ ಅವನನ್ನು ಬಂಧಿಸಿ ಲಾಕಪ್ಪಿಗೆ ಹಾಕಲಾಯಿತು.

ಆಗ ಪಂಕಜಾಳ ಕಣ್ಣು ತೆರೆದವು. ಅತ್ತೆ ಮಾವಂದಿರ ಕಾಲು ಹಿಡಿದುಕೊಂಡಳು.... ಕೆಲಸವಾಗಲಿಲ್ಲ. ಯಾರೂ ಏನೂ ಮಾಡುವಂತಿರಲಿಲ್ಲ. ಹಣ ವಾಪಸ್ ನೀಡಿದರೆ ಏನೋ ಸೌಲಭ್ಯ ತೋರಿಸಬಹುದು ಎಂದರು. ಒಮ್ಮೆಲೆ ಅಷ್ಟು ಹಣ ತರುವುದು ಎಲ್ಲಿಂದ ! ಪಂಕಜಾ ತನ್ನ ಮನೆಗೆ ಹೋಗಿ ತಾಯಿಯ ಮತ್ತು ಮಹೇಶನ ಕಾಲು ಹಿಡಿದುಕೊಂಡಳು. ಅದರಿಂದಲೂ ಏನೂ ಪರಿಣಾಮವಾಗಲಿಲ್ಲ. ನೀನು ಮಾಡಿದ ತಪ್ಪಿಗೆ ನೀನು ಶಿಕ್ಷೆ ಅನುಭವಿಸು ಎಂದರು.

ಎಲ್ಲ ಕಡೆ ತಿರುಗಿ ಎಲ್ಲ ದ್ವಾರಗಳು ಮುಚ್ಚಿದಾಗ ಎಲ್ಲರಿಗೂ ಅಮರನ ನೆನಪಾಯಿತು. ವರದರಾಜು ಅವರು ಮನಸ್ಸು ಮಾಡಿದರೆ..... ವಸಂತ ಉಳಿಯಬಹುದು ಎಂದೆನಿಸಿ ಅವನ ಮೊರೆ ಹೊಕ್ಕರು. ಅಮರನಿಗೆ ತಂದೆಯ ವೇದನೆ ನೋಡಿ ಸಹಿಸಲಾಗಲಿಲ್ಲ ಅವರಿಗಾಗಿ ವರದರಾಜುರವರ ಕಾಲುಹಿಡಿದುಕೊಂಡ, ಒಂದು ತಿಂಗಳ ಅವಧಿ ಕೊಡಿ ಅಷ್ಟರಲ್ಲಿ ತುಂಬುವ ವ್ಯವಸ್ಥೆ ಮಾಡುತ್ತೇನೆ ಎಂದ. ರಾಮರಾಯರ ಮುಖ ನೋಡಿ ವರದರಾಜು ಅವರು ತಮ್ಮ ನಿರ್ಧಾರ ಬದಲಿಸಿದರು. ವಸಂತನಿಗೆ ಒಂದು ತಿಂಗಳ ಅವಧಿ ಕೊಡಲಾಯಿತು. ಅಷ್ಟರಲ್ಲಿ ಆತ ಹಣ ತುಂಬಬೇಕು. ತುಂಬದಿದ್ದರೆ ಅವನ ಮೇಲೆ ಮುಕದ್ದಮೆ ದಾಖಲು

ಮಾಡಲಾಗುವುದು. ಹಣ ತುಂಬಿದರೆ ನೌಕರಿಯು ಉಳಿಯುತ್ತದೆ ಎಂದು ತಿಳಿಸಿ ಅದರಂತೆ ವಸಂತನಿಂದ ಕಾಗದ ಬರೆಸಿಕೊಂಡರು.

ವಸಂತ, ಹೆಂಡತಿ ಪಂಕಜಾಳೊಂದಿಗೆ ಸೋತಮುಖ ಹಾಕಿಕೊಂಡು ಮತ್ತೆ ತಂದೆಯ ಮನೆಗೆ ಮರಳಿದ. ಅಲ್ಲಿದ್ದರೆ ಹೊಟ್ಟೆಗೆ ತುತ್ತು ಅನ್ನವೂ ದೊರೆಯಲಾರದು. ಈಗವನ ಕಣ್ಣು ತೆರೆದಿತ್ತು, ಅಮರನ ಕಾಲು ಹಿಡಿದು ಕ್ಷಮೆ ಬೇಡಿಕೊಂಡ. ರಾಮರಾಯರು ಅವನ ಮುಖ ಸಹ ನೋಡಲು ಇಷ್ಟಪಡಲಿಲ್ಲ. ಸುಂದರಮ್ಮನವರು ಬಾಯಿಗೆ ಬಂದಂತೆ ಶಪಿಸಿ, "ಈ ರೀತಿ ನಾಯಿ ಬಾಳು ಬಾಳುವುದಕ್ಕಿಂತ ಸತ್ತು ಹೋಗಿದ್ದರೆ, ಒಳ್ಳೆಯದಾಗುತ್ತಿತ್ತು." ಎಂದರು. ಅಂದವರಿಗೆ ನಿಜವಾಗಿಯೂ ಅವನ ಬಗ್ಗೆ ಮಮತೆ ಉಕ್ಕಿಬಂದು ಅವನನ್ನು ಅಪ್ಪಿಕೊಂಡು ಅವನ ಮುಖದ ತುಂಬೆಲ್ಲ ಮುದ್ದಿನ ಮಳೆಗರೆದರು.

ಈ ಘಟನೆ ನಡೆದು ಒಂದು ವಾರ ಕಳೆದಿರಲಿಲ್ಲ. ಒಮ್ಮೆಲೆ ರತ್ನಾ ಮನೆಯಿಂದ ಮಾಯವಾದಳು. ಗೆಳತಿಯ ಮನೆಗೆ ಹೋಗಿರಬೇಕೆಂದು ಸ್ವಲ್ಪ ಕಾದರು. ರಾತ್ರಿ ಆಯಿತು, ಆಕೆ ಬರಲಿಲ್ಲ. ಅಮರನಿಗೆ ಸಂಶಯಬಂದು ರಾಜುನ ಮನೆ ಕಡೆ ಹೋದ. ಅಲ್ಲಿ ಒಂದು ರಾದ್ಧಾಂತ, ರಾಜುನ ತಂದೆ ಹಾರಾಡುತ್ತಿದ್ದರು. ರಾಜು ಸುಮಾರು ನಲವತ್ತು ಸಾವಿರ ರೂಪಾಯಿಯ ಆಭರಣ, ಹಾಗೂ ಇಪ್ಪತ್ತು ಸಾವಿರ ರೂಪಾಯಿಯೊಂದಿಗೆ ಫರಾರಿಯಾಗಿದ್ದ. ಅಮರನಿಗೆ ಖಾತ್ರಿಯಾಯಿತು ರತ್ನಾ ಹಾಗೂ ರಾಜು ಕೂಡಿಕೊಂಡು ಓಡಿಹೋಗಿದ್ದಾರೆ ಎಂದು.

ಈ ಸುದ್ದಿ ತಿಳಿದು ಸುಂದರಮ್ಮ ಹಣೆ ಹಣೆ ಬಡಿದುಕೊಂಡರು. ಮಗ ಒಂದು ರೀತಿಯಿಂದ ಮರ್ಯಾದೆ ಕಳೆದರೆ ಮಗಳು ಒಂದು ರೀತಿ ಮರ್ಯಾದೆ ಕಳೆದಳು. ರಾಮರಾಯರು ಮನೆಬಿಟ್ಟು ಹೊರಗೆ ಬೀಳುವುದೇ ಕಠಿಣವಾಗಿ ಹೋಯ್ತು. ಅಮರನೇ ಹೋಗಿ ಪೋಲೀಸರಿಗೆ ದೂರು ಕೊಟ್ಟು ರತ್ನಾಳ ಒಂದು ಫೋಟೋ ಕೊಟ್ಟು ಬಂದ. ತಪಾಸಣೆ ಪ್ರಾರಂಭವಾಯ್ತು.

ಅಪ್ಪಾಜಿಯವರ ಆರೋಗ್ಯ ದಿನದಿಂದ ದಿನಕ್ಕೆ ಕೆಡುತ್ತ ಬಂದಿತು. ಅಮರನಿಗೆ ದಿಕ್ಕೇ ತೋಚದಂತಾಗಿ ಮಂಕಾಗಿ ಕುಳಿತುಬಿಟ್ಟ. ಅಪ್ಪಾಜಿ ಒಂದು ದೃಷ್ಟಿಯಿಂದ ಅವನಿಗೆ ತಂದೆಯ ಸಮಾನರು. ಒಬ್ಬರು ಜನ್ಮ ನೀಡಿದರೆ ಇವರು ವಿದ್ಯೆ ಕಲಿಸಿ ಹೊಸ ಜನ್ಮ ನೀಡಿದವರು. ಅವರ ಸೇವೆಯಲ್ಲಿ ಅತ ಹೆಚ್ಚು

ಸಮಯ ಕಳೆಯತೊಡಗಿದ. ಅತ್ತ ಮನೆಯ ಪರಿಸ್ಥಿತಿಯೂ ವಿಷಮಿಸುತ್ತಾ ನಡೆದಿತ್ತು. ರಾಮರಾಯರು ಹಾಸಿಗೆ ಹಿಡಿದಿದ್ದರು, ವಸಂತ ಕೆಲಸಕ್ಕೆ ಹೋಗಿ ಬರುತ್ತಿದ್ದ. ಸಂಬಳ ಸಿಗಲಿಲ್ಲ. ಪಂಕಜಾಳ ಸೊಕ್ಕು ಅಡಗಿತ್ತು. ಆಕೆ ಮನೆ ಕೆಲಸದಲ್ಲಿ ಸುಂದರಮ್ಮನಿಗೆ ನೆರವಾಗುತ್ತಿದ್ದಳು. ರತ್ನಾಳ ಪ್ರಕರಣದಿಂದಾಗಿ ಸುಂದರಮ್ಮ ಸಹ ಮೂಲೆ ಸೇರಿ ತಲೆಗೆ ಕೈ ಹಚ್ಚಿಕೊಂಡು ಕೂತುಬಿಟ್ಟರು. ಮಾಲತಿಯಿಂದ ಕಾಗದವಿರಲಿಲ್ಲ, ಒಂದೇ, ಎರಡೇ ! ನೂರೆಂಟು ಚಿಂತೆಗಳು. ಈ ಎಲ್ಲ ಚಿಂತೆಗಿಂತ ಹೆಚ್ಚಿಗೆ ಅವನನ್ನು ಕಾಡುವ ಸಮಸ್ಯೆಯೆಂದರೆ ತಂದೆಯ ವಿಷಯ ! ಇಷ್ಟು ದಿವಸ ಅವರ ಮೈಯಲ್ಲಿ ಶಕ್ತಿಯಿತ್ತು. ದುಡಿದು ಮಕ್ಕಳನ್ನು ದೊಡ್ಡವರನ್ನಾಗಿ ಮಾಡಿ ದಾರಿಗೆ ಹಚ್ಚಿದರು. ಆದರೆ ಮಕ್ಕಳು ತಮ್ಮ ಕರ್ತವ್ಯ ಪೂರೈಸುವಲ್ಲಿ ವಿಫಲರಾದರು. ನಿಜ ಹೇಳಬೇಕೆಂದರೆ ರಾಮರಾಯರು ಈಗ ದುಡಿಯಲು ಹೋಗಬೇಕಾಗಿರಲಿಲ್ಲ....ಆದರೆ ಅವರು ದುಡಿಯದಿದ್ದರೆ ಮನೆಯಲ್ಲಿದ್ದ ಆರೂ ಜನರಿಗೆ ಗಂಜಿ ಸಿಗುವುದು ಹೇಗೆ ? ಅಮರ ದಾರಿ ಹತ್ತಲಿಲ್ಲ ಆಟದ ಹಿಂದೆ ಬಿದ್ದ, ವಸಂತ ಹೆಂಡತಿಯ ಮಾತು ಕೇಳಿ ಮೈ ತುಂಬ ಸಾಲಮಾಡಿಕೊಂಡು ಕುಳಿತ.

ಅವನಿಗೆ ಕೊಟ್ಟ ಅವಧಿಯಲ್ಲಿ ಆಗಲೇ ಹನ್ನೆರಡು ದಿನಗಳು ಕಳೆದು ಹೋಗಿದ್ದವು. ಹಣದ ವ್ಯವಸ್ಥೆ ಮಾಡದಿದ್ದರೆ ನೌಕರಿ ಹೋಗುವುದರ ಜೊತೆಗೆ ಜೈಲು ವಾಸ ಏನು ಮಾಡುವುದು ? ಏನು ಬಿಡುವುದು ? ತಿಳಿಯದಂತಾಯಿತು.

ಮತ್ತೆ ಒಂದು ವಾರ ಉರುಳಿತು ರತ್ನಾಳ ಸುಳಿವು ಸಿಗಲಿಲ್ಲ. ವಸಂತನಿಗೆ ಎಲ್ಲೂ ಹಣದ ವ್ಯವಸ್ಥೆಯಾಗಲಿಲ್ಲ. ಮಾಲತಿಯ ಪತ್ರ ಬಂದಿದ್ದು ಅವಳ ಪತಿಯ ಆರೋಗ್ಯ ಪುನಃ ಕೆಟ್ಟಿದೆ ಎಂದು ಬರೆದಿದ್ದಳು.

ಅಮರ ಕಾಲೇಜಿಗೆ ಹೋಗುವುದನ್ನು ಬಿಟ್ಟಿದ್ದ. ದೀಪಾ ಒಬ್ಬಳೇ ಕಾಲೇಜಿಗೆ ಹೋಗಿ ಬರುತ್ತಿದ್ದಳು. ಒಂದು ದಿನ ಜನಾರ್ಧನ ಆಕೆಯನ್ನು ದಾರಿಯಲ್ಲಿಯೇ ತಡೆದ..... ದೀಪಾಳಲ್ಲಿಯೂ ಸಹ ಧೈರ್ಯ ಮೂಡಿತ್ತು. ಇಬ್ಬರ ಮಧ್ಯೆ ಸ್ವಲ್ಪ ಬಿಸಿಬಿಸಿ ಮಾತುಕತೆಯೂ ಆಯಿತು. ಜನಾರ್ಧನ ಎಲ್ಲಾ ನಾಚಿಕೆ ಮೂಲೆಗಿಟ್ಟು ಬಂದು ಮಾತಾಡುತ್ತಿದ್ದ,

"ದೀಪಾ ! ನಿನ್ನ ಮೇಲೆ ನಾನು ಮನಸ್ಸಿಟ್ಟಿದ್ದೇನೆ. ಒಂದಲ್ಲ ಒಂದು

ದಿವಸ ನನ್ನ ಆಶೆ ತೀರಿಸಿಕೊಳ್ಳದೆ ಬಿಡಲಾರೆ . ನಿನ್ನ ಅಮರನ ಭವಿಷ್ಯ ನನ್ನ ಕೈಲಿದೆ. ನಾನು ಮನಸ್ಸು ಮಾಡಿದರೆ ನಾಳೆಯೇ ಆತ ಕ್ಯಾಪ್ಟನ್— ಆದರೆ ಅದಕ್ಕಾಗಿ ನೀನು ಶುಲ್ಕ ತೆರಬೇಕಾಗುತ್ತದೆ...... ನನ್ನ ಬಳಿ ಒಂದು ರಾತ್ರಿ ಕಳೆಯಬೇಕು ಅಷ್ಟೆ !" ಅಸಹ್ಯವಾಗಿ ನಕ್ಕಾಗ ದೀಪಾಳ ಮೈ ಉರಿದುಹೋಯ್ತು ವ್ಯಂಗ್ಯಮಾತು ಆಡಿ ಅವನಿಗೆ ಬಿಸಿ ಮುಟ್ಟಿಸಿದಳು,

"ಅದೆಂದಿಗೂ ಸಾಧ್ಯವಾಗದು. ನನ್ನ ಜೀವವಿರುವವರೆಗೂ !"

"ನನಗೆ ವಿಶ್ವಾಸವಿದೆ ... ಆ ದಿನ ಬಂದೇ ಬರುತ್ತದೆಂದು. ನೀನು ತಿಳಿದಿರಬಹುದು, ನಿನ್ನ ತಂದೆಯ ಬಳಿ ಬಹಳ ಹಣವಿದೆ ಅದರ ಬಲದಿಂದ ಅಮರನ ಆಯ್ಕೆ ಮಾಡಿಸಬಹುದೆಂದು..... ಅದು ಪೂರ್ತಾ ತಪ್ಪು ಕಲ್ಪನೆ... ನಿನ್ನ ತಂದೆಯ ಬಳಿ ಇದ್ದ ಎಲ್ಲಾ ಹಣ ಮಾಡಲಾರದ ಕೆಲಸವನ್ನು ನೀನು ಮಾಡಿಸಬಲ್ಲೆ. ಒಂದು ನಯಾಪೈಸೆ ಖರ್ಚಿಲ್ಲದೆ...... ಹಾಗೇನಾದರೂ ನನ್ನ ನೆನಪಾದರೆ ಲೈಬ್ರರಿಯಲ್ಲಿ ಜವಾನನನ್ನು ಕೇಳು ನನ್ನ ಅಡ್ರೆಸ್ ಕೊಡುತ್ತಾನೆ...."

ಮತ್ತೊಮ್ಮೆ ಅಸಹ್ಯವಾಗಿ ನಕ್ಕು ಆತ ಹೊರಟು ಹೋದ. ದೀಪಾ.... ಮನೆಯ ಕಡೆ ನಡೆದಳು. ಅವಳ ಮನಸ್ಸು ಖಿನ್ನವಾಗಿತ್ತು. ಬದುಕು ಬೇಸರವಾಗಿತ್ತು......

ಮರುದಿನವೇ ಒಂದು ಸಂತೋಷದ ಸಮಾಚಾರ ಬಂದಿತು. ರತ್ನಾ ಹಾಗೂ ರಾಜೂ ಇಬ್ಬರೂ ಮದ್ರಾಸಿನಲ್ಲಿ ಸಿಕ್ಕರಂತೆ.... ಅವರನ್ನು ಹಿಡಿದು ತಂದಿದ್ದರು ಪೋಲೀಸರು ಅಮರ ಸ್ಟೇಷನ್ನಿಗೆ ಹೋಗಿ ರತ್ನಾಳನ್ನು ಗುರುತಿಸಿ ಹಿಡಿದು ಕರೆತಂದ... ಮನೆ ತಲುಪುವುದೇ ಅವನಿಗೆ ಕಷ್ಟವಾಯಿತು. ವಠಾರದ ಜನರೆಲ್ಲಾ ಘೇರಾಯಿಸಿದರು. ರತ್ನಾಳನ್ನು ನೋಡಲು ನೂರೆಂಟು ಜನ.... ನೂರೆಂಟು ನಾಲಿಗೆಗಳು. ಮನೆಯಿಂದ ಓಡಿಹೋದವಳನ್ನು ನೋಡಲು ಅದೆಂತಹ ಕುತೂಹಲ ! ಅಮರ ಅವರನ್ನೆಲ್ಲಾ ಗದರಿಸಿ ಕಳಿಸಿದ. ರತ್ನಾ ಒಳಗೆ ಕಾಲಿಡುತ್ತಲೂ ಪೊರಕೆ ಹಿಡಿಯುವ ತನಕ ಸುಂದರಮ್ಮ ಹೊಡೆದರು. ಅಮರನೇ ಮಧ್ಯೆ ಪ್ರವೇಶಿಸಿ ಬಿಡಿಸಿಕೊಂಡ

ಹಾಗೂ ಹೀಗೂ ನಾಲ್ಕು ದಿನಗಳು ಉರುಳಿದವು. ರಾಮರಾಯರ ಪಾಲಿಗೆ ಒಂದೊಂದು ದಿನಗಳು ಮಹತ್ವದ ದಿನಗಳಾಗಿದ್ದವು. ಈ ಮಧ್ಯೆ ಸುಮಾರು ಮನೆಗಳಿಗೆ ಹೋಗಿ ಅವರು ಭಿಕ್ಷೆ ಬೇಡಿದ್ದರು. ಮುಂಡಿಗಳನ್ನು

ತಿರುವಿದ್ದರು. ಹದಿನೈದು ಸಾವಿರ ರೂಪಾಯಿ ಸಾಲ ಕೇಳಿದ್ದರು. ಎಲ್ಲಿಯೂ ಅವರಿಗೆ ಸಾಲ ಹುಟ್ಟಲಿಲ್ಲ. ರಾಮರಾಯರು ಅನುಭವಿಸಿದ ಹಿಂಸೆ ಯಾರಿಗೂ ಬೇಡ. ಹಿರಿಯ ಮಗನ ಜೀವನ ಹಾಳಾಗುತ್ತದೆ ಎಂದು ಕಂಡ ಕಂಡ ದೇವರಿಗೆಲ್ಲಾ ಕೈಮುಗಿದಿದ್ದಾಯಿತು. ಯಾವ ದೇವರು ವರ ನೀಡಲಿಲ್ಲ. ವರದರಾಜುವಿನ ಬಳಿ ಹೋಗಿ ಕೇಳಬೇಕನ್ನಿಸಿ ಅಮರನ ಎದುರು ಪ್ರಸ್ತಾಪ ಮಾಡಿದರು. ಅಮರ ಸ್ಪಷ್ಟವಾಗಿ ಹೇಳಿದ.

"ಅಪ್ಪಾ....ವರದರಾಜು ಅವರನ್ನು ಕೇಳಿದರೆ ಅವರು ಕೊಡಬಹುದು ಅನ್ನು. ಆದರೆ ಅವರ ಬಳಿ ಹಣ ಕೇಳಿದರೆ ನಮ್ಮನ್ನು ನಾವು ಮಾರಿಕೊಂಡಂತೆ ಎನಿಸುತ್ತದೆ. ಅವರು ನನಗೆಷ್ಟು ಗೌರವ ಕೊಡುತ್ತಾರೆ ನೀನೇ ನೋಡಿರುವೆ. ಅದಕ್ಕೆಲ್ಲಾ ಕಾರಣ ನಾನು ಇನ್ನುವರೆಗೂ ಅವನ ಹಂಗಿನಲ್ಲಿ ಇರದೇ ಇರುವದು ಈಗಲೇ ನಾನವರಿಗೆ ಹಣ ಕೇಳಿದರೆ ಅವಳ ಮನದಲ್ಲಿ ಸಂಶಯದ ದೃಷ್ಟಿ ಮೊಳಕೆಯೊಡೆಯುತ್ತದೆ. ಅವರು ನನ್ನನ್ನು ತಪ್ಪಾಗಿ ತಿಳಿದುಕೊಳ್ಳುತ್ತಾರೆ ಒಂದು ವೇಳೆ ಹಾಗೇನಾದರೂ ಆದರೆ ನಾನು ಇದ್ದರೂ ಸತ್ತಂತೆ....."

"ಬೇಡಪ್ಪಾ ಬೇಡ....ಆ ರೀತಿ ನೀನು ತಿಳಿದುಕೊಳ್ಳೋದಾದ್ರೆ.... ನಾನು ಅವರ ಬಳಿ ಹೋಗುವುದಿಲ್ಲ." ರಾಮರಾಯರು ನೊಂದು ನುಡಿದರು. ಅಂದಿನ ರಾತ್ರಿ ತಂದೆ ಮಗ ಇಬ್ಬರೂ ಕಣ್ಣಿಗೆ ಕಣ್ಣು ಹಚ್ಚಲಿಲ್ಲ ಒಬ್ಬರನ್ನೊಬ್ಬರು ನೋಡುತ್ತಾ ಕೂತರು. ಐದು ಗಂಟೆಯಾಗುತ್ತಲೂ ಅಮರ ಮೇಲೆದ್ದ. ಹಿತ್ತಲಿಗೆ ಹೋಗಿ ಬಂದ. ಐದುವರೆಯಾಗುವಷ್ಟರಲ್ಲಿ ಭರ ಭರ ನೀರು ಸೇದಿ ತಂದಿಟ್ಟ. ಒಲೆಗೆ ಉರಿ ಹಾಕಿ ನೀರು ಕಾಯಿಸಿ ಸ್ನಾನ ಮಾಡಿದ. ಚಹಾ ಮಾಡಿ ತಂದುಕೊಟ್ಟು ತಾನೂ ಕುಡಿದು ಅಪ್ಪಾಜಿಯವರ ಮನೆಗೆ ಓಡಿದ. ಎರಡು ದಿನಗಳಿಂದ ಅವರ ಆರೋಗ್ಯ ಪುನಃ ಕೆಟ್ಟಿತ್ತು.

ಅಪ್ಪಾಜೀಯವರ ಮನೆ ಬಾಗಿಲು ತೆರೆದೇ ಇತ್ತು. ಆದರೆ ದೀಪ ಇನ್ನು ಉರಿಯುತ್ತಲೇ ಇತ್ತು....ನನಗಿಂತ ಮೊದಲು ಎದ್ದಿದ್ದಾರೆ ಎಂದುಕೊಳ್ಳುತ್ತಾ ಅಮರ ಮನೆಯೊಳಗೆ ಕಾಲಿಟ್ಟ ಆಶ್ಚರ್ಯ ಅಪ್ಪಾಜೀ ಇನ್ನು ಎದ್ದೇ ಇರಲಿಲ್ಲ ಮನೆಯ ಬಾಗಿಲು ತೆರೆದಿಟ್ಟು ದೀಪ ಹಾಕಿಕೊಂಡ ಹಾಗೆಯೇ ಮಲಗಿದ್ದರು ...ಅಮರ ಅವರನ್ನು ಎಬ್ಬಿಸಿದ ಮೂರುನಾಲ್ಕು ಸಾರಿ ಅವರ ಹೆಸರು ಹಿಡಿದು ಕೂಗಿದ. ಮೈ ಅಲುಗಿಸಿದ. ಅಪ್ಪಯ್ಯ ಎಂದರೂ ಅವರು

ಏಳಲಿಲ್ಲ. ಗಾಬರಿಯಾಯಿತು. ಅಷ್ಟರಲ್ಲಿ ಅವನ ದೃಷ್ಟಿ ಟೀಪಾಯಿ ಮೇಲಿದ್ದ....ಟೆಲಿಗ್ರಾಂ ಕಡೆ ಹೋಯಿತು. ಅಮರ ಅದನ್ನು ಕೈಗೆ ತೆಗೆದುಕೊಂಡು ಓದಿದ. ಶಾಕ್ ಹೊಡೆದಂತಾಯಿತು. ಇಂಗ್ಲೆಂಡ್‌ನಲ್ಲಿದ್ದ ಅವರ ಒಬ್ಬನೇ ಮಗ, ಸೊಸೆ ಹಾಗೂ ಮೊಮ್ಮಗು ವಿಮಾನ ಅಪಘಾತದಲ್ಲಿ ತೀರಿಕೊಂಡಿದ್ದರು.

ಅಮರನ ಕಣ್ಣಿಗೆ ಕತ್ತಲು ಬಂದಂತಾಯಿತು. ಹಾಗಾದರೆ ಹಾಗಾದರೆ ಅಪ್ಪಾಜಿಯವರು ಈ ಸುದ್ದಿ ಕೇಳಿ ..... ಹೃದಯಕ್ರಿಯೆ....ಅಮರನ ಕಾಲು ನಡುಗತೊಡಗಿದವು. ಓಡಿಹೋಗಿ ವರದರಾಜ ಅವರನ್ನು ಕರೆತರಲು ಹೋದ. .. ದೀಪಾ ಬಾಗಿಲು ತೆರೆದಳು ಅವರು ಒಂದು ವಿಷಯವಾಗಿ ವ್ಯಾಪಾರದ ವಿಷಯವಾಗಿ ಮಾತಾಡಲು ಜಪಾನ್‌ಗೆ ಹೋಗಿದ್ದರು....ಮುಂದೆ.... ಮುಂದೆ ವೈದ್ಯರಿಗೆ ಫೋನು ಮಾಡದ ಹೊರತು ಬೇರೆ ದಾರಿಯಿರಲಿಲ್ಲ ...ಅಮರ ಅದನ್ನೆಲ್ಲಾ ಮಾಡಿದ. ಅಪ್ಪಾಜಿ ಅವರ ಫ್ಯಾಮಿಲಿ ವೈದ್ಯರಾದ ಡಾಕ್ಟರ್ ಆರೋರಾ ಅವರು ಬಂದರು. ಪರೀಕ್ಷಿಸಿದರು... ಕೂಡಲೇ ಆಸ್ಪತ್ರೆಗೆ ಶಿಫ್ಟ್ ಮಾಡಬೇಕೆಂದು ಹೇಳಿದರು___ಮಗ, ಸೊಸೆ ಹಾಗೂ ಮೊಮ್ಮಗು ಒಂದೇ ವೇಳೆಗೆ ಮರಣ ಹೊಂದಿದ ಸುದ್ದಿ ಕೇಳಿ ಅವರಿಗೆ ಆಘಾತವಾಗಿತ್ತು. ಅದನ್ನು ತಡೆದುಕೊಳ್ಳಲಾರದೇ ಮೂರ್ಛೆ ಹೋಗಿದ್ದರು.

ಅಪ್ಪಾಜಿಯವರನ್ನು ಆಸ್ಪತ್ರೆಗೆ ಸಾಗಿಸಲಾಯಿತು. ಅವರಿಗೆ ಪ್ರಜ್ಞೆ ಬರಲು ಎರಡು ತಾಸುಗಳೇ ಬೇಕಾದವು. ಪ್ರಜ್ಞೆ ಬಂದರೂ ಮಾತಾಡುವಂತಿರಲಿಲ್ಲ .. ಶಕ್ತಿಯೇ ಇರಲಿಲ್ಲ. ರಾತ್ರಿ ಹನ್ನೊಂದು ಗಂಟೆಯ ಸುಮಾರಿಗೆ ಅವರು ಒಂದೆರಡು ಮಾತನಾಡಿದರು. ಅವರ ಮಾತಿನ ಪ್ರಕಾರ ಮರುದಿನ ವಕೀಲರನ್ನು ಕರೆಸಲಾಯಿತು. ಅವರು ಸ್ವಲ್ಪ ಹೊತ್ತು ಏನೇನೋ ಮಾತನಾಡಿ ಹೊರಟು ಹೋದರು.....ಪುನಃ ಎರಡು ಗಂಟೆ ಬಿಟ್ಟು ಬಂದರು......ಪರಿಶ್ರಮ ಪಟ್ಟು ಅಪ್ಪಾಜೀ ಕೆಲವೊಂದು ಕಾಗದಗಳಿಗೆ ಸಹಿ ಹಾಕಿದರು___ಅಲ್ಲಿಂದ ಹಾಸಿಗೆಯಲ್ಲಿ ಒರಗಿಕೊಂಡರು. ಅವರ ಮುಖದ ಮೇಲೆ ಸಂತೃಪ್ತಿ ಮೂಡಿತ್ತು

ಅಪ್ಪಾಜಿಯವರು ಸ್ವಲ್ಪ ಹೊತ್ತು ವಿಶ್ರಾಂತಿ ತೆಗೆದುಕೊಳ್ಳಲಿ. ಅಷ್ಟರೊಳಗೆ ಮನೆಗೆ ಹೋಗಿ ಬಂದರಾಯಿತೆಂದು ಅಮರ ಮನೆಗೆ ಬಂದ. ಮನೆಯಲ್ಲಿ ಸ್ಮಶಾನ ಶಾಂತಿ....ಒಬ್ಬೊಬ್ಬರು ಒಂದೊಂದು ದಿಕ್ಕು. ಮಧ್ಯಾಹ್ನ

ಎರಡು ಗಂಟೆಯಾಗಿದ್ದರೂ ಮನೆ ಮುಂದೆ ಕಸ ಗುಡಿಸಿರಲಿಲ್ಲ. ರಂಗವಲ್ಲಿ ಹಾಕಿರಲಿಲ್ಲ. ಸುತ್ತಲಿನ ಜನರೆಲ್ಲಾ ಗುಂಪು ಗೂಡಿ ಕುಳಿತು ಗುಸು ಗುಸು ಮಾತನಾಡುತ್ತಿದ್ದರು. ಅಮರನನ್ನು ನೋಡಿ ಅವರ ಗುಪ್ತ ಮಾತುಕತೆಗಳಿಗೆ ಒಮ್ಮೆಲೆ ಬ್ರೇಕ್ ಹಾಕಿದಂತಾಯಿತು. ಯಾರೋ "ಪಾಪ! ಈ ಹುಡುಗ ಮಾತ್ರ ತಪ್ಪಿ ಹುಟ್ಟಿದೆ." ಎಂದದ್ದು ಕೇಳಿಸಿತು. ವಿಷಯ ಏನಿರಬಹುದು? ಎಂದು ಯೋಚಿಸುತ್ತಾ ಆತ ಮನೆಯೊಳಗೆ ಕಾಲಿಟ್ಟ. ಸುಂದರಮ್ಮ ಅಮರನನ್ನು ನೋಡುತ್ತಲೂ ಅವನನ್ನು ತಬ್ಬಿಕೊಂಡು "ಅಮರ ನಾವೆಲ್ಲಾ ಹಾಳಾದೆವ್ರೋ ಇನ್ನು ನಾವ್ಯಾರೂ ಬದುಕಿ ಉಪಯೋಗವಿಲ್ಲ. ಒಂದಿಷ್ಟು ವಿಷ ತಂದು ಕೊಡು, ತಿಂದು ಸಾಯೋಣ." ಎಂದ ದೊಡ್ಡ ಧ್ವನಿಯಲ್ಲಿ ಅಳತೊಡಗಿದರು. ವಿಷಯ ಏನೆಂಬುದೇ ತಿಳಿಯದಂತಾಯಿತು. ತಾಯಿಗೆ ಕೇಳಲಾಗದು.. ರತ್ನ ಮುಸುಕು ಹಾಕಿಕೊಂಡು ಮಲಗಿದ್ದಳು. ವಸಂತ ಬ್ಯಾಂಕಿಗೆ ಹೋಗಿದ್ದ...... ಪಂಕಜಾ ಅಂಜುತ್ತಾ ಅಳುತ್ತಾ ತಿಳಿಸಿದಳು,

"ರತ್ನಾಳಿಗೆ ..... ರತ್ನಾಳಿಗೆ .. ಎಂಡು ತಿಂಗಳಂತೆ!"

ಅಮರ ಒಮ್ಮೆಲೆ ನೆಲಕ್ಕೆ ಕುಸಿದ. ಆಕಾಶ ಗರ ಗರ ಸುತ್ತಿ ತನ್ನ ಮೇಲೆಯೇ ಅಪ್ಪಳಿಸಿದಂತೆ ಅನಿಸಿತು ಅವನಿಗೆ. ಎಷ್ಟು ಹೊತ್ತು ಅವನು ಹಾಗೆ ಕುಳಿತಿದ್ದನೋ ಗೊತ್ತಿಲ್ಲ. ರಾಮರಾಯರು ಮಾಲತಿಯ ಮನೆಗೆ ಹೋಗಿದ್ದಾರೆಂದು ತಿಳಿಯಿತು. ಎಲ್ಲ ಕಡೆಯೂ ಸಾಲ ಕೇಳಬೇಕಿತ್ತು.... ಮಾಲತಿಯ ಮನೆಗೆ ಹೋಗಿದ್ದರು. ಶ್ರೀಪಾದರಾಯರನ್ನಾದರೂ ಸಾಲ ಕೇಳುವ ಎಂದು. ಎಲ್ಲಾ ಭಾರ ಅಮರನ ಮೇಲೆ....ಮನಸ್ಸಿನಲ್ಲೇ ಏನೋ ತರ್ಕ ಮಾಡಿಕೊಂಡು ಆತ ಮೇಲೆದ್ದ.... ನೇರವಾಗಿ ರಾಜುವಿನ ಮನೆಗೆ ಹೋದ. ರಾಜು ಮನೆಯಲ್ಲಿ ಇದ್ದ. ಅವನಿಗೂ ವಿಷಯ ತಿಳಿಯಿತು, ರಾಜು ಸ್ಪಷ್ಟವಾಗಿ ಹೇಳಿದ,

"ನಾನು ರತ್ನಾಳನ್ನು ಪ್ರೀತಿಸಿದ್ದೇನೆ, ಅವಳ ಕೈ ಬಿಡುವುದಿಲ್ಲ ಮದುವೆ ಆಗಿಯೇ ಆಗುತ್ತೇನೆ.. ."

ಅಮರನಿಗೆ ಅರ್ಧಕ್ಕರ್ಧ ಜೀವ ಬಂದಂತಾಯಿತು. ಅಷ್ಟರಲ್ಲಿ ರಾಜುವಿನ ತಂದೆ ಅಲ್ಲಿಗೆ ಬಂದರು. ಅಮರ ಅವರೆದುರು ಎಲ್ಲ ವಿಷಯ ತಿಳಿಸಿ.... ರತ್ನಾಳನ್ನು ಸೊಸೆ ಎಂದು ಸ್ವೀಕರಿಸಲು ಕಾಲು ಹಿಡಿದು ಕೇಳಿಕೊಂಡ....ರಾಜು ಸಹಿತ ಸ್ಪಷ್ಟವಾಗಿ ಹೇಳಿದ ನಾನು ಮದುವೆಯಾದರೆ ಅವಳನ್ನೇ......ಇಲ್ಲದಿದ್ದರೇ

ಹಾಗೇ ಸನ್ಯಾಸಿಯಾಗಿರುವೆ ಎಂದು

ರಾಜುವಿನ ತಂದೆ ಕೇಶವರಾಯರು ವ್ಯವಹಾರಸ್ಥರು. ಪರಿಸ್ಥಿತಿ ಕೈಮೀರಿ ಹೋಗುತ್ತಿರುವುದನ್ನು ಗಮನಿಸಿ ಕೂಡಲೇ ಪೆಟ್ಟಿಗೆ ಬಡಲು ಮಾಡಿದರು.

ರತ್ನಾ ಹಾಗೂ ರಾಜುನ ಮದುವೆಗೆ ತಮ್ಮ ಅಭ್ಯಂತರವಿಲ್ಲವೆಂದು ತಿಳಿಸಿದ ಅವರು ಒಂದು ಕಂಡಿಷನ್ ಹಾಕಿದರು. ರಾಜು ಮನೆಬಿಟ್ಟು ಹೋಗುವಾಗ ಒಯ್ದ ಆಭರಣಗಳೂ ಹಣ ಇವನ್ನು ರತ್ನಾಳ ತಂದೆ ತಂದುಕೊಡಬೇಕು ಅಂದರೆ ಮುಂದಿನ ವಿಚಾರ___ ಇಲ್ಲದಿದ್ದರೆ ರಾಜುನೂ ಬೇಡ, ರತ್ನಾನೂ ಬೇಡ ಇಬ್ಬರೂ ಹಾಳಾಗಿ ಹೋಗಲಿ..... ತಮ್ಮ ಆಸ್ತಿಯಲ್ಲಿ ಒಂದು ನಯಾಪೈಸೆ ಸಹ ಬಿಡದೆ ಎಲ್ಲವನ್ನೂ ದಾನ ಮಾಡುವುದಾಗಿ ಅವರು ಹೇಳಿದರು

ಅಮರನ ತಲೆಯ ಮೇಲೆ ಆಕಾಶವೇ ಕಳಚಿ ಬಿದ್ದಿತು. ಹಾಗೆಯೇ ಮನೆಯ ಕಡೆ ಬಂದ. ಆಗಲೇ ರಾಮರಾಯರು ಬಂದರು ಅವರು ಹೋದ ಕೆಲಸವಾಗಿರಲಿಲ್ಲ.... ಸುಂದರನನ್ನು ಪುನಃ ಆಸ್ಪತ್ರೆಗೆ ಸೇರಿಸಿದ್ದರು. ಅಂಥ ಪ್ರಸಂಗದಲ್ಲಿಯೂ ರಾಮರಾಯರು, ಮಾಲತಿ ಮುಂದೆ ಹೇಳಿ ಅವಳ ಮಾವನಿಗೆ ಕೇಳಿಸಿದ್ದರು ಇಪ್ಪತ್ತು ಸಾವಿರ ರೂಪಾಯಿ ಬೇಕೆಂದು. ಶ್ರೀಪಾದರಾಯರು ತಮ್ಮ ಬಳಿ ಇಪ್ಪತ್ತು ಪೈಸೆ ಸಹ ಇಲ್ಲವೆಂದು ಹೇಳಿ ಕೈ ಝಾಡಿಸಿಬಿಟ್ಟರು. ಬಂದ ದಾರಿಗೆ ಸುಂಕವಿಲ್ಲವೆಂದು ರಾಯರು ಮರಳಿದ್ದರು ಊರಿಗೆ.... ಇಲ್ಲಿ ? ಇಲ್ಲೊಂದು ರಾಮಾಯಣ ಅವರ ದಾರಿ ಕಾಯುತ್ತಿತ್ತು !

ರತ್ನಾ ಗರ್ಭಿಣಿ ಎಂಬ ಸುದ್ದಿ ಅವರಿಗೆ ತಿಳಿದಾಗ ಕಣ್ಣಿಗೆ ಕತ್ತಲೆ ಬಂದಂತಾಗಿ ಅವರು ದೊಪ್ಪನೆ ನೆಲಕ್ಕೆ ಬಿದ್ದುಬಿಟ್ಟರು ತಾವು ಏತಾದೊಳಕ್ಕೆ ಕಾಲಿಡುತ್ತಲೂ ಅಕ್ಕ ಪಕ್ಕದ ಮನೆಯವರೇಕೆ ತನ್ನನ್ನೇ ಹರಿದು ತಿನ್ನುವಂತೆ ನೋಡಿ ಮುಸುಮುಸು ನಕ್ಕರು ಎಂಬುದು ಈಗ ಅವರಿಗೆ ಅರ್ಥವಾಯಿತು. ಕಣ್ಣಿಗೆ ಕತ್ತಲೆ ಬಂದಂತಾಗಿ ಹಾಗೆಯೇ ನೆಲದ ಮೇಲೆ ಉರುಳಿದಾಗ ಸುಂದರಮ್ಮ ಬಾಯಿ ಬಾಯಿ ಬಡಿದುಕೊಂಡರು. ತಮಗಾಗಿ ಮತ್ತೊಂದು ವಿಶೇಷ ಕಾದಿದೆ ಎಂದುಕೊಂಡು ಕುತೂಹಲದಿಂದ ವಠಾರದ ಜನರೆಲ್ಲಾ ಗುಂಪಾಗಿ ಒಳಗೆ ನುಗ್ಗಿದರು. ರಾಮರಾಯರಿಗೆ ಎಚ್ಚರವಿರಲಿಲ್ಲ ! ಸುಂದರಮ್ಮ ಹಾಹಾರಿ ಕುಳಿತಿದ್ದರು. ರತ್ನಾ ಜನರಿಗೆ ಮುಖ ತೋರಿಸುವಂತಿರಲಿಲ್ಲ. ಪಂಕಜಾ ಚಿಕ್ಕವಳು ಏನೂ ಮಾಡಬೇಕೆಂದು ತಿಳಿಯದೆ ಕಲ್ಲಿನಂತೆ ನಿಂತಿದ್ದಳು. ವಸಂತ, ಅಮರ

ಯಾರೂ ಮನೆಯಲ್ಲಿರಲಿಲ್ಲ. ಕೊನೆಗೆ ಯಾರೋ ಮುಂದೆ ಬಂದರು. ನೀರು ತರಿಸಿ ಮುಖಕ್ಕೆ ಚಿಮುಕಿಸಿದರು. ಕಾಲು ಬೆರಳು ಹಿಚುಕಿದರು, ಗಾಳಿ ಹಾಕಿದರು. ಐದಾರು ನಿಮಿಷ ಬಿಟ್ಟು ರಾಯರು ಕಣ್ಣು ತೆರೆದರು, "ಹಾ.... ಅಯ್ಯೊ" ಎಂದು ನರಳಿದಾಗ ಸುಂದರಮ್ಮನಿಗೆ ಉಸಿರು ಬಂದಿತ್ತು. ಪಂಕಜಾಳ ಮುಖದ ಮೇಲೆ ಸ್ವಲ್ಪ ಸಮಾಧಾನದ ರೇಖೆಗಳು ಮೂಡಿದವು. ಗುಂಪಾಗಿ ಬಂದ ಜನ ತಮ್ಮ ತಮ್ಮ ಮನೆ ಸೇರಿದರು.

ರಾಮರಾಯರು ನಿಧಾನವಾಗಿ ಎದ್ದು ಗೋಡೆಗಾತು ಕುಳಿತರು. ಸುಂದರಮ್ಮ ಅವರಿಗೊತ್ತಿಕೊಂಡೇ ಕುಳಿತು ನುಡಿದರು,

"ಏನೂ ಅಂದ್ರೆ..... ಇದೆಲ್ಲಾ ಏನು ನಡೀತಾ ಇದೆ....ನಮ್ಮ ಮೇಲಿಕೆ ಈ ಈ ರೀತಿ ಒಂದೇ ಸಮನೆ ಒಂದರ ಹಿಂದೆ ಒಂದರಂತೆ ಕಷ್ಟಗಳು ಬರತಾ ಇವೆ."

-"ಸುಂದ್ರು, ಎಲ್ಲಾ ನಾವು ಮಾಡಿದ ಪಾಪ ಕಣೆ ...ಮೊದಲು ಜನರು ಹೇಳ್ತಾ ಇದ್ರು......ಜನ್ಮದಲ್ಲಿ ಮಾಡಿದ ಪಾಪವನ್ನು ಮುಂದಿನ ಜನ್ಮದಲ್ಲಿ ತೀರಿಸಬೇಕು ಅಂತಾ..... ಆದರೆ ಅದು ತಪ್ಪು ಅಂತಾ ನನಗನಿಸ್ತಾ ಇದೆ. ಈ ಜನ್ಮದಲ್ಲಿ ಮಾಡಿದ ತಪ್ಪನ್ನು ಇದೇ ಜನ್ಮದಲ್ಲಿ ತೀರಿಸಬೇಕು. ಮುಂದಿನ ಜನ್ಮ ಇದೆಯೋ ಇಲ್ಲವೋ ಯಾರು ಬಲ್ಲರು ? ನಾನು ನೀನು ಇಲ್ಲಿಯವರೆಗೂ ಎಷ್ಟೋ ಪಾಪ ಮಾಡಿದ್ದೇವೆ ಅದಕ್ಕೆ ಶಿಕ್ಷೆ ಈಗ ಅನುಭವಿಸುತ್ತಿದ್ದೇವೆ."

"ಏನ್ರೀ....ಹುಚ್ಚರಂತೆ ಹೀಗೇಕೆ ಮಾತಾಡ್ತಾ ಇದೀರಿ.....ನೀವು ಪಾಪ ಮಾಡಿದಿರಿ ಅಂದರೆ ಏನು ? ನಾನು ಪಾಪ ಮಾಡಿದ್ದೇನೆ ಅಂದರೆ ಏನು ? ನಾವು ಯಾರ ಗಂಟು ಎತ್ತಿ ಹಾಕಿದ್ದೇವೆ ? ಯಾರಿಗೆ ಮೋಸ ಮಾಡಿದ್ದೇವೆ ? ಯಾರ ಮನೆಗೆ ಕೊಳ್ಳಿ ಇಟ್ಟಿದ್ದೇವೆ....?"

"ಸುಂದ್ರು....ಮತ್ತೊಬ್ಬರಿಗೆ ಮೋಸ ಮಾಡಿದ್ರೆ, ಮತ್ತೊಬ್ಬರ ಗಂಟು ಎತ್ತಿ ಹಾಕಿದ್ರೆ, ಮತ್ತೊಬ್ಬರ ಮನೆಗೆ ಕೊಳ್ಳಿ ಇಟ್ಟರೆ ಅಷ್ಟೇ ಪಾಪ ! ಎಂದು ತಿಳಿದಿದ್ದರೆ ಅದು ಶುದ್ಧ ತಪ್ಪು ನಿನ್ನ ಅರ್ಥದಲ್ಲಿ ನಾವು ಅಂಥಾ ಪಾಪ ಮಾಡಿರಲಿಕ್ಕಿಲ್ಲ... ಅದಕ್ಕೂ ಹೆಚ್ಚಿನ ಪಾಪ ಮಾಡಿದ್ದೇವೆ."

"ಒಗಟಾಗಿ ಹೇಳಿ ನನ್ನ ಗೊಂದಲದಲ್ಲಿ ಹಾಕಬೇಡಿ ಮಾರಾಯರೇ ... ಬಿಚ್ಚಿ ಹೇಳಿಬಿಡಿ......"

"ಹೇಳಿದರೆ ನಿನ್ನ ಮನಸ್ಸಿಗೆ ನೋವಾಗುತ್ತದೆ ಸುಂದ್ರು...."

"ನನ್ನ ಮನಸ್ಸು ಈಗಾಗಲೇ ಎಲ್ಲ ಬಗೆಯ ನೋವು ಉಂಡು ಉಂಡು ಕಲ್ಲಾಗಿ ಹೋಗಿದೆ. ಇನ್ನೆಂಥ ನೋವು ಆಗಬೇಕು ನೀವೇ ಹೇಳೀಂದ್ರೇ "

"ಸುಂದ್ರು, ಅಮರನ ತಾಯಿ ತೀರಿಕೊಂಡಾಗ ಆತನಿಗೆ ಕೇವಲ ಆರು ತಿಂಗಳು ಮಾತ್ರ. ನಿನ್ನನ್ನ ಮದುವೆಯಾದೆ, ನನಗೂ ಒಬ್ಬ ಹೆಂಡತಿ ಬೇಕಾಗಿದ್ದಳು ಎಂಬ ಮಾತು ಸುಳ್ಳಲ್ಲ. ಆದರೊಂದಿಗೆ ಅಮರನಿಗೆ ತಾಯಿ ಸಹ ಬೇಕಾಗಿದ್ದಳು. ನೀನು ನನಗೆ ಹೆಂಡತಿಯಾಗಬೇಕು, ಅಮರನಿಗೆ ತಾಯಿಯಾಗಬೇಕೆಂದು ನಾನು ಬಯಸಿದ್ದೆ ಆದರೆ ನೀನು ನಿನ್ನ ನಡತೆಯಿಂದ ನನ್ನ ಆಶೆಯನ್ನೆಲ್ಲಾ ಕೊಂದುಹಾಕಿದೆ ನೀನು ಅಮರನಿಗೆ ತಾಯಿಯಾಗದೆ ಮಾರಿಯಾದೆ ಆ ಕಂದ ಆವಾಗಿನಿಂದಲೇ ಎಷ್ಟು ಕಷ್ಟ ಅನುಭವಿಸ್ತಾ ಬಂತು ಎಂಬ ಕಲ್ಪನೆ ನಿನಗಿದೆಯೇ ? ಆ ಮಗು ಪಡೋ ದುಃಖ ಕಂಡು ಅವನ ತಾಯಿ ಆತ್ಮ ಎಷ್ಟು ನೊಂದಿರಬೇಕು. ನೊಂದು ನೊಂದು ಕೊನೆಗೆ ನಿನಗೆ ಶಾಪ ಕೊಟ್ಟಿರಲೂ ಸಾಕು. ಆ ಶಾಪದ ಫಲವನ್ನೇ ನಾವೀಗ ಉಣ್ಣುತ್ತ ಇರೋದು ಯಾವ ಮಕ್ಕಳಿಗಾಗಿ ನೀನು ಅಮರನಿಗೆ ಹಿಂಸೆ ನೀಡಿದೆಯೋ ಅವೇ ಮಕ್ಕಳೀಗ ನಿನಗೆ ಚಿತ್ರಹಿಂಸೆ ನೀಡುತ್ತಿದ್ದಾರೆ. ನಿನ್ನಿಂದ ಹಿಂಸೆ ಅನುಭವಿಸಿದ ಅಮರ ನಿನ್ನ ಮೇಲೆ ಪ್ರೀತಿ ಮಮತೆಯ ಮಳೆ ಕರೀತಾ ಇದಾನೆ ಈಗಲಾದ್ರೂ ಈಗಲಾದ್ರೂ ಹೇಳು ನಾನು ಹೇಳಿದ್ದು ನಿಜ ತಾನೆ ?"

"ನೂರಕ್ಕೆ ನೂರು ನಿಜಾರಿ ನಾನು ಪಾಪಿ, ರಕ್ಕಸಿ ! ತಾಯಿಯರಲ್ಲಿ ಹೆಮ್ಮಾರಿ. ಏನು ಅರಿಯದ ಹಸುಗೂಸಿನ ಮೇಲೆ ಸೇಡು ತೀರಿಸಿಕೊಂಡೆ ! ನಾನು ಮಾಡಿದ ಪಾಪಕ್ಕೆ ನಾನೇ ಶಿಕ್ಷೆ ಅನುಭವಿಸಬೇಕು. ಆದರೆ ನೀವು.... ಯಾವ ತಪ್ಪೂ ಮಾಡಿಲ್ಲ, ನಿಮಗೇಕೆ ಈ ಹಿಂಸೆ ? ಪಾಪ !'

"ಹುಚ್ಚಿ ಗಂಡ ಹೆಂಡತಿ ಅಂದಮೇಲೆ ಬೇರೆ ಬೇರೆ ಅಲ್ಲ ಸುಖ, ದುಃಖ ಪಾಪ ಪುಣ್ಯ ಎರಡರಲ್ಲೂ ಅವರು ಸರಿಸಮಾನರು. ನೀನು ಮಾಡುತ್ತಿರುವ ಅನ್ಯಾಯ, ಪಾಪಗಳನ್ನು ನಾನು ಕಣ್ಣು ಮುಚ್ಚಿಕೊಂಡು ನೋಡುತ್ತ ಬಂದೆ ನೋಡು. ಅದರ ಫಲ ನಿನ್ನೊಡನೆ ನಾನೂ ಹಿಂಸೆ ಅನುಭವಿಸುತ್ತಾ ಇದೀನಿ ತಿಳೀತಾ ?"

"ಅಯ್ಯೋ ... ನೀವೆಷ್ಟು ಒಳ್ಳೆಯವರು ! ನಿಜವಾಗಿ ನಾನೇ ಪಾಪಿ ! ನಿಮ್ಮ ಪತ್ನಿಯಾಗಲು ನನಗೆ ಯಾವ ಯೋಗ್ಯತೆಯೂ ಇಲ್ಲ ದೇವರಂತಿದ್ದ

ನಿಮಗೆ ತುಂಬಾ ಅನ್ಯಾಯ ಮಾಡಿಬಿಟ್ಟೆ. ನನ್ನನ್ನು ಕ್ಷಮಿಸಿ ಅಂದ್ರೇ."

"ಸುಂದ್ರು ...ಆದದ್ದು ಆಗಿ ಹೋಯಿತು. ಅದನ್ನು ಮರಳಿ ಪಡೆಯ ವಂತಿಲ್ಲ. ಅನುಭವಿಸಲೇ ಬೇಕು. ಎಲ್ಲಾ ಮರೆತುಬಿಡು..... ಇನ್ನು ಮೇಲೆ ಎಚ್ಚರಿಕೆಯಿಂದಿದ್ದು ಒಳ್ಳೆಯವಳಾಗಿ ಬಾಳು... ನಿನಗೆ ಪಶ್ಚಾತ್ತಾಪವಾಗಿದೆ. ಪಶ್ಚಾತ್ತಾಪದ ಅಗ್ನಿಯಲ್ಲಿ ನಿನ್ನ ಹಿಂದಿನ ಎಲ್ಲ ಪಾಪಗಳು ಭಸ್ಮವಾಗಿ ಹೋಗಿ ಕಣ್ಣೀರಿನಲ್ಲಿ ತೊಳೆದು ಹೋಗುತ್ತವೆ...... ಮುಂದಾದ ● ದೇವರು ನಮಗೆ ಕಲ್ಯಾಣ ಮಾಡಿಯೇ ಮಾಡುತ್ತಾನೆ

ಸುಂದರಮ್ಮ ರಾಮರಾಯರ ಪಾದಗಳ ಮೇಲೆ ಬಿದ್ದು, ಕಣ್ಣೀರಿನಿಂದ, ಅಭಿಷೇಕ ಮಾಡಿದರು. ರಾಯರು ಅವಳನ್ನು ಮೇಲೆತ್ತಿ ಸಮಾಧಾನ ಪಡಿಸುತ್ತಿರುವಾಗಲೇ ಅಮರ ಒಳಗೆ ಬಂದಿದ್ದ. ಅವನನ್ನು ನೋಡುತ್ತಲೇ ಸುಂದರಮ್ಮ,"

"ಕಂದಾ .. ಅಮರ.....ಬಾರಪ್ಪ... ನನ್ನ ಬಳಿ ಬಾ" ಎಂದು ಆರ್ತನಾದ ಮಾಡಿ ತಮ್ಮೆರಡೂ ಕೈಗಳನ್ನ ಅವನತ್ತ ಚಾಚಿದರು. ಒಂದು ಕ್ಷಣ ಅಮರನಿಗೆ ಗಾಬರಿಯಾಯಿತ . ಚಿಕ್ಕಮ್ಮ ಹೀಗೇಕೆ ಕಿರುಚಿಕೊಳ್ಳಾ ಇದ್ದಾರೆ? ಅವಳಿಗೇನಾದರೂ ಮತಿ ಭ್ರಮಣೆಯಾಯಿತೆ ? ಎಂದು ಆತ ಯೋಚಿಸುತ್ತಾ ತಂದೆಯ ಕಡೆ ನೋಡಿದ ಅದರ ಅರ್ಥ ಗ್ರಹಿಸಿದ ರಾಮರಾಯರು "ಅಮರ, ನಿನ್ನ ಚಿಕ್ಕಮ್ಮನಿಗೆ ಪಶ್ಚಾತ್ತಾಪವಾಗಿದೆಯಪ್ಪ ..ಆಗಿನಿಂದಲೂ ಆಕೆ ನಿನಗೆ ಬಹಳ ಅನ್ಯಾಯವಮಾಡಿದೆ. ಎಂದು ಹಲುಬುತ್ತಾ ಹಿಂಸೆ ಪಡುತ್ತಾ ಇದ್ದಾಳೆ ನೀನೇ ಆಕೆಯನ್ನ ಸಮಾಧಾನಪಡಿಸು.' ಎಂದರು.

ಅಮರನ ದೃಷ್ಟಿ ಒಮ್ಮೆಲೆ ಬದಲಾಯಿತು. ಆತ ಸುಂದರಮ್ಮನ ಕಡೆ ನೋಡಿದ. ತನ್ನೆರಡೂ ಕೈಗಳನ್ನು ಅವನತ್ತ ಚಾಚಿ, ತಮ್ಮ ಮಡಿಲಿಗೆ ಅಹ್ವಾನ ನೀಡುತ್ತಿರುವ ಅವರ ಎರಡೂ ಕಣ್ಣುಗಳಿಂದ ನೀರು ಧಾರಾಕಾರವಾಗಿ ಸುರಿಯುತ್ತಿತ್ತು. ಅಮರನಿಗೆ ತಾಯಿಯನ್ನು ಕಂಡು ಗೊತ್ತೇ ಇಲ್ಲ. ಆದರೆ ಇಂದು ಅವನಿಗೆ ಸುಂದರಮ್ಮನವರಲ್ಲಿ ತಾಯಿಯ ದರ್ಶನವಾಯಿತು. 'ಫಳ' ಎಂದು ಕಣ್ಣೀರ ಕಾರಂಜಿ ಚಿಮ್ಮಿತು. ಆತನೂ ಸುಂದರಮ್ಮನವರತ್ತ ಹೆಜ್ಜೆ ಹಾಕಿ "ಅಮ್ಮಾ" ಎಂದ

ಹೃದಯದಲ್ಲಿದ್ದ ಮಮತೆಯ ಕಡಲು ಉಕ್ಕಿಬಂತು. "ಕಂದಾ"ಎನ್ನುತಾ

ಅಮರನನ್ನು ಅಪ್ಪಿಕೊಂಡು ಅವನ ಮುದ್ದು ಕೆನ್ನೆಗಳ ಮೇಲೆ ಮುತ್ತಿನ ಮಳೆ ಕರೆದಳು. ಅಮರನ ಮೈ ಜುಂ ಜುಂ ಎನ್ನುತ್ತಿದ್ದಂತೆ ಅತ ಸುಂದರಮ್ಮನವ ತಬ್ಬಿಕೊಂಡು "ಅಮ್ಮಾ ಅಮ್ಮಾ ಇಷ್ಟು ದಿನ ಎಲ್ಲಿ ಹೋಗಿದ್ದಿಯಮ್ಮ." ಎಂದ. "ಇಲ್ಲೇ ಇದ್ದೆನಪ್ಪ ಆದರೆ ಈ ನನ್ನ ಹಾಳು ಕಣ್ಣು ಪೊರೆ ಬಂದಿತ್ತು ನೀನು ಕಾಣಲಿಲ್ಲ. ಆದರೆ ಇಂದು ಆ ಪೊರೆ ಕಳಚಿ ಹೋಯಿತು ಕಂದಾ... ನೀನು ನನ್ನ ದೃಷ್ಟಿಗೆ ಬಿದ್ದೆ."

"ಆಯಿತಮ್ಮಾ ಇನ್ನು ನನ್ನ ಬಿಟ್ಟು ಎಲ್ಲಿಗೂ ಹೋಗಬೇಡ !"

"ಇಲ್ಲಪ್ಪ.... ಇನ್ನು ನಾನೆಲ್ಲಿಗೂ ಹೋಗಲಾರೆ. ಇಷ್ಟು ದಿವಸ ನಿನ್ನ ಮರೆತಿದ್ದಕ್ಕೆ ಈಗಾಗಲೇ ಸಾಕಷ್ಟು ಫಲ ಅನುಭವಿಸಿರುವೆ... ಇನ್ನು ನಿನ್ನ ಮರೆಯುವ ಹಾಗೇ ಇಲ್ಲ ನೀನೇ ನನ್ನ ಭಾಗ್ಯದ ಪುತ್ರ . ನಿನ್ನಿಂದಲೇ ನಮ್ಮ ಭಾಗ್ಯ ತೆರೆಯಬೇಕು. ನಿನ್ನಿಂದಲೇ ನಾವು ಉದ್ಧಾರವಾಗಬೇಕು."

ಅಮರ ಸುಂದರಮ್ಮನವರನ್ನು ಗಟ್ಟಿಯಾಗಿ ತಬ್ಬಿಕೊಂಡ. ರಾಮರಾಯರು ಧೋತರದ ಚುಂಗಿನಿಂದ ಕಣ್ಣೀರು ಒರೆಸಿಕೊಂಡು ದೇವರ ಪಟದತ್ತ ನೋಡಿ ಕೈ ಮುಗಿದರು.

## 10.

ಎರಡು ಮೂರು ದಿವಸಗಳು ಕಳೆದರೂ ಅಪ್ಪಾಜಿಯವರಲ್ಲಿ ಸುಧಾರಣೆ ಕಂಡು ಬರಲಿಲ್ಲ. ಅವರ ಆರೋಗ್ಯ ದಿನದಿಂದ ದಿನಕ್ಕೆ ಕ್ಷೀಣಿಸುತ್ತ ನಡೆದಿತ್ತು. ಅವರಿಗೆ ಬದುಕುವ ಆಶೆಯೇ ಉಳಿದಿಲ್ಲ. ಹಾಗಾಗಿ ನಮ್ಮ ಯಾವ ಔಷಧಿಗಳು ಅವರ ಆರೋಗ್ಯದ ಮೇಲೆ ಪರಿಣಾಮ ಮಾಡುತ್ತ ಇಲ್ಲ ಎಂದು ವೈದ್ಯರು ಹೇಳಿದರು. ಏಕಮಾತ್ರ ಪುತ್ರ, ಸೊಸೆ ಹಾಗೂ ವಂಶ ದೀಪ ಮೊಮ್ಮಗನನ್ನು..... ಒಂದೇ ಬಾರಿ ಕಳೆದುಕೊಂಡಿರುವ ಅಪ್ಪಾಜಿಯವರು ಒಂದು ದೃಷ್ಟಿಯಿಂದ ಹತಾಶರಾಗಿದ್ದರು ಇನ್ನೂ ಚಿಕ್ಕ ವಯಸ್ಸಿನಲ್ಲಿದ್ದ ಅವರೇ ತೀರಿಕೊಂಡಮೇಲೆ ಮುದಿಕೊರಡಾದ ತಾವೇಕೆ ಇನ್ನು ಬದುಕಿರಬೇಕು ಎಂದು ಯೋಚಿಸಿದ ಅವರು

ತಾವು ಸಹ ತಮ್ಮ ಮಗ, ಸೊಸೆ, ಮೊಮ್ಮಗನನ್ನು ಕೂಡಿಕೊಳ್ಳುವ ತಯಾರಿಯಲ್ಲಿದ್ದರು. ಮಾತು ನಿಂತು ನಾಲ್ಕು ದಿನಗಳು ಕಳೆದಿದ್ದವು. ಯಾವಾಗಲಾದರೊಮ್ಮೆ ಕಣ್ಣು ತೆರೆಯುತ್ತಿದ್ದರು. ಎದುರಿಗೆ ಅಮರ. ಅವನ ಕಡೆಗೊಮ್ಮೆ ವಾತ್ಸಲ್ಯ ತುಂಬಿದ ದೃಷ್ಟಿಯಿಂದ ನೋಡುತ್ತಿದ್ದರು ಅವರು ಏನನ್ನೋ ಹೇಳ ಬಯಸಿದ್ದಾರೆ ಎನ್ನುವಂತೆ ಅವರ ತುಟಿಗಳು ಕಂಪಿಸುತ್ತಿದ್ದವು....ಆದರೆ ಮಾತು ಹೊರಡುತ್ತಿರಲಿಲ್ಲ....ಅಷ್ಟರಲ್ಲಿ ಅವರ ಕಣ್ಣು ತುಂಬಿ ಬರುತ್ತಿದ್ದವು. ಕಣ್ಣು ಮುಚ್ಚುತ್ತಿದ್ದಂತೆ ತುಂಬಿ ನಿಂತ ನೀರು, ರೆಪ್ಪೆಯ ಕಟ್ಟೆಯನ್ನೊಡೆದು ಹೊರಗೆ ಧಾವಿಸುತ್ತಿತ್ತು. ಅಮರ ಟವೆಲ್‌ನಿಂದ ಮೆಲುವಾಗಿ ಕಣ್ಣೀರು ಒರೆಸುತ್ತ ಹೇಳುತ್ತಿದ್ದ.

“ಅಪ್ಪಾಜಿ....ದಯವಿಟ್ಟು ನನಗಾಗಿ ಬದುಕಿ....ನನಗೆ ನಿಮ್ಮ ಹೊರತು ಯಾರೂ ಇಲ್ಲ....ನೀವೇ ನನಗೆಲ್ಲ... ನನಗಾಗಿ ಬದುಕಿ. ಅಪ್ಪಾಜಿ...”

ಮತ್ತೆರಡು ಹನಿ ಕಣ್ಣೀರುಗಳೇ ಅಮರನ ಮಾತಿಗೆ ಉತ್ತರವಾಗುತ್ತಿದ್ದವು.

ವೈದ್ಯರು ಕೊನೆಯ ಮಾತು ಹೇಳಿ ಮುಗಿಸಿದ್ದರು. ರೋಗಿಗೆ ಬದುಕುವ ಆಸೆ ಇಲ್ಲ. ಇದರ ಮೇಲೆ ಏನೂ ಮಾಡಲಾಗುವುದಿಲ್ಲ. ಅಮರ ದೀಪಾಳಿಗೆ ಈ ವಿಷಯ ತಿಳಿಸಿದಾಗ ಅವಳೂ ಸಹ ಅಪ್ಪಾಜಿಯವರೊಂದಿಗೆ ಮಾತನಾಡಲು ಬಯಸಿದಳು. ತನ್ನ ಅಳಲು ತೋಡಿಕೊಂಡಳು. ಯಾವುದೂ ಇಷ್ಟವಾಗದ ಅಪ್ಪಾಜಿ ಮೌನವ್ರತ ತಳೆದಿದ್ದರು

ಮನೆಯಲ್ಲಿ ದೀಪ ಒಬ್ಬಳೆ. ವರದರಾಜುರವರು ಜಪಾನಕ್ಕೆ ಹೋದವರು ಒಂದು ವಾರ ತಡೆದು ಬರುವುದಾಗಿ ತಿಳಿಸಿದ್ದರು. ಇಲ್ಲಿ ಅಪ್ಪಾಜಿಯವರ ದೇಹಸ್ಥಿತಿ ವಿಷಮಿಸುತ್ತಾ ನಡೆದಿತ್ತು. ದೀಪಾಳೇ ಎಲ್ಲಾ ವೈದ್ಯರ ಖರ್ಚು ಕೊಡಲು ಮುಂದೆ ಬಂದಿದ್ದಳು. ತನ್ನ ಹತ್ತಿರವಿದ್ದ ಅಲ್ಲದೇ ತಂದೆ ಖರ್ಚಿಗೆ ಇರಲೆಂದು ನೀಡಿದ ಹಣ ಎಲ್ಲ ಸೇರಿ ನಾಲ್ಕಾರು ಸಾವಿರವಾಗಬಹುದಷ್ಟೇ. ಅದರಲ್ಲಿ ಆಗಲೇ ಒಂದುವರೆ ಸಾವಿರ ಖರ್ಚಾಗಿ ಹೋಗಿತ್ತು.

ಒಂದು ಗಂಟೆ ಅಪ್ಪಾಜಿಯವರ ಬಳಿ ಕುಳಿತ ಅಮರ ಮತ್ತು ದೀಪಾ ಮೇಲೆದ್ದರು. ರಾತ್ರಿ ಎಂಟು ಗಂಟೆಯಾಗಿತ್ತು. ದೀಪಾ ಅಮರನನ್ನು ತನ್ನ ಮನೆಗೆ ಕರೆ ತಂದಳು. ಊಟಕ್ಕೆ ಒತ್ತಾಯಿಸಿದಾಗ ಅಮರ “ಮನಸ್ಸು ಸರಿ

ಇಲ್ಲ ಬೇಡ." ಎಂದ. ಎರಡು ಕಪ್ ಕಾಫಿ ಮಾಡಿಕೊಂಡು ಬಂದಳು. ಅಮರ ನಾಲ್ಕೇ ಗುಟುಕಿಗೆ ಕಾಫಿ ಕುಡಿದು ಕೆಳಗಿರಿಸಿದ, ದೀಪಾ ನಿಧಾನವಾಗಿ ಕುಡಿಯುತ್ತ ಮಾತಿಗೆ ಪ್ರಾರಂಭಿಸಿದಳು,

"ಅಮರ ನಾನೊಂದು ಮಾತು ಕೇಳಲಾ ?"

ಆಕೆ ಏನು ಕೇಳುತ್ತಾಳೆ ಎಂಬುದು ಅಮರನಿಗೆ ಗೊತ್ತು ಆದರೂ ಕೇಳಿದ

"ಏನು ? ನಿಸ್ಸಂಕೋಚವಾಗಿ ಕೇಳು "

"ಅಮರ ನನಗಾಗಿ ನೀನು ಮದುವೆಗೆ ಒಪ್ಪಿಕೊಳ್ಳಲಾರೆಯಾ ?..... ನೀನೇನೋ ಗಂಡಸು.... ಕೊನೆಯವರೆಗೂ ಹೀಗೆ ಇದ್ದರೂ ನಿನಗೇನೂ ಅನ್ನಲಾರರು. ಆದರೆ ನನಗೆ ? ನನಗೆ ನಿನ್ನೊಂದಿಗೆ ಇರುವ ಬಯಕೆ ಇದೆ. ಆದರೆ ಜನ ನನ್ನನ್ನು ಸುಮ್ಮನೆ ಬಿಡಲಾರರು. ದಿನಕ್ಕೊಂದು ನಂಜಿನ ಮಾತು ಕೇಳಿ ಜೀವ ಬೇಸರವಾಗಿದೆ. ಅಮರ ನೀನು ಒಂದು ಬಾರಿ ಹೂಂ ಅನ್ನು ಮದುವೆ ಮಾಡಿಕೊ.... ನನ್ನನ್ನ ಈ ಪಾಪ ಕೂಪದಿಂದ ಎತ್ತು "

"ದೀಪಾ ನಿನ್ನ ಭಾವನೆಗಳನ್ನು ನಾನು ಅರ್ಥ ಮಾಡಿಕೊಳ್ಳಬಲ್ಲೆ.... ಆದರೆ.... ಆದರೆ ನನ್ನದಾದ ಆಶೆಯಿದೆ, ಛಲ ಇದೆ. ಅದಕ್ಕಾಗಿ ನಾನು ತಡೆದಿರುವೆ, ಮದುವೆಯಾದರೆ ನಾರು ನನ್ನ ಮಹತ್ವಾಕಾಂಕ್ಷೆಗೆ ಶರಣು ಹೊಡೆಯಬೇಕಾಗುತ್ತದೆ . "

"ಶರಣು ಹೊಡೆಯಬೇಕಾಗಿಲ್ಲ ಅಮರ...... ಮದುವೆಯಾದ ನಂತರವೂ ಪ್ರಯತ್ನ ಮುಂದುವರೆಸುವಾ__ ಅದೃಷ್ಟಕ್ಕಾಗಿ ಅರಸುವಾ...."

"ಹೇಳಿದಷ್ಟು ಸುಲಭವಲ್ಲ ದೀಪಾ..... ಯಾವ ಜಂಜಾಟವೂ ಇಲ್ಲದೆ ಈಗ ನಿಶ್ಚಿಂತನಾಗಿರುವೆ ನಾನು ನಾಳೆ ಮದುವೆಯಾಗಿ ಮಕ್ಕಳೂ ಆದವೆಂದರೆ ಹೆಂಡತಿ ಮಕ್ಕಳ ಗಲಾಟೆಯಲ್ಲಿ ನನ್ನನ್ನೇ ನಾನು ಮರೆಯಬೇಕಾಗುವುದು___ ಆಗ ನನ್ನ ಮಹತ್ವಾಕಾಂಕ್ಷೆ ಆಶೆ ಎಲ್ಲಾ ಎಲ್ಲೋ ದೂರ, ಬಹುದೂರ ಓಡಿ ಹೋಗಿರುತ್ತದೆ... "

ಒಂದು ದೀರ್ಘ ಶ್ವಾಸಬಿಟ್ಟು ಸ್ವಲ್ಪ ಯೋಚಿಸಿ ದೀಪಾ ಹೇಳಿದಳು,

"ಅಮರ ಒಂದು ವೇಳೆ ನಿನಗೆ ಹೆಂಡತಿ ಮಕ್ಕಳ ಗಲಾಟೆಯಲ್ಲಿ ನಿನ್ನ ಆಶೆ ದೂರ ಹೊರಟು ಹೋಗುವ ಭಯವಿದ್ದರೆ ಅದಕ್ಕೆ ನಾನೊಂದು ಉಪಾಯ ಹೇಳುತ್ತೇನೆ."

"ಯಾವ ಉಪಾಯ ?"

"ನೀನು ನನ್ನನ್ನು ಕೇವಲ ಮದುವೆಯಾಗು ಮದುವೆಯ ನಂತರವೂ ನಾನು ನೀನು ಹೀಗೇನೆ ಇರೋಣ. ಜಗತ್ತಿನ ದೃಷ್ಟಿಯಲ್ಲಿ ಮಾತ್ರ ನಾವು ಪತಿ ಪತ್ನಿಯರು— ಎಲ್ಲಿಯವರೆಗೂ ನಿನ್ನ ಮಹತ್ವಾಕಾಂಕ್ಷೆ ಪೂರ್ಣವಾಗು ವುದಿಲ್ಲವೋ ನಾನು ನಿನ್ನನ್ನು ..."

"ದೀಪಾ.... ನೀನು ಏನು ಹೇಳ್ತಾ ಇದ್ದೀಯಾ ?"

"ಅಮರ ನಾನು ನಿಜವನ್ನೇ ಹೇಳ್ತಾ ಇದ್ದೀನಿ. ನಿನಗೆ ಹೇಗೆ ಒಂದು ಮಹತ್ವಾಕಾಂಕ್ಷೆ ಇದೆಯೋ ಅದೇ ರೀತಿ ನನಗೂ ಒಂದು ಆಶೆ ಇದೆ, ನಿನ್ನ ಹೆಂಡತಿಯಾಗುವುದು.... ನಿನ್ನಿಂದ ಮಾಂಗಲ್ಯ ಕಟ್ಟಿಸಿಕೊಳ್ಳುವುದು.... ನನಗೆ ಬುದ್ಧಿ ತಿಳಿದಾಗಿನಿಂದ ನಾನು ನಿನ್ನನ್ನೇ ನನ್ನ ಪತಿಯೆಂದು ತಿಳಿದಿರುವೆ. ನಾವು ದೈಹಿಕವಾಗಿ ಪತಿ ಪತ್ನಿಯಾಗದಿದ್ದರೂ ಮಾನಸಿಕವಾಗಿ ಪತಿ ಪತ್ನಿಯರಾಗಿ ದ್ದೇವೆ. ನನ್ನ ಆಶೆ ನೆರವೇರಿಸು ಅಮರ..... ಒಂದು ಬಾರಿ ನನ್ನ ಹಣೆಗೆ ಕುಂಕುಮ ಇಟ್ಟು ಕೊರಳಿಗೆ ಮಾಂಗಲ್ಯ ಕಟ್ಟು— ಬೇಕೆಂದರೆ ಪೂರ್ತಿ ಜನ್ಮ ನಾನು ಅಹಲ್ಯೆ ಶ್ರೀರಾಮನಿಗಾಗಿ ಕಾದಂತೆ ಕಾಯುತ್ತೇನೆ."

"ದೀಪಾ !" ಅಮರ ಅವಳನ್ನು ಬಾಚಿ ತಬ್ಬಿಕೊಂಡ. ದೀಪಾ ಅವನೆದೆ ಯಲ್ಲಿ ಮುಖ ಹುದುಗಿಸಿದಳು. ಎರಡು ಮೂರು ನಿಮಿಷ ಯಾರೂ ಮಾತ ನಾಡಲಿಲ್ಲ.... ಸಮಾಧಾನ ಮಾಡಿಕೊಂಡ ದೀಪಾಳು ಮಾತು ಮುಂದುವರಿಸಿ,

"ಅಮರ.... ನನಗೇಕೋ ಹೆದರಿಕೆ ಆಗ್ತಾ ಇದೆ. ನನ್ನ ಮನಸ್ಸಿನ ವಿರುದ್ಧ ನನ್ನ ತಂದೆ ಮದುವೆ ನಿರ್ಧಾರ ತೆಗೆದುಕೊಳ್ಳಲಾರರು. ಆದರೂ ಒಂದೊಂದು ಬಾರಿ ಮನದಲ್ಲಿ ಶಂಕೆ ಮೂಡುತ್ತದೆ ... ನೀನು ನನ್ನ ಪಾಲಿಗೆ ನೆರಳಿನಂತೆ ಭಾಸವಾಗುತ್ತಿ.... ಮುಟ್ಟಲಾರದ ನೆರಳಾಗಿ ತೋರುತ್ತಿ.... ನಿನ್ನ ಹಿಡಿಯಲು ನಾನು ಬಂದರೆ ನೀನು ದೂರ ಸರಿಯುತ್ತಿ.... ನಾನು ಓಡಿ ಬಂದರೆ ನೀನು ಓಡಿ ಹೋಗುತ್ತಿ, ಏಕೆ ? ಏಕೆ ? ನನಗೆ ಅರ್ಥವಾಗುವುದಿಲ್ಲ. ನನ್ನೆದೆ ಬಡಿದು ಕೊಳ್ಳುತ್ತಿದೆ.... ದಯವಿಟ್ಟು ನನ್ನನ್ನು ಬಿಡಬೇಡ ನನ್ನ ಕೈ ಹಿಡಿ, ಪರಿಸು ನನಗೆ ಆಸರೆ ನೀಡು."

"ಹುಚ್ಚಿ ನಾನು ನಿನ್ನನ್ನು ಬಿಟ್ಟು ಎಲ್ಲಿಗೂ ಹೋಗುವುದಿಲ್ಲ ... ದೈವ ನಮ್ಮಿಬ್ಬರನ್ನೂ ಪತಿ ಪತ್ನಿ ಎಂದು ಎಂದೋ ನಿರ್ಧಾರ ಮಾಡಿದೆ ನಿನಗಾ

ನಾನು, ನನಗಾಗಿ ನೀನು ಎಂದೇ ಜನ್ಮ ತಾಳಿದ್ದೇವೆ, ಹೀಗಿರುವಾಗ ಇಲ್ಲದ ವಿಚಾರ ಮಾಡಿ ಅಧೀರನಾಗಬೇಡ. ನೀನು ಅಧೀರನಾದರೆ ನಾನೂ ಅಧೀರನಾಗಬೇಕಾಗುತ್ತದೆ. ಸ್ವಲ್ಪ ಸಮಯ ತಾಳು ಮುಂದೆ ಎಲ್ಲವೂ ಸರಿ ಹೋಗುತ್ತದೆ.”

“ಹಾಗಾದರೆ ಒಂದು ಕೆಲಸ ಮಾಡು....”

“ಯಾವ ಕೆಲಸ ಹೇಳು ದೀಪಾ ! ನಿನಗಾಗಿ ಒಂದೇಕೆ ಹತ್ತು ಕೆಲಸಗಳನ್ನು ಮಾಡಲು ಸಿದ್ಧ.”

“ಬಾ ನನ್ನ ಜೊತೆಗೆ.”

“ಎಲ್ಲಿಗೆ ?”

ದೀಪಾ ಅಮರನ ಮಾತಿಗೆ ಉತ್ತರ ಕೊಡುವ ಗೋಜಿಗೆ ಹೋಗಲಿಲ್ಲ. ಅವನ ಕೈ ಹಿಡಿದುಕೊಂಡು ಎಳೆಯುತ್ತ ದೇವರ ಮನೆಗೆ ಬಂದಳು. ಅವನ ಕೈ ಬಿಟ್ಟು ದೇವರ ಮುಂದೆ ತುಪ್ಪದ ದೀಪ ಹಚ್ಚಿದಳು. ಊದುಬತ್ತಿ ಉರಿಸಿ ಭಕ್ತಿಯಿಂದ ಕೈ ಮುಗಿದಳು.

ಅವಳ ವರ್ತನೆಯನ್ನು ನೋಡಿ ಮೂಕನಾಗಿ ನಿಂತುಬಿಟ್ಟಿದ್ದ. ಕುಂಕುಮದ ಕರಡಿಗೆಯನ್ನು ಕೈಗೆ ತೆಗೆದುಕೊಂಡ ದೀಪಾ ಅವನ ಕಡೆ ಹೊರಳಿ ಹೇಳಿದಳು, ಅವಳ ಧ್ವನಿ ಗಂಭೀರವಾಗಿತ್ತು. ಅವಳ ಮುಖದ ಮೇಲೆ ಯಾವುದೋ ದಿವ್ಯ ಕಳೆ ಮೂಡಿಬಂದಿತ್ತು. ಅವಳ ಕಣ್ಣುಗಳು ನಕ್ಷತ್ರದಂತೆ ಹೊಳೆಯುತ್ತಿದ್ದವು.

“ಅಮರ ದೇವರ ಸನ್ನಿಧಿಯಲ್ಲಿ ನಾನೇ ನಿನ್ನ ಪತ್ನಿ ಎಂದು ಶಪಥಮಾಡಿ ನನ್ನ ಹಣೆಗೆ ಕುಂಕುಮ ಇಡು ... ದೇವರ ಎದುರಿನಲ್ಲಿ ನಾನೂ ನೀನೂ ಪತಿ ಪತ್ನಿ ಎಂದು ಸ್ವೀಕರಿಸುವಾ !”

ಅಮರನ ದೇಹದಲ್ಲಿ ಮಿಂಚು ಸುಳಿದಂತಾಯ್ತು. ಯಾವುದೋ ಒಂದು ಅದೃಶ್ಯ ಹಸ್ತ ಅವನನ್ನು ಆಡಿಸುತ್ತಿರುವಂತೆ ಭಾಸವಾಯಿತು. ದೂರದಿಂದ.... ಅನತಿ ದೂರದಿಂದ ಕೇಳಿ ಬರುತ್ತಿರುವ ಗಂಭೀರವಾಣಿ ಅವನ ಕಿವಿಯಲ್ಲಿ ಮೊಳಗತೊಡಗಿತು. ‘ಅಮರ ದೀಪಾ ನಿನ್ನ ಪತ್ನಿ ... ನೀವಿಬ್ಬರೂ ಸತಿ ಪತಿಗಳು. ಆಕೆ ನಿನಗಾಗಿ ಏಳು ಜನ್ಮದಿಂದ ಕಾದು ನಿಂತವಳು. ಮುಂದಿನ ಏಳು ಜನ್ಮವನ್ನು ಕಾಯುವವಳು.... ನಿಮ್ಮದು ಏಳೇಳು ಜನ್ಮದ ಪ್ರೀತಿ !

ಆಕೆಯನ್ನು ಸ್ವೀಕರಿಸು...... ದೇವರ ಸನ್ನಿಧಿಯಲ್ಲಿ ಪತ್ನಿ ಎಂದು ಒಪ್ಪಿಕೋ'

ಅಮರ ಒಂದು ಹೆಜ್ಜೆ ಮುಂದೆ ಬಂದ, ಭಕ್ತಿಯಿಂದ ದೇವರಿಗೆ ವಂದಿಸಿದ. ಕೊರಳಿ ದೀಪಾಳ ಬಳಿಬಂದ, ಕರಂಡಿಕೆಯಿಂದ ಕುಂಕುಮ ತೆಗೆದುಅವಳ ಹಣೆಗಿಡುತ್ತಾ ಕೇಳಿದ.

"ದೀಪಾ_ ನೀನು ನನ್ನ ಪತ್ನಿ ದೇವರ ಸಾಕ್ಷಿಯಾಗಿ ನಾವು ಇಂದಿನಿಂದ ಸತಿಪತಿಗಳು " ದೀಪಾ ಅಮರನನ್ನು ಅಪ್ಪಿಕೊಂಡಳು. ಅವರಿಬ್ಬರೂ ಒಬ್ಬನ್ನೊಬ್ಬರು ತಬ್ಬಿಕೊಂಡೇ ಎಷ್ಟೋ ಸಮಯದವರೆಗೆ ನಿಂತಿದ್ದರು. ಅವರೆದುರು ದೇವರ ಮುಂದಿದ್ದ ಶಾಂತನಾದ ನಂದಾದೀಪ ಉರಿಯುತ್ತಿತ್ತು.

ಅಮರ ಮನೆಗೆ ಬಂದಾಗ ರಾತ್ರಿ ಒಂದು ಗಂಟೆಗೆ ಸಮೀಪಿಸಿತ್ತು. ವಠಾರದ ಮುಂದೊಂದು ಕಾರ . ಈ ಸಮಯದಲ್ಲಿ ಯಾರ ಮನೆಗೆ ಈ ಕಾರು. ಬಂದಿರಬಹುದ ? ಎಂದುಕೊಳ್ಳುತ್ತಾ ಭರ ಭರ ಹೆಜ್ಜೆ ಹಾಕಿದ ಅಮರ ವಠಾರದ ಒಳಕ್ಕೆ ಕಾಲಿಟ್ಟ ... ಎಲ್ಲ ಮನೆಗಳ ಬಾಗಿಲು ಹಾಕಿಕೊಂಡಿವೆ ! ದೀಪ ಆರಿವೆ. ಕೇವಲ ತನ್ನ ಮನೆಯ ಕಿಟಿಕಿಯಿಂದ ಮಾತ್ರ ದೀಪದ ಬೆಳಕು ತೂರಿ ಹೊರಗೆ ಬರುತ್ತಿವೆ ! ಮಾತನಾಡುತ್ತಿರುವ ಅಸ್ಪಷ್ಟ ಧ್ವನಿಗಳು. ಆತ ಮನೆ ಹತ್ತಿರ ಬಂದಾಗ ಧ್ವನಿ ಸ್ಪಷ್ಟವಾಯಿತು. ಪರಿಚಿತ ಎನಿಸಿತು, ಓಹ್ ಇದು ಮಾಲತಿಯ ಧ್ವನಿ ! ಇಂಥ ಅಪರಾತ್ರಿಯಲ್ಲಿ ಏಕೆ ಬಂದಳೋ ? ಎಂದು ಗಾಭರಿಯಿಂದ ಅವರ ಮನೆಯ ಬಾಗಿಲಿಗೆ ಬಂದ...... ಅವನ ಕಾಲು ಅಲ್ಲಿಗೇ ನಿಂತವು. ಮಾಲತಿ ದುಃಖ ತುಂಬಿದ ಧನಿಯಲ್ಲಿ ಮಾತನಾಡುತ್ತಿದ್ದಳು,

"ಅಪ್ಪಾ ! ನಿನ್ನ ಮಗಳು ಕೇವಲ ಇನ್ನು ಎರಡು ಮೂರು ದಿನಗಳಲ್ಲಿ ವಿಧವೆಯಾಗುತ್ತಾಳಪ್ಪಾ ಡಾಕ್ಟರು ಹೇಳಿಬಿಟ್ಟಿದ್ದಾರೆ..... ಬಹಳವೆಂದರೆ ನಿನ್ನ ಅಳಿಯಂದಿರು ಮೂರು ದಿನ ಬದುಕುತ್ತಾರೆಂದು. ಈ ಮೂರು ದಿನಗಳಲ್ಲಿ ಅವರ ಮೂತ್ರಪಿಂಡ ತೆಗೆದು ಬೇರೆ ಮೂತ್ರಪಿಂಡ ಜೋಡಿಸಿದರೆ ಅವರು ಬದುಕುತ್ತಾರಂತೆ ಎರಡು ಮೂತ್ರ ಪಿಂಡಗಳು ಕೆಟ್ಟು ಹೋಗಿದ್ದು, ಅವರಿಗೆ ಒಂದೇ ಒಂದು ಒಳ್ಳೆಯ ಮೂತ್ರಪಿಂಡ ಜೋಡಿಸಿದರೆ ಸಾಕು ಅವರು ಬದುಕುತ್ತಾರಪ್ಪಾ. ನಿನ್ನ ಮಗಳ ಮಾಂಗಲ್ಯ ನಿನ್ನ ಕೈಯಲಿದೆ. ಹೇಗಾದರೂ ಮಾಡಿ ಅವರನ್ನು ಉಳಿಸಪ್ಪಾ."

ಅದರ ಹಿಂದೆ ಬಿಕ್ಕಳಿಕೆಯ ಸದ್ದು ಸುಂದರಮ್ಮನ ಪ್ರಲಾಪ

"ಯಾವ ಜನ್ಮದ ಪಾಪದ ಫಲವೋ ಏನೋ ತಾಯಿ___ನನಗೇ ಈ ರೀತಿ ವಿಧಿ ಕಾಡುತ್ತಿದೆ.....ನೀನಿನ್ನು ಎಳೆಮಗು .. ಅಲ್ಲದೇ ಮಗುವಿನ ತಾಯಿಯಾಗು ವವಳು___ನಿನಗೆ ಈ ಗತಿ ಬರಬಾರದಾಗಿತ್ತು.....ನಾನಾದರೂ ಏನು ಮಾಡಲಿ ಮಗಳೆ....ನಾನು ಗಂಡಸಾಗಿದಿದ್ದರೆ... ನಿನಗೆ ಸಹಾಯ ಮಾಡುತ್ತಿದೆ... "

ಅಲ್ಲಿಯವರೆಗೂ ದೆವ್ವ ಬಡಿದವರಂತೆ ನಿಂತಿದ್ದ ರಾಯರು ಹೇಳಿದರು, "ಅಮ್ಮಾ ಮಾಲತಿ.....ನನ್ನ ಮೂತ್ರಪಿಂಡ ಜೋಡಿಸಲು ಹೇಳು ತಾಯಿ ಅದರಿಂದ ನಿನ್ನ ಗಂಡ ಬದುಕಲಿ....ನಾನು ಈಗಾಗಲೇ ಬದುಕಿಯೂ ಸತ್ತಂತಿರುವೆ.ನನಗೂ ಜೀವ ಬೇಸರವಾಗಿದೆ "

"ಏನ್ರಿ ...ಏನ್ರಿ ನೀವು ಹೇಳ್ತಾ ಇರೋದು ? ನಿಮಗೆ ಒಬ್ಬ ಹೆಂಡತಿ ಇದ್ದಾಳೆ. ಮದುವೆಯಾಗೋ ಮಗಳು ಇದ್ದಾಳೆನ್ನುವುದನ್ನೂ ಮರೆತು ಬಿಟ್ರೇನ್ರಿ___ನೀವು ನಿಶ್ಚಿಂತೆಯಾಗಿ ಹೊರಟು ಹೋದ್ರೆ....ಮುಂದೆ___ಮುಂದೆ ನಮ್ಮ ಗತಿ ಏನು ?"

"ಹಾಗಾದರೆ ನಾನು ಏನು ಮಾಡಲಿ ನೀನೇ ಹೇಳು ಸುಂದ್ರ ?ನನಗೆ ನೀನೂ ಬೇಕು..... ಮಾಲತಿಯ ಸಂಸಾರವೂ ಸುಸೂತ್ರವಾಗಿ ಸಾಗಬೇಕು ಅದಕ್ಕೆಂದೇ ನಾನು ಈ ತೀರ್ಮಾನ ಕೈಕೊಂಡಿರೋದು. ಒಂದು ವೇಳೆ ನನಗೇನಾದರೂ ಆದರೆ..... ನಿಮ್ಮೆಲ್ಲರನ್ನು ಈ ಮಾಲತಿಯೇ ನೋಡಿಕೊಳ್ಳುತ್ತಾಳೆ ನೀನೇಕೆ ಚಿಂತಿಸುತ್ತಿ ... ನಾನು ಹೇಳಿದ್ದು ಸರಿ ತಾನೇ ?.....ನನಗೇನಾದ್ರು ಆದರೆ___ಈ ದಿಕ್ಕಿಲ್ಲದ ಸಂಸಾರವನ್ನು ನನ್ನ ಹೆಂಡತಿಮಕ್ಕಳನ್ನು ನೀನು ನೋಡಿಕೊಳ್ಳುತ್ತಿಯಲ್ಲವೆ?"

"ಅಪ್ಪಾ ! ಈ ರೀತಿ ಮಾತನಾಡಿ ನನ್ನನ್ನು ಕೊಲ್ಲಬೇಡಪ್ಪ.... ಇವರೆಲ್ಲ ನನ್ನವರೇ ಅಲ್ಲವೇ ನಿನ್ನ ಹೆಂಡತಿ ನನ್ನ ತಾಯಿಯಲ್ಲವೇ ನಿನ್ನ ಮಗಳು ನನ್ನ ತಂಗಿಯಲ್ಲವೇ ? ಆದರೆ ... ಆದರೆ...."

"ಆದರೆ ಏನು ಮಾಲತಿ..... ಹೇಳು ಹೇಳು"

"ನಿನ್ನ ಮೂತ್ರಪಿಂಡಗಳಿಂದ ಕೆಲಸ ನಡೆಯುವುದಿಲ್ಲಪ್ಪ .. ನಿನಗೆಆಗಲೇ ವಯಸ್ಸಾಗಿದೆ. ನಿನ್ನ ಅಳಿಯಂದಿರಗೆ ತರುಣರ ಅದೂ ಇಪ್ಪತ್ತೈದು ಇಪ್ಪತ್ತಾರು ವರ್ಷಗಳ ತರುಣರ ಮೂತ್ರ ಪಿಂಡ ಬೇಕು, ನಿನ್ನ ಮೂತ್ರ ಪಿಂಡಗಳಿಂದ ಅವರು ಬದುಕಲಾರರು."

"ಓಹ್___ ವಿಧಿಯೇ ಇದೆಂಥ ಪರೀಕ್ಷೆ ! ಇದಕ್ಕೆ ಬೇರೆಯಾವ ದಾರಿಗಳೂ ಇಲ್ಲವೇ ?"

"ಇದೆ ಅಪ್ಪಾ.... ಒಂದು ದಾರಿ ಇದೆ."

"ಹೇಳಮ್ಮಾ ಬೇಗ ಹೇಳು !"

"ಅಪ್ಪಾ ಒಂದು ವೇಳೆ ... ಒಂದು ವೇಳೆ ವಸಂತ ಮನಸ್ಸನ್ನು ಮಾಡಿದರೆ ನಾನು ವಿಧವೆಯಾಗುವುದಿಲ್ಲವಪ್ಪಾ...."

ಗೋಡೆಗೆ ಆತು ಕುಳಿತುಕೊಂಡ ವಸಂತ ಧಡಕ್‌ನೆ ಎದ್ದು ನಿಂತು,

"ಏನು ? ನಾನು ಮನಸ್ಸು ಮಾಡಿದರೆ ?" ಎಂದು ಕೇಳಿದ.

"ಹೌದು ಅಣ್ಣ .... ನೀನು ಮನಸ್ಸು ಮಾಡಿದರೆ ಒಂದೇ ಒಂದು ಮೂತ್ರಪಿಂಡ ದಾನ ಮಾಡು. ಇದರಿಂದ ನಿನ್ನ ಜೀವಕ್ಕೂ ಅಪಾಯವಿಲ್ಲ.... ನನ್ನ ಪತಿಯೂ ಬದುಕುತ್ತಾನೆ... "

ವಸಂತ ಉತ್ತರ ಕೊಡುವುದಕ್ಕೆ ಮೊದಲೇ ಪಂಕಜಾ ಒಳಗಿನಿಂದ ಬಿರುಗಾಳಿಯಂತೆ ಹೊರಗೆ ಬಂದು ಅಬ್ಬರಿಸಿದಳು,

"ನಮಗೆ ಬೇಕಾಗಿಲ್ಲ ಈ ಮಾತಿಗೆ ನಾನೆಂದೂ ಒಪ್ಪಲಾರೆ."

"ಪಂಕಜಾ___ ನೀನು ಇದೇನು ಮಾತನಾಡುತ್ತಿರುವೆ ? ಆಕೆ ನನ್ನ ತಂಗಿ...... ಆಕೆಯ ಭವಿಷ್ಯ ನಾನು ಉಳಿಸೋದು ಬೇಡವೆ ? ಒಂದೇ ಒಂದು ಮೂತ್ರಪಿಂಡ ಕೊಟ್ಟರೆ ನನ್ನ ಜೀವಕ್ಕೆ ಅಪಾಯವೇನೂ ಇಲ್ಲ !"

ವಸಂತ ಪಂಕಜಾಗೆ ಹೇಳಿದಾಗ, ಪಂಕಜಾ ಸಿಡಿಮದ್ದಿನಂತೆ ಸಿಡಿದು, ಹೇಳಿದಳು,

"ಯಾರ್ರೀ.... ಯಾರು ನಿಮ್ಮ ತಂಗಿ ? ಈಕೆಯೋ ! ಅಂದು ನಿಮಗಾಗಿ ನಿಮ್ಮ ತಂದೆ ಹತ್ತು ಸಾವಿರ ರೂಪಾಯಿ ಕೇಳಲು ಹೋದಾಗ ಹತ್ತು ಪೈಸೆ ಸಹ ಇಲ್ಲ ಎಂದು ಹೇಳಿದವಳು ನಿಮ್ಮ ಈ ತಂಗಿಯೇ ಅಲ್ಲವೆ ? ಆಗ ಮುಖ ತಿರುವಿದ ಈಕೆ ಈಗ ತನ್ನ ಮನೆಯಲ್ಲಿ ಕತ್ತಲು ಆವರಿಸಿದ್ದನ್ನು ಕಂಡು ಅಣ್ಣಾ ಎಂದು ಓಡಿ ಬಂದಿದ್ದಾಳೆ, ದೀಪ ಹಚ್ಚೆಂದು ಕೇಳಲು ... ನಾನದಕ್ಕೆ ಎಂದೂ ಒಪ್ಪಲಾರೆ___"

"ಪಂಕಜಾ !" ಮಾಲತಿ ಓಡಿ ಬಂದು ಅವಳ ಕಾಲು ಹಿಡಿದುಕೊಂಡು ಕೇಳಿದಳು ದೀನಳಾಗಿ,

"ಪಂಕಜಾ ಹಿಂದಿನದೆಲ್ಲ ಮರೆತುಬಿಡು. ಯಾವುದೋ ಒಂದು ವಿಷ ಗಳಿಗೆಯಲ್ಲಿ ನಾನು ಆ ರೀತಿ ಹೇಳಿದ್ದೆ. ಅದಕ್ಕೆ ಸೇಡೆಂದು ಈಗ ಈ ರೀತಿ ವರ್ತಿಸಬೇಡ. ನಿನಗೆ ಕೈ ಮುಗಿಯುತ್ತೇನೆ ನನ್ನ ಪತಿಯುಳಿಯುವಂತೆ ಸಹಾಯ ಮಾಡು..... ಅಂದು ಹತ್ತು ಸಾವಿರ ಇಲ್ಲವೆಂದು ಹೇಳಿದ್ದೇನಲ್ಲ, ಈಗ ಅದಕ್ಕೆ ದಂಡವೆಂದು ಒಂದು ಲಕ್ಷ ರೂಪಾಯಿ ಕೊಡಲು ಸಿದ್ಧ ! ಒಂದು ಲಕ್ಷ ರೂಪಾಯಿ ತೆಗೆದುಕೊಂಡು ನನ್ನ ಕುಂಕುಮ ಉಳಿಸು,"

"ಒಂದು ಲಕ್ಷ ರೂಪಾಯಿ ಆಸೆಗೆ ಬಲಿಬಿದ್ದು, ನಿನ್ನ ಕುಂಕುಮ ಉಳಿಸಲು ಹೋಗಿ ನನ್ನ ಕುಂಕುಮವನ್ನು ಕಳೆದುಕೊಳ್ಳಲಾರೆ.... ನನ್ನ ಗಂಡನ ಹಣೆಯಲ್ಲಿ ಬರೆದಂತೆ ಆಗಲಿ. ಆತನ ನೌಕರಿ ಹೋಗಿ ಆತ ಜೇಲು ಕಂಡರೂ ಸರಿ..... ನಾನು ಕಳ್ಳನ ಹೆಂಡತಿ ಎಂದು ಅನ್ನಿಸಿಕೊಂಡರೂ ಸರಿ, ನನ್ನ ಪತಿ ಜೀವಂತ ಇದ್ದರೆ ಸಾಕು ನನ್ನ ಕುಂಕುಮ ಭದ್ರವಾಗಿದ್ದರೆ ಸಾಕು.... ಅದೇ ನನಗೆ ಹೆಚ್ಚಿಗೆ ಏನೂ ಬೇಡ."

ಗುಡುಗಿನಂತೆ ಗುಡುಗಿದ ಪಂಕಜಾ ವಸಂತನ ಕೈ ಹಿಡಿದು,

"ಬರ್ರೀ ಒಳಗಡೆ ಇಲ್ಲೇನೂ ನಿಮಗೆ ಕೆಲಸವಿಲ್ಲ." ಎಂದು ಹೇಳುತ್ತ ಎಳೆದುಕೊಂಡು ತನ್ನ ಕೋಣೆಗೆ ಹೋಗಿ ಬಾಗಿಲು ಹಾಕಿಕೊಂಡಳು, ಮಾಲತಿ ತಾಯಿಗೆ ತೆಕ್ಕೆ ಬಿದ್ದು "ಅಮ್ಮಾ ! ಮುಂದೆ ಹೇಗವ್ವಾ ? ನಿನ್ನ ಮಗಳು ವಿಧವೆಯಾಗುವುದು ತಪ್ಪಲಾರದೇ ?" ಎಂದು ಎದೆ ಬಡಿದುಕೊಂಡು ರೋಧಿಸ ಲಾರಂಭಿಸಿದಳು. ರಾಮರಾಯರು ಮುಂದೆ ಬಂದು ಆಕೆಯನ್ನು ಸಮಾಧಾನ ಪಡಿಸಿದರು,

'ಮಾಲತಿ _ಅಳಬೇಡಮ್ಮ ....ಇನ್ನೂ ಸಮಯವಿದೆ ನಿರಾಶಳಾಗಬೇಡ. ಪತ್ರಿಕೆಯಲ್ಲಿ ಕೊಡು ರೇಡಿಯೋದಲ್ಲಿ ಹೇಳಿಸು. ಒಂದು ಲಕ್ಷ ರೂಪಾಯಿ ಕೊಡುತ್ತೇನೆ ಅಂದರೆ ಯಾರಾದರೂ ಮುಂದೆ ಬಂದಾರು..... ಏಳಮ್ಮ ಮೇಲೇಳು ಹೊತ್ತಾಗುತ್ತೆ ...ಇನ್ನು ಮನೆಕಡೆ ನಡೆಯಮ್ಮ ....ನಾಳೆ ಬೆಳಗ್ಗೆ ನಾನೂ ಸಹ ಬೇರೆ ಬೇರೆ ಕಡೆ ಕೇಳಿ ನೋಡುತ್ತೇನೆ. ಅಮರ ಬರಲಿ..... ಅವನಿಗೂ ಹೇಳಿ, ಅವನ ಮಿತ್ರರನ್ನು ವಿಚಾರಿಸಲು ಹೇಳುತ್ತೇನೆ "

"ಅಮರ" ಎಂಬ ಶಬ್ದ ಕಿವಿಗೆ ಬೀಳುತ್ತಲೂ ಸರಕ್ಕನೇ ಮಾಲತಿ ಮುಖ ಮೇಲೆತ್ತಿ ಕೇಳಿದಳು.

"ಅಪ್ಪಾ!....ಅಂದಹಾಗೆ ಅಮರನನ್ನು ಒಂದು ಮಾತು ಏಕೆ ಕೇಳಬಾರದು ? ಅವನು ಮನಸ್ಸು ಮಾಡಿದರೆ ಒಂದು ಮೂತ್ರಪಿಂಡ ದಾನ ಮಾಡಬಹುದು "

"ಮಾಲತಿ....ಎಂಥ ಹುಚ್ಚಿಯಮ್ಮಾ ನೀನು ? ವಸಂತ ನಿನ್ನ ತಮ್ಮ ನಿನ ಒಡಹುಟ್ಟಿದವ. ಆತನೇ ಮುಂದಾಗಲಿಲ್ಲ. ಎಂದಮೇಲೆ ನಿನ್ನ ಮಲಅಣ್ಣ ಹೇಗೆ ಮುಂದೆ ಬರುತ್ತಾನೆ ? ನೀನೇ ಹೇಳು."

"ನೀವು ಹಾಗೆನ್ನಬೇಡಿ ಅಮರನ ಸ್ವಭಾವ ನಿಮಗೆ ಗೊತ್ತಿಲ್ಲ. ಆತ ಚಿಕ್ಕ ಚಿನ್ನ ...ನನ್ನನ್ನೂ ಮೊದಲಿನಿಂದಲೂ ಸ್ವಂತ ತಂಗಿಯಂತೆ ಕಾಣುತ್ತಾ ಬಂದಿದ್ದಾನೆ....ನಾನೇ ಅವನನ್ನು ವೈರಿಯಂತೆ ಕಂಡಿರುವೆ. ಅವನ ಕಾಲು ಹಿಡಿದುಕೊಂಡು ಕೇಳಿದರೆ ಆತ ಇಲ್ಲ ಅನ್ನಲಾರ ..."

"ಅದಕ್ಕೆ ನಾನು ಆಸ್ಪದ ಕೊಡಲಾರೆ ಮಾಲತಿ ."ಸುಂದರಮ್ಮ ಮಧ್ಯೆ ಮಾತನಾಡಿದರು.

"ಅಮ್ಮಾ ಇದೇನಮ್ಮ ನೀನು ಹೇಳ್ತಾ ಇರೋದು"

"ನಾನು ನಿಜ ಹೇಳುತ್ತಿದ್ದೇನೆ ಮಾಲತಿ ಅಮರನನ್ನ ನಾವು ಇದುವರೆಗೆ ಕಾಲುಕಸಕ್ಕಿಂತ ಕೀಳಾಗಿ ಕಂಡೆವು. ಆತ ನಿರುಪಯೋಗಿ ಎಂದು ಅವನ ಮನ ನೋಯಿಸಿದೆವು. ಆದರೆ ಆತ ಎಂಥವ ಎಂಬುದು ನನಗೆ ಈಗ ತಿಳಿದಿದೆ.ಅವನ್ನು ನನ್ನ ಮಲಮಗ ನಿಜ .. ಆದರೆ ಮುಂದಿನ ಜನ್ಮ ಆತನನ್ನು ಸ್ವಂತ ಮಗನಾಗಲಿ ಎಂದು ಬೇಡಿಕೊಳ್ಳುತ್ತೇನೆ ...ನಿನ್ನ ಮಾಂಗಲ್ಯಕ್ಕಾಗಿ ನಾನು ಅವನ ಬಲಿ ಕೊಡಲಾರೆ...."

"ಅಮ್ಮ ....ಹಾಗೆನ್ನಬೇಡಮ್ಮ ... ನನ್ನ ಪತಿಯನ್ನು ಉಳಿಸಲು ಹೇಗಾದರೂ ಮಾಡಿ ನಾನು ಅಮರನನ್ನು ಒಪ್ಪಿಸುತ್ತೇನೆ."

"ಅದಾಗದು ಮಾಲತಿ ...ನಿನ್ನ ಪ್ರಾರಬ್ಧಕ್ಕೆ ನಾನು ಅಮರನನ್ನು ಬಲಿ ಪಶು ಮಾಡಲಾರೆ....ನಿನ್ನ ಹಣೆಯ ಬರಹದಲ್ಲಿ ನಿನ್ನ ಗಂಡ ಸತ್ತು, ನೀನು ವಿಧವೆ ಆಗುವುದನ್ನು ಬರೆದಿದ್ದರೆ ಅದಕ್ಕೆ ಯಾರು ಏನೂ ಮಾಡುವಂತಿಲ್ಲ, ಅದನ್ನು ಯಾರೂ ತಪ್ಪಿಸುವಂತಿಲ್ಲ..... ಏನೂ ಅರಿಯದ ಪಾಪ ಎಂಬುದನ್ನೇ ತಿಳಿಯದ ಅಮರನನ್ನು ನಾನು ಹೇಗೆ ಬಲಿಕೊಡಲಿ ?"

"ಅಮ್ಮ ಅವನ ಜೀವಕ್ಕೇನೂ ಅಪಾಯವಾಗಲಾರದು....ಒಂದು ವೇಳೆ

ಒಂದು ವೇಳೆ ಹಾಗೇನಾದರೂ ಆದರೆ ಅವನ ಹಿಂದೆ ಅಳಲು ಯಾರಿದ್ದಾರೆ ಹೆಂಡತಿಯೇ ? ಮಕ್ಕಳೇ ?"

ಫಟೇರ್— ಮಾಲತಿಯ ಕೆನ್ನೆ ಕೆಂಪಗಾಗಿತ್ತು. ಮಹಾ ಕಾಳಿಯ ಅವತಾರ ತಾಳಿದ್ದ ಸುಂದರಮ್ಮ ಅಬ್ಬರಿಸಿದರು.

"ಏಳು ಮೇಲೆ....ಈಗಿಂದೀಗಲೇ ಮನೆ ಬಿಟ್ಟು ಹೊರಗೆ ನಡೆ......ನಿನ್ನ ಮನಸ್ಸಿನಲ್ಲಿ ಇಷ್ಟು ಪಾಪ ಅಡಗಿದೆ ಎಂದು ನನಗೆ ತಿಳಿದಿರಲಿಲ್ಲ. ಇಂಥ ಸಮಯದಲ್ಲಿ ಅವನ ಪಾದ ತೊಳೆದು ಪೂಜೆ ಮಾಡಿ ಛಾಪೆ ಬೇಡಬೇಕಾದ ನೀನು ಅವನ ಹಿಂದೆ ಯಾರಿದ್ದಾರೆ ಅಳಲು ಎನ್ನುತ್ತಿರುವೆಯಲ್ಲ ? ಏಕೆ ನಾನಿಲ್ಲವೇ ? ನಿನ್ನ ತಂದೆಯಿಲ್ಲವೇ ನಾವಿಬ್ಬರೂ ಸತ್ತು ಹೋಗಿದ್ದೇವೆ ಎಂದು ತಿಳಿದಿರುವೆಯಾ... ನಡೆ—ನನ್ನ ಮನೆಯಲ್ಲಿ ಒಂದು ಕ್ಷಣವೂ ಇರಬೇಡ...."

ಬಾಯಿಗೆ ಸೆರಗು ತುರುಕಿಕೊಂಡು ಬಿಕ್ಕುತ್ತಾ ಬಿಕ್ಕುತ್ತಾ ಮೇಲೆದ್ದ ಮಾಲತಿ ಧಡಾರ್ ಎಂದು ಬಾಗಿಲು ತೆರೆದಳು. ಕಾರಿನತ್ತ ಓಡಿದಳು......ಬಾಗಿಲ ಹಿಂದೆ ಗೋಡೆಗೊರಗಿ ನಿಂತ ಅಮರ ಅವಳ ದೃಷ್ಟಿಗೆ ಬೀಳಲಿಲ್ಲ......ಮುಂದೆ ಒಂದೇ ಒಂದು ಕ್ಷಣದಲ್ಲಿ ಕಾರು ಕಣ್ಣಿನಿಂದ ಮರೆಯಾಗಿತ್ತು....ತಲೆ ಬಾಗಿಲು ತೆರೆದೇ ಇತ್ತು. ಒಳಗೆ ಹೋಗಲು ಮನಸ್ಸಾಗದೇ ಅಮರ ಹಾಗೇ ನಿಂತೇ ಇದ್ದ. ಒಂದರ್ಧ ಗಂಟೆ ಕಳೆದ ನಂತರ ಮೆಲ್ಲನೇ ಒಳಗೆ ಕಾಲಿಟ್ಟ. ರಾಮರಾಯರು ಗೋಡೆಗೊರಗಿ ಕುಳಿತಿದ್ದರು ಸುಂದರಮ್ಮ ಬರೀ ನೆಲದ ಮೇಲೆ ಉರುಳಿಕೊಂಡಿದ್ದರು. ರತ್ನಾಳ ಗೊರಕೆ ಮೆಲುವಾಗಿ ಕೇಳಿಸುತ್ತಿತ್ತು.

ಅಮರ ಬಂದು ರಾಮರಾಯರ ಬಳಿ ಕುಳಿತ. ಒಂದುಬಾರಿ ಅವರು ಅವನತ್ತ ನೋಡಿ "ಹೇಗಿದೆ ಅಪ್ಪಾಜಿಯವರಿಗೆ ?" ಎಂದು ಕೇಳಿದರು. "ಹಾಗೇ ಇದೆ— ಆಶೆಇಲ್ಲ" ಎಂದ ಅಮರ, ಮೆಲುವಾಗಿ ಅವರ ಬೆನ್ನಮೇಲೆ ಕೈ ಯಾಡಿಸಿ ಅವರು ಹೋಗು ಮಲಗಿಕೊ.... ಯಾವುದಕ್ಕೂ ದೇವರಿದ್ದಾನೆ ಎಂದರು. ಮಾತು ಬೆಳಸುವುದರಲ್ಲಿ ಅರ್ಥವಿಲ್ಲವೆಂದುಕೊಂಡ ಅಮರ ಎದ್ದು ಅಡಿಗೆಮನೆಗೆ ಬಂದ. ಒಂದು ಲೋಟ ತಣ್ಣೀರು ಕುಡಿದು ಅಲ್ಲಿಯೇ ಚಾಪೆ ಹಾಕಿಕೊಂಡು ಉರುಳಿದ. ಬಟ್ಟೆ ಬದಲಿಸಲೂ ಅವನಿಗೆ ಬೇಜಾರು. ಹೊರಗಡೆ ತಂದೆ ಬಾಗಿಲು ಹಾಕಿದ ಸದ್ದು ಕೇಳಿ ಬಂದಿತು.

ಕಣ್ಣಿಗೆ ಕಣ್ಣು ತಗಲಿಸಿದರೂ ನಿದ್ದೆ ಬಾರದು ಕಣ್ಣೆವೆಗಳನ್ನೂ ಬಿಗಿಯಾಗಿ

ಮುಚ್ಚಿಕೊಂಡ..... ನಿದ್ದೆ ಹತ್ತಲಿಲ್ಲ . ಚಿಂತೆಗಳು ಮುತ್ತಿಕಾಡುತ್ತಿರುವಾಗ ಅವನಿಗೆ ನಿದ್ದೆ ಎಲ್ಲಿಂದ ಬಂದೀತು ? ತಂದೆಯ ಪರಿಸ್ಥಿತಿ ಕಂಡು ಅವನ ಕರುಳು ಚುರ್ ಅನ್ನುತ್ತಿತ್ತು. ಮನೆಗೆ ಹಿರಿಯ ಮಗನಾದ ತಾನು ಅವರ ದುಃಖವನ್ನು ಎಷ್ಟು ಕಡಿಮೆ ಮಾಡಿದ್ದೇನೆ, ತಾನೆಷ್ಟು ಮನೆಯ ಜವಾಬ್ದಾರಿ ಹೊತ್ತಿದ್ದೇನೆ? ಎಂದು ತನಗೆ ತಾನೇ ಕೇಳಿಕೊಂಡ.... ನಾಚಿಕೆಯಾಯಿತು. ಒಂದು ಕೂದಲೆಳೆಯಷ್ಟು ಅವರ ಭಾರ ಕಡಿಮೆ ಮಾಡದೆ ತಾನು ಬದುಕಿಯಾದರೂ ಏನು ಪ್ರಯೋಜನ ? ಎಂದು ಆತ ಯೋಚಿಸಿದ.

ವಸಂತ ಮನೆ ಸೇರಿದ್ದಾನೆ ... ಬಹಳ ವೆಂದರೆ ಇನ್ನೆಂಟು ದಿವಸ ಅಷ್ಟರಲ್ಲಿ ಹತ್ತು ಸಾವಿರ ರೂಪಾಯಿ ಕಟ್ಟದಿದ್ದರೆ ನೌಕರಿ ಹೋಗುತ್ತದೆ.ಮುಕದ್ದಮೆ ನಡೆಯುತ್ತದೆ ಶಿಕ್ಷೆ ದಂಡ ಇದರಿಂದ ಮನೆತನದ ಮರ್ಯಾದೆ ಬಯಲಿಗೆ ಬಂದು ತಂದೆ ಮುಖವೆತ್ತಿ ತಿರುಗದಂತಾಗುತ್ತದೆ.

ರತ್ನಾಳಿಗೆ ಎರಡು ತಿಂಗಳು ದಾಟಿ ಹೋಗಿವೆ. ಆಕೆಯ ಮದುವೆ ಆಗಬೇಕು. ಆಕೆ ಗರ್ಭಿಣಿ ಎಂಬ ಸಮಾಚಾರ ಜಗತ್ತಿಗೇ ತಿಳಿದಿದೆ. ಗರ್ಭಪಾತ ಸಹ ಮಾಡಿಸುವಂತಿಲ್ಲ. ರಾಜು ಆಕೆಯನ್ನು ಮದುವೆಯಾಗಲು ಸಿದ್ಧನಿದ್ದಾನೆ. ಅವನ ತಂದೆ ಸಹ ಒಪ್ಪಿದ್ದಾರೆ ! ಆದರೆ ಸಮಸ್ಯೆಯಿರುವುದು ಎಪ್ಪತ್ತುಸಾವಿರ ರೂಪಾಯಿಯದು.... ಅವನ ತಂದೆಯ ಕರಾರು ಪೂರೈಸಿದರೆ ರತ್ನಾಳ ಮದುವೆಯಾಗುತ್ತದೆ.

ಮಾಲತಿ ಮದುವೆಯಾಗಿ ಈಗ ಬಸುರಿ ಸ್ಥಿತಿ ಅವಳ ಮೇಲೆ ಮುನಿದಿದೆ. ಏನು ಮಾಡುವುದು ? ಅವಳ ಬಳಿ ಸಾಕಷ್ಟು ಸಂಪತ್ತಿದ್ದರು ಈ ವೇಳೆಯಲ್ಲಿ ಕೆಲಸಕ್ಕೆ ಬಾರದ್ದು... ಪತಿ ತೀರಿ ಆಕೆ ಈ ಚಿಕ್ಕ ವಯಸ್ಸಿನಲ್ಲಿಯೇ ವಿಧವೆಯಾಗಿ ಬಂದು ತಂದೆಯ ಮುಂದೆ ಕುಳಿತರೆ, ಅವರ ಮನಸ್ಸಿನ ಮೇಲೆ ಯಾವ ಪರಿಣಾಮವಾದೀತು ?

ಈ ಮೂರು ಸಮಸ್ಯೆಗಳು ಚಕ್ರಾಕಾರವಾಗಿ ಅವನ ಮುಂದೆ ಕುಣಿಯತೊಡಗಿದವು ಪರಿಹಾರ ಕಾಣದು ಏನುಮಾಡಲಿ....ಏನುಮಾಡಲಿ ವರದರಾಜು ಅವರನ್ನು ಕೇಳಲೇ ಒಂದು ಲಕ್ಷರೂಪಾಯಿಬೇಕು ಅಂತಾ ಅವರೇನೋ ಕೊಡಬಹುದು, ಆದರೆ ಮನದಲ್ಲಿ ಏನಾಂತ ಯೋಚಿಸಬಹುದು. ದೀಪಾ ಇಂದೇ ತಾನೇ ದೇವರೆದುರು ಪತಿ ಎಂದು ಒಪ್ಪಿಕೊಂಡಿದ್ದಾಳೆ. ನಾಳೆ

ಬೆಳಿಗ್ಗೆ ಎದ್ದ ತಕ್ಷಣ ನನಗೆ ಲಕ್ಷ ರೂಪ ಯಿಬೇಕು ಎಂದು ಕೇಳಿದರೆ ಆಕೆ ನನ್ನನ್ನು ಯಾವ ದೃಷ್ಟಿಯಿಂದ ನೋಡಬಹುದು.

ಎಲ್ಲಾ ಯೋಚಿಸಿ ಯೋಚಿಸಿ ತಲೆನೋಯು ತೊಡಗಿತೇ ವಿನಃ ಉತ್ತರ ದೊರೆಯುಲಿಲ್ಲ.... ಅಷ್ಟರಲ್ಲಿ ಹೊರಗಡೆ ಬಾಗಿಲು ತೆಗೆದ ಸದ್ದು.... ಈ ವೇಳೆ ಯಲ್ಲಿ ಹೊರಗ ಯಾರು ಹೊರಟಿದ್ದಾರೆ ? ಎಂದು ಯೋಚಿಸುತ್ತಾ ಅಮರ ಮೇಲೆದ್ದು ಹೊರಗೆ ಬಂದ ತಲೆಬಾಗಿಲು ಮೊದಲಿನಂತೆ ಮುಚ್ಚಿಕೊಂಡಿತ್ತು. ಆದರೆ ಕೊಂಡಿ ತೆರೆದಿತ್ತು, ಬಾಗಿಲು ತೆರೆದು ಹೊರಗೆಬಂದು ಅತ್ತಿತ್ತ ನೋಡಿದ. ತಂದೆ ಓಡುತ್ತಿದ್ದರು. ಅವರ ಎದುರು ಬಾಯಿ ತೆರೆದು ಕುಳಿತಿದ್ದ ಭಾವಿ...... ಓಹ' ದೇವರೆ ಅವರು ಆತ್ಮಹತ್ಯೆ ಮಾಡಿಕೊಳ್ಳಲು ಓಡುತ್ತಿರುವರೇ ? ಎಂದು ಮನದಟ್ಟಾದಾಗ ಅಮರ ವೇಗವಾಗಿ ಅವರ ಹಿಂದೆ ಓಡಿದ.

ರಾಮರಾಯರು ವಯಸ್ಸಾದವರು..... ಕಾಲಲ್ಲಿ ಬೇರೆ ಚಪ್ಪಲಿ ಇಲ್ಲ. ಹೀಗಾಗಿ ಅವರ ನಡಿಗೆ ನಿಧಾನವಾಗಿತ್ತು. ಅಮರ ಬಿಸಿರಕ್ತದ ತರುಣ ಪ್ರತಿ ದಿವಸ ಬರಿಗಾಲಲ್ಲಿ ಓಡಿ ಅಭ್ಯಾಸ ಆತನಿಗೆ. ರಾಮರಾಯರು ಬಾವಿಯನ್ನು ತಲುಪುವದಕ್ಕೆ ಮೊದಲೇ ಅಮರ ಅವರನ್ನು ಹಿಡಿದುಕೊಂಡಿದ್ದ,

"ಅಪ್ಪಾ ... ಅಪ್ಪಾ ಇದೇನು ನೀವು ಮಾಡ್ತಾ ಇರೋದು ?"

"ಅಮರ ನನ್ನನ್ನು ಬಿಟ್ಟುಬಿಡು ! ನನ್ನನ್ನು ತಡೆಯಬೇಡ. ನನಗೆ ಜೀವನ ಬೇಸರವಾಗಿದೆ."

"ನೀನು ಹೊರಟು ಹೋದರೆ ನಮ್ಮ ಗತಿಯೇನಪ್ಪಾ."

"ಇಲ್ಲ ಬಿಡು....."

ಅಷ್ಟರಲ್ಲಿ ಇವರ ಗಲಾಟೆಗೆ ವಠಾರದ ದೀಪಗಳು ಉರಿದವು. ಜನರು ಬಾಗಿಲು ತೆರೆದು ಹೊರಗೆ ಬಂದು ಈ ಅವಾಂತರ ಕಂಡರು ನಾಲ್ಕಾರು ಜನ ಗಂಡಸರು ಓಡಿಬಂದು ರಾಯರನ್ನು ಹಿಡಿದು, ಒಂದು ದೃಷ್ಟಿಯಿಂದ ಅವರನ್ನು ಎಳೆದುಕೊಂಡೇ ಮನೆಯ ಒಳಗೆ ತಂದರು ಈ ಗಲಾಟೆಗೆ ಅದೇ ಜೊಂಪು ಹತ್ತಿದ ಸುಂದರಮ್ಮ ರತ್ನಾ, ಒಳಗೆ ಮಲಗಿದ್ದ ವಸಂತ, ಪಂಕಜಾ ಎದ್ದು ಕುಳಿತರು. ನಡೆದ ವಿಷಯ ಅವರಿಗೆ ತಿಳಿದಾಗ ಸುಂದರಮ್ಮ ಪತಿಯನ್ನು ತಬ್ಬಿಕೊಂಡು,

"ಇದೇನ್ರೀ ಅನ್ಯಾಯ ... ನಮ್ಮೆಲ್ಲರನ್ನು ಈ ಗೋಳಿನ ಸಂತೆಯಲ್ಲಿ

ಬಿಟ್ಟು ನೀವೊಬ್ಬರೇ ಹಾಯಾಗಿ ಹೊರಟುಹೋಗಬೇಕೆಂದು ಮಾಡಿದ್ದಿರಾ ? ನಾನೇನು ತಪ್ಪು ಮಾಡಿದ್ದ ! ನನ್ನನ್ನೂ ಏಕೆ ಕರಿಯಲಿಲ್ಲ ? ನಾನೂ ನಿಮ್ಮ ಜೊತೆ ಬರುತ್ತಿರಲಿಲ್ಲವೇ ?"

"ಅಮ್ಮಾ .... ಈ ರೀತಿ ಮಾತನಾಡಿ ನಮ್ಮನ್ನೆಲ್ಲ ನೋಯಿಸಬೇಡಿ ತಂದೆ ತಾಯಿ ನೀವೆ ಈ ರೀತಿ ಹೊರಟು ಹೋದರೆ ನಮ್ಮ ಗತಿ ಏನು ? ತಬ್ಬಲಿ ಗಳಾಗಿ ಹಾಗೇ ಇರಬೇಕೆನಮ್ಮಾ ? ಬೇಡಮ್ಮಾ ಬೇಡ. ಕಷ್ಟವೋ ಸುಖವೋ ಕೂಡಿಯೇ ಜೀವಿಸೋಣ.... ಸಾಯುವುದಾದರೆ ಎಲ್ಲರೂ ಕೂಡಿಯೇ ಸಾಯೋಣ "

ಅಮರನ ಮಾತಿಗೆ ಸುಂದರಮ್ಮ ದುಃಖ ತಡೆಯಲಾರದೆ "ಅಯ್ಯೋ ಕಂದ" ಎಂದು ತಬ್ಬಿಕೊಂಡು ಅತ್ತುಬಿಟ್ಟರು.

ಪಕ್ಕದ ಜನ ಕಲೆಗೊಂಡು ಮಾತನಾಡಿ, ಬುದ್ಧಿ ಮಾತು ಹೇಳಿ ಮೇಲೆದ್ದರು. ಅಮರ ಬಾಗಿಲನ್ನು ಮುಚ್ಚಿ, ರಾಮರಾಯರನ್ನು ಎಬ್ಬಿಸಿ ಹಾಸಿಗೆಯ ಮೇಲೆ ಮಲಗಿಸಿ ತಾನೂ ತನ್ನ ಚಾಪೆಯನ್ನು ತಂದು ಅವರ ಪಕ್ಕಕ್ಕೆ ಹಾಸಿಕೊಂಡು ದೀಪ ಆರಿಸಿ ಮಲಗಿಕೊಂಡ.

ಬೆಳಗಿನ ಐದು ಗಂಟೆಯ ಸಮಯಕ್ಕೆ ಅವನ ಎಲ್ಲ ಸಮಸ್ಯೆಗಳಿಗೆ ಉತ್ತರ ದೊರಕಿತ್ತು. ತಂದೆಯ ಸಂಕಟ, ತನ್ನ ಕುಟುಂಬದ ಮೇಲೆ ಬಂದ ಆಪತ್ತು ಗಳನ್ನೆಲ್ಲ ದೂರ ಸರಿಸಲು ಅಮರ ಕಂಕಣಬದ್ಧನಾಗಿದ್ದ.

ಮಾಲತಿಯ ಗಂಡನಿಗೆ ತನ್ನ ಮೂತ್ರಪಿಂಡ ದಾನಮಾಡಿ.... ಅದರಿಂದ ಬಂದ ಲಕ್ಷ ರೂಪಾಯಿಯಿಂದ ಎಲ್ಲಾ ಸಂಕಟ ಪರಿಹಾರ ಮಾಡುವುದು ಎಂದು ಯೋಚಿಸಿದ ಆತ. ರತ್ನಾಳ ಮದುವೆಯಾಗುತ್ತದೆ, ಮಾಲತಿ ವಿಧವೆಯಾಗು ವುದಿಲ್ಲ, ಎಲ್ಲಕ್ಕಿಂತ ಹೆಚ್ಚಾಗಿ ತಂದೆಯನ್ನು ಈ ಎಲ್ಲಾ ಕಷ್ಟ ಕೋಟಲೆಗಳಿಂದ ಪಾರು ಮಾಡಿದಂತಾಗುತ್ತದೆ. ಮನೆಗೆ ಹಿರಿಯ ಮಗನಾಗಿ ಹುಟ್ಟಿದ್ದು ಸಾರ್ಥ ಕವನಿಸುತ್ತದೆ ಎಂದು ಆತ ಯೋಚಿಸಿದ. ದುಗುಡದಿಂದ ತುಂಬಿದ ಅವನ ಮನಸ್ಸು ಹೂವಿನಷ್ಟು ಹಗುರವಾಗಿತ್ತು.

ಅದರ ಮರುಕ್ಷಣ ದೀಪಾಳ ಮುಗ್ಧಮುಖ ಅವನೆದುರು ಬಂದುನಿಂತಿತು. 'ನಾನೇನು ತಪ್ಪು ಮಾಡಿರುವೆ ಅಂತ ನನಗೀ ಶಿಕ್ಷೆ ?' ಎಂದು ಕೇಳಿದಂತಾಗಿ ಬೆಚ್ಚಿಬಿದ್ದು ಎದ್ದುಕುಳಿತ. ಅವಳ ಪ್ರಶ್ನೆಗೆ ಅಮರನ ಬಳಿ ಉತ್ತರವಿರಲಿಲ್ಲ.

ಹತ್ತು ಜನರ ಕಲ್ಯಾಣಕ್ಕಾಗಿ ಒಬ್ಬರೆ ಬಲಿಕೊಟ್ಟರೆ ಅದು ತಪ್ಪಲ್ಲ! ಎಂದು ಯಾರೋ ಮಹಾತ್ಮರು ಹೇಳಿದ್ದು ನೆನಪಾಗಿ ಹಾಗಾದರೆ ತನ್ನ ಮನೆಯ ಕಲ್ಯಾಣಕ್ಕೆ ತಾನೇಕೆ ಬಲಿಯಾಗಬಾರದು? ದೀಪಾ.. ಸ್ವಲ್ಪ ದಿವಸ ನನ್ನ ಬಗ್ಗೆ ಚಿಂತಿಸಬಹುದು, ನಂತರ ಅವಳ ತಂದೆ ಹಟ ಹಿಡಿದು ಅವಳ ಮದುವೆ ಮಾಡಿಯೇ ಮಾಡುತ್ತಾರೆ.. ಅವಳ ಸಂಸಾರ ಸುಖವಾಗಿ ನಡೆಯುತ್ತದೆ. ಮುಂದೆ ಕ್ರಮೇಣ ಆಕೆ ತನ್ನನ್ನು ಮರೆಯಬಹುದು...

ಹೌದು! ಹೌದು! ಇದೇ ಸರಿಯಾದ ಉಪಾಯ. ಎಂದು ಆತ ನಿರ್ಧರಿಸಿದಾಗ ದೂರ ದೇವಸ್ಥಾನದಲ್ಲಿ ಪ್ರಾತಃಕಾಲದ ಪೂಜೆಯ ಮಂಗಳ ವಾದ್ಯ ಕೇಳಿಬಂತು. ಅಮರ ಚಟಕ್ಕನೆ ಮೇಲೆದ್ದು ಹಿತ್ತಲ ಕಡೆ ನಡೆದ.... ನೀರು ತುಂಬಿ ಸ್ನಾನಮಾಡಿ ಆಸ್ಪತ್ರೆಗೆ ಹೋಗಬೇಕಾಗುತ್ತದೆ.

ನೀರು ತುಂಬುವದಿನ್ನೂ ಪೂರ್ತಿ ಮುಗಿದಿರಲಿಲ್ಲ. ಗಾಬರಿಯಿಂದ ದೀಪಾ "ಅಮರ, ಅಮರ" ಎಂದು ಕೂಗುತ್ತಾ ಒಳಗೆ ಬಂದಳು. ರಾಮರಾಯರು "ಬಾಮ್ಮ ಕುಳಿತುಕೋ" ಎಂದಾಗ "ಇಲ್ಲ ಅಂಕಲ್.... ಅಪ್ಪಾಜಿಯವರ ಪರಿಸ್ಥಿತಿ ತೀರ ಚಿಂತಾಜನಕವಾಗಿದೆಯಂತೆ, ಆಸ್ಪತ್ರೆಯಿಂದ ಫೋನು ಬಂದಿತ್ತು, ಆದಕ್ಕೆ ಬಂದೆ!" ಎನ್ನುವಷ್ಟರಲ್ಲಿ ಅಮರ ಬಟ್ಟೆ ಧರಿಸಿ ಹೊರಗೆ ಬಂದಿದ್ದ. "ನೀವಿಬ್ಬರೂ ಮುಂದೆ ನಡೆಯಿರಿ ನಾನೀಗಲೇ ಬಂದೆ." ಎಂದು ಹೇಳಿದ ರಾಮರಾಯರು ನೇರವಾಗಿ ಹಿತ್ತಲಕಡೆ ಸಾಗಿದರು,

ದೀಪಾ ಕಾರು ತಂದಿದ್ದಳು. ಅಮರ ಅವಳೊಡನೆ ಆಸ್ಪತ್ರೆಗೆ ಬಂದಾಗ ಇನ್ನು ಏಳೂ ಸಹ ಹೊಡೆದಿರಲಿಲ್ಲ. ಅಪ್ಪಾಜಿಯವರ ಕೋಣೆಯಲ್ಲಿ ನಾಲ್ಕಾರು ಜನ ವೈದ್ಯರು ಜಮಾಯಿಸಿದ್ದರು. ದೊಡ್ಡದಾಗಿ ಅರಳಿದ ಕಣ್ಣುಗಳಿಂದ ಏದುಸಿರುಬಿಡುತ್ತಿದ್ದ ಅಪ್ಪಾಜಿಯವರು ಅಮರ ಹಾಗೂ ದೀಪಾ ತಮ್ಮತ್ತ ಧಾವಿಸಿ ಬರುತ್ತಿರುವುದನ್ನು ಕಂಡು ಮೆಲುವಾಗಿ ಮುಗುಳು ನಗೆ ನಕ್ಕರು. ವೈದ್ಯರು ಅಮರನ ಕಡೆ ಹೊರಳಿ ಮೆಲ್ಲನೆ ಪಿಸುಗುಟ್ಟಿದರು,

"ಸಾರಿ ಅಮರ..... ನಮ್ಮ ಕಡೆಯಿಂದ ಏನೂ ಮಾಡಲಾಗದು. ಬಹಳವೆಂದರೆ ಇನ್ನೊಂದೈದು ನಿಮಿಷ ಅವರು....."

ವೈದ್ಯರು ಮುಂದೆ ಮಾತನಾಡದೆ ಹೊರಗೆ ನಡೆದರು. ಇನ್ನುಳಿದವರೂ ಅವರನ್ನು ಹಿಂಬಾಲಿಸಿದರು. ಅಮರ ಉಕ್ಕಿಬಂದ ದುಃಖವನ್ನು ತಡೆದುಕೊಂಡು

ಅಪ್ಪಾಜಿಯವರ ಬಳಿ ಬಂದು ಕುಳಿತ ಅಪ್ಪಾಜಿಯವರು ಅವನನ್ನೇ ದಿಟ್ಟಿಸಿ ನೋಡುತ್ತಿದ್ದರು....

"ಅಪ್ಪಾಜಿ ! ನಿಮ್ಮ ಉಪಕಾರವನ್ನು ನಾನು ಏಳೇಳು ಜನ್ಮಕ್ಕೂ ತೀರಿಸ ಲಾರೆ. ನೀವು ನನ್ನ ಪಾಲಿಗೆ ದೇವರಂತೆ ಬಂದಿರಿ ಎಲ್ಲಿಯೋ ತಿಪ್ಪೆ ಗುಂಡಿ ಯಲ್ಲಿ ಬೆಳೆಯಬೇಕಾದವನನ್ನು ತಂದು ಉಪ್ಪರಿಗೆಯಲ್ಲಿ ಕೂಡಿಸಿದಿರಿ, ನನ್ನನ್ನು ನಿಮ್ಮ ಮಗನಂತೆ ನೋಡಿಕೊಂಡು ವಿದ್ಯೆ ಕಲಿಸಿದಿರಿ. ಸಾವಿರಾರು ಜನರೆದುರು ತಲೆಯೆತ್ತಿ ತಿರುಗುವಂತಹ ಗೌರವ ನನಗೆ ಸಿಗುವಂತೆ ಮಾಡಿದಿರಿ...... ಆದರೆ ಆದರೆ ಇಷ್ಟೆಲ್ಲ ಮಾಡಿದ ನಿಮಗೆ ನಾನೇನೂ ಕೊಡಲಿಲ್ಲ..... "

ಅಪ್ಪಾಜಿಯವರು ಬಹು ಪ್ರಯತ್ನಪಟ್ಟು ಕೈಯೆತ್ತಿ ಅಮರನ ಕಣ್ಣೀರು ಒರೆಸಿ, ದೀಪಾಳನ್ನು ಹತ್ತಿರ ಬರುವಂತೆ ಸನ್ನೆಯಿಂದಲೇ ಕರೆದರು. ದೀಪಾ ಬಂದು ಅವರ ಬಳಿ ಕುಳಿತುಕೊಳ್ಳುತ್ತಾ ನುಡಿದಳು,

"ಅಂಕಲ್ ನನ್ನ ತಾಯಿ ತೀರಿದಾಗ ನನಗೆ ನಾಲ್ಕು ವರ್ಷಗಳು.... ನೀವು ನನ್ನೊಡನೆ ಬೆರೆತು ತಾಯಿಯನ್ನೇ ಮರೆಯುವಂತೆ ಮಾಡಿದಿರಿ....ನನ್ನ ತಂದೆಗಿಂತ ನೀವೇ ನನ್ನನ್ನು ಹೆಚ್ಚಾಗಿ ನೋಡಿಕೊಂಡಿರಿ. ನಿಮ್ಮ ಉಪಕಾರ ವನ್ನು ಹೇಗೆ ತೀರಿಸಲಿ ?"

ಅಪ್ಪಾಜಿಯವರು ಯಾವ ಉತ್ತರವನ್ನೂ ಕೊಡಲಿಲ್ಲ. ತಮ್ಮೆರಡೂ ಕೈ ಗಳಿಂದ ಅಮರ ಹಾಗೂ ದೀಪಾರ ಕೈ ಹಿಡಿದು, ಅವರಿಬ್ಬರ ಕೈಗಳೆರಡನ್ನೂ ಕೂಡಿಸಿದರು.

ಅದೇ ವೇಳೆಗೆ ರಾಮರಾಯರು ಅಲ್ಲಿಗೆ ಬಂದರು, ಆ ದೃಶ್ಯ ಕಂಡು ಅವ ರಿಗೆ ದುಃಖ ತಡೆಯಲಾಗಲಿಲ್ಲ.

"ನೀವು ನನ್ನ ಕರ್ತವ್ಯ ಪೂರೈಸಿದಿರಿ. ಅವರಿಬ್ಬರಿಗೂ ಮಂಗಳವಾಗಲೀ ಅಂತ ಆಶೀರ್ವಾದ ಮಾಡಿ."

ಅಪ್ಪಾಜಿಯವರು ಮಿದುವಾಗಿ ಅವರಿಬ್ಬರ ಕೈಗಳನ್ನು ಅದುಮಿದರು. ಅಷ್ಟರಲ್ಲಿ ಅವರ ಗಂಟಲಿನಲ್ಲಿ ಗೊರ ಗೊರ ಸಪ್ಪಳ ಕೇಳಿಬರಲಾರಂಭಿಸಿತು. ವೇದನೆಯಿಂದ ಅವರ ಮುಖ ವಿಕಾರವಾಯಿತು ಕಣ್ಣು ಗುಡ್ಡೆಗಳು ಗರಗರ ಸುತ್ತಲಾರಂಭಿಸಿತು. ರಾಮರಾಯರು ಟೇಬಲ್ ಮೇಲಿದ್ದ ಗ್ಲೂಕೋಸ್ ನೀರಿನ ಲೋಟವನ್ನು ಎತ್ತಿ ಅಮರನ ಕೈಗೆ ಕೊಡುತ್ತ,

"ಅಮರ, ಬೇಗ ಅಪ್ಪಾಜಿಯವರ ಗಂಟಲಿಗೆ ನೀರು ಬಿಡು__ ಅವರು ನಮ್ಮನ್ನು ಬಿಟ್ಟು ಹೋಗುವವರಿದ್ದಾರೆ. ನೀನು ಅವರ ಮಗನಾಗಿ ನಿಂತು.... ಕೊನೆಯ ಬಾರಿ ನೀರು ಬಿಡು."

ಎನ್ನುತ್ತ ದೇವರ ನಾಮ ಸ್ಮರಿಸಲಾರಂಭಿಸಿದರು. ಕಣ್ಣೀರು ಸುರಿಸುತ್ತಾ ಅಮರ, ಲೋಟಾ ಎತ್ತಿ ನಿಧಾನವಾಗಿ ಅವರ ಬಾಯಿಗೆ ನೀರು ಬಿಡಲಾರಂಭಿಸಿದ. ಅವರ ಕಣ್ಣು ಗುಡ್ಡೆಗಳು ತಿರುಗುವುದು ನಿಂತಿತು, ಮುಖ ಸ್ವಲ್ಪ ಓರೆ ಮಾಡಿ ಅಪ್ಪಾಜಿ ಅಮರನತ್ತ ನೋಡಿದರು.

"ಅಪ್ಪಾಜಿ . ನನ್ನ ಕರ್ತವ್ಯವನ್ನು ನಾನು ಮಾಡುತ್ತಿದ್ದೇನೆ ನನ್ನಿಂದ ಏನಾದರೂ ತಪ್ಪಾಗಿದ್ದರೆ, ಇಲ್ಲ ದೀಪಾಳಿಂದ ಏನಾದರೂ ತಪ್ಪಾಗಿದ್ದರೆ ನಮ್ಮನ್ನು ಕ್ಷಮಿಸಿಬಿಡಿ,"

ಕೋಲ್ಮಿಂಚೊಂದು ಸುಳಿದಂತೆ ಅಪ್ಪಾಜಿಯವರ ಮುಖದ ಮೇಲೆ ನಗೆ ತೇಲಿತು. ತೃಪ್ತಿ ಮೂಡಿತು. ಅದರೊಂದಿಗೆ ಅವರ ತಲೆ ಬಲಕ್ಕೆ ವಾಲಿತು.

ಅಮರ ಹಾಗೂ ದೀಪಾ "ಅಪ್ಪಾಜೀ !" ಎನ್ನುತ್ತ ಅವರ ಮೇಲೆ ಬಿದ್ದು ಅಳುತ್ತಿದ್ದಂತೆ ನಾಲ್ಕಾರು ಜನ ಆಸ್ಪತ್ರೆಯ ಸಿಬ್ಬಂದಿ ಒಳಗೆ ಧಾವಿಸಿತು.

ರಾಮರಾಯರು, ಅಮರ ಹಾಗೂ ದೀಪಾರನ್ನು ಮೇಲೆತ್ತಿ ತಮ್ಮೆದೆಗೆ ಒತ್ತಿಕೊಂಡರು.

ಅಪ್ಪಾಜಿಯವರ ನಿಧನದ ಸುದ್ದಿ ಕಾಳ್ಗಿಚ್ಚಿನಂತೆ ಊರಲ್ಲಿ ಹರಡಿತು. ಕ್ರೀಡಾಪ್ರೇಮಿಗಳೂ, ಕ್ರೀಡಾ ಪಟುಗಳೂ, ಅವರ ಸಂಬಂಧಿಕರೂ, ಕೆಲವು ಶಾಸಕರೂ ಅವರ ನಿವಾಸಕ್ಕೆ ಧಾವಿಸಿದರು. ಅಷ್ಟರಲ್ಲಿ ರಾಮರಾಯರು ಅಪ್ಪಾಜಿಯವರ ಶವವನ್ನು ಆಸ್ಪತ್ರೆಯಿಂದ ಮನೆಗೆ ತಂದಿದ್ದರು. ಸಾವಿರಾರು ಜನ ಅವರಿಗೆ ಪುಷ್ಪಹಾರ ಅರ್ಪಿಸಿ ಅಂತಿಮ ಗೌರವ ಸೂಚಿಸಿದರು.

ಅಮರನೇ ನಿಂತು ಅವರ ಅಂತಿಮ ಸಂಸ್ಕಾರ ನೆರವೇರಿಸಿದಾಗ ಸಂಜೆ ಸೂರ್ಯ ಮುಳುಗಿದ್ದ.

# 11.

ಅಪ್ಪಾಜಿಯವರು ತೀರಿಕೊಂಡ ದಿವಸವೇ ವರದರಾಜರವರು ಭಾರತಕ್ಕೆ ಬಂದಿದ್ದರು. ದಿಲ್ಲಿಯಲ್ಲಿ ತಂಗಿದ್ದ ಅವರು ಕೇಂದ್ರ ಕ್ರೀಡಾ ಖಾತೆಯ ಸಚಿವರನ್ನು ಕಂಡು ಅವರೊಡನೆ ಅರ್ಧ ಗಂಟೆ ಮಾತಾಡಿ , ರಾಜ್ಯದ ಕ್ರೀಡಾ ಆಯ್ಕೆ ಸಮಿತಿಯ ಕಾರ್ಯ ವೈಖರಿಯನ್ನು ಕಟುವಾಗಿ ಟೀಕಿಸಿದರಲ್ಲದೆ ಸಚಿವರುಗಳು ಯಾವ ರೀತಿ ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂಬುದನ್ನು ತಿಳಿಸಿ ಹೇಳಿದಾಗ, ಕೇಂದ್ರ ಸಚಿವರು ಸಿಟ್ಟು ಬೆಂಕಿಯಾದರು. ಕೂಡಲೇ ಫೋನು ತೆಗೆದುಕೊಂಡು ವರದರಾಜುರವರು ಹೇಳಿದ ಸಚಿವರ ಮನೆಗೆ ಸಂಪರ್ಕ ಕೇಳಿದರು. ಲೈಟ್ ನಿಂಗ್ ಕಾಲ್.... ಸಚಿವರು ಮಾತನಾಡುತಿದ್ದಾರೆಂದರೆ ಕೇಳುವುದೇ ? ಎರಡೇ ನಿಮಿಷಗಳಲ್ಲಿ ಸಂಪರ್ಕ ದೊರೆಯಿತು. ಕ್ರೀಡಾ ಸಚಿವರು ಚೆನ್ನಾಗಿ ಛೀಮಾರಿ ಹಾಕಿ, ಇದೇ ರೀತಿ ನೀವು ಅಧಿಕಾರ ದುರುಪಯೋಗಪಡಿಸಿಕೊಂಡು ಕ್ರೀಡಾಪಟುಗಳಿಗೆ ಅನ್ಯಾಯಮಾಡುವುದನ್ನು ಮುಂದುವರಿಸಿದರೆ ನಿಮ್ಮ ರಾಜಿನಾಮೆ ಕೇಳಬೇಕಾಗುತ್ತದೆ ಎಂದು ಎಚ್ಚರಿಸಿದರು. ಅದರೊಂದಿಗೆ ಅಮರನಿಗೆ ಸರಿಯಾದ ಪುರಸ್ಕಾರ ನೀಡಬೇಕೆಂದು ಸೂಚಿಸಿದಾಗ ಕೆಳಗಿನ ಸಚಿವರು ಆಸ್ತು ಅನ್ನಲೇಬೇಕಾಯಿತು.

ವರದರಾಜು ಅವರು ಕೇಂದ್ರ ಸಚಿವರಿಗೆ ವಂದನೆ ಸಲ್ಲಿಸಿ ಹೊರಬಂದಾಗ ಸುಂದರ ಕನಸುಗಳನ್ನು ಹೆಣೆಯುತ್ತಿದ್ದರು. ಅಮರ ನಾಯಕನಾಗಿ ಆಟವಾಡಿ ಪ್ರಚಂಡ ಜಯ ಸಂಪಾದಿಸಿದ್ದು ಮುಖ್ಯಮಂತ್ರಿಗಳು ಅವನನ್ನು ಅಭಿನಂದಿಸಿದ್ದು.... ಕ್ರೀಡಾ ಕಮಿಟೀಯವರು ಕ್ಷಮೆ ಬೇಡಿದ್ದು ಅಲ್ಲದೆ ಆತನಿಗೆಂದು ಗೌರವ ಹುದ್ದೆ ನೀಡುವುದಾಗಿ ಮುಖ್ಯ ಮಂತ್ರಿಗಳು ಘೋಷಿಸಿದು ಅದರ ನಂತರ ಅಮರ ದೀಪಾರ ಮದುವೆಯನ್ನು ವೈಭವದಿಂದ ನೆರವೇರಿಸಿದ್ದು.... ಈ ರೀತಿ ಹಿಗ್ಗಿನ ಹೊಳೆಯಲ್ಲಿ ವಿಮಾನ ನಿಲ್ದಾಣಕ್ಕೆ ಬಂದಾಗ ವಿಮಾನ ಎಂಟು ಗಂಟೆ ತಡವಾಗಿ ಹೊರಡುವುದೆಂದು ತಿಳಿದು ಬಂದಿತು. ವಿಪರೀತ ಹವಾಮಾನ

ಕಾರಣವಾಗಿ, ಎಲ್ಲೆಡೆ ಮಂಜು ಕವಿದಿದ್ದುದರಿಂದ ವಿಮಾನ ನಡೆಸುವುದು ದುರ್ಲಭವಾಗಿತ್ತು. ಹಕ್ಕಿಯಂತೆ ರೆಕ್ಕೆ ಕಟ್ಟಿಕೊಂಡು ಹಾರುತ್ತಾ ಹೋಗಿ ದೀಪಾಳಿಗೆ ಈ ಸಮಾಚಾರ ತಿಳಿಸಬೇಕೆಂಬ ಅವರ ಉತ್ಸಾಹಕ್ಕೆ ಭಂಗಬಂದಿತ್ತು ಮರಳಿ-ಲಾಡ್ಜಿಗೆ ಬಂದು ಟ್ರಂಕ್ ಕಾಲ್ ಮಾಡಿದಾಗ ಸಂಜೆ ಏಳು ! ಆದರೆ ದೀಪಾ ಇಲ್ಲ ಎಂದು ಕೆಲಸದಾಕೆ ಹೇಳಿದಳು. ವರದರಾಜು ಅವರಿಗೆ ಗೊತ್ತು ದೀಪಾ ಎಲ್ಲಿಗೆ ಹೋಗಿದ್ದಾಳೆಂದು ಬಹಳವೆಂದರೆ ಅಪ್ಪಾಜಿ ಮನೆಗೆ ಇಲಾ ಅಮರನ ಮನೆಗೆ_ ಮತ್ತೆ ರಾತ್ರಿ ಫೋನು ಮಾಡಿದರಾಯಿತೆಂದುಕೊಂಡು ಸುಮ್ಮನಾದರು.

ರಾತ್ರಿ ಹತ್ತು ಗಂಟೆಗೆ ಪುನಃ ಫೋನು ಮಾಡಿದಾಗಲೂ ದೀಪಾ ಬಂದಿರ ಲಿಲ್ಲ. ಚಿಂತಿತರಾದ ಅವರು... ರಾತ್ರಿಯಿಡೀ ನಿದ್ದೆ ಇಲ್ಲದೆ ಕಳೆದರು. ಮರು ದಿನ ಮುಂಜಾನೆ ಹತ್ತು ಗಂಟೆಯ ವಿಮಾನದಲ್ಲಿ ಪ್ರಯಾಣ ಹೊರಟಾಗ ಅವರ ತಲೆಯ ತುಂಬಾ ದೀಪಾ ತುಂಬಿಕೊಂಡಿದ್ದಳು.

ಅಪ್ಪಾಜಿಯವರ ಸಂಸ್ಕಾರ ಮುಗಿದ ನಂತರ ದೀಪಾ ಅಮರನೊಂದಿಗೆ ಅವನ ಮನೆಗೆ ಹೋದಳು. ರಾತ್ರಿ ಹತ್ತು ಗಂಟೆಯವರೆಗೂ ಅವನೊಡನಿದ್ದು ಸಮಾಧಾನ ಹೇಳಿ ಮನೆಗೆ ಬಂದಳು. ಆಗಲೇ ಕೆಲಸದಾಕೆ ಬೀಗ ಹಾಕಿಕೊಂಡು ಮಲಗಿದ್ದಳು.... ಅವಳನ್ನೇಕೆ ಎಬ್ಬಿಸಬೇಕೆಂದು ಯೋಚಿಸಿದ ದೀಪಾ ತನ್ನ ಬಳಿ ಯಿದ್ದ ಡೂಪ್ಲಿಕೇಟ್ ಚಾವಿಯಿಂದ ಬಾಗಿಲು ತೆರೆದು ಒಳಗೆ ಬಂದಳು. ಪುನಃ ಬಾಗಿಲು ಭದ್ರಪಡಿಸಿ ತನ್ನ ರೂಮಿಗೆ ಬಂದಾಗ ಆಕೆ ಉದಾಸೀನಳಾಗಿದ್ದಳು. ಜೀವನದಲ್ಲಿ ಪ್ರಥಮ ಬಾರಿ ತಾನು ಸೋಲುತ್ತಿರುವೆನೆಂಬ ಸಂಶಯ ಅವಳಲ್ಲಿ ಮೂಡತೊಡಗಿತ್ತು

ಅಮರ ಯಾರ ಮಾತು ಮೀರಿದರೂ ಅಪ್ಪಾಜಿಯವರ ಮಾತು ಮೀರು ವುದಿಲ್ಲವೆಂಬ ವಿಷಯ ಅವಳಿಗೆ ತಿಳಿದಿತ್ತು. ಅವರ ಸಹಾಯದಿಂದ ಅಮರನನ್ನು ಮದುವೆಗೆ ಒಪ್ಪಿಸಬಹುದೆಂದು ಕನಸಿನ ಗೋಪುರ ಕಟ್ಟಿದ್ದ ದೀಪಾಳಿಗೆ ಅಪ್ಪಾಜಿಯವರ ಮರಣದಿಂದಾಗಿ ತನ್ನ ಕನಸಿನ ಗೋಪುರ ಮರಳಿನ ಮನೆ ಯಂತೆ ಕುಸಿಯುತ್ತಿದೆ ಎನ್ನಿಸದಿರಲಿಲ್ಲ.

ದೀಪಾ ಬೆಳಿಗ್ಗೆ ಎದ್ದು ಸ್ನಾನಮಾಡಿ ಕಾಫಿ ಕುಡಿದು ಮನೆ ಬಿಟ್ಟಾಗ, ಎಂಟು ಗಂಟೆ.... ರಾತ್ರಿ ಫೋನು ಬಂದ ವಿಷಯ ಹೇಳಲು ಕೆಲಸದಾಕೆ

ಮರೆತುಬಿಟ್ಟಳು. ಅವಳಿಗೆ ಫೋನಿನ ವಿಷಯ ನೆನಪಾದದ್ದು ದೀಪಾ ಕಾರನ್ನು ಸ್ಟಾರ್ಟ್ ಮಾಡಿದಾಗ. ಓಡುತ್ತಾ ಬಂದ ಆಕೆ "ದೀಪಾ ದೀಪಾಬಾಯಿ ಎಂದು ಕೂಗಿದ್ದು ಕಾರಿನ ಸಪ್ಪಳದಲ್ಲಿ ದೀಪಾಳಿಗೆ ಕೇಳಲೇ ಇಲ್ಲ. ಕೆಲಸದಾಕೆ ಹಾಗೆ ಕೂಗುತ್ತಿರುವಾಗಲೇ ದೀಪಾಳ ಕಾರು ಗೇಟು ದಾಟಿ ಕಣ್ಣಿನಿಂದ ಮರೆಯಾಯಿತು

ದೀಪಾ ಅಮರನ ಮನೆಗೆ ಬಂದಾಗ ರಾಮರಾಯರು ಗಾಬರಿಯಾಗಿ ಕುಳಿತಿದ್ದರು ... ಅಮರ ಕಾಣಿಸುತ್ತಿರಲಿಲ್ಲ, ಬಹುಶಃ ರಾತ್ರಿಯೇ ಅವನೆದ್ದು ಹೋಗಿರಬೇಕು ಅಂತ ಅವರ ಭಾವನೆ ಆದರೆ ಎಲ್ಲಿಗೆ ಎಂದು ಅವರಿಗೆ ತಿಳಿಯದು

ದೀಪಾಳ ತಲೆ ನೋಯುತ್ತೊಡಗಿತ್ತು. ರಾತ್ರಿ ಬೇರೆ ಸರಿಯಾಗಿ ನಿದ್ದೆ ಬಂದಿರಲಿಲ್ಲ. ಯಾವುದಾದರೂ ಹೋಟೆಲಿಗೆ ಹೋಗಿ ಒಂದು ಕಪ್ ಕಾಫಿ ಕುಡಿದರಾಯಿತೆಂದು ಪೇಟೆಗೆ ಬಂದಳು ಕಾಮತ್ ಕೆಫೆ ಎದುರು ಗಾಡಿ ನಿಲ್ಲಿಸಿ ಪತ್ರಿಕೆ ನೋಡಲಿಲ್ಲವೆಂದು ನೆನಪಾಗಿ, ಒಂದು ಪತ್ರಿಕೆಯನ್ನು ಕೊಂಡು ಹೋಟೆಲ್ ಪ್ರವೇಶಿಸಿದಳು. ಕಾಫಿ ತರಲು ಹೇಳಿ ಪೇಪರಿನತ್ತ ಕಣ್ಣು ಹೊರಳಿಸಿದಾಗ ಮುಖ ಪುಟದ ಮೇಲೆ "ಇಂದು ಟೇಬಲ್ ಟೆನ್ನಿಸ ಅಂತಿಮ ಆಯ್ಕೆ" ಎಂಬ ಸುದ್ದಿ ಪ್ರಕಟವಾಗಿತ್ತು ಅವಳ ಎದೆ ಧಸ್ ಎಂದಿತು. ಹಾಗಾದರೆ.... ಹಾಗಾದರೆ_ ಅಮರ ! ಅಮರನ ಗತಿ ? ಆತನ ಆಯ್ಕೆಯಂತೂ ಮೊದಲ ಲಿಸ್ಟಿನಲ್ಲಿ ಇಲ್ಲ, ಇಂದೂ ಅವನ ಆಯ್ಕೆಯಾಗುತ್ತದೆ ಎಂದು ನಂಬಿಕೆ ಇರಲಿಲ್ಲ ಒಮ್ಮೆಲೆ ಅವಳ ಕಿವಿಯಲ್ಲಿ ಜನಾರ್ಧನ ಹೇಳಿದ ಮಾತು ನೆನಪು ಆಯಿತು.

'ದಿಪಾ ಅಮರನ ಆಯ್ಕೆ ನನ್ನ ಕೈಯಲ್ಲಿದೆ ಒಂದು ನಯಾಪೈಸೆ ಖರ್ಚಿಲ್ಲದೆ ನೀನೇ ಅವನ ಆಯ್ಕೆಯಾಗುವಂತೆ ಮಾಡಬಹುದು ನನ್ನ ಅವಶ್ಯಕತೆ ಬಿದ್ದರೆ ಲೈಬ್ರರಿ ಜವಾನನನ್ನು ಭೇಟಿ ಮಾಡು '

ಕಾಫಿ ತಂದು ಎದುರಿನಲ್ಲಿಟ್ಟಿದ್ದು ಆಕೆಗೆ ನೆನಪಿಲ್ಲ. ಅವಳ ಕಿವಿಯಲ್ಲಿ ಜನಾರ್ಧನನ ಮಾತೇ ಪ್ರತಿಧ್ವನಿಸುತ್ತಿತ್ತು ಒಂದು ವೇಳೆ ಇಂದೂ ಅಮರನ ಆಯ್ಕೆ ಆಗದಿದ್ದರೆ ಖಂಡಿತವಾಗಿ ಆತ ತನ್ನ ಕೈ ಬಿಟ್ಟ ಹೋದಂತೆ ಅಪ್ಪಾಜಿಯವರ ಮರಣದಿಂದಾಗಿ ಆತ ಅರ್ಧ ಸೋತಿದ್ದ ಇದರ ಮೇಲೆ ಪೂರ್ತಿ

ಸೋತಂತೆ. ತನ್ನ ಜೀವನ ಸಿನಿಮಾ ಕನಸು..... ಬರೀ ಕನಸು. ಇಲ್ಲ ... ಅವನ ಆಸ್ತಿ ಆಗಲೇಬೇಕು ಅವನ ನಾಯಕನಾಗಿ ಆಟವಾಡಿ ಲಕ್ಷಾಂತರ ಜನರ ಮೆಚ್ಚಿನ ಆಟಗಾರನಾಗಲೇಬೇಕು ಆವಾಗ ನನಗೆ ತೃಪ್ತಿ, ಅದಕ್ಕೆ..... ಅದಕ್ಕೆ ನಾನು ಯಾವ ತ್ಯಾಗ ಮಾಡಲೂ ಸಿದ್ಧ ಎಂದು ಅವಳು ನಿರ್ಧರಿಸಿದಾಗ.... ಮುಖ ವಿಕಾರವಾಗಿತ್ತು, ಪ್ರೀತ ಕಳೆ ಸುರಿಯುತ್ತಿತ್ತು.

ತನ್ನ ಬಲಿ ಕೊಟ್ಟಾದರೂ ಅಮರನ ಆಶೆ ಪೂರೈಸಬೇಕೆಂಬ ಧೃಡ ಸಂಕಲ್ಪ ಮಾಡಿಕೊಂಡು ದೀಪಾ ಹೋಟೆಲ್‌ನಿಂದ ಹೊರಬಂದಳು, ಅವಳ ಕಾರು ಲೈಬ್ರರಿಯಲ್ಲಿ ಓಡುತ್ತಿತ್ತು. ಪೀಟರ್ ಅಲ್ಲಿಯ ಜವಾನ .. ಜನಾರ್ಧನ ನಿಗೆ ಮಿತ್ರ ಎಂಬುದು ಅವಳಿಗೆ ಗೊತ್ತಿತ್ತು.

ದೀಪಾ ಬಂದು ಪೀಟರನನ್ನು ಜನಾರ್ಧನನ ಬಗ್ಗೆ ವಿಚಾರಿಸಿದಾಗ ಆತ ಮುಗುಳುನಗೆ ನಕ್ಕ..... ಮತ್ತೊಂದು ಹೊಸಹಕ್ಕಿ ಬಲೆಗೆ ಬಿದ್ದಿತು. ಎಂದು ಕೊಂಡು ಜೇಬಿನಿಂದ ಬೀಗದಕ್ಕೆ ಆಕೆಯ ಕೈಗೆ ಕೊಡುತ್ತ...... ಕಾಲೇಜ್ ಹಿಂದುಗಡೆ ರೋಡಿನಲ್ಲಿರುವ ಮನೆಯ ವಿಳಾಸ ಹೇಳಿ "ನೀವು ಅಲ್ಲಿಗೆ ಹೋಗಿ ಸಾಹೇಬರು ಅಲ್ಲಿಯೇ ಬರುತ್ತಾರೆ" ಎಂದು ಹೇಳುತ್ತ ಅಸಹ್ಯವಾಗಿ ನಕ್ಕ. ಅವನ ಕಡೆಗೊಮ್ಮೆ ತಿರಸ್ಕಾರದ ನಗೆ ಬೀರಿ..... ದೀಪಾ ತನ್ನ ಕಾರಿನತ್ತ ನಡೆದಳು.

ಪೀಟರ ಹೇಳಿದ ಮನೆ ಪುಟ್ಟದಾಗಿದ್ದರೂ ಸುಂದರವಾಗಿತ್ತು. ಕಾಪಾಂಡ್ ಗೋಡೆ ... ಮನೆಯೆದುರು ಚಿಕ್ಕ ಕೈದೋಟ ... ನಾಲ್ಕಾರು ಮಾವಿನ ಮರಗಳು ..... ಎರಡು ತೆಂಗಿನ ಮರಗಳು. ಕಾರನ್ನು ಮನೆಯ ಪಕ್ಕದಲ್ಲಿರುವ ಗ್ಯಾರೆಜನಲ್ಲಿ ನಿಲ್ಲಿಸಿ ಆಕೆ ಬೀಗ ತೆಗೆದು ಒಳಗೆ ಕಾಲಿಡುವುದಕ್ಕೂ ಒಳಗಿನಿಂದ ಟೆಲಿಫೋನ ಗಂಟೆ ಕೇಳಿಸಿತು. 'ಓಹ್ ಈ ಮನೆಗೆ ಫೋನೂ ಇದೆ' ಎಂದುಕೊಳ್ಳುತ್ತ ಹೋಗಿ ಫೋನು ಎತ್ತಿದಳು. ಆಕಡೆಯಿಂದ ಜನಾರ್ಧನ ಮಾತನಾಡುತ್ತಿದ್ದ.

"ಬಡವನ ಕುಟೀರಕ್ಕೆ ದಯಮಾಡಿಸಿದ ತಮಗೆ ಸುಸ್ವಾಗತ."

"ಬಣ್ಣದ ಮಾತುಗಳು ಆಮೇಲೆ ಜನಾರ್ಧನ. ನಾನು ನಿನ್ನೊಂದಿಗೆ ಮಾತನಾಡಬೇಕಾಗಿದೆ."

"ಈಗಲೇ ಹಾಜರಾಗುತ್ತೇನೆ ದೇವಿ....ಬಹಳವೆಂದರೆ ಅರ್ಧಗಂಟೆ ಅಷ್ಟೇ

ಮುಂದೆ ಮಾತನಾಡಲು ಆಸ್ಪದ ಕೊಡದೆ ದೀಪಾ ಫೋನು ಕೆಳಗಿರಿಸಿದಳು. ಹೇಳಿದಂತೆ ಜನಾರ್ಧನ ಅರ್ಧಗಂಟೆಯೊಳಗೆ ಬಂದ. ಬಂದವನೇ ದೀಪಾಳನ್ನು ಆಲಂಗಿಸಲು ಹೋದ. ದೂರನಡೆದು ನಿಂತ ದೀಪಾ "ಮೊದಲುಮಾತುಕತೆ.... ಮುಂದೆ ನೀಹೇಳಿದಂತೆ." ಎಂದಳು. ಜನಾರ್ಧನ ಸೋಫಾದ ಮೇಲೆ ಕುಳಿತುಕೊಳ್ಳುತ್ತಾ, ಸಿಗರೇಟ್ ಒಂದನ್ನು ಉರಿಸಿದ. ಒಂದೆರಡು ಮಾಡದೆ ಎರಡು ನಿಮಿಷ ಯೋಚಿಸಿದ. ನಂತರ ಫೋನಿನ ಹತ್ತಿರ ಹೋಗಿ ತನಗೆಬೇಕಾದ ನಂಬರ್ ಡಯಲ್ ಮಾಡಿದ. ಆ ಕಡೆಯಿಂದ ಫೋನು ಎತ್ತುತ್ತಲೂ 'ನಾನು ಜನಾರ್ಧನ ಮಾತನಾಡುವುದು. ಸಚಿವರಿಗೆ ಫೋನು ಕೊಡಿ" ಎಂದ. ಒಂದು ನಿಮಿಷ ಬಿಟ್ಟು.. 'ಹೌದು ನಾನೇ ಮಾತನಾಡ್ತಾ ಇರೋದು.... ಫುಟ್ ಬಾಲ ಟೀಮಿನ ನಾಯಕತ್ವದಿಂದ ನಾನು ಹಿಂದೆ ಸರಿದಿದ್ದೇನೆ. ದಯವಿಟ್ಟು ಅದನ್ನು ಅಮರನಿಗೆ ಕೊಡಿ... ಹಾಗೇನು ಇಲ್ಲ. ನನ್ನ ಆರೋಗ್ಯ ಸರಿಯಿಲ್ಲ ಅನಾರೋಗ್ಯದ ನಿಮಿತ್ತ ಆಡುವುದಿಲ್ಲ ಅಂತ ಸ್ಟೇಟ್‌ಮೆಂಟ್ ಕೊಟ್ಟು ನನ್ನ ಜಾಗದಲ್ಲಿ ಪ್ರತಿಭಾಶಾಲಿ ಆಟಗಾರ ಅಮರನನ್ನು ಆರಿಸಲಾಗಿದೆ ಎಂದು ಹೇಳಿ ಸಾಕು ಸರಿ... ಸರಿ.... ಹಾಗೆ ಮಾಡಿ"

ಫೋನು ಕೆಳಗಿಟ್ಟು ದೀಪಾಳ ಕಡೆ ನೋಟ "ಈಗಲಾದರೂ ನಿನ್ನ ಕೆಲಸವಾಯಿತೋ.... ನಾಳೆಯೂ ಪತ್ರಿಕೆಯಲ್ಲಿ ಈ ಸುದ್ದಿ ಪ್ರಕಟವಾಗುತ್ತದೆ. ನಾನು ನಿನ್ನ ಕೆಲಸ ಮಾಡಿ ಕೊಟ್ಟಿರುವೆ. ನಿನಗಾಗಿ ಸ್ವಾರ್ಥ ತ್ಯಾಗ ಮಾಡಿರುವೆ ಎಂಬುದು ನನಗೆ ತಿಳಿದಿರಲು ಸಾಕು. ಈಗಲಾದರೂ ನೀನು ನನ್ನ ಆಸೆಯಂತೆ ನಡೆಯುವೆಯಾ ?"

"ತ್ಯಾಗದ ಮಾತು ಆಮೇಲೆ ಜನಾರ್ಧನ ತ್ಯಾಗ ಎಂದು ಹೇಳಿಕೊಳ್ಳಲು ನಿನಗೆ ನಾಚಿಕೆ ಬರಬೇಕು. ಅದೇನೇ ಇರಲಿ. ನನಗೆ ಅಮರನ ಆಯ್ಕೆ ಆಗಬೇಕಾಗಿತ್ತು. ಆದಾದರೆ ಸಾಕು "

"ಅದು ಆಗೇ ಆಗುತ್ತೆ. ಇನ್ನು ಚಿಂತೆ ಬಿಡು. ನೀನನ್ನ ಬಳಿಗೆಬಾ...."

"ಅದು ಈಗಲೇ ಸಾಧ್ಯವಿಲ್ಲ "

"ಅಂದರೆ ಅಂದರೆ ಮೋಸ ಮಾಡಲು ಯೋಚಿಸಿರುವೆಯಾ ?"

"ಅದು ನಿನ್ನಂಥವರ ಕೆಲಸ ಕೇವಲ ನಡೆದರೂ ನೀನು ಫೋನುಮಾಡಿದರೆ ಆಯಿತೆ ? ನೀನು ಯಾರೊಂದಿಗೆ ಮಾತನಾಡಿದೆ ಎಂದು ಯಾರಿಗೆ ಗೊತ್ತು ?

ನನ್ನೆದುರು ಕೇವಲ ನಾಟಕ ಮಾಡಿದ್ದರೆ ?

"ದೀಪಾ.... ನನ್ನನ್ನು ಅರ್ಥಮಾಡಿಕೋ ನಾನು ನಾಟಕ ಮಾಡಿಲ್ಲ ಸಂಜೆ ಮೀಟಿಂಗ್ ಇದೆ. ಮೀಟಿಂಗ್‌ನಲ್ಲಿ ಅವರನನ್ನು ನಾಯಕ ಎಂದು ಘೋಷ ಲಾಗುತ್ತದೆ ತಿಳಿಯಿತೇ."

"ಹಾಗಾದರೆ ನಿನ್ನ ಆಶೆ ನೆರವೇರುವುದು ಸಂಜೆಗೆ. ಅವನ ಅಯ್ಕೆ ಆಗಲಿ ಕಮಿಟಿಯುವರು ಆರ್ಡರ್ ಮಾಡಲಿ, ಅದರ ಒಂದು ಪ್ರತಿ ತಂದು ನನಗೆ ತೋರಿಸು ಅಲ್ಲದೆ ಸಂಜೆಯ ಪ್ರದೇಶಸಮಾಚಾರದಲ್ಲಿ ಅದು ಪ್ರಸಾರವಾಗಲಿ ಅವಾಗ ನಾನು ನಿನ್ನ ಮಾತು ನಂಬುತ್ತೇನೆ.... ನಿನ್ನ ಶರತ್ತಿನ ಪ್ರಕಾರ ಈ ರಾತ್ರಿ ಪೂರ್ತಿ ನಿನ್ನ ಜೊತೆ ಕಳೆಯುತ್ತೇನೆ ಆಯಿತಾ."

"O.K. O.K. ಬೇಬಿ ನಿನ್ನಂತೆ ಆಗಲಿ ಆದರೆ ನಾನೀಗಲೇ ನಿನ್ನ ಹೊರಗೆ ಬಿಡಲಾರೆ ಮತ್ತೆ ಸಂಜೆ ನೀ ಬಂದೇ ಬರತೀಯಾ ಅಂತ ನಂಬಿಕೆ ಏನು ? ನೀನಿಲ್ಲೇ ಇರು. ನಾನು ಹೊರಗೆ ಬೀಗ ಹಾಕಿಕೊಂಡು ಹೋಗುತ್ತೇನೆ ರಾತ್ರಿ ಬರುತ್ತೇನೆ, ಆರ್ಡರ್ ತರುತ್ತೇನೆ ಬೇಕಾದರೆ ನೀನು ರೇಡಿಯೋದಲ್ಲಿ ಸಮಾಚಾರ ಕೇಳು, ಒಳಗೆ ಕಿಚನ್‌ನಲ್ಲಿ ಎಲ್ಲಾ ಸಾಮಾನು ರೆಡಿಇದೆ. ಕಾಫಿ ಮಾಡಿಕೊ, ತಿಂಡಿ ಮಾಡಿಕೋ ಆಯಿತಾ".... ನಾನಿನ್ನು ಬರಲಾ ?"

ದೀಪಾ ಅವನ ಮಾತಿಗೆ ಉತ್ತರಕೊಡಲಿಲ್ಲ. ದುರ್ವಾಸನಂತೆ ಗುಡುಗುತ್ತ ಹೊರಗೆ ಹೋದ ಜನಾರ್ಧನ ಬಾಗಿಲಿಗೆ ಬೀಗ ಹಾಕಿಕೊಂಡು ಹೊರಟು ಹೋದ.

ಒಂದರ್ಧ ಗಂಟೆ ದೀಪಾ ಕುಳಿತ ಜಾಗದಿಂದ ಮಿಸುಕಲೇ ಇಲ್ಲ.... ನಂತರ ಮೇಲೆದ್ದು ಅಡಿಗೆ ಮನೆಯತ್ತ ನಡೆದಳು..... ಒಂದು ಕಪ್ ಕಾಫಿ ಮಾಡಿಕೊಂಡು ಕುಡಿದು ಹೊರಗೆ ಬರುತ್ತಿರುವಾಗ ಪಕ್ಕದಲ್ಲಿಯ ಸೆಲ್ಫ ಕಡೆ ದೃಷ್ಟಿ ಹರಿಯಿತು. 'ವಿಷ' ಎಂದು ಬರೆದ ಸೀಸೆ ಅಲ್ಲಿ ಆ ಸೀಸೆಯನು ಜನಾರ್ಧನ ಏಕೆ ತಂದಿರಿಸಿದನೋ ತಿಳಿಯದು.... ಆ ಸೀಸೆ ನೋಡುತ್ತಲೇ ದೀಪಾಳ ತುಟಿಗಳ ಮೇಲೆಭಯಾನಕವಾದ ನಗೆಯೊಂದು ಮೂಡಿ ಮಾಯವಾಯಿತು.

ಸಾಯಂಕಾಲ ಸರಿಯಾದ ಸಮಯಕ್ಕೆ ಆಕೆ ರೇಡಿಯೋ ತಿರುಗಿಸಿದಳು. ಅವಳ ಎದೆ ಬಡಿದುಕೊಳ್ಳ ತೊಡಗಿತ್ತು. "ಒಂದು ವಿಶೇಷ ಸಮಾಚಾರ...

ಇಂದು ಸಂಜೆ ಅವಸರದಲ್ಲಿ ಸಭೆ ಸೇರಿದ ಕ್ರೀಡಾ ಕಮಿಟಿಯು ಮುಂದಿನ ತಿಂಗಳು ಮುಂಬಯಿಯಲ್ಲಿ ನಡೆಯುವ ಫುಟ್‌ಬಾಲ್ ಟೀಮಿಗೆ ನಗರದ ಪ್ರತಿಭಾಶಾಲಿ ಆಟಗಾರರ ಅಷ್ಟೂ ಅವರನ್ನು ಆಯ್ಕೆ ಮಾಡಲಾಗಿದೆ. ಈ ಮೊದಲೇ ನಾಯಕರೆಂದು ಆಯ್ಕೆಯಾದ ಜನಾರ್ಧನ ಅವರು ಅನಾರೋಗ್ಯದ ಮೂಲಕ ಆಡಲು ಸಾಧ್ಯವಾಗದೆಂದು ತಿಳಿಸಿದ್ದಾರೆ. ಇನ್ನಿತರ ಆಯ್ಕೆಯ ಆಟಗಾರರ ಹೆಸರುಗಳು ಇಂತಿವೆ."

ಮುಂದಿನ ಸುದ್ದಿ ದೀಪಾಳಿಗೆ ಬೇಕಾಗಿರಲಿಲ್ಲ. ಅವಳ ಪುಟ್ಟ ಹೃದಯ ಸಂತಸದಿಂದ ಹಾರಾಡುತ್ತಿತ್ತು. 'ಉಪನಾಯಕ' ಆತನಿಗೆಷ್ಟು ಖುಶಿಯಾಗಬೇಡ ಈ ಸುದ್ದಿ ಕೇಳಿ? ಆದರೆ ಮರುಕ್ಷಣ ಈ ಸಂತಸದ ಸುದ್ದಿಗಾಗಿ ತಾನು ತೆರಬೇಕಾದವಸ್ತು ನೆನೆದು ಆಕೆ ಭೂಮಿಗಿಳಿದು ಬಂದಳು. ಈಗಲೇ ಇನ್ನೊಂದು ಗಂಟೆಗೆ ಜನಾರ್ಧನ ಬಂದೇ ಬರುತ್ತಾನೆ

ಆವನಿಗೆ ತನ್ನ ದೇಹವನ್ನ ಲಂಚವಾಗಿ ನೀಡಬೇಕಾಯಿತಲ್ಲಾ ಎಂಬ ಕೊರಗಿಗಿಂತ ಹೆಚ್ಚಾಗಿ ಪ್ರತಿಭೆ ಇದ್ದ ಒಬ್ಬ ಆಟಗಾರನ ಆಯ್ಕೆಗೆ ತನ್ನಂಥವಳು ದೇಹದ ಲಂಚ ನೀಡಬೇಕಾದ ಪರಿಸ್ಥಿತಿ ನಮ್ಮಲ್ಲಿದೆಯಲ್ಲ ಎಂಬ ಕೊರಗು ಹೆಚ್ಚಾಗಿ ಒಡೆದು ಕಾಣುತ್ತಿತ್ತು. ಅವಳು ಮೇಲೆದ್ದಳು, ಜನಾರ್ಧನನ ಸ್ವಾಗತಕ್ಕಾಗಿ ಅವಳು ಸಿದ್ಧಳಾಗಬೇಕಾಗಿತ್ತು.

ಮುಂಜಾನೆ ನೋಡಿದ ಶೀಷೆಯನ್ನು ಆಕೆ ಕೈಗೆ ತೆಗೆದುಕೊಂಡಳು..... ಕಪಾಟಿನಿಂದ ವಿಸ್ಕಿ ಬಾಟಲಿ ತೆಗೆದು ಅದರಲ್ಲಿ ಪೂರ್ತಿ ಶೀಷೆ ವಿಷವನ್ನು ಸುರುವಿದಳು. ನಂತರ ಆ ಸೀಸೆ ಹಾಗೂ ಒಂದು ಖಾಲಿ ಗ್ಲಾಸನ್ನು ತಂದು ಮೇಜಿನ ಮೇಲಿರಿಸಿ ತಾನು ಸೋಫಾದ ಮೇಲೆ ಒರಗಿದಳು.

ಮುಂದೆ ಅರ್ಧ ಗಂಟೆ ಕಳೆಯುವಷ್ಟರಲ್ಲಿ ಹೊರಗೆ ಕಾರು ಬಂದು ನಿಂತ ಸಪ್ಪಳ. ದೀಪಾಳ ಮುಖ ಬಿಳುಚಿಕೊಂಡಿತು. ಕೈ ಕಾಲುಗಳಲ್ಲಿಯ ಶಕ್ತಿ ಉಡುಗಿ ಅವು ಬಳಬಳ ಅನ್ನತೊಡಗಿದವು. ಎದ್ದು ನಿಲ್ಲಬೇಕೆಂದರೆ ಶಕ್ತಿ ಇಲ್ಲದಂತಾಯಿತು.

ಬಾಗಿಲು ತೆರೆದುಕೊಂಡು ಯಾವುದೋ ಒಂದು ಚಿತ್ರದ ಗೀತೆಯನ್ನು ಗುನುಗುನಿಸುತ್ತಾ ಜನಾರ್ಧನ ಒಳಗೆ ಬಂದು ಬಾಗಿಲು ಹಾಕುತ್ತಿದ್ದಂತೆ ಗೊವ್ ಎಂಬ ದುರ್ವಾಸನೆ ಕೋಣೆಯಲ್ಲಿ ಹರಡಿತು. ಆತ ಕಂಠಪೂರ್ತಿ

ಕುಡಿದು ಬಂದಿದ್ದ.

ಬಾಗಿಲನ್ನು ಭದ್ರಪಡಿಸಿ, ದೀಪಾಳ ಕಡೆ ನೋಡಿ, ಜೇಬಿನಿಂದ ಮಡಿಕೆ ಮಾಡಲ್ಪಟ್ಟ ಕಾಗದ ಒಂದನ್ನು ತೆಗೆದು ಅವಳ ಮುಂದೆ ಎಸೆದು,

“ತೆಗೆದುಕೋ ಆರ್ಡರ್___ ಎಲ್ಲಾ ನಿನ್ನಿಚ್ಛೆಯಂತೆ ಆಗಿದೆ. ಇನ್ನು ನನ್ನಿಚ್ಛೆ ಪೂರೈಸಲು ಹಿಂದೇಟು ಹಾಕಬೇಡ.” ಎಂದ. ಸೋಫಾದಿಂದ ಮೇಲೆ ಎದ್ದ ದೀಪಾ ಕಾಗದವನ್ನೆತ್ತಿಕೊಂಡು ಬೇಗನೆ ಪರೀಕ್ಷಿಸಿದಳು. ಎಲ್ಲಾ ಸರಿಯಾಗಿತ್ತು. ಅದೇ ಸ್ವಲ್ಪ ಹೊತ್ತು ಮುಂಚೆ ರೇಡಿಯೋದಲ್ಲಿ ಕೇಳಿದ. ಸಮಾಚಾರ ಅದರಲ್ಲಿತ್ತು..

“ಈಗಲಾದರೂ ಬಾಯಿ ಸಾಹೇಬರಿಗೆ ವಿಶ್ವಾಸವಾಯಿತೆ ?” ನಾಟಕೀಯವಾಗಿ ಕೇಳಿದ ಜನಾರ್ಧನ. ಅಷ್ಟರಲ್ಲಿ ದೀಪಾ ಸುಧಾರಿಸಿದ್ದಳು. ಅವಳಲ್ಲಿ ಧೈರ್ಯ ಮೂಡತೊಡಗಿತ್ತು ಕೃತಕ ವೈಯಾರ ತೋರಿಸುತ್ತ ವಿಸ್ಕಿ ಸುರಿದು ಹೇಳಿದಳು,

“ಹಾಂ.... ಜನಾರ್ಧನ ಈಗ ನನಗೆ ವಿಶ್ವಾಸವಾಯಿತು. ನುಡಿದಂತೆ ನಡೆದ ನಿನ್ನ ಬಗ್ಗೆ ನನಗೆ ಬಹಳ ಅಭಿಮಾನವಿದೆ ನೀನು.... ನುಡಿದಂತೆ ನಡೆದೆ. ಅಮರನಿಗಾಗಿ ಸ್ವಂತ ಸ್ಥಾನ ತೆರವು ಮಾಡಿದೆ ನಿಜವಾಗಿಯೂ ನೀನು ಮಹಾಪುರುಷ...... ನನಗೆ ತುಂಬಾ ವಿಶ್ವಾಸವಾಗಿದೆ ತೆಗೆದುಕೊ.... ಒಂದು ಗ್ಲಾಸ್ ವಿಸ್ಕಿ ಕುಡಿ ನಂತರ ಇಂದಿನ ಸಂತೋಷ ಕೂಟವನ್ನು ಆಚರಿಸೋಣವಂತೆ.... ”

“ಸಾರಿ.... ಸಾರಿ ದೀಪಾ ... ಈಗಾಗಲೇ ನಾನು ಕಂಠಪೂರ್ತಿ..... ಕುಡಿದು ಬಂದಿರುವೆ ಇನ್ನೂ ಮುಂದೆ ನನ್ನಿಂದ ಕುಡಿಯಲಾಗದು___”

ದೀಪಾಳ ಎದೆ ಧಸಕ್ ಎಂದಿತು. ವಿಷ ಬೆರೆಸಿದ ವಿಸ್ಕಿ ಕುಡಿಸಿದ ನಂತರ ತನಗೆ ಇಲ್ಲಿಂದ ಪಾರಾಗಲು ದಾರಿಯಾಗುತ್ತದೆ ಎಂದು ಆಕೆ ಯೋಚಿಸಿದ್ದಳು. ಈಗ ಅವಳ ಯೋಚನೆ ತಲೆ ಕೆಳಗಾಗುವ ಸಮಯ ಬಂದಿತು.

“ಜನಾರ್ಧನ ಹಾಗೆನ್ನಬೇಡ ಸಂತೋಷದ ಸಲುವಾಗಿ ಒಂದೇ ಒಂದು ಗ್ಲಾಸ್ ಕುಡಿ.”

“ಸರಿ... ಸರಿ . ದೀಪಾ ನಿನ್ನ ಮನಸ್ಸು ನೋಯಿಸಲಾರೆನು ... ನೀನು ಒಂದು ಗ್ಲಾಸ್ ಕುಡಿ ನಾನೂ ಒಂದು ಗ್ಲಾಸ್ ಕುಡಿಯುತ್ತೇನೆ.”

“ಓಹ್ ನೋ.... ಜನಾರ್ಧನ.... ನಾನೆಂದು ವಿಸ್ಕಿ ಕುಡಿದಿಲ್ಲ ನನ್ನಿಂದ

ಮಲಾಗೋದಿಲ್ಲ."

"ಹಾಗಾದರೆ ಹೋಗಲಿ ಬಿಡು ... ನನಗೂ ಇದು ಬೇಕಾಗಿಲ್ಲ ಈಗಾಗಲೇ ನಾನು ಕುಡಿದು ಬಂದಿರುವೆ ಸದ್ಯ ನನಗೆ ಬೇಕಾಗಿರುವುದು ಇದಲ್ಲ.... ನೀನು... ಬಾ ಹತ್ತಿರ... ಬಹಳ ದಿನಗಳ ನನ್ನ ಆಶೆಯನ್ನು ತೀರಿಸು."

ದೀಪಾ ಅವನಿಂದ ತಪ್ಪಿಸಿಕೊಳ್ಳಲು ಬಹಳ ಹೆಣಗಿದಳು. ಆದರೆ ಅದು ಸಾಧ್ಯವಾಗಲಿಲ್ಲ.... ಜನಾರ್ಧನ ಹುಲಿಯಂತೆ ಆಕೆಯ ಮೇಲೆರಗಿದ. ಸುಂದರವಾಗಿ ಅರಳಲು ಸಿದ್ಧವಾದ ಗುಲಾಬಿ ಮೊಗ್ಗು ಆನೆಯ ತುಳಿತಕ್ಕೆ ಜರ್ಜರಿತವಾಯಿತು. ದೀಪಾ ಬಿಕ್ಕಿ ಬಿಕ್ಕಿ ಅತ್ತಳು ಜನಾರ್ಧನ ಗಹಗಹಿಸಿ ನಕ್ಕ

ರಾತ್ರಿಯಿಡೀ ಜನಾರ್ಧನ ಆಕೆಗೆ ಮಲಗಲು ಬಿಡಲಿಲ್ಲ. ಬೆಳಗು ಮುಂಜಾನೆ ಸರಿಯಾಗಿ ಆರುಗಂಟೆಗೆ ಅವನಿಂದ ಕೊಸರಿಕೊಂಡು ಮೇಲೆದ್ದ ದೀಪಾ ಬಾತರೂಮಿಗೆ ಹೋದಳು. ಒಂದು ಗಂಟೆ ಮೈ ಉಜ್ಜಿಕೊಂಡು ಸ್ನಾನ ಮಾಡಿದಳು. ದೇಹದ ಹೇಸಗೆ ಹೋಯಿತೇನೋ ನಿಜ ಆದರೆ ಆತ್ಮದ ಹೇಸಿಗೆ ಹೋಗಲೇ ಇಲ್ಲ. ಆಕೆ ಬಟ್ಟೆ ಧರಿಸಿ ಹೊರಗೆ ಬಂದಾಗ ವಿಷ ಬೆರೆಸಿದ ವಿಸ್ಕಿ ಖಾಲಿ ಮಾಡಿದ ಜನಾರ್ಧನ ನೆಲದ ಮೇಲೆ ಬಿದ್ದು ಪಿಲಿ ಪಿಲಿ ಒದ್ದಾಡುತ್ತಿದ್ದ ಅವನತ್ತ ನೋಡಿ ಒಂದು ಬಾರಿ ಅವನ ಮುಖದ ಮೇಲೆ ಖ್ಯಾಕರಿಸಿ ಉಗುಳಿದ ದೀಪಾ ಆಕ್ರೋಶದಿಂದ ನುಡಿದಳು.

"ಥೂ ನಾಯಿ... ನಿನ್ನ ಸ್ವಾರ್ಥಕೋಸ್ಕರ ನೀನು ನನ್ನಂಥ ಎಷ್ಟು ಹೆಣ್ಣುಗಳ ಬಲಿ ತೆಗೆದುಕೊಂಡಿರುವೆಯೋ ಏನೋ ಅದಕ್ಕೆ ಶಿಕ್ಷೆ ದೇವರಿಂದು ನೀಡಿದ. ನಿನ್ನೆ ರಾತ್ರಿಯೇ ನಿನಗೆ ವಿಷನೀಡಿ ನಾನು ಪಾರಾಗಬೇಕೆಂದು ಮಾಡಿದ್ದೆ.... ಆದರೆ ದೇವರು ಅದಕ್ಕೆ ದಾರಿ ಮಾಡಿ ಕೊಡಲಿಲ್ಲ. ಅಂತೂ ನೀನು ನಿನ್ನೊಂದಿಗೆ ನನ್ನ ಬಲಿಯನ್ನು ತೆಗೆದುಕೊಂಡೆ.... ನನಗೆ ನನ್ನ ಬಲಿ ಕೊಟ್ಟಿದ್ದಕ್ಕೆ ಸುಖವಿದೆ ತೃಪ್ತಿ ಇದೆ... ನನಗೆ ಅಭಿಮಾನ ಎನಿಸುತ್ತವೆ. ಆದರೆ... ಆದರೆ ನೀನು ನೀಚ ನೋಡು ನಿನಗೆ ನಾಯಿಗೆ ಬರಬೇಕಾದ ಸಾವು ಬಂದಿದೆ. ನಾಯಿಗೆಂದು ನೀನು ತಂದಿರಿಸಿದ ವಿಷ ನಿನಗೇ ಮೃತ್ಯುವಾಯಿತು ನೀ ಮಾಡಿದ ಪಾಪಕ್ಕೆ ತಕ್ಕ ಶಿಕ್ಷೆಯನ್ನು ದೇವರು ನೀಡಿದ್ದ.

ಜನಾರ್ಧನ ಯಾವ ಉತ್ತರವನ್ನು ನೀಡುವಂತಿರಲಿಲ್ಲ ವಿಷ ತೀವ್ರವಾಗಿ ಪರಿಣಾಮ ಮಾಡತೊಡಗಿತ್ತು ದೇಹದಲ್ಲಿಯ ನರಗಳೆಲ್ಲ ಒಂದೇ ಸವನೆ ಎಳೆಯು

ತೊಡಗಿದ್ದವು. ವೈ ಬಣ್ಣ ಸೀಲರ್ಗಕ್ಕೆ ಗತಿ ಡಗಿತ್ತು..... ವೈವಮುರಿದು ಚಟಪಟ ಒದ್ದಾಡತೊಡಗಿದ್ದ. ದೀಪಾಗೆ ಬಹಳ ಹೊತ್ತು ಅಲ್ಲಿ ನಿಲ್ಲಲಾಗಲಿಲ್ಲ. ತನ್ನ ಜೀವನ ಹಾಳು ಮಾಡಿದವ ಒದ್ದಾಡುತ್ತಾ ಸಾಯುವುದನ್ನು ಇನ್ನೂ ಸ್ವಲ್ಪ ಹೆಚ್ಚು ಹೊತ್ತು ನೋಡಬೇಕೆಂಬ ಬಯಕೆ ಇದ್ದರೂ ಆಗಲೇ ವೇಳೆ ಬಹಳವಾಗಿದ್ದರಿಂದ ಅಲ್ಲಿಯೇ ಇದ್ದರೆ ಯಾರಾದರೂ ನೋಡಿಯಾರೆಂದು ತಿಳಿದು ಅಲ್ಲಿಂದ ಸರಿದುಕೊಳ್ಳುವುದೇ ಮೇಲೆಂದು ಭಾವಿಸಿ ಆಕೆ ಹೊರಗೆ ಬಂದಳು, ತನ್ನ ಬಳಿಯಿದ್ದ ಮನೆಯ ಬೀಗದ ಕೈ ಒಳಗೆ ಎಸೆದು, ಬಾಗಿಲನ್ನು ಹಾಗೇ ಮುಂದೆ ಮಾಡಿಕೊಂಡು ಗ್ಯಾರೇಜ್ ಬಳಿ ಬಂದಳು. ಮುಂದಿನ ಕ್ಷಣವೇ ಅವಳ ಕಾರು ಮನೆಯತ್ತ ಓಡತೊಡಗಿತ್ತು.

ವರದರಾಜು ಅವರು ಮಗಳನ್ನು ಕಾಣದೇ ಅವಳ ಬಗ್ಗೆಯೇ ಚಿಂತಿಸುತ್ತ ಕುಳಿತಿದ್ದರು. ದೀಪಾ ಬರುತ್ತಲೂ ಅವರ ಜೀವದಲ್ಲಿ ಜೀವ ಬಂದಂತಾಯಿತು. ದೀಪಾ ತನ್ನ ಬಳಿಯಿದ್ದ ಆರ್ಡರ್ ತೋರಿಸಿದರೆ, ವರದರಾಜು ಅವರು ಪತ್ರಿಕೆ ತೋರಿಸಿದರು. ಪತ್ರಿಕೆಯಲ್ಲಿ ಅವನ ಭಾವಚಿತ್ರದೊಂದಿಗೆ ಆತ ನಾಯಕನೆಂದು ಆಯ್ಕೆಯಾದ ವಿಷಯ ಪ್ರಕಟಿಸಿದ್ದರು. ಅದರ ಪಕ್ಕದಲ್ಲಿಯೇ ಬ್ಲಾಕ್‌ನಲ್ಲಿ "ಕೇಂದ್ರ ಸಚಿವರ ಛೀಮಾರಿ' ಎಂಬ ವಿಷಯ ಪ್ರಕಟವಾಗಿತ್ತು. ಅದನ್ನು ಪೂರ್ತಿ ಓದಿದಾಗ, ದೀಪಾಳ ಕಣ್ಣಲ್ಲಿ ನೀರು ಕಾಣಿಸಿಕೊಂಡಿತು, ಹಾಗಾದರೆ ಜನಾರ್ಧನ ತನಗೆ ಮೋಸ ಮಾಡಿದ್ದಾನೆಂದು ಸಿದ್ಧವಾಯಿತು. ಏಕೆಂದರೆ ಆಕೆ ಅವನ ಅವನ ಬಳಿಗೆ ಹೋಗುವುದಕ್ಕೆ ಮೊದಲೇ ಅವನಿಗೆ ನಾಯಕಪಟ್ಟ ಕಟ್ಟಬೇಕೆಂಬುದು ತೀರ್ಮಾನಿಸಲ್ಪಟ್ಟಿತು. ತಾನೇ ತಾನಾಗಿ ಬಲೆಗೆ ಬಂದು ಬಿದ್ದ ಹಕ್ಕಿ ಬಿಡಬಾರದೆಂದು ಆತ ದೀಪಾಳನ್ನು ಎಳೆದುಕೊಂಡಿದ್ದ.

ವರದರಾಜು ಅವರು ತಾವು ಕೇಂದ್ರ ಸಚಿವರನ್ನು ಭೇಟಿ ಮಾಡಿದ ವಿಷಯ ತಿಳಿಸಿ..... ಎಲ್ಲಾ ವಿವರವಾಗಿ ಹೇಳಿದರು, ಅಲ್ಲದೆ ಎರಡುಬಾರಿ ಮನೆಗೆ ಫೋನ್ ಮಾಡಿದೆ ಎಂದಾಗ ದೀಪಾ ಅಚ್ಚರಿ ವ್ಯಕ್ತಪಡಿಸಿದಳು. ವರದರಾಜು ಕೆಲಸದಾಕೆಯನ್ನು ಕರೆದು ಕೇಳಿದಾಗ ಆಕೆ ಹೌದು ಎಂದು ಒಪ್ಪಿಕೊಂಡಳಲ್ಲದೆ ಬೆಳಿಗ್ಗೆ ಹೇಳಬೇಕೆಂದ ಕೂಗಿದೆ, ತಾವು ಕೇಳಿಸಿಕೊಳ್ಳದೆ ಕಾರಿನಲ್ಲಿ ಹೊರಟು ಹೋದಿರಿ ಎಂದು ಹೇಳಿದಳು. ಎಲ್ಲ ದೃಷ್ಟಿಯಿಂದಲೂ ದೈವ ತನಗೆ ಕೈ

ಕೊಟ್ಟಿದ್ದೆ ಎಂದು ಆಕೆ ದೀಪಾ ದುಃಖ ತಾಳಲಾರದೆ, ತಂದೆಯ ಮುಂದೆ ಕಣ್ಣೀರು ಸುರಿಸುತ್ತಾ ಬಿಕ್ಕಿ ಬಿಕ್ಕಿ ಅತ್ತಳು. ತನ್ನ ರೂಮಿಗೆ ಹೋಗಿ ಗಾದಿಯ ಮೇಲೆ ಉರುಳಿದಳು. ತಲೆದಿಂಬು ಅವಳ ಕಣ್ಣೀರಿನಿಂದ ತೊಯ್ದು ಹೋಯಿತು.

ಹನ್ನೆರಡು ಗಂಟೆಯ ಸುಮಾರಿಗೆ ವರದರಾಜು ಅವರು ಕರೆದಾಗಲೇ ಆಕೆ ಕೋಣೆಯಿಂದ ಹೊರಗೆ ಬಂದಳು. ಬಲವಂತಕ್ಕೆ ಎರಡು ತುತ್ತು ಅನ್ನ ತಿಂದು ಕೈ ತೊಳೆದು, ದೀಪಾಗೆ ಅಮರನನ್ನು ಕಾಣಬೇಕೆನಿಸಿತು ಬಟ್ಟೆ ಬದಲಿಸಿ, ಮನಸ್ಸಿರದಿದ್ದರೂ ಸ್ವಲ್ಪ ಪೌಡರ್ ಲೇಪಿಸಿಕೊಂಡು.... ಕುಂಕುಮದ ಬೊಟ್ಟನ್ನು ಇಟ್ಟುಕೊಂಡು ಹೊರಗೆ ಬಂದಳು. ಗಾರ್ಡನ್‌ನಲ್ಲಿದ್ದ ತಂದೆಯ ಕಡೆ ಹೋದಳು,

“ಡ್ಯಾಡಿ ಅಮರನ ಕಡೆ ಹೋಗಿ ಬರುತ್ತೇನೆ...” ಎಂದಳು. ವರದರಾಜು ಓ. ಕೆ. ಡಾರ್ಲಿಂಗ್ ಎಂದರು. ದೀಪಾಳ ಕಾರು ಅಮರನ ಮನೆಯತ್ತ ಓಡ ತೊಡಗಿತು.

## 12.

ರಾತ್ರಿ ಹನ್ನೆರಡು ಗಂಟೆಯ ಸುಮಾರಿಗೆ ಎಲ್ಲರೂ ಮಲಗಿಕೊಂಡಿದ್ದಾರೆ ಎಂದು ಮನದಟ್ಟಾದಾಗ ಅಮರ ಹಾಸಿಗೆ ಮೇಲೆದ್ದ. ತಲೆ ಬಾಗಿಲು ತೆರೆದು ಕೊಂಡು ಹೊರಬಂದ. ಮೈ ಕೊರೆಯುವ ಚಳಿ ಅವನನ್ನು ಮುತ್ತಿ ಮುಂದೆ ಒಂದು ಹೆಜ್ಜೆ ಕೂಡ ಇಡದಂತೆ ಮಾಡಿತು. ಮತ್ತೆ ಒಳಗೆ ಹೋಗಿ ಬೆಚ್ಚಗೆ ಮಲಗಬೇಕು ಎಂಬ ಆಸೆಯು ಒತ್ತಡ ಹೇರಿದರೂ ಅದನ್ನು ತಡೆಹಿಡಿದು ಅಮರ ಬಿರಬಿರನೆ ಮೇನ್ ರೋಡಿನತ್ತ ಹೆಜ್ಜೆ ಹಾಕಿದ. ಅಪ್ಪಾಜಿಯವರ ಅಂತ್ಯ ಸಂಸ್ಕಾರದ ಖರ್ಚಿಗೆಂದು ದೀಪಾ ಕೊಟ್ಟ ಹಣದಲ್ಲಿ ಐವತ್ತಕ್ಕೂ ಹೆಚ್ಚು ಉಳಿದ ರೂಪಾಯಿಗಳು ಅವನ ಬಳಿಯೇ ಇದ್ದವು. ಹೀಗಾಗಿ ಹಣದ ಬಗ್ಗೆ ಚಿಂತಿಸುವಂತಿರಲಿಲ್ಲ.

ಇಪ್ಪತ್ತು ನಿಮಿಷ ನಿಂತ ಮೇಲೆ ಲಾರಿಯೊಂದು ಬರುವುದು ಕಾಣಿಸಿತು. ಕೈಮಾಡಿ ನಿಲ್ಲಿಸಿ ಅಮರ ಲಾರಿ ಏರಿದ. ಹದಿನೈದು ರೂಪಾಯಿ ಡ್ರೈವರ್ ಕೈಗೆ ಹಾಕಿ, ಹಾಯಾಗಿ ಹಿಂದಕ್ಕೆ ವಾಲಿ ಕಣ್ಣು ಮುಚ್ಚಿದ. ಬೆಳಗಿನ ಆರು ಗಂಟೆಗೆ ಡ್ರೈವರ್ ಎಬ್ಬಿಸಿ, ಕೆಳಗಿಳಿಸಿದ. ಅವನು ಆಗಲೇ ಮಾಲತಿಯ ಊರಿಗೆ ಬಂದಿದ್ದ. ರಸ್ತೆಯ ಬದಿಯಲ್ಲಿದ್ದ ಚಹದಂಗಡಿ ಹೊಕ್ಕು ಒಂದು ಚೆಂಬು ನೀರು ತೆಗೆದುಕೊಂಡು ಚೆನ್ನಾಗಿ ಮುಖ ತೊಳೆದು ಚಹ ಕುಡಿದು ಊರಿನೊಳಗೆ ಬಂದ.

ಹಿಂದೆ ಸುಂದರಬಾಯಿಯೊಡನೆ ಬಂದಾಗ ಅವನು ಆಸ್ಪತ್ರೆ, ಊರು ಎಲ್ಲಾ ಕಂಡಿದ್ದ. ವೈದ್ಯರ ಹೆಸರೂ ನೆನಪಿತ್ತು, ಒಂದಿಬ್ಬರನ್ನು ಕೇಳಿದಾಗ ಅವರು ವೈದ್ಯರ ಮನೆ ಎಲ್ಲಿದೆ ಎಂದು ಹೇಳಿದರು. ಅಲ್ಲಿ ಇಲ್ಲಿ ಕೇಳುತ್ತ ಅಮರ ಅವರ ಮನೆ ತಲುಪಿದಾಗ ಅವರು ಆಸ್ಪತ್ರೆಗೆ ಹೊರಡುವ ತಯಾರಿಯಲ್ಲಿದ್ದರು. ಅಮರ ಅವರಿಗೆ ವಂದಿಸಿ, "ಸ್ವಲ್ಪ ಮಾತನಾಡಬೇಕಿತ್ತು ಸಾರ್." ಎಂದ. ತಮ್ಮ ವಾಚಿನೆಡೆ ಒಂದು ಬಾರಿ ನೋಡಿದ ಅವರು "ಸರಿ ಐದು ನಿಮಿಷಗಳಲ್ಲಿ ಮುಗಿಸಿ." ಎಂದರು. ಅಮರ ಸರಿಯೆಂದ. ಇಬ್ಬರೂ ಡ್ರಾಯಿಂಗ್ ರೂಮಿಗೆ ಬಂದರು. ಅಮರ ಕಾಲವ್ಯಯ ಮಾಡುವುದು ಸರಿಯಲ್ಲವೆಂದು ನೇರವಾಗಿ ಮಾತಿಗೆ ಇಳಿದ.

"ನಾನು ತಮ್ಮ ಪೇಷೆಂಟ್ ಸುಂದರನ ಬಗ್ಗೆ ಮಾತನಾಡಲು ಬಂದಿರುವೆ. ಅವರಿಗೆ ಮೂತ್ರಪಿಂಡದ ಅವಶ್ಯಕತೆಯಿದೆಯೆಂದು ಕೇಳಿರುವೆ."

ಅಮರನ ಬಗ್ಗೆ ಮೊದಲು ವೈದ್ಯರಿಗೆ ಸ್ವಲ್ಪ ಅಸಡ್ಡೆ ಮೂಡಿತ್ತು. ಈಗ ಅವನ ಬಾಯಿಯಿಂದ ಮೂತ್ರಪಿಂಡದ ವಿಷಯಕ್ಕೆ ಬರುತ್ತಲೂ ಅದು ಮಾಯವಾಗಿ ಅವರು ಅಮರನನ್ನು ಉತ್ಸುಕತೆಯಿಂದ ನೋಡುತ್ತ ಹೇಳಿದರು.

"ಹೌದು ಹೌದು ಅದಕ್ಕೆ ನೀವೇನು ಮಾಡಬಲ್ಲಿರಿ ?"

"ನಾನವರಿಗೆ ಮೂತ್ರಪಿಂಡ ನೀಡಲು ಬಂದಿರುವೆ."

"ವಾಟ್ !" ಕುಳಿತಲ್ಲಿಂದ ನೆಗೆದು ನಿಂತ ವೈದ್ಯರು ಕೇಳಿದರು.

"ಹೌದು ಸರ್ ನಾನು ಅವರಿಗಾಗಿ ಮೂತ್ರಪಿಂಡ ನೀಡಲು ಬಂದಿರುವೆ. ಅಮರ ತಾನು ಬಂದ ಉದ್ದೇಶ ಪುನರುಚ್ಚರಿಸಿದ. ವೈದ್ಯರಾಗಲೇ ಮೂತ್ರಪಿಂಡ ದೊರೆಯುವ ಆಶೆ ಬಿಟ್ಟುಬಿಟ್ಟಿದ್ದರು. ಅಮರನ ಮಾತು ಕೇಳುತ್ತಲೇ ಅವರಲ್ಲಿ ಹೊಸ ಆಶೆ ಚಿಗುರಿತು.

"ಸಂತೋಷ ಸಂತೋಷ" ಎಂದರು,

"ಆದರೆ ನನ್ನವು ಕೆಲವೊಂದು ನಿಬಂಧನೆಗಳಿವೆ. ಅದಕ್ಕೆ ನೀವು ಒಪ್ಪಿದರೆ ಮಾತ್ರ ನಾನು ಸಿದ್ಧ"

"ಹೇಳಿ ಹೇಳಿ. ಸಾಧ್ಯವಾದರೆ ಒಪ್ಪುತ್ತೇನೆ"

"ಎಲ್ಲವೂ ಸಾಧ್ಯವಾದವುಗಳೇ!"

"ಹಾಗಾದರೆ ಹೇಳಿ."

"ಮೊದಲನೆಯದಾಗಿ ನನಗೆ ಒಂದು ಲಕ್ಷ ರೂಪಾಯಿ ಬೇಕು"

"ಓಹ್ ಅವಶ್ಯವಾಗಿ.... ಅಷ್ಟು ಹಣ ಕೊಡಲು ಪಾರ್ಟಿ ಸಿದ್ಧವಿದೆ. ಇಷ್ಟಪಟ್ಟರೆ ಇನ್ನೂ ಹೆಚ್ಚಿಗೆ ದೊರೆಯುತ್ತದೆ"

"ನನಗೆ ಹೆಚ್ಚಿಗೆ ಬೇಡ. ಎರಡನೆಯದಾಗಿ ನನಗೆ ಈಗಲೇ ಹಣ ಬೇಕು"

"ಅದು ಸಾಧ್ಯವಿಲ್ಲ.... ಆಪರೇಷನ್ ಆದ ನಂತರ ಹಣ ದೊರೆಯುತ್ತದೆ"

"ಅದು ನನಗೆ ಒಪ್ಪಿಗೆಯಿಲ್ಲ ನನಗೆ ಅಡ್ವಾನ್ಸ್ ಬೇಕು. ನನ್ನ ಬಗ್ಗೆ ವಿಶ್ವಾಸಲ್ಲದಿದ್ದರೆ ಹಣ ತೆಗೆದುಕೊಂಡ ಯಾರಾದರೂ ನನ್ನ ಜೊತೆ ಬರಬಹುದು. ನಾನು ಮನೆಗೆ ಹಣ ಮುಟ್ಟಿಸಿ ಅವರೊಂದಿಗೆ ವಾಪಸ್ ಬರುತ್ತೇನೆ"

"ಇದರ ಬಗ್ಗೆ ನಾನು ವಚನ ನೀಡಲಾರೆ ಆದರೆ ವಿಚಾರಿಸಿ ಹೇಳುತ್ತೇನೆ."

"ಸರಿ, ಮೂರನೆಯ ಹಾಗೂ ಕೊನೆಯ ಮಾತು. ನಾನು ಯಾರು? ಎಲ್ಲಿಂದ ಬಂದಿರುವೆ? ನನ್ನ ಹೆಸರೇನು? ಮುಂತಾದ ಯಾವ ವಿಚಾರವನ್ನು ಮಾಡಕೂಡದು. ನಿಮಗೆ ಮೂತ್ರಪಿಂಡ ಬೇಕು, ಅದನ್ನು ನಾನು ಕೊಡಲು ಸಿದ್ಧ.... ಮುಗಿಯಿತು. ಇಷ್ಟರ ಹೊರತು ನನ್ನಿಂದ ಬೇರೇನೂ ಅಪೇಕ್ಷಿಸಬೇಡಿ"

"ಸರಿ.... ಸರಿ ನಿಮ್ಮ ಮೂರು ಮಾತೂ ನನಗೆ ಒಪ್ಪಿಗೆ ಇವೆ. ನಾನೂ ಒಬ್ಬ ವೈದ್ಯನಾದುದರಿಂದ ಕೇಳುತ್ತಿದ್ದೇನೆ.... ಮೂತ್ರಪಿಂಡ ಕೊಡುವುದರಿಂದ ಒಂದೆರಡು ಬಾರಿ ಅಪಾಯ ಆಗುವುದುಂಟು ಅದರ ಬಗ್ಗೆ ನಾನು ಯಾವುದೇ ರೀತಿಯ ವಚನ ನೀಡಲಾರೆ. ಬೇಕೆಂದರೆ ನೀನು ಮೂತ್ರಪಿಂಡ ನೀಡಬಹುದು ಅಥವಾ ನೀಡಬೇಕಿಲ್ಲ ಅದು ನಿನಗೆ ಸಂಬಂಧಪಟ್ಟ ವಿಷಯ"

"ಸರಿ..... ಈ ಮಾತಿಗೆ ನನಗೆ ಒಪ್ಪಿಗೆ ಇದೆ. ಹಣ ಯಾವಾಗ ದೊರೆಯುತ್ತದೆ?"

ಒಂದು ಗಂಟೆ ಅನ್ನುವುದರೊಳಗೆ ಸ್ಟ್ಯಾಂಡ್ ಬಳಿ ಒಂದು ಲಕ್ಷ ರೂಪಾಯಿ ಬಂದವು. ಸ್ವತಃ ಸ್ಟ್ರೈಕರ್ ತಮ್ಮ ಕಾರಿನಲ್ಲಿ ಕುಮಾರನನ್ನು ಕೂಡಿಸಿಕೊಂಡು ಅವನ ಊರಿಗೆ ಬಂದರು. ಮನೆಯಿಂದ ಸ್ವಲ್ಪ ದೂರದಲ್ಲಿ ಕಾರು ನಿಲ್ಲಿಸಿದ ಅವನು . ತಾನೇ ಹಣದ ಬ್ಯಾಗು ತೆಗೆದುಕೊಂಡು ಮನೆಯತ್ತ ನಡೆದ.

ರಾಮರಾಯರು ಅಂಗಡಿಗೆ ಹೋದವರು ಊಟಕ್ಕಿನ್ನೂ ಬಂದಿರಲಿಲ್ಲ. ವಸಂತ ಬ್ಯಾಂಕಿಗೆ. ನಿತ್ಯದ ಕೆಲಸವನ್ನು ಮುಗಿಸಿದ್ದ ರತ್ನಾ ಹಾಗೂ ಪಂಕಜಾ ಮುಸುಕು ಎಳೆದಿದ್ದರು. ಸುಂದರಮ್ಮನವರೊಬ್ಬರು ಮಾತ್ರ ಯಾವುದೋ ದೇವರ ಹಾಡು ಗುನುಗುಟ್ಟುತ್ತ ಬತ್ತಿ ಹೊಸೆಯುತ್ತಿದ್ದರು. ಮೇಲ್ನೋಟಕ್ಕೆ ಅವರು ನಿಶ್ಚಿಂತರಾಗಿ ಕೆಲಸದಲ್ಲಿ ಮಗ್ನರಾಗಿರುವಂತೆ ಕಂಡರೂ ಚಿಂತೆಯ

ಭಾರದಿಂದ ಕುಗ್ಗಿದ ಅವರು ಆಗಲೇ ಎಪ್ಪತ್ತು ಎಂಭತ್ತು ವರ್ಷದ ವೃದ್ಧರಂತೆ ಗೋಚರಿಸತೊಡಗಿದ್ದರು. ಬಾಗಿಲಿಗೆ ಬಂದು ನಿಂತ ಅಮರ "ಅಮ್ಮಾ" ಎಂದು ಕರೆಯುತ್ತಲೇ, ಬತ್ತಿ ಹೊಸೆಯುವ ಕೆಲಸ ಅಲ್ಲಿಗೆ ನಿಲ್ಲಿಸಿದ ಸುಂದರಮ್ಮನವರು "ಅಯ್ಯೋ ಕಂದಾ ಅಮರಾ ಬಂದುಬಿಟ್ಟೆಯಾ? ಎಲ್ಲಿಗೆ ಹೋಗಿದ್ದೆಯಪ್ಪಾ ನಮ್ಮನ್ನೆಲ್ಲ ಬಿಟ್ಟು" ಎಂದು ಗೋಗರೆಯುತ್ತ ಅಮರನನ್ನು ತಮ್ಮ ಕಡೆ ಎಳೆದುಕೊಂಡರು.

"ಏನೂ ಇಲ್ಲಮ್ಮ ಸ್ವಲ್ಪ ದೀಪಾಳ ತಂದೆಯವರನ್ನು ಕಾಣಲು ಹೋಗಿದ್ದೆ. ಅದಕ್ಕೆ ಇಷ್ಟು ಗಾಬರಿಯಾಗುವುದೇ?"

"ಅಕಸ್ಮಾತ್ ನಮಗೆಲ್ಲ ನಿದ್ದೆ ಹತ್ತಿದಾಗ ಯಾರಿಗೂ ಹೇಳದೆ ಎದ್ದು ಹೋಗಿರುವೆ. ನಮಗೆಲ್ಲ ಚಿಂತೆ ಆಗದೆ ಬಿಟ್ಟೀತೆ?"

"ನಿಮಗೆಲ್ಲ ನಿದ್ದೆ ಹತ್ತಿತ್ತಮ್ಮ ಏಕೋ ನನಗೆ ನಿದ್ದೆ ಹತ್ತಲಿಲ್ಲ, ದೀಪಾಳ ತಂದೆ ಮುಂಬಯಿಗೆ ಹೋದವರು ಬಂದಿದ್ದಾರೋ ಇಲ್ಲವೋ ಅನ್ನಿಸಿತು. ಅದಕ್ಕಾಗಿ ವಿಚಾರಿಸಿದರಾಯಿತೆಂದು ಹೋಗಿದ್ದೆ. ನಿಮ್ಮ ನಿದ್ದೆ ಕೆಡಿಸಲು ನನಗೆ ಮನಸ್ಸಾಗಲಿಲ್ಲ."

ಅಮರ ತಾಯಿಯ ಮುಂದೆ ಹಸಿ ಸುಳ್ಳಿನ ಬುರುಡೆ ಬಿಟ್ಟ.

"ಇರಲಿ ಮಾತು ಆಮೇಲೆ ಆಗಲಿ. ಊಟ ಮಾಡುವಿಯಂತೆ."

"ಇಲ್ಲಮ್ಮಾ ನನ್ನ ಊಟವಾಗಿದೆ."

"ಸಾಕು ಬಾರೋ... ನಿನ್ನೆಯಿಂದ ನೀನು ಇಲ್ಲಾಂತ ನಿಮ್ಮ ತಂದೆ ಸಹಾ ಊಟ ಮಾಡಿಲ್ಲ. ಅವರು ಊಟ ಮಾಡದಿದ್ದ ಮೇಲೆ ನಾನು ಹೇಗೆ ಮಾಡಲಿ? ನಿನಗಾಗಿ ಚಿಂತಿಸುತ್ತ ನಾವಿಬ್ಬರೂ ಹಾಗೆ ಉಪವಾಸವಿದ್ದೇವೆ."

ಅಮರನ ಕರುಳು ಚುರ್ ಎಂದಿತು.

"ಅಮ್ಮ, ದೀಪಾಳ ತಂದೆ ಕಾರು ಕಳಿಸಿದ್ದಾರೆ. ಹೊರಗಡೆ ನಿಲ್ಲಿಸಿ ಬಂದಿದ್ದೇನೆ. ಬೇಗ ಬಡಿಸು."

ಸುಂದರಮ್ಮ ತಟ್ಟೆ ಹಾಕುವುದರಲ್ಲಿ ಅಮರ ಕಾಲು ತೊಳೆದು, ದೇವರ ಮುಂದೆ ಊದಿನ ಕಡ್ಡಿ ಹಚ್ಚಿ ಬಂದ. ಅವರು ತಟ್ಟೆಗೆ ಅನ್ನ ಬಡಿಸುತ್ತಿದ್ದಂತೆ,

"ಅಮ್ಮಾ... ಇಂದು ನೀನೇ ನನಗೆ ಅನ್ನ ಕಲಿಸಿ, ಕೈ ತುತ್ತು ಹಾಕು

ತ್ತೀಯಾ ?" ಎಂದು ಕೇಳಿದ ಅಮರ. ಸುಂದರಮ್ಮನವರಿಗೆ ಗಾಬರಿಯಾಯಿತು. ಎಂದೂ ಇಲ್ಲದ ಈ ಸ್ವರ ಇಂದೇಕೆ ? ಅದೂ ಈ ವಯಸ್ಸಿನಲ್ಲಿ ಪಾಪ ! ಅಮರನ ಮನದಲ್ಲಿ ನಡೆದ ವಿಪ್ಲವ ಅವರಿಗೆ ಹೇಗೆ ತಿಳಿಯಬೇಕು ?

"ಯಾಕೋ ಅಮರ ಇಂದ ನಿನಗೇನಾಗಿದೆ ?"

"ಏನೂ ಇಲ್ಲಮ್ಮ .. ಚಿಕ್ಕವನಾಗಿದ್ದಾಗಲೇ ತಾಯಿ ಕಳೆದುಕೊಂಡೆ. ನನ್ನ ತಾಯಿಯೆಂದು ಎದುರಿಗೆ ಬಂದವಳು ನೀನು. ಹಡೆದವಳು ಮಸಣ ಸೇರಿದರೆ, ಇದ್ದವಳು ನೀನು. ನನ್ನ ಸಾಕಿ, ಇಷ್ಟು ದೊಡ್ಡವನನ್ನಾಗಿ ಮಾಡಿರುವೆ. ನನಗೆ ಕೈತುತ್ತು ಉಂಡು ಗೊತ್ತಿಲ್ಲ. ಏಕೋ ಏನೋ ಇಂದು ನಿನ್ನಕೈಯಿಂದ ಉಣ್ಣಬೇಕೆನಿಸಿದೆ ಅದಕ್ಕೆ '

ಕುಳಿತಲ್ಲಿಂದಲೇ ತಮ್ಮ ಕೈ ಚಾಚಿ ಸುಂದರಮ್ಮ ಅಮರನನ್ನು ತಬ್ಬಿಕೊಂಡು "ಅಮರ.... ನೀನು ದೊಡ್ಡ ಮನುಷ್ಯನಪ್ಪ ! ಹೆಸರಿಗೆ ತಕ್ಕಂತೆ ನೀನು ಅಮರ ಮಾನವ... ನಾನೆಷ್ಟು ರೀತಿಯಿಂದ ನಿನಗೆ ಹಿಂಸೆ ನೀಡಿದೆ. ನೀನು ಅದನ್ನೆಲ್ಲ ಮರೆತು ಹೆತ್ತ ತಾಯಿಗಿಂತ ನಾನೇ ಹೆಚ್ಚೆಂದು ಹೇಳಿದೆ. ನಿನ್ನ ಮನಸ್ಸು ತುಂಬಾ ದೊಡ್ಡದಪ್ಪಾ ನನ್ನನ್ನು ಕ್ಷಮಿಸಿಬಿಡು ಮಗ .. "

"ಅಮ್ಮಾ ನನಗೆ ಹೊತ್ತಾಗುತ್ತಿದೆ "

ಒತ್ತಿ ಬಂದ ದುಃಖ ತಡೆದುಕೊಂಡು ಅಮರ ವಿಷಯ ಮರೆಸಲು ನುಡಿದ.

"ಆಯ್ತು ತಾಳು ಎರಡೇ ನಿಮಿಷದಲ್ಲಿ ಅನ್ನ ಕಲಿಸುವೆ."

ಅಷ್ಟರಲ್ಲಿ ಹೊರಗಡೆ ಸದ್ದಾಯಿತು. ಎರಡೇ ನಿಮಿಷದಲ್ಲಿ ರಾಮುರಾಯರು ಬಟ್ಟೆ ಬದಲಿಸಿ ಅಡಿಗೆ ಮನೆಗೆ ಬಂದವರು ಅಮರನನ್ನು ಕಂಡು....

"ಅಮರ ಬಂದೆಯೇನಪ್ಪಾ !" ಎಂದರು. ಅವರ ಗಂಟಲುಬ್ಬಿ ಬಂದಿತು.

"ಆಮೇಲೆ ಮಾತನಾಡುವಿರಂತೆ. ಈಗ ಊಟಕ್ಕೆ ಬನ್ನಿ, ಇಬ್ಬರಿಗೂ ಕೂಡಿ ಬಡಿಸುತ್ತೇನೆ_ " ಎಂದರು ಸುಂದರಮ್ಮ.

ರಾಮುರಾಯರು ಕಾಲು ತೊಳೆದುಕೊಂಡು ದೇವರಿಗೆ ಕೈ ಮುಗಿದು ಬಂದರು. ಅವರಿಗೊಂದು ತಟ್ಟೆ ಹಾಕಿದ ಸುಂದರಮ್ಮ ಅನ್ನ, ಸಾರು ಬಡಿಸಿ ಅಮರನ ಕೈಗೆ ದೊಡ್ಡ ದೊಡ್ಡ ತುತ್ತು ನೀಡಿದರು. ರಾಮುರಾಯರಿಗೆ ಆ ದೃಶ್ಯ ಕಂಡು ಹೃದಯ ತುಂಬಿ ಬಂತು.

'ಸುಂದ್ರು .. ಇಂದು ನಾನು ಧನ್ಯನಾದೆ ನೀನು ಈ ರೀತಿ ಉಣಿಸು

ವುದನ್ನು ಕಂಡರೆ ಯಾರೂ ನಿನಗೆ ಮಲತಾಯಿ ಅನ್ನಲಾರರು. ನನ್ನ ಕಣ್ಣೆದುರು ಶ್ರೀರಾಮನಿಗೆ ಉಣಿಸುತ್ತಿರುವ ಕೌಶಲ್ಯೆಯ ಚಿತ್ರ ಬರುತ್ತಿದೆ"

"ಅಯ್ಯೋ ಮಾರಾಯರೆ...... ನನ್ನನ್ನು ಆ ಮಹಾತಾಯಿಗೆ ನೀವು ಹೋಲಿಸಬೇಡಿ.... ನಾನೆಲ್ಲಿ ಅವಳೆಲ್ಲಿ. ನಾನು ಶೂರ್ಪನಖಿಯಂತೆ ಇವನನ್ನು ಕಾಡಿರುವೆ.'

"ಅದೆಲ್ಲಾ ಒಂದು ದಿನಗಳಿಗೆ ಸುಂದ್ರಾ.... ಈಗಲಾದರೂ ದೇವರು ನಮ್ಮ ಮೇಲೆ ಕಣ್ಣು ತೆರೆದ..."

ಅಮರ ಗಬಗಬನೆ ತಿಂದು ಮೇಲೆದ್ದ. ರಾಮರಾಯರು ಅನ್ನಕ್ಕೆ ಮಜ್ಜಿಗೆ ಕಲಿಸುತ್ತಿದ್ದರು. ಹೊರಗೆ ಹೋಗಿ ಬ್ರೀಫ್ ಕೇಸ್ ತಂದ ಅಮರ ಅದರಿಂದ ನೋಟಿನ ಕಂತೆ ತೆಗೆದು ತಂದೆಯ ಮುಂದಿಟ್ಟು ಹೇಳಿದ,

"ಅಪ್ಪಾ.... ಇದು ಒಂದು ಲಕ್ಷ ರೂಪಾಯಿಯಿದೆ. ಎಪ್ಪತ್ತು ಸಾವಿರದಲ್ಲಿ ರತ್ನಾಳ ಮದುವೆಯಾಗುತ್ತದೆ, ಹತ್ತು ಸಾವಿರ ಕೊಟ್ಟು ವಸಂತನ ನೌಕರಿ ಉಳಿಸು. ಬೇರೆ ಅತ ಐದೋ ಹತ್ತೋ ಸಾವಿರ ಸಾಲ ಮಾಡಿರಬೇಕು. ಅದನ್ನು ಬಗೆಹರಿಸು. ಉಳಿದ ಹಣ ನಿನಗೆ .. ಸಾಲ ಬಗೆಹರಿಸಿ ಮನೆ ಸಂಸಾರಕ್ಕೆ.... ಎಲ್ಲಾ ಸಾಕಾಯಿತಲ್ಲವೇ ?'

ಅನ್ನದ ತಟ್ಟೆಯಿಂದ ತುತ್ತು ಎತ್ತಿದ ರಾಮರಾಯರ ಕೈ ಮಧ್ಯದಲ್ಲಿಯೇ ನಿಂತಿತು. ಸುಂದರಮ್ಮ ಅವಾಕ್ಕಾಗಿ ಕುಳಿತಿದ್ದರು. ಇವರ ಧ್ವನಿ ಕೇಳಿ ಮಲಗಿದ್ದ ರತ್ನಾ ಹಾಗೂ ಪಂಕಜಾ ಇಬ್ಬರೂ ಎದ್ದು ಬಾಗಿಲಿಗೆ ಬಂದುವರು ಈ ದೃಶ್ಯ ಕಂಡು ದಿಗ್ಮೂಢರಾಗಿ ನಿಂತುಬಿಟ್ಟರು.

ರಾಮರಾಯರೇ ಸುಧಾರಿಸಿಕೊಂಡು ಕೇಳಿದರು,

"ಇಷ್ಟೆಲ್ಲ ದುಡ್ಡು ಎಲ್ಲಿಂದ ಬಂದಿತೋ ?"

"ದೀಪಾಳ ತಂದೆ ಕೊಟ್ಟರಪ್ಪಾ !" ಸುಳ್ಳಿನ ಬಾಣಬಿಟ್ಟ ಅಮರ.

"ಮತ್ತೆ...... ಅವರನ್ನ ಕೇಳುವುದಿಲ್ಲ ಎಂದಿದ್ದೆ ?"

"ನಾನು ಕೇಳಲಿಲ್ಲವಪ್ಪ...... ಅವರೇ ಕರೆದು ಕೊಟ್ಟರು..... ತೆಗೆದುಕೊಳ್ಳದಿದ್ದರೆ ನನ್ನ ನಿನ್ನ ಸಂಬಂಧ ಹರಿಯಿತು ಎಂದರು. ನಾನು ತೆಗೆದುಕೊಳ್ಳಬೇಕಾಯಿತು."

ಎಂಜಲ ಕೈಯಿಂದಲೇ ದೇವರಿಗೆ ಕೈ ಮುಗಿದ ರಾಯರು,

"ಅಂತೂ ಭಗವಂತ ನಮ್ಮನ್ನು ಕಾಯ್ದ." ಎಂದರು.

"ಭಗವಂತ ಎಲ್ಲಿಂದ [illegible] ತ್ತಾನೆ ನಮ್ಮನ್ನು ಕಾಡವ . ಈ ... ಭಗವಂ [illegible] ಎಂದರ

[illegible] ಅವರ [illegible] ಆವಶ್ಯದ ಕೆಲಸವಿದ್ದು ಮಾಡಿ [illegible] ಬರುತ್ತೇನೆ [illegible] ಹೇಳಿ ಒಂದೆ [illegible] ತ್ತಾರಿಗೆ ಆಶೀರ್ವ ದಿಸಿ [illegible] ಭಾರವಾಗಿತ್ತು.

[illegible] ಕನ್ಯಾರಿಯಾಗುವವರೆಗೂ [illegible] ತನ್ನಲ್ಲಿ [illegible] ತಂದೆಯು ಕಾಪಿಟ್ಟ, ಹಾಗಾದರೆ [illegible] ? [illegible] ತ್ತಿದ್ದರು.

# 13.

ಆಪರೇಷನ್ ಥಿಯೇಟರಿಗೆ ಕರೆದೊಯ್ಯುವ ಮುನ್ನ ಡಾಕ್ಟರರು ಮತ್ತೆ ಒಮ್ಮೆ ಅಮರನಿಗೆ ಹೇಳಿದರು,

"ನೋಡಪ್ಪಾ ನಾನೊಬ್ಬ ವೈದ್ಯನಾಗಿ ಈ ಮಾತು ಹೇಳ್ತಾ ಇಲ್ಲ.... ನಿನ್ನ ತಂದೆಯ ಸ್ಥಾನದಲ್ಲಿ ನಿಂತು ಈ ಮಾತು ಹೇಳ್ತಾ ಇದ್ದೇನೆ. ನಿನಗೇನಾದರೂ ವಿಪಶತೆ ಇದ್ದರೆ ಹೇಳು, ಈ ಆಪರೇಷನ್ ಆಗುವುದೇ ಬೇಡ ನಿನಗೆ ಮನೆಗೆ ಹೋಗಲು ಒಪ್ಪಿಗೆ ಕೊಡುತ್ತೇನೆ...."

"ಅದರಿಂದ ಸಮಸ್ಯೆ ಬಗೆಹರಿಯುವುದಿಲ್ಲ ಡಾಕ್ಟರರೇ. ನನಗೂ ಕಳಂಕ ಬರುತ್ತದೆ, ಅದರೊಂದಿಗೆ ನಿಮ್ಮ ಪೇಷಂಟ್ ಸಹ ಬದುಕಲಾರ, ನನ್ನ ಬಗೆ ಚಿಂತಿಸಬೇಡಿ. ನಿಮ್ಮ ಪೇಷಂಟ್ ಬಗ್ಗೆ ಮಾತ್ರ ಚಿಂತಿಸಿ ... ಆದರೆ ಆಪರೇಷನ್ ಮಾಡುವ ಮುನ್ನ ನನಗೊಂದು ಮಾತನ್ನು ಕೊಡಬೇಕು "

"ಏನು ಅಂತ ?"

"ನನ್ನ ಮೂತ್ರಪಿಂಡ ತೆಗೆದು ಅವನಿಗೆ ಜೋಡಿಸುವುದರಿಂದ ನಿಮ್ಮ

ಪೇಷೆಂಟ್ ಖಂಡಿತ ಬದುಕುತ್ತಾನೆ, ಆದರೆ . ."

"ಆದರೆ ! ಆದರೆ ಏನು ಹೇಳಿ ಡಾಕ್ಟ್ರೇ ?"

"ನನಗೆ ನಿನ್ನ ಬಗ್ಗೆಯೇ ಚಿಂತೆ..... ಸ್ಪಷ್ಟವಾಗಿ ಹೇಳುತ್ತೇನೆ ಕೇಳು. ಒಂದು ದೃಷ್ಟಿಯಿಂದ ಆಪರೇಷನ್ ಸಕ್ಸಸ್ ಆದರೆ ಇಬ್ಬರೂ ಬದುಕುತ್ತೀರಿ. ಪೇಷಂಟ್ ಬಗ್ಗೆ ನನಗೆ ಎಳ್ಳಷ್ಟು ಚಿಂತೆಯಿಲ್ಲ. ಆದರೆ, ಆದರೆ ಸ್ವಲ್ಪ ಹೆಚ್ಚು ಕಡಿಮೆಯಾದರೆ ನಿನ್ನ ಜೀವಕ್ಕೆ ಅಪಾಯವಿದೆ__ ಜೀವ ಬದುಕಿದರೂ ನೀನು ಅಜೀವ ಪರ್ಯಂತವಾಗಿ ಜಾಗ್ರತೆಯಿಂದ ಇರಬೇಕಾಗುತ್ತದೆ... ಕೆಲಸ ಮಾಡುವಂತಿಲ್ಲ, ಭಾರ ಹೊರುವಂತಿಲ್ಲ ಓಡುವಂತಿಲ್ಲ, ಹಾರಾಡುವಂತಿಲ್ಲ, ಒಂದು ದೃಷ್ಟಿಯಿಂದ ಜೀವನವೊಂದು ಹೊರೆಯಾಗಬಹುದು. ಅದಕ್ಕೆ ನಾನು ನಿನಗೆ ಹೇಳಿದ್ದು ಇನ್ನೊಮ್ಮೆ ವಿಚಾರಿಸು ಅಂತ"

ಅಮರನ ಎದುರು ಬಂಗಾರದ ಫುಟ್ ಬಾಲ್, ಟೆನ್ನಿಸ್ ನೆಟ್ ಹಾರಿ ಹೋದವು. ಅಪ್ಪಾಜಿ ಸುಳಿದು ಹೋದರು. ಎಲ್ಲಿಂದ ಎದ್ದು 'ಆಪರೇಷನ್ ಬೇಡ' ಅಂತ ಕೂಗಿ ಎದ್ದು ಓಡಿಹೋಗಬೇಕು ಅನಿಸಿತು ಅದರ ಹಿಂದೆ....

ವಸಂತ.....

ಮಾಲತಿ....

ರತ್ನಾ

ಹಾಗೂ ತಂದೆಯ ದೈನ್ಯ ಮುಖಗಳು ಕಾಣಿಸಿಕೊಂಡಾಗ, ತನ್ನ ಒಬ್ಬನ ಬಲಿದಾನದಿಂದ ಮನೆತನಕ್ಕೆ ಕಲ್ಯಾಣ ಆಗುವುದಾದರೆ ಏಕೆ ಬೇಡ ಅನ್ನಿಸಿತು

"ಹಾಗೇನಿಲ್ಲ ಡಾಕ್ಟರರೇ .. ನಾನು ಆಪರೇಷನ್ನಿಗೆ ಸಿದ್ಧ, ದೇವರು ಇಚ್ಛಿಸಿದಂತೆ ಆಗಲಿ ..." ಎಂದ.

"ಸರಿ ನಿನ್ನಿಷ್ಟ ನೀನು ಧೈರ್ಯವಾಗಿರು ! ನೀನು ಧೈರ್ಯ ಕಳೆದುಕೊಂಡರೆ, ನೀನು ನರ್ವಸ್ ಆದರೆ ಆಪರೇಷನ್ನಿಗೆ ತೊಂದರೆ ಆಗುತ್ತದೆ ..."

"ಹಾಗೇ ಆಗಲಿ ಡಾಕ್ಟರ್ ನಾನು ಕೇಳಿದ್ದು ನೆನಪಿದೆ ತಾನೆ ?"

"ಏನು ?"

"ಅದೇ ಪೇಶೆಂಟಿನ ಜನರಿಗೆ ನನ್ನ ಪರಿಚಯಿಸಬೇಡಿ. ಅವರಿಗೂ ನನಗೂ ಭೇಟಿ ಮಾಡಿಸಬೇಡಿ ಆಪರೇಷನ್ ಆಗುವವರೆಗೂ ಅವರಿಗೆ ನಾನು ಯಾರು ಅಂತ ತಿಳಿಯಕೂಡದು."

"ಹಾಂ.... ಹಾಂ.... ನೆನಪಿದೆ ಅದರ ಬಗ್ಗೆ ನೀನು ಯೋಚಿಸಬೇಡ ನಾನೆಲ್ಲ ವ್ಯವಸ್ಥೆ ಮಾಡಿದ್ದೇನೆ...."

"ಥ್ಯಾಂಕ್ಯೂ ಡಾಕ್ಟರ್__ ನಿಮ್ಮ ಉಪಕಾರ ನಾನು ಮರೆಯಲಾರೆ "

ಇದಾದ ಒಂದು ಗಂಟೆಯ ನಂತರ ಅಮರನನ್ನು ಆಪರೇಷನ್ ಥೇಟರಿಗೆ ಕರೆದೊಯ್ಯಲಾಯಿತು, ಅಲ್ಲಿ ಸುಂದರನ ಸಂಬಂಧಿಕರು ಯಾರೂ ಇರಲಿಲ್ಲ. ಅಮರನನ್ನು ಮಲಗಿಸಿ, ಅನಿಸ್ತಿಯಾ ಕೊಡುವ ಮುನ್ನ ಹಿರಿಯ ವೈದ್ಯರು ಹೇಳಿದರು,

"ಗಾಬರಿಯಾಗಬೇಡ, ಮೂರ್ಛೆ ಹೋಗಲು ನಿನಗೆ ಅನಿಸ್ತಿಯಾ ಕೊಡಲಾಗುತ್ತದೆ. ವೈ ಕೈ ಎಲ್ಲಾ ಸಡಿಲ ಬಿಟ್ಟು ಜೋರಾಗಿ ಒಂದು ಎರಡು ಎಣಿಸು__ ಯಾವದೇ ಪ್ರಸಂಗದಲ್ಲಿ ಗಾಬರಿಯಾಗಬೇಡ ನರ್ವಸ್ ಆಗಬೇಡ."

ಆಗಲಿ ಎನ್ನುವಂತೆ ಗೋಣು ಆಡಿಸಿದ ಅಮರ.

"ಸಾವಂತ್ ಇವರಿಗೆ ಅನಿಸ್ತಿಯಾ ಕೊಡಿ " ಎಂದರು ಹಿರಿಯ ವೈದ್ಯ ಪಟೇಲ್.

ಸಾವಂತ್ ಮುವತ್ತಾರು ವರ್ಷಗಳ ಸುಂದರ ತರುಣ, ಅಮರನ ಬಳಿ ಬಂದು.... ಅವನ ಮೂಗಿನ ಬಳಿ ಅನಿಸ್ತಿಯಾ ಉಪಕರಣ ತಂದ ವಾಸನೆಯೊಂದು ಅವನ ಮೂಗಿಗೆ ಹೊಡೆಯಿತು, ಅದರ ಮರು ಕ್ಷಣ ದೀಪಾ ದೂರದಲ್ಲಿ ನಿಂತು,

'ನೀನು ಮೋಸಗಾರ, ವಿಶ್ವಾಸದ್ರೋಹಿ ನಿನ್ನ ಸ್ವಾರ್ಥಕ್ಕೋಸ್ಕರ ನಿನ್ನ ಮನೆಯವರಿಗೋಸ್ಕರ ನನ್ನ ಬಲಿ ತೆಗೆದುಕೊಂಡೆ, ನನಗೆ ಒಂದು ಮಾತೂ ತಿಳಿಸದೆ ಮೋಸ ಮಾಡಿದ ' ಎಂದು ಕೂಗಿದಂತಾಗಿ.... ವೈ ಕೈ ಎಲ್ಲಾ ಜುಂ ಎಂದಿತು. ಅದರೊಂದಿಗೆ ಅವನ ಮುಖ ಬಿಳುಚಿಕೊಂಡಿತು, ಅದರ ನಂತರ ಕತ್ತಲೆ ಬರಿ ಕತ್ತಲೆ

ಒಂದೇ ಬಾರಿಗೆ ಎರಡು ಶಸ್ತ್ರ ಚಿಕಿತ್ಸೆಗಳು. ಒಬ್ಬರು ಹಿರಿಯ ವೈದ್ಯರ ಕೆಳಗೆ ಇಬ್ಬರು ಕಿರಿಯ ವೈದ್ಯರು. ಈ ರೀತಿ ಮೂರು ಮೂರು ಜನ ವೈದ್ಯರಂತೆ ಶಸ್ತ್ರ ಚಿಕಿತ್ಸೆ ಪ್ರಾರಂಭವಾಯಿತು. ಅಮರನ ಮೂತ್ರಪಿಂಡ ತೆಗೆದು, ಸುಂದರನಿಗೆ ಜೋಡಿಸಬೇಕು.

ಸತತ ಎರಡು ಗಂಟೆಗಳ ಕಾಲ ಆಪರೇಷನ ನಡೆಯಿತು. ಯಶಸ್ವಿಯಾಗಿ ಅಮರನ ಮೂತ್ರ ಪಿಂಡವನ್ನು ಸುಂದರನಿಗೆ ಅಳವಡಿಸಲಾಯಿತು. ಒಂದು ದೃಷ್ಟಿಯಿಂದ ಸುಂದರನಿಗೆ ಪುನರ್ಜನ್ಮ

ಅಲ್ಲಿಯವರೆಗೂ ಯಶಸ್ವಿಯಾಗಿ ನಡೆದ ಶಸ್ತ್ರ ಚಿಕಿತ್ಸೆಗೆ ಒಮ್ಮೆಲೆ ತಡೆ ಒದಗಿದ್ದು ಅಮರನ ವಿಪರೀತ ರಕ್ತ ಸ್ರಾವದಿಂದ. ಬಹುಶಃ ನರ್ವಸ್ ಶಾಕ್‌ನ ಕಾರಣದಿಂದಾಗಿ, ರಕ್ತ ಹರಿಯುವುದನ್ನು ತಡೆಯಲು ವೈದ್ಯರಿಗೆ ಆಗಲಿಲ್ಲ. ಮೂರು ನಾಲ್ಕು ಜನ ವೈದ್ಯರು ಒಮ್ಮೆಲೆ ಅಮರನ ಟೇಬಲ್ ಕಡೆ ಧಾವಿಸಿದರು ಅವರ ಅರ್ಧ ಗಂಟೆಯ ಪರಿಶ್ರಮದಿಂದ ಅಮರನ ರಕ್ತ ಸ್ರಾವ ನಿಂತಿತು. ಆದರೆ ಅಷ್ಟರಲ್ಲಿ ಬಹಳ ವೇಳೆ ಕಳೆದು ಹೋಗಿತ್ತು. ಅಮರನ ಪರಿಸ್ಥಿತಿ ಚಿಂತಾಜನಕವಾಗಿತ್ತು...... ಕೆಲವೇ ಗಂಟೆಗಳ ಕಾಲ ಅವನು ಬದುಕಬಹುದೆಂದು ತಜ್ಞರು ಅಭಿಪ್ರಾಯಪಟ್ಟರು. ಅಮರನಿಗೆ ಜ್ಞಾನ ಬಂದಿರಲಿಲ್ಲ, ಅವನನ್ನು ಸ್ಪೆಷಲ್ ರೂಮಿಗೆ ಸೇರಿಸಿ, ರಕ್ತ ನೀಡುವ ಪದ್ಧತಿ ಪ್ರಾರಂಭವಾಯಿತು ..

ಶ್ರೀಪಾದರಾಯರಿಗೆ ವೈದ್ಯರು "ಆಪರೇಷನ್ ಸಫಲವಾಯಿತು. ಇನ್ನು ಸುಂದರನ ಜೀವಕ್ಕೆ ಯಾವ ಗಂಡಾಂತರವೂ ಇಲ್ಲ." ಎಂದು ಹೇಳಿದಾಗ, ಅವರು ಕಾಲು ಹಿಡಿದುಕೊಂಡು, "ಡಾಕ್ಟರೇ ನಿಮ್ಮ ಉಪಕಾರ ನಾನು ಎಂದೂ ಮರೆಯಲಾರೆ___ ನಮ್ಮ ಪಾಲಿಗೆ ನೀವು ದೇವರಂತೆ ಬಂದಿರಿ.' ಎಂದರು. ಅವರನ್ನು ಮೇಲೆಬ್ಬಿಸಿ, "ಶ್ರೀಪಾದರಾಯರೇ.... ನಾನು ದೇವರಲ್ಲ. ನಿಜ ಹೇಳಬೇಕೆಂದರೆ ಎಲ್ಲಡೆ ತಿರುಗಿ ನಾನೂ ನೀವೂ ಎಲ್ಲಾ ನಿರಾಶರಾಗಿ ಕುಳಿತಾಗ, ತಾನಾಗಿಯೇ ನಮ್ಮ ಬಳಿ ಬಂದು ನಿಮ್ಮ ಮಗನಿಗೆ ಜೀವ ನೀಡಿದವ ನಿಜವಾದ ದೇವರು ... ಪಾಪ ! ಸುಂದರನಿಗಾಗಿ ಆತ ತನ್ನ ಜೀವ ಗಂಡಾಂತರದಲ್ಲಿ ಹಾಕಿಕೊಂಡ. ಅವನ ಸ್ಥಿತಿ ಚಿಂತಾಜನಕವಾಗಿದೆ" ಎಂದರು.

"ಆಂ ?" ಎಂದು ಗಾಬರಿಯಾದ ಶ್ರೀಪಾದರಾಯರು ಕೇಳಿದರು, "ಎಲ್ಲಿ, ಅವನೆಲ್ಲಿ ಹೇಳಿ ? ಅವನು ಯಾರು ? ಎಲ್ಲಿಯವನು ? ಎಲ್ಲ ವಿಚಾರಿಸುವಾ."

"ಅದನ್ನು ಆ ಪ್ರಯತ್ನ ಮಾಡಿ ನಾನು ಸೋತಿರುವೆ. ಏನಾದರೂ ಆತ ಬಾಯಿ ಬಿಡಲಿಲ್ಲ. ಹೆಚ್ಚಿಗೆ ಹಟ ಹಿಡಿದರೆ ಮೂತ್ರಪಿಂಡ ಕೊಡದೆ ಪರಾರಿಯಾಗಬಹುದೆಂದು ಭಯದಿಂದ ಒತ್ತಾಯ ಮಾಡಲಿಲ್ಲ..... ಆತನನ್ನು ಆರನೇ ನಂಬರ್ ಸ್ಪೆಷಲ್ ವಾರ್ಡಿನಲ್ಲಿ ಹಾಕಲಾಗಿದೆ..... ಆತನಿಗಿನ್ನೂ ಪೂರ್ತಿ

ಶ್ರೀಪಾದರಾಯರು ಗಾಬರಿಯಾದಂತೆ ನಿಂತ ಬಿಟ್ಟರು ಅವರ ಉಡಾಳ. ಉಂಡಾಡಿ ಗುಂಡ, ಯಾವ ಕೆಲಸಕ್ಕೂ ಉಪಯೋಗವಾಗದವನೆಂದು ಮಾಲತಿ ದಿನಕ್ಕೆ ಹತ್ತಾರು ಬಾರಿ ಬೈಗಳನ್ನು ಸುರಿಸುವುದನ್ನು ಅವರು ಕೇಳಿದ್ದರು. ಈಗ ಆ ಉಂಡಾಡಿ ಗುಂಡನೇ ಅವಳ ಕುಂಕುಮ ರಕ್ಷಿಸಿದ್ದ

ಅಣ್ಣನ ಪಾದಗಳ ಮೇಲೆ ಬಿದ್ದು ರೋದಿಸುತ್ತ ಮಾಲತಿ ಶ್ರೀಪಾದ ರಾಯರಿಗೆ ಹೇಳಿದಳು

'ಮಾವಾ ಬೇಗ ಹೋಗಿ ತಂದೆಗೆ ಸುದ್ದಿ ತಿಳಿಸಿ, ಮುಂಡಿಗೆ ಫೋನಿಸಿದೆ. ಅಯ್ಯೋ ಅವರಿಗೆಲ್ಲ ನನ್ನ ಈ ಮುಖ ಹೇಗೆ ತೋರಿಸಲಿ? ಸ್ವಂತ ನನ್ನ ಅಣ್ಣನೇ ಸಹಾಯಕ್ಕೆ ಬರದಿದ್ದಾಗ ಈ ಮಲ ಅಣ್ಣ ನನ್ನ ಸಹಾಯಕ್ಕೆ ಬಂದ. ಇವನನ್ನು ನಾನೇ ಬಲಿ ತೆಗೆದುಕೊಂಡೆ ಎಂದು ಶಪಿಸಿದರೆ ನಾನೇನುಮಾಡಲಿ? ಅಯ್ಯೋ ಅಣ್ಣ ಅಮರ. ನೀನಂಥ ಮಹಾ ವ್ಯಕ್ತಿ ಎಂದು ಒಂದು ದಿನವೂ ತೋರಿ ಲಿಲ್ಲ. ನಿನ್ನ ಹೃದಯದಲ್ಲಿ ನನ್ನ ಬಗ್ಗೆ ಇಷ್ಟು ಮಮತೆ ಇದೆಯೆಂದು ಒಂದು ದಿನವೂ ಬಾಯಿ ಬಿಟ್ಟು ಹೇಳಲಿಲ್ಲವಲ್ಲ. ನಾನೆಂಥ ಹತಭಾಗಿನಿ___ ನಿನ್ನೊಡನೆ ಇಷ್ಟು ದಿವಸ ಇದ್ದರೂ ಒಂದು ದಿನವೂ ನಿನ್ನೊಡನೆ ಮುಖಬಿಟ್ಟು ಮಾತನಾಡಲಿಲ್ಲ. ನಿನಗೆ ಗೌರವ ಕೊಡಲಿಲ್ಲ. ಆಳಿಗಿಂತ ಕಡೆಯಾಗಿ ಕಸದಂತೆ ನಿನ್ನ ಕಂಡೆ ಅಯ್ಯೋ ನೀನೆಂಥ ಸೇಡು ತೀರಿಸಿಕೊಂಡೆ ನನ್ನ ಮೇಲೆ. ನಿನಗೆ ಜೀವಮಾನವಿಡೀ ನಾನು ವಿಷ ಎರೆಯುತ್ತ ಬಂದೆ.... ಆದರೆ ನೀನು ವಿಷಕ್ಕೆ ಪ್ರತಿಯಾಗಿ ವಿಷ ನೀಡದೆ ನನಗೆ ಅಮೃತ ನೀಡಿದೆ."

ಒಂದೇ ಸಮನೆ ಇದೇ ರೀತಿ ಪ್ರಲಾಪ ಮಾಡಿದ ಮಾಲತಿ ಅಲ್ಲಿಯೇ ಮೂರ್ಛೆ ಹೋಗಿ ಬಿದ್ದುಬಿಟ್ಟಳು.... ಅಲ್ಲಿಯೇ ಇದ್ದ ನರ್ಸ್ ಅವಳ ಕಡೆ ಧಾವಿಸಿದಳು.

# 14.

ರಾಮರಾಯರು ಮಂಡಿಯಲ್ಲಿ ಕುಳಿತು ಲೆಕ್ಕ ಬರೆಯುತ್ತಿದ್ದರು. ಸೇಠಜಿ ತಿಜೋರಿಯಿಂದ ನೋಟಿನ ಕಂತೆ ತೆಗೆದು ಅದನ್ನು ಎಣಿಸುವುದರಲ್ಲಿ ಮಗ್ನರಾಗಿದ್ದರು ಅದೇ ವೇಳೆಗೆ ಮಂಡಿಯ ಮುಂದೆ ಕಾರೊಂದು ಬಂದುನಿಂತಿತು. ಅದರಿಂದ ಕೆಳಗಿಳಿದ ವಕೀಲರು ರಾಮರಾಯರಿಗೆ ನಮಸ್ಕರಿಸಿ, ಅವರೆದುರು ಕುಳಿತುಕೊಂಡರು. ಸೇಠಜಿ ಕಣ್ಣರಳಿಸಿ ಅವರೆಡೆ ನೋಡತೊಡಗಿದರು. ವಕೀಲರೇ ಮಾತೇ ಪ್ರಾರಂಭಿಸಿದರು,

"ರಾಮರಾಯರೆ ನಿಮ್ಮ ಮನೆಗೆ ಹೋಗಿದ್ದೆ...... ನೀವು ಇರಲಿಲ್ಲ, ಅಮರನೂ ಸಹ ಇರಲಿಲ್ಲ"

"ಏಕೆ ? ಏನಾದರೂ ಕೆಲಸವಿತ್ತೆ ?"

"ಕೆಲಸವಿಲ್ಲ ನನ್ನ ಪಾಲಿನ ಕರ್ತವ್ಯ ಪೂರೈಸಬೇಕಾಗಿತ್ತು."

"ನನಗೆ ನಿಮ್ಮ ಮಾತಿನ ಅರ್ಥವಾಗಲಿಲ್ಲ"

"ಬಹುಶಃ ನಿಮಗೆ ಗೊತ್ತಿರಲಿಕ್ಕಿಲ್ಲ ರಾಯರೆ.... ಅಪ್ಪಾಜಿಯವರು ತೀರಿಕೊಳ್ಳುವ ಮುನ್ನ ತಮ್ಮ ಎಲ್ಲ ಆಸ್ತಿ, ಹಣ, ಒಡವೆ ಅಮರನಿಗೆ ಬರೆದಿದ್ದಾರೆ."

"ಅಂ ! ನೀವು ಏನು ಹೇಳ್ತಾ ಇದ್ದೀರಿ ?"

"ನಿಜ ರಾಯರೆ .. ಅವರ ಮಗ, ಸೊಸೆ ಮೊಮ್ಮಗ ತೀರಿಕೊಂಡ ಮೇಲೆ ಅವರ ಎಸೆಯೊಡೆದು ಹೋಯಿತು ಸುಮಾರು ಹತ್ತು ಹನ್ನೆರಡು ಲಕ್ಷ ರೂಪಾಯಿ ಆಸ್ತಿ ಯಾರಿಗೆ ಕೊಡುವುದು ? ಅಮರ ಅವನಿಗೆ ಮಗನಿಗಿಂತ ಹೆಚ್ಚಾಗಿದ್ದ. ಅವರ ಸೇವೆ ಮಾಡಿದ್ದ. ಅದಕ್ಕೆ ಅವರು ತಮ್ಮೆಲ್ಲ ಆಸ್ತಿ ಅವನ ಹೆಸರಿಗೆ ಮಾಡಿದರು ಅದಕ್ಕೆ ಸಂಬಂಧಪಟ್ಟ ಕಾಗದಗಳಿವು. ನಿಮಗೆ ಕೊಡೋಣ ಅಂತ ಬಂದೆ"

"ಏನಂದ್ರಿ ವಕೀಲರೆ..... ಹತ್ತು ಹನ್ನೆರಡು ಲಕ್ಷ ರೂಪಾಯಿ !"

"ಹೌದು ಸೇಠಜಿ"

"ಹಾಗಾದರೆ ಅಮರನಿಂದ ರಾಮರಾಯರ ಭಾಗ್ಯದ ಬಾಗಿಲು ತೆರೆಯಿತು ಬಿಡಿ..... ಇನ್ನು ಅವರು ಮುಂಡಿಲಿ ಲೆಕ್ಕ ಬರೀತಾ ಕೂರೋ ಹಂಗಿಲ್ಲ. ನನ್ನಂತೆ ಅವರು ಸೇಠಜಿ ಆಗಬಹುದು "

ತಮ್ಮ ಗುಡಾಣದಂತಹ ಹೊಟ್ಟೆ ಅಲುಗಿಸಿ ಅವರು ನಕ್ಕರು. ಅದೇ ವೇಳೆಗೆ ಫೋನು ಬಾರಿಸಿತು, ಸೇಠಜಿ ಅದನ್ನೆತ್ತಿ,

"ಹಲೋ." ಎಂದರು. ಆದರ ಮರುಕ್ಷಣ ರಾಮರಾಯರ ಕಡೆ ಹೊರಳಿ, "ರಾಮರಾಯರೇ ನಿಮಗೆ ಲೈಟ್‌ಸಿಂಗ್ ಕಾಲ್." ಎಂದರು.

ತಮಗಾರು ಲೈಟ್‌ಸಿಂಗ್ ಕಾಲ್ ಮಾಡುವವರು ಎಂದು ಯೋಚಿಸುತ್ತ ರಾಮರಾಯರು ಫೋನು ಎತ್ತಿ ಹಲೋ ಎಂದರು. ಆ ಕಡೆಯಿಂದ ಶ್ರೀಪಾದ ರಾಯರು ಮಾತನಾಡುತ್ತಿದ್ದರು.

"ರಾಮರಾಯರೆ, ಅಮರ ನಮಗೆಲ್ಲ ಮೋಸ ಮಾಡಿಬಿಟ್ಟ. ನಮಗೆ ಯಾರಿಗೂ ತಿಳಿಯದಂತೆ ಸುಂದರನಿಗೆ ತಾನೇ ಮೂತ್ರಪಿಂಡ ದಾನಮಾಡಿದ.... ಈಗ ಅವನ ಪರಿಸ್ಥಿತಿ ತೀರಾ ಚಿಂತಾಜನಕವಾಗಿದೆ. ಕೂಡಲೇ ಎಲ್ಲರನ್ನೂ ಕರೆದುಕೊಂಡು ಬನ್ನಿ ಕಾರು ಮಾಡಿಕೊಂಡು ಬನ್ನಿ ... ದುಡ್ಡಿಗಾಗಿ ಚಿಂತಿಸಬೇಡಿ."

ಯಾವ ಮಾತೂ ಆಡದೆ ರಾಮರಾಯರು ಫೋನು ಕೆಳಗಿಟ್ಟು ಮನೆಯ ಕಡೆ ಓಡತೊಡಗಿದರು ಹುಚ್ಚರಂತೆ. ಕಾಲಲ್ಲಿ ಚಪ್ಪಲಿ ಇಲ್ಲ, ತಲೆಯ ಮೇಲೆ ಟೊಪ್ಪಿಗೆ ಇಲ್ಲ.... ಅವರ ಕಣ್ಣೆದುರು ಲಕ್ಷ ರೂಪಾಯಿ ಕುಣಿಯತೊಡಗಿತು. ಮನೆತನ ನಾಶವಾಗುವುದನ್ನು ತಡೆಯಲು, ತನ್ನ ತಂಗಿ ವಿಧವೆಯಾಗದಿರಲು, ಮಲತಮ್ಮ ಜೈಲಿಗೆ ಹೋಗದಿರಲು ಇನ್ನೊಬ್ಬ ಮಲತಂಗಿ ಕೆರೆ ಭಾವಿ ಪಾಲಾಗದಿರಲು ಅಮರ ಒಂದೇ ಒಂದು ದಾರಿ ಹುಡುಕಿದ್ದ.

ಓಡುತ್ತಿದ್ದ ರಾಮರಾಯರನ್ನು ವಕೀಲರೂ, ಸೇಠಜಿ ಅವಾಕ್ಕಾಗಿ ನೋಡುತ್ತಿದ್ದಂತೆ ಬೀದಿಯಲ್ಲಿಯ ಜನ ಇವರಿಗೆ ಹುಚ್ಚು ಹಿಡಿಯಿತೆ ?ಎಂದು ನೋಡುತ್ತಿದ್ದರು.

# 15.

ಸುಂದರಾಬಾಯಿಯವರಿಗೆ ಖುಷಿಯೋ ಖುಷಿ. ವಸಂತನ ಹಣ ತುಂಬಿ, ಅವನನ್ನು ಕಂಟಕದಿಂದ ಪಾರು ಮಾಡಲಾಗಿತ್ತು. ರಾಜೂನ ತಂದೆಗೆ ಅರವತ್ತು ಸಾವಿರ ಕೊಟ್ಟು ಮದುವೆಗೆ ಮುಹೂರ್ತ ತೆಗೆಸಿಕೊಂಡು ಬಂದಾಗಿತ್ತು. ಮನೆ ತುಂಬ ಮದುವೆಯ ಸಾಮಾನುಗಳು, ಹತ್ತಾರು ಜನ ಸುಂದರಮ್ಮನವರಿಗೆ ನೆರವಾಗುತ್ತಿದ್ದರು. ಅಷ್ಟು ದಿವಸ ಅವರನ್ನು ಸಾವಿರ ನಾಲಗೆಗಳಿಂದ ಆಡಿಕೊಂಡ ವಠಾರದ ಜನ ಈಗ ಒಮ್ಮೆಲೆ ಅವರೆಂದರೆ ಸಕ್ಕರೆ ಗೊಂಬೆಯಂತೆ ಕಚ್ಚಾಡುತ್ತಿದ್ದರು. ಸುಂದರಮ್ಮ ಅಮರನ ಗುಣಗಾನ ಮಾಡುತ್ತಾ ದೀಪಾಳನ್ನೂ, ಅವಳ ತಂಗಿಯನ್ನೂ ಹಾಡಿ ಹರಸುತ್ತಿದ್ದಂತೆ ದೀಪಾ ಒಳಗೆ ಪ್ರವೇಶಿಸಿದಳು.... ಸುಂದರಮ್ಮ ಅವಳೆಡೆ ನೋಡುತ್ತಾ "ಬಾರಮ್ಮಾ ಭಾಗ್ಯದ ಲಕ್ಷ್ಮಿ" ಎಂದರು. ವಠಾರದ ಜನರೆಲ್ಲ ಅವಳನ್ನು ಮುತ್ತಿದರು. ಸಂಕೋಚದಿಂದ ಒಳಗೆ ಬಂದ ದೀಪಾ ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತ "ಅಮರ ಎಲ್ಲಿ ?" ಎಂದು ಕೇಳಿದಳು.

"ಏನೋ ಕೆಲಸವಿತ್ತಂತೆ ನಾಲ್ಕು ದಿನ ಬಿಟ್ಟು ಬರುತ್ತೇನೆ ಅಂತಾ ಹೇಳಿ ಹೋದ. ಅಮ್ಮಾ ತಾಯಿ ... ನೀನು ನಿಮ್ಮ ತಂದೆಯೂ ಸೇರಿ ನಮ್ಮ ಮನೆ ಉಳಿಸಿದಿರಿ.... ನಿಮ್ಮ ಉಪಕಾರವನ್ನು ಏಳು ಜನ್ಮ ಸವೆಸಿದರೂ ತೀರಿಸಲಿಕ್ಕೆ ಆಗದು. ನಿಮ್ಮ ತಂದೆಯವರಿಗೆ ನಮ್ಮೆಲ್ಲರ ಪರವಾಗಿ ನಮಸ್ಕಾರ ಹೇಳಮ್ಮ. ಅವರ ಪಾದ ತೊಳೆದು ಆ ನೀರನ್ನು ತೀರ್ಥ ಅಂತ ಕುಡೀಬೇಕೂ ಅನಿಸುತ್ತೆ."

"ನೀವು ಏನು ಅನ್ನುತಾ ಇದ್ದೀರಿ ಅನ್ನೋದೆ ನನಗೆ ಅರ್ಥವಾಗುತ್ತಿಲ್ಲ. ನಾವು ಅಂಥಾ ಉಪಕಾರವೇನೂ ಮಾಡಿಲ್ಲ."

"ಆಹಾಹಾ ಎಂಥ ದೊಡ್ಡ ಮನಸ್ಸು ತಾಯಿ ನಿನ್ನದು.... ಮಾಡಿದ ಉಪಕಾರ ಬಾಯಿಯಿಂದ ಆಡಬಾರದು ಅಂತಾ ಒಂದು ಲಕ್ಷ ರೂಪಾಯಿಯನ್ನು ಕೊಟ್ಟಿದ್ದು ನಿನಗೇನೂ ಮಹಾ ಸಹಾಯ ಆಗಿರಲಿಕ್ಕಿಲ್ಲ..... ಆದರೆ, ಅದೇ

"ಅಂಥ ಗುಣ ಸುಸಂಸ್ಕೃತ ಮನೆಯಲ್ಲಿ ಹುಟ್ಟಿದವರಿಗೆ ಬರುತ್ತದೆ. ಅಮರನಿಗೆ ಅಲ್ಲ." ಎಂದು ಅಬ್ಬರಿಸಿದಳು.

ಅದೇ ವೇಳೆಗೆ ಓಡುತ್ತ, ತೇಕುತ್ತ ರಾಯರು ಬಂದರು.

"ಸುಂದ್ರು ... ಸುಂದ್ರು ... ಅಮರ ನಮಗೆಲ್ಲ ಮೋಸ ಮಾಡಿಬಿಟ್ಟ,...... ಮಾಲತಿ ಗಂಡನಿಗೆ ತಾನೇ ಮೂತ್ರಪಿಂಡ ನೀಡಿ ಈಗ ಈಗ ಆತ ಸಾವಿನಂಚಿನಲ್ಲಿದ್ದಾನಂತೆ.'

ಮದುವೆ ಸಡಗರದಿಂದ ತುಂಬಿದ ಮನೆಯಲ್ಲಿ ದುಃಖದ ಕಾರ್ಮೋಡ ಕವಿದವು. ಕಣ್ಣೀರಿನ ಕಾಲುವೆ ಹರಿಯತೊಡಗಿತು. ದೀಪಾಳ ಕಾಲ ಕೆಳಗಿನ ಭೂಮಿ ಕುಸಿಯುತ್ತಿರುವಂತೆ ಭಾಸವಾಗಿ ಧೊಪ್ಪನೆ ನೆಲಕ್ಕೆ ಬಿದ್ದವಳು ಮತ್ತೆ ಚೇತರಿಸಿಕೊಂಡು ರಾಯರನ್ನು ಕೇಳಿದಳು,

"ರಾಯರೆ ಅಮರ ಈಗೆಲ್ಲಿದ್ದಾನೆ ?"

ರಾಮರಾಯರು ಬಿಕ್ಕುತ್ತಾ ಎಲ್ಲ ವಿಷಯ ತಿಳಿಸಿದರು. ದೀಪಾ ಬಿರುಗಾಳಿಯಂತೆ ಹೊರಗೋಡಿದಳು, ರಾಮರಾಯರು ಟ್ಯಾಕ್ಸಿ ಮಾಡಿಕೊಂಡು, ಮನೆಗೆ ಬೀಗ ಜಡಿದು ಮಾಲತಿಯ ಊರಿನತ್ತ ಧಾವಿಸಿದರು.

# 16

ಅಮರ ಕಣ್ಣು ತೆರೆದಾಗ ಅವನ ದೃಷ್ಟಿಗೆ ಮೊದಲು ಬಿದ್ದವಳು ಮಾಲತಿ. ಅವಳನ್ನು ನೋಡುತ್ತಲೆ, ಅಮರನ ಬಿಳುಚಿದ ಮುಖದ ಮೇಲೆ ಮೋಡಿ ಮಾಡುವ ಮಂದಹಾಸ ಮೂಡಿತು. ಬಿಕ್ಕುತ್ತ ಅಮರನನ್ನು ಸಮೀಪಿಸಿದ ಮಾಲತಿ ನುಡಿದಳು

"ಅಣ್ಣಾ ನೀನು ನನಗೆಂಥ ಪಾಠ ಕಲಿಸಿದೆ. ನಾನು ಎಂದೂ ನಿನ್ನನ್ನು ಅಣ್ಣಾ ಎಂದು ತಿಳಿಯಲಿಲ್ಲ. ಬಾಯಿ ತುಂಬ ಅಣ್ಣಾ ಎಂದು ಕರೆಯಲಿಲ್ಲ.. ಕತ್ತೇ. ಎಂದು ಕರೆಯುತ್ತಿದೆ. ಅಂಥ ತಂಗಿಗೆ ಅದೂ ಮಲ ತಂಗಿಗೆ.. ನೀನೆಂಥ ಕಾಣಿಕೆ ಕೊಟ್ಟೆಯಣ್ಣಾ ಅಣ್ಣಾ ನನ್ನೆದೆ ಒಡೆದು ಹೋಗುತ್ತಿದೆ, ನಿನ್ನೆದುರು ನಿಲ್ಲಲು ನನಗೆ ನಾಚಿಕೆಯಾಗುತ್ತಿದೆ ನಿನ್ನ ಕ್ಷಮೆ ಕೇಳಲು ನನಗೆ ಬಾಯಿಯಿಲ್ಲದಂತಾಗಿದೆ. ನೀನು ಹೀಗೆ ಮಾಡಬಾರದಾಗಿತ್ತು ... ಹೀಗೆ ಮಾಡಬಾರದಾಗಿತ್ತು."

ಅಷ್ಟರಲ್ಲಿ ಅಲ್ಲಿಗೆ ಧಾವಿಸಿದ ವೈದ್ಯರು,

"ಪೇಷಂಟಿಗೆ ಇದೀಗ ಎಚ್ಚರ ಬಂದಿದೆ ಅವರಿಗೆ ತೊಂದರೆ ಕೊಡಬೇಡಿ. ಪ್ಲೀಸ್ ಎಲ್ಲರೂ ಹೊರಗೆ ನಡೆಯಿರಿ ಈಗಾಗಲೇ ಸಂಜೆಯಾಗಿದೆ.. ದಯ ಪಟ್ಟು ನಾಳೆ ಬನ್ನಿ ಬೆಳಿಗ್ಗೆ ಅವರ ಪರಿಸ್ಥಿತಿ ಸರಿಹೋಗಬಹುದು"

ಯಾರೂ ಯಾವ ಮಾತೂ ಆಡದೆ ಮೂಕರಾಗಿ ಹೊರಗೆ ನಡೆದರು, ಮಾಲತಿ, ಅಮರನ ಪಾದಕ್ಕೆ ಮುಗಿದು, ಅವನ ಅಂಗಾಲನ ಧೂಳನ್ನು ನೆತ್ತಿಗೆ ಸವರಿಕೊಂಡು ಬಾಗಿಲತ್ತ ಹೆಜ್ಜೆ ಹಾಕಿದಳು ವೈದ್ಯರು ಅವನ ಬಲ ರಟ್ಟೆಗೆ ಒಂದು ಚುಚ್ಚುಮದ್ದು ಚುಚ್ಚಿದರು

ನಿಧಾನವಾಗಿ ಅಮರ ತಲೆ ಎತ್ತಿ ಬಲ ಬದಿಗಿದ್ದ ಕಿಟಕಿಯಿಂದ ಹೊರಗಡೆ ದೃಷ್ಟಿ ತೂರಿದ. ಆಟದ ಬಯಲು... ಫುಟ್ ಬಾಲ್ ಆಡುತ್ತಿದ್ದ ಗುಂಪು ನೂರಾರು ಜನ ಚಪ್ಪಾಳೆ ತಟ್ಟುತ್ತಿದ್ದಾರೆ ಅಷ್ಟರಲ್ಲಿ ಅವನ ರೆಪ್ಪೆಗಳು

ಭಾರವಾಗಿ ತನ್ನಷ್ಟಕ್ಕೆ ತಾವೇ ಮುಚ್ಚಿಕೊಂಡವು. ನಿದ್ದೆ ಬರಿಸುವ ಮದ್ದು ಪರಿಣಾಮ ಮಾಡಿತ್ತು

ಅಮರ ನಿದ್ದೆ ಹೋಗುವುದಕ್ಕೂ ರಾಮರಾಯರು, ಸುಂದರಮ್ಮ, ರತ್ನಾ ಅಲ್ಲಿ ಧಾವಿಸಿದರು. ರಾಮರಾಯರ ಕೈಯಲ್ಲೊಂದು ಹೊಸ ಫುಟ್‌ಬಾಲ್ ಇತ್ತು ಎದೆ ಎದೆ ಬಡಿದುಕೊಂಡು ಅಳುತ್ತಿದ್ದ ಸುಂದರಮ್ಮನವರಿಗೆ ವೈದ್ಯರು ಶಾಂತರಾಗಲು ಸೂಚಿಸಿದರು. ರಾಮರಾಯರು ಅಮರನ ತಂದೆ ಎಂದು ವೈದ್ಯರಿಗೆ ತಿಳಿದಾಗ, ವೈದರಿಗೆ ಧರ್ಮ ಸಂಕಟಕ್ಕಿಟ್ಟುಕೊಂಡಿತು, ಅಮರ ಬದುಕಲಾರ ಎಂದವರಿಗೆ ಗೊತ್ತಿತ್ತು. ಆದರೆ ಅದನ್ನು ಅವನ ತಂದೆಗೆ ಎಂತು ಹೇಳುವುದು. ರಾಮರಾಯರು ವೈದ್ಯರ ಕಾಲು ಹಿಡಿದು ಕೇಳಿಕೊಂಡರು,

"ವೈದ್ಯರೆ... ನಿಮ್ಮ ಕಾಲು ಹಿಡಿದುಕೊಂಡು ಬೇಡಿಕೊಳ್ಳುತ್ತೇನೆ. ನನ್ನ ಅಮರನನ್ನು ಬದುಕಿಸಿ ಕೊಡಿ."

"ರಾಯರೆ ನಾನು ದೇವರಲ್ಲ.... ನಾನು ಮಾಡಿದ್ದು ಎಲ್ಲಾ ಆಯಿತು. ಇನ್ನು ಎಲ್ಲಾ ದೇವರ ಕೈಯಲ್ಲಿದೆ...... ರಾಯರೆ ನಿಮಗೆ ನಾನು ಸುಳ್ಳು ಹೇಳಲಾರೆ. ನಿಮ್ಮ ಅಮರ ಬದುಕುವ ಸಾಧ್ಯತೆ ಇಲ್ಲ, ಅವನಿಗೆ ಇನ್ನು ನಾಲ್ಕು ತಾಸು ಬಿಟ್ಟು ಎಚ್ಚರ ಬರುತ್ತದೆ. ಆಮೇಲೆ ಆತ ಎಷ್ಟು ತಾಸು ಬದುಕುತ್ತಾನೆ ಎಂದು ನಾನು ಹೇಳಲಾರೆ ದಯವಿಟ್ಟು ನನ್ನನ್ನು ಕ್ಷಮಿಸಿ "

ಉಕ್ಕಿ ಬಂದ ದುಃಖವನ್ನು ತಡೆದುಕೊಂಡು ವೈದ್ಯರು ಹೊರಗೆ ನಡೆದರು ಸುಂದರಮ್ಮ, ರಾಮರಾಯರು, ಪಂಕಜಾ, ರತ್ನಾ ಬಾಯಿ ತೆಗೆದು ಅಳಲೂ ಆಗದೆ, ದುಃಖವನ್ನು ತಡೆದುಕೊಳ್ಳಲೂ ಆಗದೇ ಬಾಯಿಗೆ ಬಟ್ಟೆ ತುರುಕಿಕೊಂಡು ಗೋಡೆಗಾತು ಕುಳಿತರು. ಪ್ರಶಾಂತವಾಗಿ ನಿದ್ರಿಸುತ್ತಿದ್ದ ಅಮರನ ಮುಖವನ್ನು ನೋಡುತ್ತ....

ವೈದ್ಯರು ಹೇಳಿದಂತೆ ನಾಲ್ಕು ತಾಸು ಬಿಟ್ಟು ಅಮರನಿಗೆ ಎಚ್ಚರ ಬಂದಾಗ ಎಲ್ಲೆಡೆ ಪೂರ್ತಿ ಕತ್ತಲಾಗಿತ್ತು. ಅಮರ ನರಳುತ್ತಾ ಕಣ್ಣು ತೆಗೆದ. ರಾಮರಾಯರು ಸುಂದರಮ್ಮ ಎಲ್ಲರೂ ಅವನತ್ತ ಧಾವಿಸಿದರು. ನರ್ಸ್ ವೈದ್ಯರನ್ನು ಕರೆಯಲು ಓಡಿದಳು. ಎಲ್ಲರನ್ನೂ ಒಂದು ಬಾರಿ ನೋಡಿದ ಅಮರ ಮುಗುಳು ನಗುತ್ತ ಸುಂದರಮ್ಮನಿಗೆ ಹೇಳಿದ,

"ಅಮ್ಮಾ...... ನಿನ್ನ ಋಣ ತೀರಿಸಿದೆನಮ್ಮ. ನನ್ನ ಬಗ್ಗೆ ಯಾರೂ

ದುಃಖಿಸಬೇಡಿ ನನಗೆ ನನ್ನ ಸಮಾಧಾನವಿದೆ. ನಾನು ಮಾಡಿದ್ದು ನನಗೆ ಸರಿ ಎನಿಸುತ್ತಿದೆ ”

ರಾಮರಾಯರು ಅಮರನ ಮುಂದೆ ಫುಟ್ ಬಾಲ್ ಹಿಡಿದು ಹೇಳಿದರು,

“ಅಮರ ನಿನಗೆ ಒಂದು ಕಾಣಿಕೆ ತಂದಿರುವೆ ನೋಡು, ‘ಫುಟ್‌ಬಾಲ್. ಜೀವಮಾನದಲ್ಲಿ ನಾನು ನಿನಗೆ ನೀಡಿದ ಮೊದಲ ಹಾಗೂ ಕೊನೆಯ ಕಾಣಿಕೆ ಇದು....”

ಅಮರನ ಮುಖ ಹೂವಿನಂತೆ ಅರಳಿತು. ಅದರತ್ತ ಆಶೆ ತುಂಬಿದ ಕಣ್ಣು ಗಳಿಂದ ನೋಡುತ್ತಾ ಪ್ರಯಾಸದಿಂದ ನುಡಿದ,

“ಅಪ್ಪಾ ! ಪಕ್ಕದಲ್ಲಿ ಬಯಲಿದೆ ನಾನು ಆಡಬೇಕು.”

ಅಷ್ಟರಲ್ಲಿ ನರ್ಸ್ ವೈದ್ಯರನ್ನು ಕರೆದುಕೊಂಡು ಬಂದಳು. ವೈದ್ಯರು ಅವನ ಎದೆಬಡಿತ, ನಾಡಿ ಎಲ್ಲಾ ಪರೀಕ್ಷಿಸಿ ರಾಯರತ್ತ ಹೋಗಿ ಮೆಲುವಾಗಿ ನುಡಿದರು, “ಸಾರಿ ನಮ್ಮಿಂದ ಏನೂ ಮಾಡಲಿಕ್ಕೆ ಆಗುವುದಿಲ್ಲ ” ಭಾರ ವಾದ ಹೆಜ್ಜೆ ಹಾಕುತ್ತಾ ಅವರು ಹೊರಗೆ ನಡೆದರು.

“ಅಪ್ಪಾ, ಹೇಗಿದ್ದರೂ ನಾನು ಉಳಿಯೋದಿಲ್ಲ.. ನನ್ನನ್ನ ಆಟದ ಮೈದಾನಕ್ಕೆ ಕರೆದುಕೊಂಡು ಹೋಗಪ್ಪಾ ನನ್ನ ಪ್ರಾಣ ಅಲ್ಲಿಯೇ ಹೋಗಲಿ.”

ರಾಮರಾಯರ ಕಣ್ಣೀರು ಬತ್ತಿ ಹೋಗಿತ್ತು. ಮುಂದೆ ಬಾಗಿ ಚೆಂಡನ್ನು ಅವನ ಮಡಿಲಲ್ಲಿ ಹಾಕಿ, ಅವನನ್ನು ಚಿಕ್ಕ ಮಗುವನ್ನು ಎತ್ತಿಕೊಳ್ಳುವ ಹಾಗೆ ಎತ್ತಿಕೊಂಡು ಹೊರಗೆ ನಡೆದರು. ಅವರನ್ನು ಹಿಂಬಾಲಿಸಿದವರಿಗೆಲ್ಲ “ನೀವು ಇಲ್ಲೇ ಇರಿ. ನಾನು ನನ್ನ ಮಗ ಇಬ್ಬರೇ ಹೋಗುತ್ತೇವೆ.” ಎಂದು ಗುಡುಗಿ ಮೆಟ್ಟಿಲುಗಳನ್ನಿಳಿದು ಬಾಗಿಲಿಗೆ ಬರುವುದಕ್ಕೂ ಹುಚ್ಚಿಯಂತೆ ದೀಪಾ ಓಡಿ ಬಂದಳು. ಅವಳ ಕಟಬಾಯಿಯಿಂದ ರಕ್ತ ಸೋರುತ್ತಿತ್ತು. ವರದರಾಜು ಅವರು ಹತಾಶರಾಗಿ ಅವಳ ಹಿಂದೆ ಬರುತ್ತಿದ್ದರು ರಾಮರಾಯರನ್ನು ನೋಡಿ “ರಾಯರೆ ನನ್ನ ಮಗಳು ವಜ್ರದ ಉಂಗುರ ಕಡಿದು ತಿಂದುಬಿಟ್ಟಳು.” ಎಂದು ಹೇಳುತ್ತಾ ಅಳಲಾರಂಭಿಸಿದರು.

“ಹುಷ್ ಅಳಬೇಡಿ ನನ್ನ ಮಗ ನಿಮ್ಮ ಮಗಳು ಇಬ್ಬರೂ ಅಮರ ಲೋಕಕ್ಕೆ ಹೋಗುತ್ತಿದ್ದಾರೆ... ಅವರನ್ನು ಕಳಿಸಿಬರೋಣ ಬನ್ನಿ...... ಅವರ ಅಪೂರ್ವ ಮಿಲನಕ್ಕೆ ನಾವು ಅಡ್ಡಿಯಾಗುವುದು ಬೇಡ......”

ರಾಮರಾಯರ ಮಾತಿಗೆ ವರದರಾಜು ಅವರು ದಂಗಾಗಿ ಬಿಟ್ಟರು ಮಗನ ಈ ಪರಿಸ್ಥಿತಿ ಕಂಡು ರಾಯರಿಗೆ ಹುಚ್ಚೆಲ್ಲ ಹಿಡಿಯಿತೋ ಎಂಬ ಶಂಕೆ ಮೂಡದಿರಲಿಲ್ಲ.

ರಾಮರಾಯರು ಅಮರನನ್ನ ಎತ್ತಿಕೊಂಡು ಬಯಲಿನತ್ತ ಹೆಜ್ಜೆ ಹಾಕ ತೊಡಗಿದರು. ವರದರಾಜು ಅವರು ದೀಪಾಳಿಗೆ ಆಸರೆ ನೀಡುತ್ತ ಅವರನ್ನು ಹಿಂಬಾಲಿಸಿದರು.

ಕತ್ತಲೆ ತುಂಬಿದ ಬಯಲಿನ ಮಧ್ಯೆ, ಹಸಿರು ಹುಲ್ಲಿನ ಮೇಲೆ ಅಮರನನ್ನು ಕೂಡಿಸಿದ ರಾಮರಾಯರು ಹೇಳಿದರು,

“ಅಮರ.... ಕಣ್ಣು ತೆರೆದು ನೋಡಪ್ಪ, ನಾನು ನಿನ್ನನ್ನು ಆಟದ ಬಯಲಿಗೆ ತಂದಿದ್ದೇನೆ. ನಿನ್ನ ಆಟ ನೋಡಿ ಚಪ್ಪಾಳೆ ತಟ್ಟಲು ಸಾವಿರಾರು ಜನರು ನೆರೆದಿದ್ದಾರೆ ನಿನಗೆ ಬಹುಮಾನ ಕೊಡಲು ವರದರಾಜು ಬಂದಿದ್ದಾರೆ ... ನಿನ್ನೊಂದಿಗೆ ನಿನ್ನ ದಾರಿಯನ್ನೇ ಅನುಸರಿಸಲು ದೀಪಾ ಬಂದಿದ್ದಾಳೆ. ಕಣ್ಣು ಬಿಟ್ಟು ನೋಡಪ್ಪ....”

ಅಮರ ನಿಧಾನವಾಗಿ ಕಣ್ಣು ತೆರೆದ. ಸುತ್ತಲೂ ನೋಡಿದ, ಎಲ್ಲೆಡೆ ಕತ್ತಲು... ಸ್ವಲ್ಪ ದೂರದಲ್ಲಿದ್ದ ಬೀದಿಯ ದೀಪದ ಅಸ್ಪಷ್ಟ ಬೆಳಕಿನಲ್ಲಿ ಆತನಿಗೆ ತನ್ನೆದುರು ಎರಡು ಮೂರು ಆಕೃತಿಗಳು ಗೋಚರಿಸಿದವು. ಕಷ್ಟಪಟ್ಟು ಅವುಗಳನ್ನು ಗುರುತಿಸಲು ಪ್ರಯತ್ನಿಸಿದ. ಹೌದು ತಂದೆ, ಈಕೆ ಈಕೆ ದೀಪಾ. ಅವರು ವರದರಾಜುರವರು.... ಅಮರನ ತುಟಿಗಳು ಸ್ವಲ್ಪವೇ ವಕ್ರವಾದವು. ಹುಸಿನಗೆಯೊಂದು ಮೂಡಿತು, ಮೆಲುವಾಗಿ “ದೀ ದೀಪಾ” ಎಂದ. ಆಗಲೇ ಅರ್ಧಮರ್ಧ ಜೀವ ಹೋಗಿ ಜೀವಂತ ಶವದಂತಾಗಿದ್ದ ದೀಪಾಳ ಮೇಲೆ ಅಮೃತ ವರ್ಷ ಕರೆದಂತಾಯಿತು..

“ಅಮರ.... ಅ...... ಮರ ... ನನ್ನ ಬಿಟ್ಟು ನೀನೊಬ್ಬನೇ ಹೊರಟ್ಟಿದ್ದೆ.... ನೀನು ಮೋಸಗಾರ.... ಅಮರ ಇಬ್ಬರೂ ಜೊತೆಯಾಗಿಯೇ ಬದುಕುವಾ.... ಜೊತೆಯಾಗಿಯೇ ಸಾಯುವಾ.... ಎಂದು ನೀನು ಹೇಳಿರಲಿಲ್ಲವೇ ? ನೀನು..... ನನಗೆ ಮೋ....ಸ....ಮಾ... ಡಿ ದರೂ ನಾನು ನಿ.. ನ....ಗೆ ಮೋಸವನ್ನು ಮಾಡಲಿಲ್ಲ. ನಿನ್ನೊಂದಿಗೇ... ಬಂದಿರುವೆ. ಇಲ್ಲಿ ನಾವು ಕೂಡದಿದ್ದರೂ ... ಅಲ್ಲಿಯಾದರೂ ಕೂಡುವಾ ... ಹಾಂ, ನೋಡು ನೀನು ಕ್ಯಾಪ್ಟನ್, ಫುಟ್

ಬಾಲ್ ಟೀಮಿನ ಕ್ಯಾಪ್ಟನ್___ ಇದೋ ಆರ್ಡರ್."

ಕುತೂಹಲದಲ್ಲಿ ಸಿಕ್ಕಿಸಿಕೊಂಡಿದ್ದ ಆರ್ಡರ್ ಕಾಪಿಯನ್ನು ದೀಪಾ ಪ ಯಾಸಪಟ್ಟು ಹೊರತೆಗೆದು ಅವನ ಮುಂದೆ ಹಿಡಿದಳು.

ತಾನು ಕ್ಯಾಪ್ಟನ್ ಎಂದು ಆಯ್ಕೆಯಾದದ್ದು ಅಮರನಿಗೆ ಗೊತ್ತೇ ಇರಲಿಲ್ಲ. ಈಗೋ ಇನ್ನೊಂದು ಕ್ಷಣಕ್ಕೋ ಸಾಯಲಿದ್ದ ಅವನ ದೇಹದಲ್ಲಿ ಹೊಸ ಶಕ್ತಿ ಸಂಚಾರವಾದಂತಾಯಿತು. "ಆಂ." ಎಂದು ಕೇಳುತ್ತಾ ಆತ ಮೆಲ್ಲನೆ ಎದ್ದು ನಿಂತ___ ಜೋಲಿ ಹೋಗುತ್ತಿದ್ದ ಅವನನ್ನು ರಾಮರಾಯರು ತಡೆದು ನಿಲ್ಲಿಸಿದರು. ಕೈಯಲ್ಲಿ ಆರ್ಡರ್ ಹಿಡಿದುಕೊಂಡು ಎದ್ದು ನಿಂತ.... ಅಮರ ಒಂದು ಬಾರಿ ಸುತ್ತಲೂ ಆಟದ ಮೈದಾನವನ್ನು ವೀಕ್ಷಿಸಿದ ಹಿಂದೆ ಒಮ್ಮೆ ಆತ ಕಂಡ ಕನಸು ಸಾಕಾರ ರೂಪದಲ್ಲಿ ಅವನೆದುರು ನಿಂತಿತ್ತು.

ಬಂಗಾರ ವರ್ಣದ ಪೋಷಾಕು ಧರಿಸಿದ ಅಮರ ಆಟದ ಮೈದಾನಕ್ಕೆ ಇಳಿದಿದ್ದಾನೆ...... ಥಳ ಥಳ ಹೊಳೆಯುವ ಬೆಳ್ಳಿ ಚೆಂಡು, ಬಂಗಾರದ ಬಲೆಯು ಆತನನ್ನು ಕೈ ಬೀಸಿ ಕರೆಯುತ್ತಿದೆ ... ಜನರು ಹುಚ್ಚೆದ್ದು ಸಂತೋಷದಿಂದ ಕೇಕೆ ಹಾಕುತ್ತ "ಅಮರ ಜಿಂದಾಬಾದ್ ಅಮರ ಜಿಂದಾಬಾದ್." ಎಂದು ಕೂಗುತ್ತಿದ್ದಾರೆ___ ಅಮರ ಆಟದ ಮೈದಾನಕ್ಕಿಳಿದಿದ್ದಾನೆ, ಎದುರಾಳಿಗಳು ಅವನ ಆಟ ಕಂಡು ದಿಕ್ಕಾಪಾಲಾಗಿ ಚೆದುರುತ್ತಿದ್ದಾರೆ ಅವನೆದುರು ಬರುವ ಧೈರ್ಯ ಯಾರಿಗೂ ಇಲ್ಲ. ಒಂದು, ಎರಡು, ಮೂರು, ನಾಲ್ಕು, ಐದು ಸತತ ಅಮರ ಐದು ಗೋಲು ಬಾರಿಸಿದ... ಪ್ರಚಂಡ ವಿಜಯ ತನಗೆ, ಮುಖ್ಯ ಮಂತ್ರಿಗಳು ಆತನಿಗೆ ಮಾಲೆ ಹಾಕಿ, ದೊಡ್ಡ ನೌಕರಿ ಆರ್ಡರ್ ಮಾಡಿದ್ದಾರೆ. ಬಂಗ್ಲೆ, ಕಾರು, ಆಳು, ನೌಕರಿ ಜೊತೆಯಲ್ಲಿ ದೀಪಾ___ ತಂದೆ ತಾಯಿಗಳಿಗೆ ಸಂತೋಷವೇ ಸಂತೋಷ___

ಬಿಕ್ಕಳಿಕೆಯ ಶಬ್ದ ... ಇಂಥ ಸಮಯದಲ್ಲಿ ಬಿಕ್ಕುವವರು ಯಾರು ? ಅರೆ ದೀಪಾ ! ತನ್ನೆದೆಗೆ ಒರಗಿ ಬಿಕ್ಕುತ್ತಿದ್ದಾಳೆ, "ಏಕೆ ಏಕೆ ದೀಪಾ ಅಳುತ್ತಿರುವೆ."

"ಅಮರ.... ನನ್ನ ಆ ಚೆಂಡಾಳ___ ಜನಾರ್ಧನ ಹಾಳುಮಾಡಿದ.... ನನ್ನ ಹಾಳುಮಾಡಿದ ಮೇಲೆಯೇ ಈ ಆರ್ಡರ್ ಕೊಟ್ಟ."

ವರದರಾಜು ಹಾಗೂ ರಾಮರಾಯರು "ಆಂ ! ಏನಿದು ?" ಎಂದು

ಬಾಯ್ತೆರೆದು ಹೌಹಾರಿ ನಿಂತರು. ಅಮರನಲ್ಲಿ ದೈತ್ಯ ಸಂಚಾರವಾಗಿತ್ತು. ಒಮ್ಮೆಲೆ "ಆಂ ! ಜನಾರ್ಧನ !" ಎಂದು ಕೂಗಿ ಅತ್ತಿತ್ತ ನೋಡಿದ. ಅವನ ಕಣ್ಣುಗಳು ಕೆಂಡದುಂಡೆಯಂತಾಗಿ ಬೆಂಕಿಯುಗುಳುತ್ತಿತ್ತು. ಅವನೆದುರು ಫುಟ್‌ಬಾಲ್, ಹೊಸ ಚೆಂಡು. ಹಸಿರು ಹುಲ್ಲಿನ ಮೇಲೆ ಉರುಳಿದ್ದು ಅವನನ್ನು ಕಂಡು ಅಪಹಾಸ್ಯ ಮಾಡಿ ನಕ್ಕಂತಾಯಿತು ! ಇದರಿಂದಲೇ ಇಷ್ಟೆಲ್ಲ ಆದದ್ದು ಎಂದು ಯೋಚಿಸಿದ ಆತ ಎರಡು ಹೆಜ್ಜೆ ಹಿಂದೆ ಸರಿದು ಆ ಚೆಂಡಿನತ್ತ ನೆಗೆದು ಬಲಗಾಲಿನಿಂದ ಕಿಕ್ ಮಾಡಿದ.

ರಿಂವ್ ಎಂದು ಮೇಲೆ ಹಾರಿ.... ನಂತರ ಉರುಳುತ್ತ ಹೋದ ಚೆಂಡು ಗೋಲಿ ಬಳಿಯ ನೆಟ್‌ಗೆ ಅಪ್ಪಳಿಸಿ ನಂತರ ಅಲ್ಲೇ ಪುಟಿಯುತ್ತಿದ್ದಂತೆ ರಾಮರಾಯರು ತಮ್ಮೆರಡೂ ಕೈಗಳನ್ನೆತ್ತಿ "ಗೋಲ್" ಎಂದು ಕೂಗಿ ಕುಣಿದು ಕುಪ್ಪಳಿಸಿ, ಅಮರನತ್ತ ನೋಡಿದರು. ಮೇಲೆದ್ದ ಅವರ ಕೈಗಳು ನಿಧಾನವಾಗಿ ಕೆಳಗಿಳಿದವು.

ಅಮರ ಹಾಗೂ ದೀಪಾ ಒಬ್ಬರನ್ನೊಬ್ಬರು ತಬ್ಬಿಕೊಂಡು ಹಸಿರು ಹುಲ್ಲಿನ ಮೇಲೆ ಉರುಳಿದ್ದರು. ವರದರಾಜು ಮೊಣಕಾಲ ಮುಂದೆ ಊರಿ ಅವರ ಮೈಮೇಲೆ ವಾತ್ಸಲ್ಯದಿಂದ ಕೈಯಾಡಿಸುತ್ತಿದ್ದರು. ಈ ಜನ್ಮದಲ್ಲಾಗದ ಅಪೂರ್ವ ಮಿಲನಕ್ಕಾಗಿ ಅಮರ ದೀಪಾ ಮತ್ತೊಂದು ಲೋಕಕ್ಕೆ ಪ್ರಯಾಣ ಮಾಡಿದರು. ರಾಮರಾಯರು ಗೋಲಿನಲ್ಲಿದ್ದ ಚೆಂಡಿನತ್ತ ನೋಡಿದರು.... ಅದು ಗಹಗಹಿಸಿ ನಗುತ್ತಿತ್ತು....

—o—

## ಇದೇ ಲೇಖಕರ ಇತರ ಕೃತಿಗಳು

ತಿರುವು
ಹಳದಿ ಜೇಳು
ಕೆಂಪು ಜೇಡ
ಸಂಜೆ ಮಲ್ಲಿಗೆ
ಅಗ್ನಿ ಪರ್ವತ
ಕೆರಳಿದ ಸರ್ಪ
ವಿಚಿತ್ರ ಅಪರಾಧಿ
ನೀರ ಮೇಲಿನ ಹೆಜ್ಜೆಗಳು
ಹಾಲಿನ ಕಡಲು, ಜೇನಿನ ಒಡಲು
ಕನಸುಗಾರ
ಐರಾವತ
ಏಳು ಸುತ್ತಿನ ಕೋಟೆ

ಇದೇ ಲೇಖಕರ ನಮ್ಮ ಮುಂದಿನ ಪ್ರಕಟಣೆ (ಅಚ್ಚಿನಲ್ಲಿ)
" ಸೂರ್ಯ ಚಂದ್ರ ಸಾಕ್ಷಿ "

---

ಹಾಗೂ ನಮ್ಮ ಪ್ರಕಾಶನದಿಂದ ಹೊರಬರುವ ವಂಶಿಯವರ ಕೃತಿಗಳು

1] ಪ್ರೇಮದ ಜ್ವಾಲೆ 2] ಗಾಳಕ್ಕೆ ಸಿಕ್ಕ ಮೀನು 3] ಆಗಮನ

# ನಮ್ಮ ಪ್ರಕಟನೆಗಳು

| | | |
|---|---|---|
| ದಲಿ[illegible]ದಂಬರಿ) | ಲೇ\| ಚನ್ನವೀರಯ್ಯ | 9-00 |
| *ಸಂಗಮ [illegible] | ಲೇ\| ಛಾಯಾದೇವಿ ನಂಜಪ್ಪ | 6-0. |
| *ತೌರುಮನೆ ,, | ,, | 8-5( |
| *ಫಲ ತೊಟ್ಟ ಚಲುವೆ | ಲೇ\| ಎನ್. ನರಸಿಂಹಯ್ಯ | 5-0( |
| ಮಂಗಳಗೌರಿ ವ್ರತ | ಲೇ\| ಮಾ. ನಂ. ನಂಜಪ್ಪ | 1-0( |
| ಶ್ರೀ ಸ್ವರ್ಣಗೌರಿ ವ್ರತ | ,, | 1-5( |
| ಶ್ರೀ ವಿನಾಯಕ ವ್ರತ | ,, | 1-0 |
| ಶ್ರೀ ವರಮಹಾಲಕ್ಷ್ಮೀ ವ್ರತ | ,, | 1-0 |
| ಆರು ವ್ರತಗಳು | ,, | 6-0 |
| ಬಸವಣ್ಣನವರ ಅಮೃತವಾಣಿ | ಲೇ\| ಅ. ನ. ಕೃ | 9-0 |
| ವೀರಶೈವ ಸಾಹಿತ್ಯ ಮತ್ತು [illegible] | ,, | 12-0 |
| *ಪ್ರೇಮ ಪ್ರಭಾವ | ಕಮಲಾರಾಜ್ | 7-0 |
| 35-ಪಾರ್ಟಿ | ಲೇ\| ಹೆಚ್. ಕೆ. ಅನಂತರಾವ್ | 5-0 |
| ಹೂವು-ಗಂಧ | ಲೇ\| ಛಾಯಾದೇವಿ ನಂಜಪ್ಪ | 7-0 |
| ಮಾರ್ಜಾಲ ಸನ್ಯಾಸಿ | ಲೇ\| ಅ. ನ. ಕೃ. | 10-0 |
| ರಣವಿಕ್ರಮ | ಲೇ\| ಅ. ನ. ಕೃ. | 10-0 |
| ಕಾಗದದ ಹೂ | ಲೇ\| ಅ. ನ. ಕೃ. | 10-0 |
| ಸಂಕ್ಷಿಪ್ತ ಲಿಂಗಪೂಜಾ ವಿಧಿ | ಲೇ\| ಮಾ. ನಂ. ನಂಜಪ್ಪ | 2-0 |
| ಅಶೋಕ | ಲೇ\|ಸು.ರುದ್ರಮೂರ್ತಿ ಶಾಸ್ತ್ರಿ | 16-0 |
| ಯಕ್ಷಪುರ | ,, | 7-0 |
| ಸಂಜೆಮಲ್ಲಿಗೆ | ಲೇ\| ಸುದರ್ಶನ ದೇಸಾಯಿ | 11-0 |
| ಪಾರ್ಥ | ಲೇ\| ವಂಶಿ | 15-0 |

*ಪ್ರತಿಗಳು ಮುಗಿದಿವೆ